ಹುತಾತ್ಮ ಗುಡ್ಡೆಮನೆ ಅಪ್ಪಯ್ಯ ಗೌಡ ಸ್ಮಾರಕ ಉಸ್ತುವಾರಿ ಸಮಿತಿ

ಗೌಡ ಸಮಾಜ

ಹುತಾತ್ಮ ಸುಬೇದಾರ ಗುಡ್ಡೆಮನೆ ಅಪ್ಪಯ್ಯ ಗೌಡ ರಸ್ತೆ, ಮಡಿಕೇರಿ-೫೭೧೨೦೧. ಕೊಡಗು ಜಿಲ್ಲೆ.



ನಮನ

ಹುತಾತ್ಮ ಸುಬೇದಾರ ಗುಡ್ಡೆಮನೆ ಅಪ್ಪಯ್ಯ ಗೌಡ



ದಿವ್ಯ ಸ್ಮರಣಿ

ಸುಬೇದಾರ್ ಗುಡ್ಡೆಮನೆ ಅಪ್ಪಯ್ಯಗೌಡರ ದಿವ್ಯ ಸ್ಮರಣೆಯ "ನಮನ"ಕ್ಕೆ ಶುಭಾಶಯಗಳು



ಹುಟ್ಟುತ್ತೇವೆ, ಸಾಯುತ್ತೇವೆ. ಹುಟ್ಟು ಸಾವಿನ ನಡುವೆ ನಾವೇನಾಗಿರುತ್ತೇವೆ ?
ಏನೂ ಅಲ್ಲದಂತೆ ಇದ್ದು ಕಣ್ಮರೆಯಾಗುತ್ತೇವೆ.
ಆದರೆ ಲಕ್ಷಕ್ಕೆ ಒಬ್ಬರೋ ಇಬ್ಬರೋ ಎನ್ನುವಂತೆ ಶಾಶ್ವತರಾಗುತ್ತಾರೆ.
ಹೌದಲ್ಲ, ಶರೀರ ಅಶಾಶ್ವತ. ಆದರೆ ಕೀರ್ತಿ ಶಾಶ್ವತ.

ವ್ಯಕ್ತಿಯ ಕೀರ್ತಿಯ ಹಿಂದೆ ಆ ಮನೆತನದ ಹೆಸರು, ಆ ನಾಡಿನ ಹೆಸರು
ಶಾಶ್ವತವಾಗಿ ಜನಮಾನಸದಲ್ಲಿ ಉಳಿಯುತ್ತದೆ.

ಹಾಗೇ, ಗುಡ್ಡೆಮನೆಯ ಅಪ್ಪಯ್ಯಗೌಡರು ಕೊಡಗಿನ ಅರಸರ ಕಾಲದಲ್ಲಿ
ಸುಬೇದಾರರಾಗಿ ನಂತರ ಆಂಗ್ಲರಿಂದ ಸೆರೆಯಾಳಾಗಿ
ನೇಣುಗಂಬವನ್ನೇರಿ ಕೀರ್ತಿಶೇಷರಾದರು.
ಇಂದು ಅವರ ಕಂಚಿನ ಪ್ರತಿಮೆ ಮಡಿಕೇರಿಯಲ್ಲಿ ಅನಾವರಣಗೊಂಡಿದೆ.
ಪ್ರತಿಮೆ ಅನಾವರಣಗೊಂಡ ದಿನ
ಗುಡ್ಡೆಮನೆ ಕುಟುಂಬ ಅದಕ್ಕೆ ಸಾಕ್ಷಿಯಾಯಿತು.

ಹುತಾತ್ಮ ಸುಬೇದಾರ
ಗುಡ್ಡೆಮನೆ ಅಪ್ಪಯ್ಯಗೌಡ ಸ್ಮಾರಕ ಸಮಿತಿ
ಗುಡ್ಡೆಮನೆ ಅಪ್ಪಯ್ಯಗೌಡ ರಸ್ತೆ, ಮಡಿಕೇರಿ


ನಮನ

ಹುತಾತ್ಮ ಸುಬೇದಾರ ಗುಡ್ಡೆಮನೆ ಅಪ್ಪಯ್ಯಗೌಡರ

ದಿವ್ಯ ಸ್ಮರಣೆ

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಿಂಹ ಗರ್ಜನೆ ಮಾಡಿ ಹುತಾತ್ಮರಾದ ಕೊಡಗಿನ ವೀರ ಗುಡ್ಡೆಮನೆ ಅಪ್ಪಯ್ಯಗೌಡರ ಸವಿ ನೆನಪಿನಲ್ಲಿ ಹೊರತರಲಾದ ಸ್ಮರಣ ಸಂಚಿಕೆ

ನಮನ



ಮುದ್ರಣ

ಶಕ್ತಿ ಪ್ರಿಂಟರ್ಸ್

ಕೈಗಾರಿಕಾ ಬಡಾವಣೆ

ಮಡಿಕೇರಿ

ದೂರವಾಣಿ : (08272)- 228382-229202

ಫ್ಯಾಕ್ಸ್ : (08271) - 228875

ಇಮೇಲ್ : shakthidaily@gmail.com

shakthidaily@hotmail.com

ಮುಖಪುಟ ವಿನ್ಯಾಸ

ಕಲಾವಿದ ಬಿ.ಆರ್. ಸತೀಶ್

ವೀರಾಜಪೇಟೆ

ಈ ಸಂಚಿಕೆಯಲ್ಲಿ ಪ್ರಕಟಗೊಂಡಿರುವ ಬರಹಗಳಿಗೆ ಆಯಾ ಬರಹಗಾರರೇ ಜವಾಬ್ದಾರರು.

- ಪ್ರಧಾನ ಸಂಪಾದಕರು

ಹುತಾತ್ಮ ಸುಬೇದಾರ
ಗುಡ್ಡೆಮನೆ ಅಪ್ಪಯ್ಯ ಗೌಡರ ಸ್ಮಾರಕ ಉಸ್ತುವಾರಿ ಸಮಿತಿ

ಗೌ. ಅಧ್ಯಕ್ಷರು
ಶ್ರೀ ನಂಜಯ್ಯನ ದೇವಿಪ್ರಸಾದ್

ಅಧ್ಯಕ್ಷರು
ಶ್ರೀ ತುಂತಜೆ ವೆಂಕಟೇಶ್ (ಗಣೇಶ್)

ಕಾರ್ಯದರ್ಶಿ
ಶ್ರೀ ಅಮೆ ಕೆ. ಪಾಲಾಕ್ಷ

ಉಪಾಧ್ಯಕ್ಷ
ಶ್ರೀ ಕೋಡಿ ಚಂದ್ರಶೇಖರ್


ಸಹ ಕಾರ್ಯದರ್ಶಿ
ಶ್ರೀ ಸುನಿಲ್ ಕೋರನ

ಸಮಿತಿ ಸದಸ್ಯರು
ಶ್ರೀ ಬಾರಿಯಂಡ ಜೋಯಪ್ಪ, ಶ್ರೀ ಯಾಲದಾಳು ಕೇಶವಾನಂದ, ಶ್ರೀ ಚಿಲ್ಲನ ಕವೀಂದ್ರ, ಶ್ರೀ ನಡುವಟ್ಟಿರ ಅನಂತ್, ಶ್ರೀ ಕಡ್ಲೆಮನೆ ಧರ್ಮಪಾಲ (ಪ್ರಭು), ಶ್ರೀ ಗುಡ್ಡೆಮನೆ ನಾಣಯ್ಯ, ಶ್ರೀ ಗುಡ್ಡೆಮನೆ ವಿಶುಕುಮಾರ್, ಶ್ರೀ ಮಂದ್ರಿ ಮೋಹನ್‌ದಾಸ್, ಶ್ರೀ ಕೊಲ್ಯದ ಗಿರೀಶ್, ಶ್ರೀ ತಳೂರು ಎ. ಕಿಶೋರ್‌ಕುಮಾರ್, ಶ್ರೀ ಮೊಟ್ಟನ ಜ್ಯೋತಿ ಶಂಕರ್, ಶ್ರೀ ಪೊನ್ನಚ್ಚನ ಮಧುಸೂದನ್, ಶ್ರೀಮತಿ ಕಟ್ಟೆಮನೆ ಲಲಿತ, ಶ್ರೀಮತಿ ತೋಟಂಬೈಲು ಪ್ರೇಮ ಆನಂದ, ಶ್ರೀಮತಿ ಪುದಿಯನೆರವನ ರೇವತಿ ರಮೇಶ್, ಶ್ರೀಮತಿ ಉಳುವಾರನ ಅಮೃತಾ ಸುರೇಶ್, ಶ್ರೀಮತಿ ನೈಯ್ಯಣಿ ಹೇಮಲತಾ ತಾರೇಂದ್ರ, ಶ್ರೀಮತಿ ಕಡ್ಯದ ಜ್ಯೋತಿ ದಿನೇಶ್

ಸಲಹೆಗಾರರು
ಶ್ರೀ ನಂಗಾರು ನಾಣಯ್ಯ, ಶ್ರೀ ಪೊನ್ನೆಟ್ಟಿ ಕೆ. ಪೊನ್ನಪ್ಪ, ಶ್ರೀ ಪೈಕೆ ಅನಂತರಾಮ್, ಶ್ರೀ ಅಮ್ಮವ್ವನ ವಾಸು, ಶ್ರೀ ಮೊಟ್ಟನ ರವಿಕುಮಾರ್



ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ
ಆದಿಚುಂಚನಗಿರಿ ಮಹಾ ಸಂಸ್ಥಾನ



ಶುಭ ಸಂದೇಶ


ಕೊಡಗು ಜಿಲ್ಲೆ ವೀರರ ನಾಡು, ಸಜ್ಜನರ ನೆಲೆವೀಡು ಎಂಬ ಕೀರ್ತಿಗೆ ಪಾತ್ರವಾಗಿದೆ. ಸ್ವಾತಂತ್ರ್ಯ ಹೋರಾಟದಲ್ಲಿ ಕಾವೇರಿ ನಾಡಿನ ಜನರ ಕೊಡುಗೆ ಅಪಾರ.

ಸುಬೇದಾರ **"ಗುಡ್ಡೆಮನೆ ಅಪ್ಪಯ್ಯಗೌಡರು"** ಈ ಹೋರಾಟದಲ್ಲಿ ನೇಣುಗಂಬವನ್ನೇರುವ ಮೂಲಕ ಕೊಡಗಿನ ಕೀರ್ತಿಯನ್ನು ಅಜರಾಮರವಾಗಿಸಿದ್ದಾರೆ. ಈ ವೀರ ಪುಂಗವನ ಪ್ರತಿಮೆಯನ್ನು ಕಾವೇರಿ ನಾಡಿನ ಮಡಿಕೇರಿಯಲ್ಲಿ ಪ್ರತಿಷ್ಠಾಪಿಸುತ್ತಿರುವುದು ಶ್ಲಾಘನೀಯ, ಅರ್ಥಪೂರ್ಣ ಕೂಡ. ನಾವೆಲ್ಲರೂ ಈ ವೀರ ಪುರುಷನಿಗೆ ತಲೆಬಾಗಿ ನಮಿಸೋಣ, ಗೌರವಿಸೋಣ. ಅಪ್ಪಯ್ಯಗೌಡರ ಸವಿನೆನಪಿನಲ್ಲಿ **''ನಮನ''**ಎಂಬ ಸ್ಮರಣ ಸಂಚಿಕೆ ಹೊರಬರುತ್ತಿರುವುದು ಅರ್ಥಪೂರ್ಣ.

ನಮ್ಮ ಶುಭ ಹಾರೈಕೆಗಳು,

ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ

ಡಿ.ವಿ. ಸದಾನಂದ ಗೌಡ, ಬಿ.ಎಸ್ಸಿ., ಎಲ್.ಎಲ್.ಬಿ.,
ಮುಖ್ಯಮಂತ್ರಿಗಳು
ಕರ್ನಾಟಕ ಸರಕಾರ




ಶುಭ ಸಂದೇಶ

ಕೊಡಗು ಪುಟ್ಟ ಜಿಲ್ಲೆಯಾಗಿದ್ದರೂ, ವೀರ ಪರಂಪರೆಯಿರುವ ಜಿಲ್ಲೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಈ ಜಿಲ್ಲೆಯ ಕೊಡುಗೆ ಅಪಾರ. ಹುತಾತ್ಮ ಗುಡ್ಡೆಮನೆ ಅಪ್ಪಯ್ಯ ಗೌಡರು ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರ ಪೈಕಿ ಅಗ್ರಗಣ್ಯರು.

ಈ ಹೋರಾಟಗಾರನ ಹೆಸರನ್ನು ಚಿರಸ್ಥಾಯಿಗೊಳಿಸುವ ದಿಕ್ಕಿನಲ್ಲಿ **"ಗುಡ್ಡೆಮನೆ ಅಪ್ಪಯ್ಯಗೌಡ ಸ್ಮಾರಕ ಉಸ್ತುವಾರಿ ಸಮಿತಿ"** ಯವರು **''ನಮನ''**ಎಂಬ ವಿಶೇಷ ಸಂಚಿಕೆಯನ್ನು ಹೊರತರುವ ಪ್ರಯತ್ನದಲ್ಲಿರುವುದು ಅಭಿನಂದನೀಯ. ಈ ಉಸ್ತುವಾರಿ ಸಮಿತಿಯ ಪ್ರಯತ್ನ ಯಶಸ್ವಿಯಾಗಲಿ ಎಂಬ ಶುಭ ಹಾರೈಕೆಯೊಂದಿಗೆ,

ಡಿ.ವಿ. ಸದಾನಂದಗೌಡ

ಕೆ.ಜಿ. ಬೋಪಯ್ಯ, ಬಿ.ಎಸ್ಸಿ., ಎಲ್.ಎಲ್.ಬಿ.,
ವಿಧಾನ ಸಭಾಧ್ಯಕ್ಷರು
ಕರ್ನಾಟಕ ಸರಕಾರ



ಶುಭ ಸಂದೇಶ

ದೇಶಕ್ಕೆ ಸ್ವಾತಂತ್ರ್ಯ ದೊರಕುವಲ್ಲಿ, ಪುಟ್ಟ ಜಿಲ್ಲೆ ಕೊಡಗಿನ ಪಾತ್ರ ಅವಿಸ್ಮರಣೀಯ. ಗುಲಾಮಗಿರಿಯನ್ನು ಧಿಕ್ಕರಿಸಿ, ಆಂಗ್ಲರ ಪಾಲಿಗೆ ಸಿಂಹ ಸ್ವಪ್ನರಾಗಿದ್ದ ಹುತಾತ್ಮ ಗುಡ್ಡೆಮನೆ ಅಪ್ಪಯ್ಯಗೌಡರು ಚಿರ ಸ್ಮರಣೀಯರು.


ಹುತಾತ್ಮರ ಪುತ್ಥಳಿಯನ್ನು ಪ್ರತಿಷ್ಠಾಪಿಸುವಲ್ಲಿ ಯಶಸ್ವಿ ಕಾರ್ಯ ನಿರ್ವಹಣೆ ಮಾಡಿದ "**ಹುತಾತ್ಮ ಗುಡ್ಡೆಮನೆ ಅಪ್ಪಯ್ಯಗೌಡ ಸ್ಮಾರಕ ಉಸ್ತುವಾರಿ ಸಮಿತಿ**" ಇದೀಗ ಇದಕ್ಕೆ ಸಂಬಂಧಿಸಿದಂತೆ "**ನಮನ**" ಎಂಬ ವಿಶೇಷ ಸಂಚಿಕೆ ಹೊರ ತರುವಲ್ಲಿ ಶ್ರಮ ವಹಿಸಿರುವುದು ಶ್ಲಾಘನೀಯ.

ಶುಭ ಹಾರೈಕೆಗಳು.

ಕೆ.ಜಿ. ಬೋಪಯ್ಯ

ಅಡಗೂರು ಹೆಚ್. ವಿಶ್ವನಾಥ್, ಬಿ.ಎಸ್ಸಿ., ಎಲ್.ಎಲ್.ಬಿ.,
ಲೋಕಸಭಾ ಸದಸ್ಯರು
ಮೈಸೂರು ಲೋಕಸಭಾ ಕ್ಷೇತ್ರ
ಕರ್ನಾಟಕ ರಾಜ್ಯ

ಕಛೇರಿ : ಸರ್ಕಾರಿ ಭವನದ ಆವರಣ
ನಜರಬಾದ್, ಮೈಸೂರು –57001
ಇಮೇಲ್ : mpvishwanath@rediffmail.com
ಮೊಬೈಲ್ : 9901172999, 09013180146




ಶುಭ ಸಂದೇಶ

"ಕೊಡಗು ಜಿಲ್ಲೆಯು ಹಿಂದಿನಿಂದಲು ವೀರ ಪರಂಪರೆಯನ್ನು ಹೊಂದಿರುವ ಬೀಡು. ಬ್ರಿಟೀಷರ ವಿರುದ್ಧ ಹೋರಾಟ ಮಾಡಿ ಹುತಾತ್ಮರಾದ ಸುಬೇದಾರ್ ಗುಡ್ಡೆಮನೆ ಅಪ್ಪಯ್ಯ ಗೌಡರು ಕೊಡಗಿನ ವೀರ ಪರಂಪರೆಗೆ ಮುನ್ನುಡಿಯಾಗಿದ್ದಾರೆ. ಇವರ ಹೆಸರನ್ನು ಚಿರಸ್ಥಾಯಿಗೊಳಿಸುವ ನಿಟ್ಟಿನಲ್ಲಿ ಅಶ್ವಾರೋಹಿ ಅಪ್ಪಯ್ಯಗೌಡರ ಪುತ್ಥಳಿಯನ್ನು ಪ್ರತಿಷ್ಠಾಪಿಸಿ, ಅಪ್ಪಯ್ಯ ಗೌಡ ಉದ್ಯಾನವನವನ್ನು ನಿರ್ಮಾಣ ಮಾಡುತ್ತಿರುವುದು ಹಾಗೂ **"ನಮನ"** ಸ್ಮರಣ ಸಂಚಿಕೆಯನ್ನು ಹೊರ ತರುತ್ತಿರುವುದು ಶ್ಲಾಘನೀಯ. ಹುತಾತ್ಮರ ಪುತ್ಥಳಿಯನ್ನು ಪ್ರತಿಷ್ಠಾಪಿಸುವ ಮೂಲಕ ದೇಶದ ಯುವ ಪೀಳಿಗೆಯಲ್ಲಿ ದೇಶ ಭಕ್ತಿಯನ್ನು ತುಂಬುವ ಕಾರ್ಯ ನಿರ್ವಹಿಸುತ್ತಿರುವ ಹುತಾತ್ಮ ಸುಬೇದಾರ ಗುಡ್ಡೆಮನೆ ಅಪ್ಪಯ್ಯ ಗೌಡರ ಸ್ಮಾರಕ ಉಸ್ತುವಾರಿ ಸಮಿತಿಯವರಿಗೆ ನನ್ನ ಹೃದಯ ಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇನೆ. ಮುಂದಿನ ದಿನಗಳಲ್ಲೂ ಇಂತಹ ಉತ್ತಮ ಕಾರ್ಯ ಕೈಗೊಳ್ಳಲೆಂದು ಹಾರೈಸುತ್ತೇನೆ."

ವಂದನೆಗಳೊಂದಿಗೆ,

ಅಡಗೂರು ಹೆಚ್. ವಿಶ್ವನಾಥ್

ಎಂ.ಪಿ. ಅಪ್ಪಚ್ಚುರಂಜನ್
ಶಾಸಕರು
ಮಡಿಕೇರಿ ವಿಧಾನಸಭಾ ಕ್ಷೇತ್ರ
ಬಹದ್ದೂರ್ ಎಸ್ಟೇಟ್, ಮಾದಾಪುರ




ಶುಭ ಸಂದೇಶ

ಸ್ವಾತಂತ್ರ್ಯಕ್ಕಾಗಿ ಗಲ್ಲುಗಂಬವನ್ನೇರಿದ ಹುತಾತ್ಮ ಗುಡ್ಡೆಮನೆ ಅಪ್ಪಯ್ಯ ಗೌಡರು ಕೊಡಗಿನ ವೀರ ಜನರ ಮನಸ್ಸಿನಲ್ಲಿ ಚಿರ ಸ್ಮರಣೀಯರು. ಇದೀಗ ಅವರ ನೆನಪಿನಲ್ಲಿ "**ನಮನ**" ಎಂಬ ವಿಶೇಷ ಸಂಚಿಕೆಯೊಂದನ್ನು ತರುವ ಈ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ **"ಗುಡ್ಡೆಮನೆ ಅಪ್ಪಯ್ಯ ಗೌಡ ಸ್ಮಾರಕ ಉಸ್ತುವಾರಿ ಸಮಿತಿ"**ಯವರ ಪ್ರಯತ್ನ ಶ್ಲಾಘನೀಯ. ಯಶಸ್ಸಿಗಾಗಿ ಹಾರೈಸುತ್ತೇನೆ.

ವಂದನೆಗಳೊಂದಿಗೆ,

ಎಂ. ಪಿ. ಅಪ್ಪಚ್ಚುರಂಜನ್

ಟಿ. ಜಾನ್
ವಿಧಾನ ಪರಿಷತ್ ಸದಸ್ಯರು
ಕರ್ನಾಟಕ ವಿಧಾನ ಪರಿಷತ್
ಬೆಂಗಳೂರು




ಶುಭ ಸಂದೇಶ

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪುಟ್ಟ ಜಿಲ್ಲೆ ಕೊಡಗಿನಲ್ಲಿ ಜೀವದ ಹಂಗು ತೊರೆದು ಹೋರಾಟ ಮಾಡಿದವರ ಪೈಕಿ ಹುತಾತ್ಮ ಗುಡ್ಡೆಮನೆ ಅಪ್ಪಯ್ಯಗೌಡರು ಅಗ್ರಗಣ್ಯರು. ಯುವ ಜನಾಂಗಕ್ಕೆ ಇವರು ಮಾದರಿಯೂ, ಸ್ಪೂರ್ತಿದಾಯಕರೂ ಆಗಿದ್ದಾರೆ. ಇಂತಹ ಮಹಾನ್ ವ್ಯಕ್ತಿಯ ನೆನಪನ್ನು ಚಿರಸ್ಥಾಯಿಗೊಳಿಸುವ ನಿಟ್ಟಿನಲ್ಲಿ ಅಶ್ವಾರೋಹಿ ಅಪ್ಪಯ್ಯ ಗೌಡರ ಪುತ್ಥಳಿಯನ್ನು ಮಡಿಕೇರಿ ನಗರದಲ್ಲಿ ಸಂಸ್ಥಾಪಿಸುವ ಕಾರ್ಯ ನಿಜಕ್ಕೂ ಶ್ಲಾಘನೀಯ. ಹುತಾತ್ಮರ ನೆನಪನ್ನು ಹಚ್ಚ ಹಸಿರಾಗಿ ಉಳಿಸಿಕೊಳ್ಳುವಲ್ಲಿ **"ಗುಡ್ಡೆಮನೆ ಅಪ್ಪಯ್ಯಗೌಡ ಸ್ಮಾರಕ ಉಸ್ತುವಾರಿ ಸಮಿತಿ"**ಯವರು ''**ನಮನ**'' ಎಂಬ ವಿಶೇಷ ಸಂಚಿಕೆಯೊಂದನ್ನು ಹೊರತರುತ್ತಿರುವುದು ಸ್ತುತ್ಯಾರ್ಹ. ಸಂಚಿಕೆಯ ಯಶಸ್ಸಿಗೆ ಶುಭ ಹಾರೈಕೆಗಳು.

ವಂದನೆಗಳೊಂದಿಗೆ,

ಟಿ. ಜಾನ್

ಎಂ.ಸಿ. ನಾಣಯ್ಯ
ವಿಧಾನ ಪರಿಷತ್ ಸದಸ್ಯರು
ಕರ್ನಾಟಕ ವಿಧಾನ ಪರಿಷತ್
ಬೆಂಗಳೂರು



ಶುಭ ಸಂದೇಶ

ಹುತಾತ್ಮ ಗುಡ್ಡೆಮನೆ ಅಪ್ಪಯ್ಯಗೌಡರು ಪುಟ್ಟ ಜಿಲ್ಲೆ ಕೊಡಗಿನ ಜನರಲ್ಲಿ ಯಾರಿಗೆ ತಾನೆ ಗೊತ್ತಿಲ್ಲ? ದೇಶಕ್ಕೆ ಸ್ವಾತಂತ್ರ್ಯ ದೊರಕಲೇಬೇಕೆಂಬ ಛಲವಂತರಾಗಿದ್ದ ಇವರು, ತಮಗಿದ್ದ ಸುಬೇದಾರ್ ಹುದ್ದೆಯನ್ನು ತ್ಯಜಿಸಿ, ಜನ ಸಂಘಟನೆಯಲ್ಲಿ ತೊಡಗಿ, ಆಂಗ್ಲರ ಪಾಲಿಗೆ ಸಿಂಹ ಸ್ವಪ್ನರಾಗಿದ್ದ ಇವರು ಬಂಧು-ಬಳಗವನ್ನೆಲ್ಲಾ ಅಗಲಿ, ಗಲ್ಲುಗಂಬವನ್ನೇರಿದ ವೀರಾಗ್ರಣಿ.

ಇವರ ಸವಿ ನೆನಪಿನಲ್ಲಿ **"ಗುಡ್ಡೆಮನೆ ಅಪ್ಪಯ್ಯಗೌಡ ಸ್ಮಾರಕ ಉಸ್ತುವಾರಿ ಸಮಿತಿ"**ಯವರು **''ನಮನ''** ಎಂಬ ವಿಶೇಷ ಸಂಚಿಕೆ ಹೊರತರುತ್ತಿರುವುದು ಅಭಿನಂದನೀಯ.

ಶುಭ ಹಾರೈಕೆಗಳು.

ಎಂ.ಸಿ. ನಾಣಯ್ಯ

ಸಾಧನೆಯ ಉತ್ತುಂಗಕ್ಕೇರಿದ ಜನನಾಯಕ

✍ ಶ್ರೀಮತಿ 'ಚಂಪಾ'
ಮಡಿಕೇರಿ

ರಾಷ್ಟ್ರವ್ಯಾಪಿ ರಾಜಕೀಯ ದೊಂಬರಾಟ ನಡೆಯುತ್ತಿರುವ ಇಂದಿನ ಸಂಧಿಗ್ಧ ಸಂಕಷ್ಟ ಪರಿಸ್ಥಿತಿಯಲ್ಲಿ ಸರಳ ಸಜ್ಜನಿಕೆಯ ಮೇರು ವ್ಯಕ್ತಿಯೊಬ್ಬರು ಕರ್ನಾಟಕ ರಾಜ್ಯದ ಅತ್ಯುನ್ನತ ಹುದ್ದೆಯಾದ ಮುಖ್ಯಮಂತ್ರಿ ಸ್ಥಾನ ಅಲಂಕರಿಸುವ ಮೂಲಕ ಭ್ರಷ್ಟಾಚಾರದ ವಿರುದ್ಧ ಸಮರ್ಥವಾಗಿ ಸಮರ ಸಾರಿರುವ ಸದಾ ಹಸನ್ಮುಖಿ ದೇವರಗುಂಡ ಸದಾನಂದ ಗೌಡರು ಗೌಡ ಜನಾಂಗದ ಏಕೈಕ ಪ್ರಶ್ನಾತೀತ ನಾಯಕರು ಎನ್ನಲು ಹೆಮ್ಮೆಯೆನಿಸುತ್ತದೆ.



1953ರ ಮಾರ್ಚ್ 18ರಂದು ದೇವರಗುಂಡ ಶ್ರೀ ವೆಂಕಪ್ಪಗೌಡ ಮತ್ತು ಶ್ರೀಮತಿ ಕಮಲ ದಂಪತಿಗಳ ಪುತ್ರರಾಗಿ ಜನಿಸಿದ ಶ್ರೀ ಸದಾನಂದ ಗೌಡರು ತಮ್ಮ ಪ್ರಾಥಮಿಕ ವಿದ್ಯಾಭ್ಯಾಸವನ್ನು ತಮ್ಮ ಹುಟ್ಟೂರು ಜಾಲ್ಸೂರು ಗ್ರಾಮಕ್ಕೆ ಸಮೀಪದ ಸುಳ್ಯದ ಪಂಜಿಕಲ್ಲು ಹಾಗೂ ಪುತ್ತೂರಿನ ಕೆಯ್ಯೂರು ಗ್ರಾಮಗಳಲ್ಲಿ ಪೂರೈಸಿದರು. ಬಾಲ್ಯದಿಂದಲೂ ಚುರುಕು ಬುದ್ಧಿಯವರಾಗಿದ್ದ ಇವರು, ಪುತ್ತೂರಿನ ಸಂತ ಫಿಲೋಮಿನಾ ಪ್ರೌಢಶಾಲೆಯಲ್ಲಿ ವಿದ್ಯಾರ್ಥಿಯಾಗಿದ್ದಾಗ ನಾಯಕತ್ವ ಗುಣಗಳನ್ನು ಮೈಗೂಡಿಸಿಕೊಂಡರು. ಉಡುಪಿಯ ವೈಕುಂಠ ಬಾಳಿಗಾ ಕಾನೂನು ಕಾಲೇಜಿನಲ್ಲಿ ಕಾನೂನು ಪದವಿ ಪಡೆದರು. ನಂತರ ಪುತ್ತೂರು ನ್ಯಾಯಾಲಯದಲ್ಲಿ ವಕೀಲಿ ವೃತ್ತಿ ಪ್ರಾರಂಭಿಸಿದರು. ವೃತ್ತಿಯನ್ನು ನಿಷ್ಠೆಯಿಂದ ನಿರ್ವಹಿಸಿದ ಶ್ರೀಯುತರು ಸರ್ಕಾರಿ ಅಭಿಯೋಜಕ (ಎ.ಪಿ.ಪಿ) ರಾಗಿ ಆಯ್ಕೆಯಾಗಿ ಸಿರಸಿಯಲ್ಲಿ ಒಂದು ವರ್ಷ ಕಾಲ ಕರ್ತವ್ಯ ನಿರ್ವಹಿಸಿದರು.

ಉತ್ಸಾಹಿ ಯುವಕ, ವೃತ್ತಿಯಲ್ಲಿ ಅಪಾರ ಶ್ರದ್ಧೆ, ಸಾರ್ವಜನಿಕ ಚಿಂತನೆಯೊಂದಿಗೆ ರಾಜಕೀಯ ಬದುಕಿನ ಕಡೆ ಕೂಡ ಆಕರ್ಷಿತರಾದರು. ತಮ್ಮ ದಿಟ್ಟ ವ್ಯಕ್ತಿತ್ವ ಅವರನ್ನು ಜನಾನುರಾಗಿಯನ್ನಾಗಿಸಿತು.

ದಕ್ಷಿಣ ಕನ್ನಡ ಜಿಲ್ಲೆಯ ಸುಪುತ್ರರಾದ ಸದಾನಂದ ಗೌಡರು 1981ರಲ್ಲಿ ತಮ್ಮ 28ನೇ ವರ್ಷ ವಯಸಿನಲ್ಲಿ, ಕೊಡಗಿನ ಗುಡ್ಡೆಮನೆತನದ ಶ್ರೀ ಮಂದಣ್ಣ ಮತ್ತು ಶ್ರೀಮತಿ ಮುತ್ತಮ್ಮ ದಂಪತಿಯ ತೃತೀಯ ಪುತ್ರಿ, ದಂಬೆಕೋಡಿ ಅಪ್ಪಚ್ಚನವರ ಮೊಮ್ಮಗಳು ಡಾಟಿಯವರನ್ನು ವರಿಸುವ ಮೂಲಕ ಗೃಹಸ್ಥಾಶ್ರಮ ಪ್ರವೇಶ ಮಾಡಿದರು. ಕೊಡಗಿನ ಅಳಿಯಂದಿರೆಂಬ ಹೆಮ್ಮೆಗೆ ಪಾತ್ರರಾದರು. ಇದೀಗ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾಗುವ ಮೂಲಕ ಗೌಡ ಜನಾಂಗದ ಹಾಗೂ ಕೊಡಗಿನ ಕೀರ್ತಿಯನ್ನು ಉತ್ತುಂಗಕ್ಕೇರಿಸಿದ್ದಾರೆ.

ಕೌಶಿಕ್ ಮತ್ತು ಕಾರ್ತಿಕ್ ಎಂಬ ಈರ್ವರು ಪುತ್ರರನ್ನು ಪಡೆದ ಸದಾನಂದ ಗೌಡರ ದಾಂಪತ್ಯ ಬದುಕು ತಮ್ಮ ಹೆಸರಿನಂತೆಯೇ ಸದಾ ಆನಂದಮಯವಾಗಿತ್ತು. ಆದರೆ ವಿಧಿಯಾಟದ ಮುಂದೆ ಮಾನವ ಕುಬ್ಜ. ಈರ್ವರು ಪುತ್ರರ ಪೈಕಿ ಹಿರಿಯವನಾದ ಕೌಶಿಕ್ ಅಕಾಲಿಕ ಕಾಲನ ಕರೆಗೆ ಓಗೊಟ್ಟು, ಆನಂದಮಯವಾಗಿದ್ದ

ಈ ಕುಟುಂಬವನ್ನು ದು:ಖದ ಕಡಲಿನಲ್ಲಿ ಮುಳುಗಿಸಿತು. ಕ್ರಮೇಣ ದು:ಖದ ಮಡುವಿನಿಂದ ಹೊರಬಂದು ವಾಸ್ತವ ಜಗತ್ತಿನಲ್ಲಿ ಬೆರೆತು ತಮ್ಮ ಪಾಲಿನ ಕರ್ತವ್ಯ ಪಾಲನೆಯಲ್ಲಿ ದಿಟ್ಟವಾಗಿ ಮುನ್ನಡೆದಿದ್ದಾರೆ, ಜನಾಂಗದ ಹೆಮ್ಮೆಯ ನಾಯಕ ಸದಾನಂದ ಗೌಡರು.

ಭಾರತೀಯ ಜನಸಂಘದ ಮೂಲಕ ಸಕ್ರಿಯ ರಾಜಕೀಯ ಪ್ರವೇಶ ಮಾಡಿದ ಶ್ರೀಯುತರು, 1994 ಮತ್ತು 1999ರಲ್ಲಿ ಎರಡು ಬಾರಿ ಪುತ್ತೂರು ವಿಧಾನಸಭಾ ಕ್ಷೇತ್ರದಿಂದ ಬಿ.ಜೆ.ಪಿ. ಅಭ್ಯರ್ಥಿಯಾಗಿ ವಿಧಾನಸಭೆ ಪ್ರವೇಶ ಮಾಡಿದರು. ಅತ್ಯುತ್ತಮ ವಾಗ್ಮಿಯಾದ ಇವರು ತಮ್ಮ ದಿಟ್ಟ ನಿಲುವು ಹಾಗೂ ಆಕರ್ಷಕ ಭಾಷಣಗಳ ಮೂಲಕ ಜನಾನುರಾಗಿಯಾದರು. ತತ್ಫಲವಾಗಿ 2004ರಲ್ಲಿ ಕೊಡಗು- ಮಂಗಳೂರು ಕ್ಷೇತ್ರದಿಂದಲೂ, 2009ರಲ್ಲಿ ಉಡುಪಿ-ಚಿಕ್ಕಮಗಳೂರು ಕ್ಷೇತ್ರದಿಂದಲೂ ಲೋಕಸಭೆಗೆ ನಡೆದ ಚುನಾವಣೆಯಲ್ಲಿ ಅತ್ಯಧಿಕ ಬಹುಮತದಿಂದ ಚುನಾಯಿತರಾದರು.

ಕರ್ನಾಟಕದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದಿದ್ದ ಬಿ.ಜೆ.ಪಿ. ಸರಕಾರಕ್ಕೆ ಸಂಕಷ್ಟಗಳ ಸರಮಾಲೆ. ಪಕ್ಷವನ್ನು ಹಾಗೂ ಸರಕಾರವನ್ನು ಸಮರ್ಥವಾಗಿ ಮುನ್ನಡೆಸುವ ಧೀಮಂತ ನಾಯಕನ ಅವಶ್ಯಕತೆ ಬಿ.ಜೆ.ಪಿ. ಗಿತ್ತು. ಇಂತಹ ದ್ರೋಣ ಕಾಲದಲ್ಲಿ ಜವಾಬ್ದಾರಿ ಶ್ರೀ ಸದಾನಂದ ಗೌಡರ ಹೆಗಲೇರಿತು. ಎಲ್ಲಾ ಸವಾಲುಗಳನ್ನು, ಸಮಸ್ಯೆಗಳನ್ನು ಸಮರ್ಥವಾಗಿ ಎದುರಿಸುವ ಮೂಲಕ ಸರಕಾರದ ಪಾಲಿಗೆ ಯಶಸ್ವಿ ದ್ರೋಣಾಚಾರ್ಯರೆನಿಸಿದ್ದಾರೆ ನಮ್ಮ ಹಸನ್ಮುಖಿ ಗೌಡರು.

2005ರಲ್ಲಿ ಭಾರತ ಕಾಫಿ ಮಂಡಳಿಗೆ ನಾಮ ನಿರ್ದೇಶಿತರಾಗಿದ್ದ ಇವರಿಗೆ, ಯಕ್ಷಗಾನ ಕಲೆಯಲ್ಲಿ ವಿಶೇಷ ಆಸಕ್ತಿ. ವಿದ್ಯಾರ್ಥಿಯಾಗಿದ್ದಾಗ ಖೋ ಖೋ, ಬ್ಯಾಡ್ಮಿಂಟನ್, ಟೆನ್ನಿಸ್ ಆಟಗಳನ್ನಾಡುತ್ತಿದ್ದ ಸದಾನಂದ ಗೌಡರು ಉತ್ತಮ ಕ್ರೀಡಾಪಟು ಎನಿಸಿದ್ದರು.

ಶ್ರೀಯುತರ ಮುಂದಿನ ರಾಜಕೀಯ ಬದುಕು ಕಲ್ಲು, ಮುಳ್ಳುಗಳಿಲ್ಲದೆ ಹೂವಿನ ಹಾಸಿನಂತಿರಲಿ, ಅವರ ಕಾರ್ಯ ನಿರ್ವಹಣೆ ಕೊಡಗು ಹಾಗೂ ದಕ್ಷಿಣ ಕನ್ನಡ ಎರಡೂ ಜಿಲ್ಲೆಗಳಿಗೆ ಅಪೂರ್ವ ಕೀರ್ತಿ ತರುವಂತಾಗಲಿ ಎಂಬುದು ಸದಾಶಯ.

ಒಳ್ಳೆಯದು ಯಾರಿಂದಲೇ ಬಂದರೂ ಯಾವ ದೇಶದಿಂದಲೇ ಬಂದರೂ ಅದನ್ನು ಸ್ವೀಕರಿಸಬೇಕು. ಅದನ್ನು ಅರಗಿಸಿಕೊಂಡು ನಮ್ಮದನ್ನಾಗಿ ಮಾಡಬೇಕು.

- ಅವನೀಂದ್ರನಾಥರು

*****

ಸುಂದರವಾಗಬೇಕೆಂದು ಹೊರಟ ಕಲೆ ಸತ್ಯವನ್ನು ಸಾರುತ್ತದೆ. ಸತ್ಯವಾದ ವಿಷಯವನ್ನು ಸುಂದರವಾಗಿ ಹೇಳುವೆನೆನ್ನುವುದೇ ಲೇಖಕನ ಧ್ಯೇಯ.

- ಮಾಸ್ತಿ

*****

ಮಾತಾಡಿದಂತೆ ನಡೆದಾತ ಜಗವನ್ನು ಕೂತಲ್ಲಿ ಆಳ್ವ


- ಸರ್ವಜ್ಞ

ಸೌಮ್ಯ ಸ್ವಭಾವದ
ದಂಬೆಕೋಡಿ ಚಿಣ್ಣಪ್ಪ

✍ ಕುಡೆಕಲ್ಲ್ ವಿಶ್ವನಾಥ್
ಮುತ್ತಾರ್ಮುಡಿ

ಕರ್ನಾಟಕ ರಾಜ್ಯ ಸರಕಾರದಲ್ಲಿ ಸಂಪುಟ ದರ್ಜೆ ಸಚಿವರಾಗಿ ಗೌಡ ಜನಾಂಗಕ್ಕೆ ಕೀರ್ತಿ ತಂದ ಪ್ರಪ್ರಥಮ ವ್ಯಕ್ತಿ ದಂಬೆಕೋಡಿ ಚಿಣ್ಣಪ್ಪನವರು.

1929 ಅಕ್ಟೋಬರ್ 17ರ ಕಾವೇರಿ ತುಲಾ ಸಂಕ್ರಮಣದ ಶುಭ ದಿನದಂದು ದಂಬೆಕೋಡಿ ಶ್ರೀ ಅಪ್ಪಚ್ಚ ಶ್ರೀಮತಿ ಅಮ್ಮವ್ವ ದಂಪತಿಗಳ ಪುತ್ರರಾಗಿ ಜನಿಸಿದ ಚಿಣ್ಣಪ್ಪನವರು ವೈವಿಧ್ಯಮಯ ಬದುಕು ಕಂಡವರು. ಬಾಲ್ಯದಿಂದಲೇ ತೀಕ್ಷ್ಣಮತಿಯಾಗಿದ್ದ ಇವರು ತಮ್ಮ ಪ್ರಾಥಮಿಕ ವಿದ್ಯಾಭ್ಯಾಸವನ್ನು ಮೂರ್ನಾಡು ಸರಕಾರಿ ಪ್ರಾಥಮಿಕ ಶಾಲೆಯಲ್ಲಿ ಪೂರೈಸಿದರು. ಪ್ರೌಢ ಶಾಲಾ ವಿದ್ಯಾಭ್ಯಾಸಕ್ಕಾಗಿ ಮಡಿಕೇರಿಯ ಸೆಂಟ್ರಲ್ ಹೈಸ್ಕೂಲ್ (ಈಗಿನ ಸರಕಾರಿ ಜೂನಿಯರ್ ಕಾಲೇಜು)ಗೆ ದಾಖಲಾದರು. ಆಟೋಟಗಳ ಜೊತೆಗೆ ಶಾಲೆಯ ವಿವಿಧ ಚಟುವಟಿಕೆಗಳಲ್ಲಿ ಸಕ್ರಿಯರಾಗಿ ಪಾಲ್ಗೊಳ್ಳುವ ಮೂಲಕ ಗುರು ವೃಂದದ ಪ್ರೀತಿ ವಿಶ್ವಾಸಕ್ಕೆ ಪಾತ್ರರಾದರು. ವಿದ್ಯಾರ್ಥಿ ಸಂಘದ ಚುನಾವಣೆಯಲ್ಲಿ ಸ್ಪರ್ಧಿಸಿದ ಇವರು ಪ್ರಥಮ ಕೊಡವೇತರ ಕಾರ್ಯದರ್ಶಿಯಾಗಿ ಆಯ್ಕೆಯಾದರು. ನಾಯಕತ್ವ ಗುಣಗಳನ್ನು ಮೈಗೂಡಿಸಿಕೊಂಡಿದ್ದ ದಂಬೆಕೋಡಿ ಚಿಣ್ಣಪ್ಪನವರು ತಮ್ಮ ಪದವಿ ಹಾಗೂ ಕಾನೂನು ವ್ಯಾಸಂಗವನ್ನು ಕ್ರಮವಾಗಿ ಬೆಂಗಳೂರಿನ ಸಂತ ಜೋಸೆಫರ ಕಾಲೇಜು ಹಾಗೂ ಕಾನೂನು ಕಾಲೇಜುಗಳಲ್ಲಿ ಪೂರೈಸಿದರು. ಮಡಿಕೇರಿಯ ನ್ಯಾಯಾಲಯದಲ್ಲಿ ತಮ್ಮ ವಕೀಲ ವೃತ್ತಿಯನ್ನು ಪ್ರಾರಂಭಿಸಿದರು.



1961ರಲ್ಲಿ ತಮ್ಮ 32ನೇ ವಯಸ್ಸಿನಲ್ಲಿ ಕುಂಞಾಳಿ ಶ್ರೀ ಮಾದಪ್ಪ ಶ್ರೀಮತಿ ಚೋಂದಮ್ಮ ದಂಪತಿಗಳ ದ್ವಿತೀಯ ಪುತ್ರಿ ಲೀಲಾವತಿಯವರನ್ನು ತಮ್ಮ ಬಾಳ ಸಂಗಾತಿಯಾಗಿ ಸ್ವೀಕರಿಸಿದ ಚಿಣ್ಣಪ್ಪನವರದು ಸುಖೀ ಸಂಸಾರ. ಈ ದಂಪತಿಗಳ ಸಂತೋಷದ ಬದುಕಿಗೆ ಸಾಕ್ಷಿಯಾದ ಮೂವರು ಪುತ್ರಿಯರ ಪೈಕಿ ಹಿರಿಯವಳು ಡಾ. ನಮಿತ, ಎರಡನೆಯವಳು ಪಿ.ಹೆಚ್‌ಡಿ ಮಾಡಿರುವ ಡಾ. ಪರಿಣಿತ ಹಾಗೂ ತೃತೀಯ ಪುತ್ರಿ ಇಂಜಿನಿಯರಿಂಗ್ ಪದವೀಧರೆ ಮೃಣಾಳಿನಿ.

ತಮ್ಮ ವಕೀಲಿ ವೃತ್ತಿಯ ಬಗ್ಗೆ ಅಪಾರ ಗೌರವ ಹೊಂದಿದ್ದ ಚಿಣ್ಣಪ್ಪನವರಿಗೆ ರಾಜಕೀಯ ಕ್ಷೇತ್ರದಲ್ಲಿ ಕೂಡ ಒಲವು ಹೆಚ್ಚಾಗಿತ್ತು. 1976ರಲ್ಲಿ ದೇಶದಲ್ಲಿ ತುರ್ತು ಪರಿಸ್ಥಿತಿಯ ಕರಾಳ ಛಾಯೆ ಆವರಿಸಿತ್ತು. ದೇಶವ್ಯಾಪಿ ಪ್ರತಿರೋಧ ವ್ಯಕ್ತವಾಗಿತ್ತು. ಇದರಿಂದ ಕೊಡಗು ಜಿಲ್ಲೆ ಕೂಡ ಹೊರತಾಗಿರಲಿಲ್ಲ. ಜಿಲ್ಲೆಯಲ್ಲಿ ತುರ್ತು ಸ್ಥಿತಿಯನ್ನು ತೀಕ್ಷ್ಣವಾಗಿ ವಿರೋಧಿಸಿ ಯಶಸ್ವಿಯಾದ ಧೀಮಂತ ನಾಯಕರುಗಳ ಪೈಕಿ ದಂಬೆಕೋಡಿ ಚಿಣ್ಣಪ್ಪನವರು ಕೂಡ ಒಬ್ಬರು.

ಹಲವಾರು ಸಂಘ ಸಂಸ್ಥೆಗಳಲ್ಲಿ ಯಶಸ್ವಿಯಾಗಿ ಕಾರ್ಯ ನಿರ್ವಹಿಸಿದ ಹೆಮ್ಮೆ ಚಿಣ್ಣಪ್ಪನವರದು. ಜಿಲ್ಲೆಯ ಏಲಕ್ಕಿ ಸಹಕಾರ ಸಂಘ, ಗೃಹ ನಿರ್ಮಾಣ ಸಹಕಾರ ಸಂಘ, ಭೂ ಅಭಿವೃದ್ಧಿ ಬ್ಯಾಂಕ್, ಲಯನ್ಸ್ ಕ್ಲಬ್‌ಗಳ ಅಧ್ಯಕ್ಷರಾಗಿ ಸೇವೆ ಸಲ್ಲಿಸಿ ಯಶಸ್ವಿಯಾದ ಹೆಗ್ಗಳಿಕೆ ಇವರದು. ಕೊಡಗು ಗೌಡ ವಿದ್ಯಾ ಸಂಘ, ಗೌಡ ಸಮಾಜಗಳಲ್ಲಿ ಸದಸ್ಯರಾಗಿ, ಅಧ್ಯಕ್ಷರಾಗಿ ಸಮರ್ಥವಾಗಿ ಕರ್ತವ್ಯ ನಿರ್ವಹಿಸಿ ಜನ ಮನ್ನಣೆ ಗಳಿಸುತ್ತಿದ್ದ ಇವರನ್ನು, ಅಂದಿನ ರಾಜ್ಯದ ಮುಖ್ಯ ಮಂತ್ರಿಯಾಗಿದ್ದ ಶ್ರೀ ಆರ್. ಗುಂಡೂರಾವ್ ಅವರು ಗಮನಿಸಿದರು. ಇವರ ಜಾಣ್ಮೆಯನ್ನು ಬಳಸಿಕೊಂಡರೆ ತಮ್ಮ ಪಕ್ಷದ ಸಂಘಟನೆಗೆ ಅನುಕೂಲವಾಗಬಹುದೆಂಬ ಚಿಂತನೆ ಹರಿಸಿದರು. ಚಿಣ್ಣಪ್ಪನವರನ್ನು ತಮ್ಮ ಬಳಿಗೆ ಕರೆಸಿಕೊಂಡು ರಾಜ್ಯ ವಯಸ್ಕರ ಶಿಕ್ಷಣ ಮಂಡಳಿಯ ಅಧ್ಯಕ್ಷರನ್ನಾಗಿ ನಾಮಕರಣ ಮಾಡಿದರು. ಇಲ್ಲಿ ಕೂಡ ಕೀರ್ತಿ, ಯಶಸ್ಸು ಚಿಣ್ಣಪ್ಪನವರನ್ನು ಅರಸಿ ಬಂತು. ಪ್ರತಿಫಲವಾಗಿ 1985 ಹಾಗೂ 1989ರ ಎರಡು ವಿಧಾನಸಭಾ ಚುನಾವಣೆಗಳಲ್ಲಿ ಶಾಸಕರಾಗಿ ಚುನಾಯಿತರಾಗಿ ವಿಧಾನಸಭೆ ಪ್ರವೇಶ ಮಾಡಿದರು. ಗಣಿ ಹಾಗೂ ಭೂ ವಿಜ್ಞಾನ ಖಾತೆಯ ಸಂಪುಟ ದರ್ಜೆ ಸಚಿವರಾಗಿ, ಸಮರ್ಥವಾಗಿ ಕರ್ತವ್ಯ ನಿರ್ವಹಿಸಿ ಜನ ಮನ್ನಣೆಗೆ ಪಾತ್ರರಾದರು. ಜನಾಂಗಕ್ಕೆ ಮಾತ್ರವಲ್ಲದೆ, ಜಿಲ್ಲೆಗೇ ಕೀರ್ತಿ ತಂದರು.

ಸುಮಾರು 20 ವರ್ಷಗಳಿಗೂ ಅಧಿಕ ಕಾಲ ಭಾರತ ಸೇವಾದಳದ ಜಿಲ್ಲಾ ಅಧ್ಯಕ್ಷರಾಗಿ ಯಶಸ್ವಿಯಾಗಿ ಕರ್ತವ್ಯ ನಿರ್ವಹಣೆ ಮಾಡಿದ ಹೆಮ್ಮೆ ಇವರ ಪಾಲಿಗಿದೆ.

ಅಲ್ಪ ಕಾಲದ ಅನಾರೋಗ್ಯಕ್ಕೆ ಒಳಗಾದ ದಂಬೆಕೋಡಿ ಚಿಣ್ಣಪ್ಪನವರು ಬದುಕಿನ ಪಯಣ ಮುಗಿಸಿ, ಅಪಾರ ಅಭಿಮಾನಿಗಳನ್ನು, ಪತ್ನಿ, ಪುತ್ರಿಯರು, ಬಂಧು ಬಳಗವನ್ನು ದುಃಖದ ಮಡಿಲಿಗೆ ದೂಡಿ ಕೀರ್ತಿಶೇಷರಾದರು, ಅಮರರಾದರು.

ಕಾರ್ಯನಿರತನಿಗೆ ಕೆಲಸವೇ ವಿಶ್ರಾಂತಿ; ಸೋಮಾರಿಗೆ ಸುಮ್ಮನೆ ಕುಳಿತಿರುವುದೇ ಕೆಲಸ.

- ವಿವೇಕಾನಂದ

*****

ಅಧಿಕಾರ ಶಾಶ್ವತವಲ್ಲ. ತಾನು ಮಾಡಿದ ಒಳ್ಳೆಯ ಕೆಲಸ ಶಾಶ್ವತ.

- ಲೋಕೋಕ್ತಿ

*****

ಸಿರಿತನ ಬಂದಾಗ ತಗ್ಗಿ ನಡೆಯಬೇಕು.

- ಕಾಳಿದಾಸ

*****

ಹೆಣ ಶೃಂಗಾರವರಿಯದು, ಊರು ಉಪಕಾರ ಅರಿಯದು.

- ಲೋಕೋಕ್ತಿ

*****

ಕದಿಯಲಾಗದ ಸಂಪತ್ತು ವಿದ್ಯೆ.


- ಲೋಕೋಕ್ತಿ

ಜನಾಕರ್ಷಣೆಯ

ಮೇರು ವ್ಯಕ್ತಿ

ಪಾಲಾಕ್ಷ ಅಮೆಮನೆ,
ಮಡಿಕೇರಿ

ಕಾವೇರಿ ನಾಡು ಕೊಡಗು ಜಿಲ್ಲೆ ಕಂಡ ರಾಜಕಾರಣದ ಮೇರು ವ್ಯಕ್ತಿಗಳಲ್ಲಿ ದಂಬೆಕೋಡಿ ಸುಬ್ರಾಯ ಮಾದಪ್ಪ ಅಗ್ರಗಣ್ಯರೆಂದು ಹೇಳಿದರೆ ಅದರಲ್ಲಿ ಯಾವುದೇ ಅತಿಶಯೋಕ್ತಿ ಇಲ್ಲ. ಜನ ಸಾಮಾನ್ಯರ ಮಧ್ಯೆ ಅತಿ ಸಾಮಾನ್ಯವಾಗಿ, ಬಡವರ ಬಂಧುವಾಗಿ, ನೊಂದವರ ಪಾಲಿನ ನಾಡಿಮಿಡಿತವಾಗಿ ಬೆಳೆದು ಬಂದವರು ದಂಬೆಕೋಡಿ ಮಾದಪ್ಪ. ನಮ್ಮೆಲ್ಲರ ಪಾಲಿಗೆ ಅಚ್ಚುಮೆಚ್ಚಿನ "ಮಾದಪ್ಪಣ್ಣ".



ಚೆಟ್ಟಳ್ಳಿಯ ಸುಬ್ರಾಯ ಮತ್ತು ರಾಮಕ್ಕ ದಂಪತಿಗಳ 12 ಮಂದಿ ಮಕ್ಕಳಲ್ಲಿ ಮಾದಪ್ಪನವರು 5ನೇ ಸುಪುತ್ರರು. ಕೊಡಗಿನಲ್ಲಿ ತಮ್ಮ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣವನ್ನು ಮುಗಿಸಿದ ಶ್ರೀಯುತರು ಹಾಸನದ ಇಂಜಿನಿಯರಿಂಗ್ ಕಾಲೇಜಿನಲ್ಲಿ ಪದವಿ ಗಳಿಸಿದರು. ಅಂದು ಅರಸರ ಆಡಳಿತಕ್ಕೆ ಒಳಪಟ್ಟಿದ್ದ ಭೂತಾನ್‌ನ ಕಂಪೆನಿಯೊಂದರಲ್ಲಿ ಸಹಾಯಕ ಇಂಜಿನಿಯರ್ ಆಗಿ ವೃತ್ತಿ ಜೀವನ ಪ್ರಾರಂಭಿಸಿದರೂ ಕೂಡ, ತಾಯ್ನಾಡಿನಿಂದ ದೂರ ಉಳಿಯುವುದು ಮಾದಪ್ಪನವರಿಗೆ ಸಾಧ್ಯವಾಗಲಿಲ್ಲ ಎಂಬುದು ಆತ್ಮೀಯರೊಂದಿಗೆ ಅವರ ಮನದಾಳದ ಮಾತು.

ಯಾವುದೇ ಕಾರ್ಯಕ್ರಮವಿಲ್ಲದೆ ಸುಮ್ಮನೆ ಕುಳಿತುಕೊಳ್ಳುವ ಜಾಯಮಾನ ಮಾದಪ್ಪನವರದಲ್ಲ. ಚುರುಕು ಬುದ್ಧಿಯ ಶ್ರೀಯುತರು ಸಮಾಜ ಸೇವೆಯತ್ತ ಆಕರ್ಷಿತರಾದರು. ಅಸಾಮಾನ್ಯ ಸಂಘಟನಾ ಸಾಮರ್ಥ್ಯ ಹೊಂದಿದ್ದ ಮಾದಪ್ಪನವರು 1980ರಲ್ಲಿ ರಾಜಕೀಯ ಬದುಕಿಗೆ ಪದಾರ್ಪಣೆ ಮಾಡಿದರು.

ಯುವ ಜನಾಂಗವನ್ನು ಸಂಘಟಿಸಿ 1980ರ ದಶಕದಲ್ಲಿ ಮಡಿಕೇರಿ ಕ್ಷೇತ್ರದಿಂದ ವಿಧಾನಸಭೆಗೆ ಸ್ಪರ್ಧಿಸುವ ಮೂಲಕ, ವಿವಿಧ ರಾಜಕೀಯ ಪಕ್ಷಗಳ ಧುರೀಣರ ಮನದಲ್ಲಿ ಕಂಪನವನ್ನುಂಟು ಮಾಡಿದ ಕೀರ್ತಿ ಮಾದಪ್ಪನವರಿಗೆ ಸಲ್ಲುತ್ತದೆ.

ನಂತರ ವಿವಿಧ ರಾಜಕೀಯ ಪಕ್ಷಗಳಿಂದ ಮುಕ್ತ ಆಹ್ವಾನ ದೊರೆಯಿತಾದರೂ ಅಟಲ್ ಬಿಹಾರಿ ವಾಜಪೇಯಿಯವರ ಅಭಿಮಾನಿಯಾಗಿದ್ದ ಮಾದಪ್ಪನವರು ತಮ್ಮ ರಾಜಕೀಯ ಬದುಕನ್ನು ಗುರುತಿಸಿಕೊಂಡಿದ್ದು, ಅಂದು ಕೊಡಗಿನಲ್ಲಿ ತೀರಾ ಅಪರಿಚಿತವಾಗಿದ್ದ ಭಾರತೀಯ ಜನತಾ ಪಾರ್ಟಿಯಲ್ಲಿ. ಮಾದಪ್ಪನವರ ಸಂಘಟನಾ ಸಾಮರ್ಥ್ಯವನ್ನು ಗುರುತಿಸಿದವರು 1977ರಲ್ಲಿ ಜನಸಂಘದ ಕೊಡಗು ಜಿಲ್ಲಾ ಅಧ್ಯಕ್ಷರಾಗಿದ್ದ ಹಿರಿಯ ಮುತ್ಸದ್ದಿ ಶ್ರೀ ಎಂ. ಡಬ್ಲ್ಯು ಐಯ್ಯಪ್ಪನವರು ಹಾಗೂ ಡಾ. ಎಂ.ಎಂ. ಚಂಗಪ್ಪನವರು. ಇವರುಗಳ ಹಿರಿತನಕ್ಕೆ ಹಾಗೂ ಜನಪರ ಕಾಳಜಿಗೆ ತಲೆ ಬಾಗಿದ ಮಾದಪ್ಪನವರು ಬಿ.ಜೆ.ಪಿ.ಯತ್ತ ವಾಲಿದರು.

ಜಿಲ್ಲೆಯಲ್ಲಿ ತೀರಾ ನಿತ್ರಾಣವಾಗಿದ್ದ ಬಿ.ಜೆ.ಪಿ.ಯನ್ನು ಬೇರು ಮಟ್ಟದಿಂದ ಸದೃಢಗೊಳಿಸಿದ ಕೀರ್ತಿ

ಮಾದಪ್ಪನವರಿಗೇ ಸಲ್ಲಬೇಕು. ಪಕ್ಷ ಸಂಘಟಿಸುವ ಹಾದಿಯಲ್ಲಿ ಸದಾ ಕ್ರಿಯಾಶೀಲರಾಗಿರುತ್ತಿದ್ದ ಮಾದಪ್ಪನವರ ಜನಪರ ಹೋರಾಟಗಳನ್ನು ಬಣ್ಣಿಸುತ್ತಾ ಹೋದರೆ ಅದು ಅಗಾಧವೆನಿಸುತ್ತದೆ.

ಒಮ್ಮೆ ರಾಜ್ಯ ಸರಕಾರದ ಆಡಳಿತ ವಿರೋಧಿಸಿ ಜನರನ್ನು ಸಂಘಟಿಸಿ ಕೇರಳದ ಗಡಿ ಪ್ರದೇಶ ಕರಿಕೆಯಿಂದ ಮಡಿಕೇರಿಯವರೆಗೆ ಪಾದಯಾತ್ರೆ ಮಾಡಿ ಯಶಸ್ವಿಯಾದವರು ಮಾದಪ್ಪನವರು. ಸುಮಾರು 250 ಮಂದಿಯಿಂದ ಪ್ರಾರಂಭಗೊಂಡ ಈ ಪಾದಯಾತ್ರೆ ಮಡಿಕೇರಿ ತಲುಪಿದಾಗ ಸಾವಿರಾರು ಮಂದಿಯಿಂದ ತುಂಬಿತ್ತು. ಪಾದಯಾತ್ರೆ ಬರುತ್ತಿರುವಾಗ ಭಾಗಮಂಡಲದಲ್ಲಿ , ಬೆಟ್ಟಗೇರಿಯಲ್ಲಿ ಹಾಗೂ ಮಡಿಕೇರಿಯ ಗಾಂಧಿ ಮೈದಾನದಲ್ಲಿ ಅಭಿಮಾನಿಗಳಿಂದ ಊಟೋಪಚಾರದ ವ್ಯವಸ್ಥೆಯಾಗಿತ್ತು.

1985ರಲ್ಲಿ ಕೊಡಗು ಜಿಲ್ಲೆ ಕಾಂಗ್ರೆಸ್ ಗೂಡಾಗಿದ್ದ ಸಂದರ್ಭ ಕೊಡಗು ಜಿಲ್ಲಾ ಪರಿಷತ್‌ಗೆ ಆಯ್ಕೆಯಾದ ಪ್ರಪ್ರಥಮ ಬಿ.ಜೆ.ಪಿ ಸದಸ್ಯ ಎಂಬ ಹೆಗ್ಗಳಿಕೆ ಕೂಡ ಮಾದಪ್ಪನವರಿಗೇ ಸಲ್ಲುತ್ತದೆ.

1992ರಲ್ಲಿ ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣ ಕಾರ್ಯಕ್ಕೆ ಕೊಡಗು ಜಿಲ್ಲೆಯಿಂದ ಸಾವಿರಾರು ಮಂದಿ ತರುಣರನ್ನು ಕೊಂಡೊಯ್ದು ಕೀರ್ತಿಗೆ ಭಾಜನರಾದವರಲ್ಲಿ ದಂಬೆಕೋಡಿ ಮಾದಪ್ಪ ಪ್ರಮುಖರು.

ಕೆಲವು ಸಮಯದ ನಂತರ ಹುಬ್ಬಳ್ಳಿಯ ಈದ್ಗ ಮೈದಾನಕ್ಕೆ ಸಾರ್ವಜನಿಕ ಪ್ರವೇಶ ನಿರಾಕರಿಸಿ, ಪೊಲೀಸ್ ಕಟ್ಟೆಚ್ಚರ ವಹಿಸಲಾಗಿತ್ತು. ಅಲ್ಲಿಗೆ ಕೂಡ ಮಾದಪ್ಪನವರು ಹಲವಾರು ಮಂದಿ ತರುಣರೊಂದಿಗೆ ತೆರಳಿದರು. ಪೊಲೀಸ್ ಕಣ್ತಪ್ಪಿಸಿ ರಾಷ್ಟ್ರ ಧ್ವಜ ಹಾರಿಸಿದ ಕೀರ್ತಿಗೆ ಕೂಡ ಶ್ರೀ ಮಾದಪ್ಪ ಭಾಜನರಾದರು.

ಜಿಲ್ಲೆಯಲ್ಲಿ ಭಾರತೀಯ ಜನತಾ ಪಾರ್ಟಿಯನ್ನು ಗಟ್ಟಿಯಾಗಿ ಬೇರೂರಿಸುವಲ್ಲಿ ಶ್ರಮಿಸಿ, ಸಫಲರಾದ ಮಾದಪ್ಪನವರು 1994ರಲ್ಲಿ ಮಡಿಕೇರಿ ಕ್ಷೇತ್ರದಿಂದ ಪ್ರಥಮ ಬಿ.ಜೆ.ಪಿ. ಶಾಸಕರಾಗಿ ಆಯ್ಕೆಯಾದರು. ಮಾತ್ರವಲ್ಲದೆ ವೀರಾಜಪೇಟೆ ಮತ್ತು ಸೋಮವಾರಪೇಟೆ ಕ್ಷೇತ್ರದಲ್ಲಿ ಕೂಡ ಬಿ.ಜೆ.ಪಿ ಜಯಭೇರಿ ಗಳಿಸಲು ಕಾರಣಕರ್ತರಾದರು.

ನಂತರದ ದಿನಗಳಲ್ಲಿ ಒಳ ರಾಜಕೀಯ ರಂಪಾಟಕ್ಕೆ ಬಲಿಯಾದ ಮಾದಪ್ಪನವರು ಪಕ್ಷೇತರ ಅಭ್ಯರ್ಥಿಯಾಗಿ ಎರಡು ಬಾರಿ ಸ್ಪರ್ಧಿಸಿದರು. ಪಕ್ಷದ ಕೃಪಾಕಟಾಕ್ಷ ಇಲ್ಲದೆ ತಮ್ಮ ವೈಯಕ್ತಿಕ ಪ್ರಭೆಯಿಂದ ಸ್ಪರ್ಧಿಸಿ ಕೇವಲ ಅಲ್ಪಮತಗಳ ಅಂತರದಿಂದ ದ್ವಿತೀಯ ಸ್ಥಾನಕ್ಕೆ ತಳ್ಳಲ್ಪಟ್ಟರು.

ಇಂದು ಹಿರಿಯ ವಯಸ್ಸಿನಲ್ಲಿ ಕೂಡ ಕಿರಿ ವಯಸ್ಸಿನ ತರುಣರಿಗೂ ಕಡಿಮೆಯಿಲ್ಲದಂತೆ ಚಟುವಟಿಕೆಯಿಂದ ಇರುವ ಮಾದಪ್ಪನವರಿಗೆ ಇರುವ ವೈಯಕ್ತಿಕ ಜನ ಬೆಂಬಲ, ಜಿಲ್ಲೆಯಲ್ಲಿ ಬೇರೆ ಯಾರಿಗೂ ದೊರೆಯಲು ಸಾಧ್ಯವಿಲ್ಲವೇನೋ?

ಇಂದು ಇಳಿ ವಯಸ್ಸಿನಲ್ಲಿದ್ದರೂ ಮಾದಪ್ಪನವರಿಗೆ ಜನ ಬೆಂಬಲ ಅಗಾಧವಾಗಿದೆ. ಇವರ ಪತ್ನಿ ಶ್ರೀಮತಿ ಮೀನಾ (ಈಗ ದಿವಂಗತರು) ಪುತ್ರ ಭೀಷ್ಮ ಹಾಗೂ ಪುತ್ರಿ ಶೃತಿ ದೊಡ್ಡ ಕುಟುಂಬದ ಮಾದಪ್ಪನವರ ಚಿಕ್ಕ ಹಾಗೂ ಚೊಕ್ಕ ಸಂಸಾರ.

ಮಾದಪ್ಪಣ್ಣನವರಿಗೆ ಭಗವಂತ ಆಯುರಾರೋಗ್ಯ, ಸುಖ, ಸೌಭಾಗ್ಯ ನೀಡಿ ಹರಸಲಿ ಎಂದು ಆಶಿಸೋಣ

ನಾವ್ಗೆ ಹಂಞ ಜಾಗ ಕೊಡು ನಿನ್ನ ಚರಣಲಿ

✍ ಅಮೆ ಕೃ. ಪಾಲಾಕ್ಷ
ಮಡಿಕೇರಿ, ಕೊಡಗು ಜಿಲ್ಲೆ

ಕಾವೇರಿ ನಾಡ್‌ಲಿ ಕಾಫಿ ಬೆಳೆವ ಮಣ್ಣ್‌ಲಿ
ಅರೆಬಾಸೆ ಕಂಪುಲಿ ಕೂಡಿ ಆಡ್ವ ನಮ್ಮನ
ಕಾಪಾಡ್ ಕುಲ ದೈವ ವೆಂಕಟರಮಣ ಶ್ರೀ ವೆಂಕಟರಮಣ ||೨||

ಬುದ್ಧಿ ನೀಡ್, ವೃದ್ಧಿ ಮಾಡ್ ವೆಂಕಟರಮಣ
ಆಸೆ-ಬಾಸೆ ಉಳ್ಸಿ-ಬೆಳ್ಸಿ
ಮಕ್ಕಳ್ನೆಲ್ಲ ಪೊರ್ದ್ ಹರ್ಸಿ
ಕಾಪಾಡ್ ನಮ್ಮನ ತಿರುಮಲ ನಾಥಾ ||೨||

ಅಳ್ಕೈಕೆ ಬುಡ್ದೆ ನಮ್ಮ ನಾಡ್, ನಮ್ಮ ಜನ, ಆಚಾರ, ಸಂಸ್ಕೃತಿನ
ವಿದ್ಯೆ ನೀಡಿ, ಬುದ್ಧಿ ನೀಡಿ
ಎತ್ತರಕೆ ಒಯ್ಯೋಕು ಅರೆಬಾಸೆ ಪೀಳಿಗೆನ ||೨||

ನಾವ್ಗೆಲ್ಲ ಕುಲ ದೈವ ನೀನ್
ಮುಡ್ಪು ಕಟ್ಟಿ ಬಂದವೆ ನಿನ್ನ ನೋಡಿಕೆ
ಹತ್ತಿ, ಇಳ್ದ್, ನಡ್ದ್ ಬಂದವೆ ನಿನ್ನ ಗುಡ್ಡಕೆ
ನಿನ್ನ ಪೊರ್ಲ್ ನೋಡಿಕೆ-ನಿನ್ನ ಪೊರ್ಲ್ ನೋಡಿಕೆ

ಕಷ್ಟ ಬರ್ಲಿ, ಸುಖ ಇರ್ಲಿ ನಾವ್ಗೆ ಗತಿ ನೀನೆ
ನಿನ್ನ ನಂಬಿಕಂಡ್ ಇರ್ವ ನಾವ್ಗೆ ಇಲ್ಲೆ ಬೇರೆ ಬೇನೆ
ಕಳ್ದವೆ ನಾವು ನಮ್ಮ ಬರ್ದ್ ಬದ್ಕ್‌ನ
ಗ್ಯಾನ ಮಾಡಿ ಹೇಳಿಕಂಡ್ ನಿನ್ನ ಹೆಸ್ರ್‌ನ ||೨||

ಪದ್ಮಾವತಿ ಶ್ರೀದೇವಿನ ಇಸಿಕಂಡ್ ವಕ್ಷಲಿ
ನಿತ್ತೊಳ ನೀನ್ ಅಷ್ಟ್ ದೊಡ್ಡ ಗುಡ್ಡಲಿ
ನಾವ್ಗೆ ಹಂಞ ಜಾಗ ಕೊಡು
ನಿನ್ನ ಚರಣಲಿ-ನಿನ್ನ ಚರಣಲಿ ||೨||

... ಪರಿವಿಡಿ ...

ಕನ್ನಡ ನಾಡಿನ ಜನರಲ್ಲಿ ಒಂದು ಹೊಸ ತೇಜಸ್ಸು, ಒಂದು ಹೊಸ ಶಕ್ತಿ ಹಾಗೂ ಒಂದು ಹೊಸ ಉಲ್ಲಾಸ ಆವಿರ್ಭವಿಸಬೇಕಾದರೆ ಕನ್ನಡ ಸಾಹಿತ್ಯ ಅದಕ್ಕೆ ಒಂದು ಉಪಕರಣವಾಗಬೇಕು.

- ಡಿ.ವಿ.ಜಿ.

*****

ಕಲೆಯು ಎಲ್ಲರನ್ನು ಕೈ ಬೀಸಿ ಕರೆಯುತ್ತದೆ. ಕೆಲವರನ್ನು ಮಾತ್ರ ಆರಿಸಿಕೊಳ್ಳುತ್ತದೆ.

- ಅ.ನ.ಕೃ.

*****

ಸಸಿ ನೆಟ್ಟವರೇ ಫಸಲು ಪಡೆಯುತ್ತಾರೆಂದು ಹೇಳಲಾಗುವುದಿಲ್ಲ.

- ಬಿ.ಆರ್.ಜೆ.

*****

ದೌರ್ಬಲ್ಯಕ್ಕೆ ಪರಿಹಾರ ದೌರ್ಬಲ್ಯವನ್ನು ಕುರಿತು ಚಿಂತಿಸುವುದಲ್ಲ. ನಿಮ್ಮೊಳಗೆ ಆಗಲೇ ಅಡಗಿರುವ ಚೇತನವನ್ನು ಬಳಸಿ ಕಾರ್ಯೋನ್ಮುಖರಾಗಿ.

- ಸ್ವಾಮಿ ವಿವೇಕಾನಂದ

ಸಂಪಾದಕೀಯ . . .



✍ ಬಾರಿಯಂಡ ಆರ್.ಜೋಯಪ್ಪ
ಪ್ರಧಾನ ಸಂಪಾದಕ

ಕೊಡಗಿನ ಅರಸ ಚಿಕವೀರರಾಜೇಂದ್ರನನ್ನು 1834ರಲ್ಲಿ ಆಂಗ್ಲರು ಕೊಡಗಿನಿಂದ ಗಡಿಪಾರು ಮಾಡಿದರು. ಹಾಗಾಗಿ ಆಂಗ್ಲರ ಮೇಲೆ ಕೊಡಗಿನವರಿಗೆ ರೋಷ ಉಕ್ಕುವುದು ಸಹಜವೇ ಆಗಿತ್ತು. ಗುಡ್ಡೆಮನೆ ಅಪ್ಪಯ್ಯ ಗೌಡರು ಕೊಡಗಿನ ಅರಸರ ಅಧೀನದಲ್ಲಿ ಸತ್ಯ ನಿಷ್ಠೆಯ ಜಮೇದಾರರಾಗಿದ್ದವರು. ಬಡ್ತಿ ಹೊಂದಿ ಸುಬೇದಾರಗಿರಿಯ ಗರಿ ತೊಟ್ಟವರು. ಸ್ವಾರ್ಥವನ್ನು ಬಿಟ್ಟವರು. ತನ್ನೊಡೆಯನನ್ನು ಗಡೀಪಾರು ಮಾಡಿದ ಆಂಗ್ಲರ ಎದೆ ಮೆಟ್ಟಿದವರು. ಸುಬೇದಾರ ಪದವಿಯನ್ನು ಬಿಟ್ಟವರು. ಆಂಗ್ಲರ ವಿರುದ್ಧ ಸೇನೆ ಕಟ್ಟಿದವರು. ಕೊಡಗಿನ ಸ್ವಾತಂತ್ರ್ಯವೇ ತನ್ನುಸಿರು ಎಂದವರು. ಒಳ ಸಂಚಿಗೆ ಕೊಂಚವೂ ಜಗ್ಗದ ಪುರುಷ ಸಿಂಹರಿವರು.

ಅಪ್ಪಯ್ಯನವರು ದಿಟ್ಟ ಹೋರಾಟಗಾರರು, ಚತುರ ಮಾತುಗಾರರು, ಸಂಘಟನೆಗಾರರು. ಅವರು ಆಂಗ್ಲರ ನಿದ್ದೆ ಕೆಡಿಸಿದವರು. ಪಿತೂರಿಗಾರರ ಮೈ ನಡುಗಿಸಿದವರು. ಹೇಡಿಯಂತೆ ಓಡಿಹೋಗದೆ ಸೆಟೆದು ನಿಂತು ಮೀಸೆ ತಿರುವಿದವರು. ಕುದುರೆಯೇರಿ ಶತ್ರುಗಳ ಬೆನ್ನಟ್ಟಿದವರು. ಖಡ್ಗ ಮತ್ತು ಬಂದೂಕಿನಿಂದ ಉತ್ತರ ಕೊಡುತ್ತಿದ್ದವರು. ಸುಳ್ಯ, ಪುತ್ತೂರು, ಬೆಳ್ಳಾರೆ ಸೀಮೆಗಳನ್ನು ಕೊಡಗಿನಿಂದ ವಿಂಗಡಿಸಿ ಒಡೆದು ಆಳುವ ಆಂಗ್ಲರ ನೀತಿಯನ್ನು ಸಹಿಸದವರು. ಕೆದಂಬಾಡಿ ರಾಮಗೌಡ, ಹುಲಿಕೊಂದ ನಂಜಯ್ಯ, ಪುಟ್ಟಬಸವ, ಅಪರಂಪಾರ, ಸೋಮಯ್ಯ, ನಂಜಯ್ಯ, ಚೆಟ್ಟಿ ಮತ್ತು ಕರ್ತು ಕುಡಿಯ ಮುಂತಾದ ಸಮಾನ ಮನಸ್ಕರನ್ನು ಸಂಘಟನೆ ಮಾಡಿದವರು.

"ಮಂಗಳೂರಿನ ಬಾವುಟ ಗುಡ್ಡದಲ್ಲಿ ಸ್ವಾತಂತ್ರ್ಯದ ಬಾವುಟ ಹಾರಿದೆ, ಕೊಡಗಿನಲ್ಲಿಯೂ ಸ್ವಾತಂತ್ರ್ಯದ ಬಾವುಟ ಹಾರಬೇಕು. ಬಿಸ್ಲೆ ಘಟ್ಟದ ಕಾಡುದಾರಿಗಾಗಿ ಹೋಗೋಣ. ಆಂಗ್ಲರಿಗೆ ಸುದ್ದಿ ಒಯ್ಯುವವನನ್ನು ಹಿಡಿಯೋಣ. ಸರಕಾರಿ ಕಟ್ಟಡ, ಉಗ್ರಾಣಗಳನ್ನು ವಶಪಡಿಸಿಕೊಳ್ಳೋಣ. ಕ್ಯಾಪ್ಟನ್ ಲೀಹಾರ್ಡಿಯ ಎಂಜಲಿಗೆ ಬೊಗಸೆಯೊಡ್ಡುತ್ತಿರುವ ನಮ್ಮ ನಾಡಿನವರನ್ನು ಇತ್ತ ಸೆಳೆದುಕೊಳ್ಳೋಣ" ಇದು ಅಪ್ಪಯ್ಯನವರ ತಂತ್ರ. ಹೀಗೆ ಮುನ್ನುಗ್ಗಿದ ಸೇನೆ ಮಡಿಕೇರಿ ಕೋಟೆಯ ಬಳಿ ಸಾಗಿತು. ಕೋಟೆಯ ಸುತ್ತ ದಟ್ಟ ಕಾಡಿತ್ತು. ಆ ಕಾಡಿಗೆ ಬೆಂಕಿ ಹಚ್ಚಿದರು. ಗಾಬರಿಯಿಂದ ಕ್ಯಾಪ್ಟನ್ ಲೀಹಾರ್ಡಿ ಕೋಟೆ ಬಿಟ್ಟು ಓಡಬೇಕು... ಸ್ವಾತಂತ್ರ್ಯದ ಬಾವುಟ ಕೋಟೆಯಲ್ಲಿ ಏರಬೇಕು... ಹಾರಬೇಕು... ಆದರೇನು? ಆಯಿತಾಯಿತು, ಆಗೇ ಹೋಯಿತೆಂದು ತುತ್ತು ಬಾಯಿಗೆತ್ತುವಾಗ ಧಕ್ಕದೇ ಹೋಯಿತು ಎನ್ನುವಂತೆ ಆಂಗ್ಲರ ಮೋಸದ ಬಲೆಗೆ ಸಿಕ್ಕಿ ಹೋಯಿತು 'ಪುರುಷ ಸಿಂಹ' ಅಪ್ಪಯ್ಯ ಗೌಡ.

ನಮ್ಮದು ನಮಗೆ ಬೇಕು ಎಂದುದು ಅಪರಾಧವಾಯಿತೆ? ನಮ್ಮ ಅನ್ನವನ್ನು ನಾವು ಉಣ್ಣಲು ಪರಕೀಯನ ಆದೇಶ ಬೇಕಾಯಿತೆ? ನಮ್ಮ ನಾಡಿನಲ್ಲಿ ನಾವು ಓಡಾಡಲು ಪರದೇಶಿಯನ ಅನುಮತಿ ಬೇಕಾಯಿತೆ? ನಮ್ಮ ಉತ್ಪನ್ನಕ್ಕೆ ಆಂಗ್ಲರಿಗೆ ತೆರಿಗೆ ಕಟ್ಟಬೇಕಾಯಿತೆ? ನಮ್ಮ ಹೊಲ ಗದ್ದೆಗಳಲ್ಲಿ ಬೆಳೆ ಬೆಳೆಯಲು ಅನ್ಯನೊಬ್ಬನ ಅಪ್ಪಣೆ ಬೇಕಾಯಿತೆ? ನಮ್ಮ ಫಸಲಿಗೆ ಅನ್ಯನು ಪಾಲುದಾರನಾಗಬೇಕಾಯಿತೆ? ನಮ್ಮ ನಾಡಿಗೆ ಪರಕೀಯನೇಕೆ ಯಜಮಾನನಾಗಬೇಕು? ನಾವೇನಾದರೂ

ಪರನಾಡನ್ನು ಕಬಳಿಸಲು ಯತ್ನಿಸಿದ್ದೇವೆಯೇ? ಪರಕೀಯರು ಒಳ ನುಗ್ಗಿ ಬಂದುದು ಹೇಗೆ? ಒಳ ಕರೆದವರು ಯಾರು? ದೊಣ್ಣೆ ಕೊಟ್ಟು ಹೊಡೆಯಿಸಿಕೊಳ್ಳುವಂತೆ ಮಾಡಿಕೊಂಡದ್ದಾದರೂ ಏಕೆ?

ಆಂಗ್ಲ ಅಧಿಕಾರಿ ಲೀಹಾರ್ಡಿ ನಮ್ಮ ನಾಡಿನ 'ವೀರ ಕೇಸರಿ' ಅಪ್ಪಯ್ಯ ಗೌಡರನ್ನು ಸೆರೆ ಹಿಡಿದು ಗಲ್ಲುಗಂಬದ ಶಿಕ್ಷೆ ವಿಧಿಸಿದನಲ್ಲ?! ಹೌದು, 1837, ಅಕ್ಟೋಬರ್ ತಿಂಗಳ 31ನೇ ದಿನ... ಭಾರತಾಂಬೆಯ ಸುಪುತ್ರ, ಕೊಡಗಿನ ವೀರ, ಸ್ವಾತಂತ್ರ್ಯ ಯೋಧ ಅಪ್ಪಯ್ಯನವರು ಅಂತ್ಯ ಕಂಡ ದಿನ. ಕೊಡಗು ಶೋಕ ಸಾಗರದಲ್ಲಿ ಮುಳುಗಿದ ದಿನ. ಕೆಚ್ಚೆದೆಯ ಶೂರನನ್ನು ಕಳೆದುಕೊಂಡು ಕೊಡಗು ಮಮ್ಮಲ ಮರುಗಿದ ದಿನ...

ಸ್ವಾತಂತ್ರ್ಯದ ಕಿಚ್ಚು ಹಚ್ಚಿದ ನೂರಾ ಹತ್ತು ವರ್ಷದ ಬಳಿಕ ಭಾರತ ಸ್ವಾತಂತ್ರ್ಯವನ್ನು ಪಡೆಯಿತು. (1837–1947) ಅಬ್ಬಾ! ಆ ನೂರಾ ಹತ್ತು ವರ್ಷದ ಅವಧಿಯಲ್ಲಿ ಸ್ವತಂತ್ರ ಭಾರತದ ತ್ರಿವರ್ಣ ಧ್ವಜವನ್ನು ನೋಡಲು ಅಪ್ಪಯ್ಯ ಗೌಡರಂತಹ ಸಾವಿರಾರು ಮಂದಿ ಸ್ವಾತಂತ್ರ್ಯ ಹೋರಾಟಗಾರರು ಇರಲಿಲ್ಲ. ಅಂತಹ ಧೀಮಂತ ಹೋರಾಟಗಾರರ ಫಲವಾಗಿ ತ್ರಿವರ್ಣ ಧ್ವಜ ಇಂದು ಹಾರಾಡುತ್ತಿದೆ.

ಭಾರತಾಂಬೆ ತೊಟ್ಟಿರುವ ತ್ರಿವರ್ಣ ಧ್ವಜವೆಂಬ ಹೆಮ್ಮೆಯ ಕಿರೀಟ ಎಂದೆಂದೂ ಮಸುಕಾಗದಿರಲಿ. ಸ್ವಚ್ಛ ಮನಸ್ಸಿನಿಂದ ಸ್ವಚ್ಛ ಕೈಗಳಿಂದ ತ್ರಿವರ್ಣ ಧ್ವಜಕ್ಕೆ ನಮಿಸೋಣ.

ಮಹಾ ಬಲಿದಾನಕ್ಕೆ ಪ್ರತಿಯಾಗಿ ನಮ್ಮ ನಾಡಿನಲ್ಲಿ ಗುಡ್ಡೆಮನೆ ಎಂಬ ಹೆಸರಿನ ಮನೆತನದ ಕೀರ್ತಿ ಅಜರಾಮರವಾಗಬೇಕು. ಅಂದು ಅವರು ನೆಟ್ಟ "ಸ್ವಾತಂತ್ರ್ಯ" ಎಂಬ ಮಹಾ ಮರದ ನೆರಳಲ್ಲಿ ನಾವಿಂದು ಐಕ್ಯತೆಯಿಂದ ಬಾಳುತ್ತಿದ್ದೇವೆ. ಅವರ ಸವಿ ನೆನಪಿಗಾಗಿ ನಾವೇನು ಮಾಡಿದ್ದೇವೆಂದು ನಮ್ಮ ನಂತರದ ಪೀಳಿಗೆ ಕೇಳುವುದಿಲ್ಲವೆ? ಸ್ವಾತಂತ್ರ್ಯ ಪ್ರೇಮಿ, ಸುಬೇದಾರ ಅಪ್ಪಯ್ಯ ಗೌಡರನ್ನು ನೆನೆಯುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಮಡಿಕೇರಿ ಸುದರ್ಶನ ವೃತ್ತದ ಬಳಿ ಅಪ್ಪಯ್ಯನವರ ಕಂಚಿನ ಪ್ರತಿಮೆಯನ್ನು ಪ್ರತಿಷ್ಠಾಪನೆ ಮಾಡುವುದರ ಮೂಲಕ ಅವರನ್ನು ನೆನೆಯುವ ನಿಟ್ಟಿನಲ್ಲಿ ನಮ್ಮ ಸಮಾಜ ಹಾಗೂ ಘನ ರಾಜ್ಯ ಸರಕಾರ ಕೈಗೊಂಡ ದಾಖಲಾರ್ಹ ದಿಟ್ಟ ಕ್ರಮ ಸ್ತುತ್ಯಾರ್ಹ.

⌘⌘⌘⌘⌘⌘⌘⌘⌘⌘⌘⌘⌘

ಆತ್ಮ ವಿಶ್ವಾಸವೇ ಯಶಸ್ಸಿನ ಗುಟ್ಟು

– ಎಮರ್ಸನ್

ಕೃತಜ್ಞತೆಗಳು

ಗುಡ್ಡೆಮನೆ ಅಪ್ಪಯ್ಯಗೌಡರ ಕಂಚಿನ ಪ್ರತಿಮೆ ಪ್ರತಿಷ್ಠಾಪನೆಯಾದ ಈ ಸಂದರ್ಭದಲ್ಲಿ ಹೊರ ತರುತ್ತಿರುವ "**ನಮನ**" ಎಂಬ ಹೆಸರಿನ ಸ್ಮರಣ ಸಂಚಿಕೆ ಸಂಗ್ರಹಯೋಗ್ಯ ಕೃತಿಯೆಂದು ನಾವು ಭಾವಿಸುತ್ತೇವೆ.

ಈ ಸಂಚಿಕೆಗೆ ಸಮಯಕ್ಕೆ ಸರಿಯಾಗಿ ಸಂದೇಶ, ಲೇಖನ, ಕವನ, ಜಾಹೀರಾತು ನೀಡಿ ಸಹಕರಿಸಿದ ಅಭಿಮಾನಿಗಳಿಗೆ ಸಂಚಿಕೆ ಬಳಗದ ಧನ್ಯವಾದಗಳು.

1979ರ ಅಕ್ಟೋಬರ್ 31ರಂದು ಮಡಿಕೇರಿ ಪುರಸಭಾ ಭವನದಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಹುತಾತ್ಮ ಅಪ್ಪಯ್ಯ ಗೌಡರ ಸ್ಮಾರಕ ನಿರ್ಮಿಸುವ ಬಗ್ಗೆ ನಿರ್ಧಾರವಾಗಿತ್ತು. ಅಂದಿನ ಕನಸು ಇಂದು ನನಸಾಗಿದೆ.

ಸ್ಮಾರಕ ನಿರ್ಮಿಸುವ ನಿಟ್ಟಿನಲ್ಲಿ ಅತ್ಯಂತ ಹೆಚ್ಚು ಕಾಳಜಿ ವಹಿಸಿದ ಕರ್ನಾಟಕ ರಾಜ್ಯ ವಿಧಾನ ಸಭಾಧ್ಯಕ್ಷರಾದ ಶ್ರೀ ಕೊಂಬಾರನ ಜಿ. ಬೋಪಯ್ಯನವರಿಗೆ ಅನಂತಾನಂತ ಧನ್ಯವಾದಗಳು.

ಕರ್ನಾಟಕದ ಹಿಂದಿನ ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪನವರು ಹಾಗೂ ನಂತರದ ಮುಖ್ಯಮಂತ್ರಿ ಶ್ರೀ ಡಿ.ವಿ. ಸದಾನಂದ ಗೌಡರ ಸ್ಪಂದನೆ ಸ್ಮಾರಕ ನಿರ್ಮಾಣಕ್ಕೆ ಶಕ್ತಿ ತುಂಬಿದೆ ಎಂದು ಹೇಳಲು ಹರ್ಷಿಸುತ್ತೇವೆ. ಅವರ ಸ್ಪಂದನೆಗೆ ನಮ್ಮ ಕೃತಜ್ಞತೆಗಳು. ಕೊಡಗು ಜಿಲ್ಲಾಧಿಕಾರಿಗಳಾಗಿದ್ದ ಶ್ರೀ ಅಶ್ವತ್ಥನಾರಾಯಣ ಗೌಡರಿಗೆ ಹಾಗೂ ಜಿಲ್ಲಾಡಳಿತಕ್ಕೆ ಅಲ್ಲದೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಿಲ್ಲಾ ಮತ್ತು ರಾಜ್ಯ ಮಟ್ಟದ ಅಧಿಕಾರಿಗಳಿಗೆ ನಾವು ಆಭಾರಿಗಳಾಗಿದ್ದೇವೆ.


ಸ್ಮಾರಕ ಸಮಿತಿಯ ಅಧ್ಯಕ್ಷರಾದ ಶ್ರೀ ತುಂತಜೆ ಗಣೇಶರವರಿಗೆ, ಕಾರ್ಯದರ್ಶಿಯಾದ ಶ್ರೀ ಅಮೆ ಕೃ. ಪಾಲಾಕ್ಷರವರಿಗೆ ಅಲ್ಲದೆ, ಸಮಿತಿಯ ಎಲ್ಲಾ ಸದಸ್ಯರುಗಳಿಗೆ ಮತ್ತು ಉಸ್ತುವಾರಿ ಸಮಿತಿ ಸದಸ್ಯರುಗಳಿಗೆ ನಾವು ಋಣಿಗಳಾಗಿದ್ದೇವೆ. ಆಕರ್ಷಕ ರೀತಿಯಲ್ಲಿ ಪ್ರತಿಮೆಯನ್ನು ರಚಿಸಿದ ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಶಿಲ್ಪಿ ಶ್ರೀ ಅಶೋಕ ಗುಡಿಕಾರ್‌ರವರಿಗೆ ನಮ್ಮ ನಮನಗಳು.

ಈ ಸಂಚಿಕೆಗೆ ಸಂದರ್ಭೋಚಿತವಾಗಿ 'ನಮನ' ಎಂಬ ಹೆಸರನ್ನು ಸೂಚಿಸಿದ ಶ್ರೀ ಕೋರನ ಸುನೀಲ್‌ರವರಿಗೆ ನಮ್ಮ ಧನ್ಯವಾದಗಳು. ಸಂಚಿಕೆಯ ಮುಖಪುಟ ವಿನ್ಯಾಸ ಮಾಡಿದ ಕಲಾವಿದ ಶ್ರೀ ಬಿ.ಆರ್. ಸತೀಶ್‌ರವರಿಗೆ ನಮ್ಮ ಕೃತಜ್ಞತೆಗಳು. ಅರ್ಚನಾ ಎಂಟರ್‌ಪ್ರೈಸಸ್‌ನ ಶ್ರೀ ಅಮೆ ಕೃ. ಪಾಲಾಕ್ಷರವರಿಗೆ ಹಾಗೂ ಡಿ.ಟಿ.ಪಿ. ಮಾಡಿದ ಕುಮಾರಿ ದಿವ್ಯಾರವರಿಗೆ ವಂದನೆಗಳು. ಸಕಲ ರೀತಿಯಲ್ಲಿ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಾಯ ಮಾಡಿದ ನಿಮ್ಮಂತಹ ಅಭಿಮಾನಿಗಳಿಗೆ ನಾವು ಋಣಿಗಳಾಗಿದ್ದೇವೆ.

- ಸಂಚಿಕೆ ಬಳಗ

"ಸ್ವಾತಂತ್ರ್ಯ ಕೇಸರಿ" ಗುಡ್ಡೆಮನೆ ಅಪ್ಪಯ್ಯಗೌಡ





✍ ಅಮೆ ಕೆ. ಪಾಲಾಕ್ಷ
ಮಡಿಕೇರಿ

''ನಮ್ಮ ಶಿರಗಳು ಬಾಗಿದರೆ ಅದು ಭಾರತಾಂಬೆಗೆ ಮಾತ್ರ. ಶತ್ರುಗಳಾದ ಅಲೆಮಾರಿ ಆಂಗ್ಲರಿಗೆ ತಲೆ ಬಾಗುವ ಪ್ರಶ್ನೆಯೇ ಇಲ್ಲ. ತಲೆ ಎತ್ತಿ, ಎದೆಯುಬ್ಬಿಸಿ ಆತ್ಮ ವಿಶ್ವಾಸದಿಂದ ಹೋರಾಡುತ್ತೇವೆ. ಆಂಗ್ಲರ ಕತ್ತು ಕತ್ತರಿಸಿ ಬಿಸಿ ರಕ್ತ ನೋಡಲು ಹರಿತವಾದ ನಮ್ಮ ಖಡ್ಗಗಳು ಕಾತರಿಸುತ್ತಿವೆ. ಭರತಖಂಡವನ್ನು ಆಕ್ರಮಿಸಿರುವ ಪರಕೀಯರ ನಿರ್ನಾಮವೇ ನಮ್ಮ ಪರಮ ಗುರಿ. ಭಾರತ ಮಾತೆಯ ಕೈ-ಕಾಲುಗಳಿಗೆ ತೊಡಿಸಿರುವ ಸಂಕೋಲೆಗಳನ್ನು ಕಿತ್ತೊಗೆಯುವ ಈ ಘೋರ ಸಂಗ್ರಾಮದಲ್ಲಿ ನಮ್ಮ ಪ್ರಾಣ ಹರಣವಾದರೂ ಚಿಂತೆಯಿಲ್ಲ. ಭಾರತಾಂಬೆ ಬಂಜೆಯಲ್ಲ, ಅಸಂಖ್ಯಾ ದೇಶ ಪ್ರೇಮಿ ಕಲಿಗಳಿಗೆ ಜನ್ಮ ನೀಡುವ ದಿವ್ಯ ಶಕ್ತಿ-ಚೈತನ್ಯ ಆಕೆಗಿದೆ. ಮಹಾತಾಯಿ ಬಂಧಮುಕ್ತಗಳಾಗಲೇಬೇಕು.

ಕೊಡಗಿನ ವೀರ ಪುತ್ರರೇ, ಏಳಿ-ಎದ್ದೇಳಿ ಯುದ್ಧ ಸನ್ನದ್ಧರಾಗಿ, ಭಾರತ ಮಾತೆಯ ಕೈ ಕಾಲುಗಳಿಗೆ ತೊಡಿಸಿರುವ ಸಂಕೋಲೆಗಳನ್ನು ಕಿತ್ತೊಗೆಯುವ ಈ ಘೋರ ಸಂಗ್ರಾಮದಲ್ಲಿ ನಮ್ಮ ಪ್ರಾಣ ಹರಣವಾದರೂ ಚಿಂತೆಯಿಲ್ಲ, ದಾಸ್ಯದ ಬದುಕಿಗಿಂತ ವೀರ ಮರಣವೇ ಶೋಭಾಯಮಾನ. ಭಾರತಾಂಬೆ ಬಂಜೆಯಲ್ಲ ಅಸಂಖ್ಯಾ ದೇಶಪ್ರೇಮಿ ಕಲಿಗಳಿಗೆ ಜನ್ಮ ನೀಡುವ ದಿವ್ಯ ಶಕ್ತಿ-ಚೈತನ್ಯ ಆಕೆಗಿದೆ. ಮಹಾತಾಯಿ ಭಾರತಾಂಬೆ ಬಂಧಮುಕ್ತಳಾಗಲೇಬೇಕು. ವೀರಾಗ್ರಣಿಗಳೇ, ವೀರ ಮರಣವನ್ನು ಅಪ್ಪುತ್ತೇವೆಯೇ ಹೊರತು, ಆಂಗ್ಲರ ಆಡಳಿತವನ್ನು ಒಪ್ಪುವುದಿಲ್ಲ.

ಇದು ನಮ್ಮ ದೃಢ ಸಂಕಲ್ಪ. "ಕೊಡಗಿನ ವೀರ ಪುತ್ರರೇ, ಏಳಿ-ಎದ್ದೇಳಿ ಯುದ್ಧ ಸನ್ನದ್ಧರಾಗಿ, ದಾಸ್ಯದ ಬದುಕಿಗಿಂತ ವೀರ ಮರಣವೇ ಶೋಭಾಯಮಾನ" ಎನ್ನುತ್ತಾ ಕಾವೇರಿ ನಾಡಿನ ವೀರಪುತ್ರ ಗುಡ್ಡೆಮನೆ ಅಪ್ಪಯ್ಯಗೌಡರು ಅಳಿದುಳಿದ ಕ್ರಾಂತಿ ವೀರರನ್ನುದ್ದೇಶಿಸಿ ಆವೇಶಭರಿತರಾಗಿ ಘರ್ಜಿಸುತ್ತಿದ್ದರು.

ದುರಾಚಾರಿ ಆಂಗ್ಲರ ಮೇಲೆ ಆಕ್ರಮಣ ಮಾಡಿದರು. ಇವರೊಡನಿದ್ದ ನಾಲ್ಕುನಾಡಿನ ಉತ್ತು ಮತ್ತು ಶಾಂತಳ್ಳಿಯ ಮಲ್ಲಯ್ಯನವರು ಕೂಡ ವೀರಾವೇಶದಿಂದ ಹೋರಾಡಿದರು. ನವೀನ ಮಾದರಿಯ ಶಸ್ತ್ರಾಸ್ತ್ರಗಳು, ಫಿರಂಗಿಗಳನ್ನು ಹೊಂದಿದ್ದ ಅಪಾರ ಸಂಖ್ಯೆಯ ಪರಂಗಿ ಸೈನಿಕರನ್ನು ಸಮರ್ಥವಾಗಿ ಎದುರಿಸುವುದು ಕೊಡಗಿನ ಕ್ರಾಂತಿಕಾರಿ ಧುರೀಣರಿಗೆ ಕಷ್ಟಸಾಧ್ಯವಾಗುತ್ತಿತ್ತು. ನಮ್ಮ ಕ್ರಾಂತಿಕಾರಿಗಳು ಜೀವದ ಹಂಗು ತೊರೆದು ಹೋರಾಡಿದರು. ಮಾತೆ ಕಾವೇರಿಯ ನೆಲದಲ್ಲಿ ಸ್ವಾತಂತ್ರ್ಯದಾಹಿಗಳ ರಕ್ತದ ಕೋಡಿ ಹರಿಯಿತು. "ಭಾರತ್ ಮಾತಾಕಿ ಜೈ" ಎನ್ನುತ್ತಲೇ ಅಮೂಲ್ಯ ಜೀವಗಳು ಬಲಿಯಾಗುತ್ತಿದ್ದವು. ಬಹಳಷ್ಟು ಮಂದಿ ಪರಂಗಿ ಸೈನಿಕರನ್ನು ಬಲಿ ತೆಗೆದುಕೊಂಡರೂ ಕೂಡ, ಗುಡ್ಡೆಮನೆ ಅಪ್ಪಯ್ಯ ಗೌಡ, ನಾಲ್ಕು ನಾಡಿನ ಉತ್ತು ಮತ್ತು ಶಾಂತಳ್ಳಿಯ ಮಲ್ಲಯ್ಯನವರು ಸೇರಿದಂತೆ ಹಲವಾರು ಮಂದಿ ಕಾವೇರಿ ನಾಡಿನ ವೀರಾಗ್ರಣಿಗಳನ್ನು ಆಂಗ್ಲರು ಸೆರೆ ಹಿಡಿದರು.

ಸ್ವಾಭಿಮಾನದ ಗಂಧ-ಗಾಳಿಯೇ ಇಲ್ಲದ, ಅಧಿಕಾರ ಲೋಲುಪರಾದ ಸ್ವಾಮಿ ದ್ರೋಹಿಗಳು ಹಾಗೂ ದೇಶ ದ್ರೋಹಿಗಳಾದ ಕೆಲವೇ ಮಂದಿ ಸ್ಥಳೀಯರ ಕುಟಿಲತೆಗಳ ಪರಿಣಾಮ ಭಾರತೀಯರು ಸುಮಾರು ಒಂದೂವರೆ ಶತಮಾನದಷ್ಟು ದೀರ್ಘ ಕಾಲ ದಾಸ್ಯತೆಯನ್ನು ಅನುಭವಿಸುವಂತಾಯಿತು.

* * * *

ಬ್ರಿಟೀಷ್ ದಾಖಲೆಗಳ ಪ್ರಕಾರ 1857ರಲ್ಲಿ ನಡೆದ ಸಿಪಾಯಿ ದಂಗೆ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ. ಆದರೆ ಅದಕ್ಕಿಂತಲೂ ಸುಮಾರು 25 ವರ್ಷಗಳ ಹಿಂದೆಯೇ ಅವಿಭಾಜಿತ ಕೊಡಗಿನಲ್ಲಿ ಆಂಗ್ಲರ ವಿರುದ್ಧ ಸ್ವಾತಂತ್ರ್ಯದ ಕಿಡಿ ಕಿಚ್ಚಾಗಿ, ಜ್ವಾಲೆಯಾಗಿ ಹರಡಿತ್ತು ಎಂಬುದು ಇಲ್ಲಿ ಉಲ್ಲೇಖಾರ್ಹ (ಕೊಡಗು "ಸಿ" ದರ್ಜೆಯ ಸ್ವತಂತ್ರ ರಾಜ್ಯವಾಗಿದ್ದು, ಇದರ ವ್ಯಾಪ್ತಿ ಈಗ ಮೈಸೂರು ಜಿಲ್ಲೆಗೆ ಸೇರಿರುವ ಪಿರಿಯಾಪಟ್ಟಣ, ಹಾಸನ ಜಿಲ್ಲೆಗೆ ಸೇರಿರುವ ಸಕಲೇಶಪುರ, ದ.ಕ. ಜಿಲ್ಲೆಗೆ ಸೇರಿರುವ ಸುಳ್ಯದ ಪಾಣೆ ಮಂಗಳೂರು, ಬೆಳ್ಳಾರೆ, ಸುಬ್ರಹ್ಮಣ್ಯ, ಪುತ್ತೂರು ಇನ್ನೂ ಕೆಲವು ಪ್ರದೇಶಗಳನ್ನು ಒಳಗೊಂಡಿತ್ತು ಎನ್ನುವುದು ದಾಖಲೆಗಳಿಂದ ತಿಳಿದುಬರುತ್ತದೆ).



1831ರಲ್ಲಿ ಅಂದಿನ ಮೈಸೂರು ಮಹಾರಾಜರಾಗಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರನ್ನು ಪದಚ್ಯುತಗೊಳಿಸಿ ಆಡಳಿತ ಚುಕ್ಕಾಣಿಯನ್ನು ಕೈಗೆತ್ತಿಕೊಳ್ಳುತ್ತಾರೆ ದುರಾತ್ಮರಾದ ಆಂಗ್ಲರು. ನಂತರ ಅವರ ವಕ್ರ ದೃಷ್ಟಿ ಹರಿದದ್ದು ವನರಾಶಿಗಳಿಂದ ಸಂಪದ್ಭರಿತವಾಗಿ ಕಂಗೊಳಿಸುತ್ತಿದ್ದ, ಹಚ್ಚ ಹಸಿರಾಗಿ ಮೋಹಕವಾಗಿದ್ದ ಕಾವೇರಿ ನಾಡು ಕೊಡಗು ರಾಜ್ಯದ ಮೇಲೆ.

ಕೊಡಗು ರಾಜ್ಯದ ಕೊನೆಯ ಅರಸರಾದ ಚಿಕ್ಕ ವೀರ ರಾಜೇಂದ್ರ ಒಡೆಯರು ಪ್ರಜೆಗಳ ಬಗ್ಗೆ ಅಪಾರ ಕಾಳಜಿಯಿಂದಿದ್ದರು. ಪರಿಣಾಮವಾಗಿ ಪ್ರಜೆಗಳಲ್ಲಿ ರಾಜಭಕ್ತಿ ಸಹಜವಾಗಿಯೇ ಇತ್ತು. ಚಿಕ್ಕ ವೀರ ರಾಜೇಂದ್ರರ ಹಿರಿಯರಲ್ಲಿ, ಕೊಡಗಿನ ಹಾಲೇರಿ ವಂಶದ ರಾಜರುಗಳ ಪೈಕಿ ದೊಡ್ಡ ವೀರರಾಜೇಂದ್ರ ಮತ್ತು ಲಿಂಗರಾಜೇಂದ್ರ ಒಡೆಯರು ಆಂಗ್ಲರೊಂದಿಗೆ ಸ್ನೇಹದಿಂದ ವರ್ತಿಸುತ್ತಿದ್ದರು ಎನ್ನುವುದಕ್ಕಿಂತಲೂ ಹೆಚ್ಚಾಗಿ, ಬ್ರಿಟೀಷ್ ಆಡಳಿತಕ್ಕೆ

ವಿಧೇಯರಾಗಿದ್ದರು ಎಂದು ಹೇಳುವುದೇ ಹೆಚ್ಚು ಸೂಕ್ತ ಎನಿಸುತ್ತದೆ. ಈ ರೀತಿ ನಡೆದುಕೊಳ್ಳುವುದು ಅಪಾಯಕ್ಕೆ ಆಹ್ವಾನ ನೀಡಿದಂತೆ ಎನ್ನುವ ಪ್ರಜ್ಞೆ ಅವರುಗಳಿಗೆ ಇದ್ದಂತಿರಲಿಲ್ಲ. ಆದರೆ ಚಿಕ್ಕ ವೀರರಾಜೇಂದ್ರ ಒಡೆಯರು ಬ್ರಿಟೀಷರೊಂದಿಗೆ ಸ್ನೇಹದಿಂದಲೇ ಇದ್ದರೂ ಕೂಡ, ತನ್ನ ಆಡಳಿತದಲ್ಲಿ ಅವರು ಹಸ್ತಕ್ಷೇಪ ಮಾಡುವುದನ್ನು ಸಹಿಸುತ್ತಿರಲಿಲ್ಲ. ಆದರೆ ಒಡೆಯರ ಈ ಸ್ವಾಭಿಮಾನಿ ಪ್ರವೃತ್ತಿ ದಿವಾನರ ಪೈಕಿ ಒಬ್ಬನಾಗಿದ್ದ ಬೋಪು ದಿವಾನನಿಗೆ ಸಹನೆಯಾಗುತ್ತಿರಲಿಲ್ಲ. ಈತನು ಒಡೆಯರನ್ನುದ್ದೇಶಿಸಿ "ಪ್ರಭು, ಆಂಗ್ಲರು ಬಲಿಷ್ಠರಿದ್ದಾರೆ, ಪ್ರಬುದ್ಧರಿದ್ದಾರೆ. ಅವರೊಂದಿಗೆ ದ್ವೇಷ ಸಲ್ಲದು, ಅವರಿಗೆ ವಿಧೇಯರಾಗಿರುವುದು ಕ್ಷೇಮ" ಎಂದು ಸಲಹೆ ನೀಡಿದನು. ಈ ಮಾತುಗಳಿಂದ ಕ್ರುದ್ಧರಾದ ಚಿಕ್ಕವೀರರಾಜ ಒಡೆಯರು **"ಈ ಕಾವೇರಿ ನಾಡು-ಕೊಡಗು ರಾಜ್ಯ ಅವರಪ್ಪನ ಸೊತ್ತೇನು? ಈ ಕೊಡಗು ರಾಜ್ಯ, ಇಲ್ಲಿನ ನೆಲ, ಜಲ ಎಲ್ಲವೂ ನಮ್ಮ ಜನ್ಮ ಸಿದ್ಧ ಹಕ್ಕು. ಇದನ್ನು ಕಸಿಯುವ ದುಸ್ಸಾಹಸಕ್ಕೆ ಫಿರಂಗಿಗಳು ಮುಂದಾದರೆ ಅವರ ದೇಹದ ನೆತ್ತರು ಹರಿಸಬೇಕಾಗುತ್ತದೆ. ಅವರು ಶಾಂತರಾಗಿ ನಮಗೆ ವಿಧೇಯರಾಗಿದ್ದರೆ ಅವರಿಗೇ ಕ್ಷೇಮ"** ಎಂದು ಅಬ್ಬರಿಸಿದರು. ಮೊದಲೇ ರಾಜರ ವಿರುದ್ಧ ಅಪಪ್ರಚಾರ ಮಾಡುತ್ತಿದ್ದ ಬೋಪು ದಿವಾನನಿಗೆ ಮುಖಭಂಗವಾದಂತೆ ಆಗುತ್ತದೆ. ಒಡೆಯರ ವಿರುದ್ಧದ ಪಿತೂರಿಗೆ ಹೆಚ್ಚು ಹೆಚ್ಚು ಜೀವ ತುಂಬುವ ಪ್ರಯತ್ನಕ್ಕೆ ಮುಂದಾಗುತ್ತಾನೆ.

ತಲಚೇರಿ ಕಡೆಯಿಂದ ಬೇಟೆಗಾಗಿ ಕೊಡಗಿನ ಕಡೆಗೆ ಬರುತ್ತಿದ್ದ ಬ್ರಿಟೀಷರನ್ನು ಸಹಜತೆಯಿಂದ ಆತ್ಮೀಯವಾಗಿ ಸ್ವಾಗತಿಸುತ್ತಿದ್ದರು ಹಾಗೆಯೇ ಸತ್ಕರಿಸುತ್ತಿದ್ದರು ಚಿಕ್ಕವೀರ ರಾಜೇಂದ್ರ ಪ್ರಭುಗಳು. ಇಲ್ಲಿನ ವನ ಸಂಪತ್ತಿನ ಸೊಬಗಿನಿಂದ ಆಕರ್ಷಿತರಾದ ದುರಾತ್ಮ ಆಂಗ್ಲರು, ಕೊಡಗನ್ನು ಕಬಳಿಸುವ ಸಂಚು ರೂಪಿಸಿದರು. ಬೋಪು ದಿವಾನ ಹಾಗೂ ಕೆಲವು ಮಂದಿ ದೇಶ ದ್ರೋಹಿಗಳು ಈ ಸಂಚಿಗೆ ಬಲಿಯಾದುದರ ಪರಿಣಾಮ ಕೊಡಗು ರಾಜ್ಯ ರಕ್ತ ಕ್ರಾಂತಿಯ ನಡುವೆಯೂ ದಾಸ್ಯಕ್ಕೆ ಒಳಪಡಬೇಕಾಯಿತು.

ಆಂಗ್ಲರ ಸಂಚನ್ನು ದಿಟ್ಟತನದಿಂದಲೇ ವಿರೋಧಿಸುತ್ತಿದ್ದರು ಚಿಕ್ಕವೀರ ರಾಜೇಂದ್ರರು. 1830ರಲ್ಲಿ ಒಮ್ಮೆ ಕಠಿಣ ಬೇನೆಗೆ (ಕಾಯಿಲೆ) ಬಿದ್ದರು. ಶಸ್ತ್ರ ಚಿಕಿತ್ಸೆಗೆ ವೈದ್ಯರು ಸಲಹೆ ನೀಡಿದರು. ಬೊಂಬಾಯಿಯಿಂದ ಆಗಮಿಸಿದ ಡಾ. ಜಫರ್‌ಸನ್ ಎಂಬ ವೈದ್ಯ ಒಡೆಯರಿಗೆ ಚಿಕಿತ್ಸೆ ನೀಡುತ್ತಾರೆ. ಇವರೊಂದಿಗೆ ಆಗಮಿಸಿದ ಆಂಗ್ಲರ ಕ್ಯಾಪ್ಟನ್ ಹಿಲ್ ಎಂಬವರು 22 ದಿನಗಳ ಕಾಲ ಕೊಡಗಿನಲ್ಲಿ ವಾಸ್ತವ್ಯ ಹೂಡಿದ್ದರು. ಚಿಕ್ಕವೀರ ರಾಜೇಂದ್ರರ ಯೋಗಾಭ್ಯಾಸ ಹಾಗೂ ಅವರಿಗಿರುವ ಅಪಾರ ಜನ ಮನ್ನಣೆಯನ್ನು ಗಮನಿಸಿದ ಕ್ಯಾಪ್ಟನ್ ಹಿಲ್ ಒಡೆಯರನ್ನು ಭೇಟಿ ಮಾಡಿ ಅಭಿನಂದಿಸುತ್ತಾರೆ. ಒಡೆಯನ್ನು ಉದ್ದೇಶಿಸಿ **"ನೀವು ಬಹಳ ಕ್ರೂರಿಗಳೆಂದು ಬೊಂಬಾಯಿಯ ಜನರು ನನ್ನೊಂದಿಗೆ ಅಳಲು ತೋಡಿಕೊಂಡಿದ್ದರು. ಅಲ್ಲಿಂದ ಕೊಡಗಿಗೆ ಆಗಮಿಸಿದ್ದ ಅವರ ಬಂಧುಗಳ ಮೇಲೆ ಅತ್ಯಾಚಾರ ನಡೆಸಿದ್ದೀರಾ, ಘೋರವಾಗಿ ಹತ್ಯೆ ಮಾಡಿದ್ದೀರಾ ಎಂಬ ಆರೋಪ ಮಾಡಿದ್ದಾರೆ. ಆದರೆ ನಾನು ಇಲ್ಲಿಗೆ ಬಂದ ನಂತರ ನನಗೆ ಸತ್ಯಾಂಶದ ಅರಿವಾಗಿದೆ. ಪ್ರಜೆಗಳ ಬಗ್ಗೆ ನಿಮಗೆ ಅಪಾರ ಕಾಳಜಿಯಿದೆ. ಪ್ರಜೆಗಳಿಗೂ ನಿಮ್ಮ ಮೇಲೆ ತುಂಬು ಗೌರವವಿದೆ"** ಎಂದು ನುಡಿಯುತ್ತಾರೆ.

ಪ್ರತಿಕ್ರಿಯಿಸಿದ ಒಡೆಯರು "ನಿಮ್ಮ ಅಭಿನಂದನೆಗೆ ನಮ್ಮ ಕೃತಜ್ಞತೆಗಳು. ನಿಮಗೆ ಸತ್ಯದ ಅರಿವಾಗಿದ್ದು ಸಂತೋಷ. ಆದರೂ ಹೊಗಳಿಕೆ ನನಗೆ ಒಗ್ಗದ ವಿಚಾರ" ಎಂದು ನಿಷ್ಠುರವಾಗಿ ನುಡಿಯುತ್ತಾರೆ. ರಾಜರ ದಿಟ್ಟತನವನ್ನು ಮನಸ್ಸಿನಲ್ಲಿಯೇ ಶ್ಲಾಘಿಸಿದ ಕ್ಯಾಪ್ಟನ್ ಹಿಲ್ ಈ ರೀತಿ ವ್ಯಾಖ್ಯಾನಿಸಿ ದಾಖಲಿಸಿದ್ದಾರೆ. **"ಹಿಂದೂಸ್ಥಾನದಲ್ಲಿ ಹೇಡಿಗಳಂತೆ ಬದುಕುತ್ತಾ, ಪರಾಡಳಿತಕ್ಕೆ ತಲೆಬಾಗಿ, ಕೇವಲ ರಾಣಿವಾಸದಲ್ಲಿ ಮೈ ಮರೆತು ಕಾಲ ಕಳೆಯುವ ರಾಜರುಗಳನ್ನು ಕಂಡಿದ್ದೇನೆ. ಆದರೆ ಚಿಕ್ಕವೀರ ರಾಜೇಂದ್ರರು ಇದಕ್ಕೆ ತದ್ವಿರುದ್ಧವಾಗಿದ್ದಾರೆ. ಸಂಘಟನೆಯ ಶಕ್ತಿ ಅಪಾರವಾಗಿದೆ. ಅವಶ್ಯ ಬಿದ್ದರೆ ಶಸ್ತ್ರಸಜ್ಜಿತ 25,000 ಯೋಧರನ್ನು ಸಂಘಟಿಸಬಲ್ಲ ಚೈತನ್ಯ ಹೊಂದಿದ್ದಾರೆ.**

ಪ್ರಜೆಗಳಿಂದ ಮನ್ನಣೆ ಗಳಿಸಿದ್ದಾರೆ. ರೈತ ಜನಾಂಗದೊಂದಿಗೆ ಸ್ವತಃ ಮಿಳಿತರಾಗಿ ಅವರ ಕಾಯಕಕ್ಕೆ ಪ್ರೋತ್ಸಾಹ ನೀಡುತ್ತಾರೆ. ಬ್ರಿಟೀಷರೇ ಇರಲಿ, ಇನ್ಯಾರೇ ಆಗಲಿ, ಅತಿಥಿಗಳನ್ನು ಗೌರವಪೂರ್ವಕ ಸತ್ಕರಿಸುವ ವಿಶಾಲ ಹೃದಯವಿದೆ. ಒಡೆಯರ ಈ ಕೀರ್ತಿಯನ್ನು ಸಹಿಸಲಾರದ ಕೆಲವು ಮಂದಿ, ಅವರ ವಿರುದ್ಧ ಸಲ್ಲದ ಆರೋಪಗಳನ್ನು ಮಾಡಿರುವುದು ದುರಾದೃಷ್ಟ. ಕೇವಲ ಅಧಿಕಾರದ ಆಸೆಗಾಗಿ ಕೆಟ್ಟ ಪ್ರವೃತ್ತಿಯನ್ನು ಪ್ರದರ್ಶಿಸಿದ್ದಾರೆ. ಚಿಕ್ಕವೀರರಾಜೇಂದ್ರ ನಿಜಕ್ಕೂ ಉತ್ತಮ ಆಡಳಿತಗಾರ ಹಾಗೂ ಜನಾನುರಾಗಿ" ಎಂದು ಪ್ರಶಂಸಿಸಿದ್ದಾರೆ.

ಅವಿಭಾಜಿತ ಕೊಡಗು ರಾಜ್ಯದ ಪ್ರಜೆಗಳಿಗೆ ಚಿಕ್ಕವೀರ ರಾಜೇಂದ್ರರ ಮೇಲಿದ್ದ ಅಪಾರ ರಾಜಭಕ್ತಿ ಹಾಗೂ ಗೌರವವನ್ನು ಗಮನಿಸಿದ, ಚಿಕ್ಕ ವೀರರಾಜೇಂದ್ರರ ತಂಗಿ ದೇವಮ್ಮಾಜಿ ಹಾಗೂ ಈಕೆಯ ಪತಿ ಚೆನ್ನಬಸಪ್ಪ ಇಬ್ಬರಿಗೂ ಅಸಾಧ್ಯ ಅಸೂಯೆ ಉಂಟಾಗುತ್ತದೆ. ಹೇಗಾದರೂ ಮಾಡಿ ರಾಜನನ್ನು ಸದೆಬಡಿದು, ತಾವು ಪಟ್ಟಕ್ಕೇರಬೇಕೆಂಬ ದುರಾಲೋಚನೆ ಮಾಡುತ್ತಾರೆ. ಆಂಗ್ಲರ ಜೊತೆಗೂಡಿ ಪಿತೂರಿ ಮಾಡಲು ಸಜ್ಜಾಗುತ್ತಾರೆ.

ಇನ್ನೊಂದು ಕಡೆಯಿಂದ ಅಧಿಕಾರ ಲಾಲಸೆಯಿಂದ ಆಂಗ್ಲರಿಗೆ ನಿಷ್ಠರಾಗಿದ್ದ ಬೋಪು ದಿವಾನ, ಬೋಪಣ್ಣ, ಸುಬೇದಾರ ಬಿದ್ದಯ್ಯ, ಅಪ್ಪಚ್ಚು, ದೊಡ್ಡಯ್ಯ ಇವರುಗಳು ಚಿಕ್ಕವೀರರಾಜೇಂದ್ರರ ವಿರುದ್ಧ ಸಂಚು ನಡೆಸುತ್ತಾರೆ.

ಚಿಕ್ಕವೀರರಾಜೇಂದ್ರ ಒಡೆಯರು ಕಕ್ಕಬೆ ಸಮೀಪದ ನಾಲ್ಕುನಾಡು ಅರಮನೆಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದರು. ಸಮಯ ಸಾಧಿಸಿದ ಆಂಗ್ಲರ ಸೇನಾನಿ ಕರ್ನಲ್ ಫ್ರೇಜರ್ ಎಂಬುವನು ಸ್ವಾಮಿ ದ್ರೋಹಿ ಪಿತೂರಿಗಾರರ ಸಹಕಾರದೊಂದಿಗೆ, ಕೊಡಗಿನ ನಾಲ್ಕು ದಿಕ್ಕುಗಳಿಂದ ದಿಢೀರ್ ಮುತ್ತಿಗೆ ಹಾಕುತ್ತಾನೆ. ಈ ಅನಿರೀಕ್ಷಿತ ಧಾಳಿಯಿಂದ ಕೊಡಗಿನ ವೀರ ಸೈನಿಕರು ಒಮ್ಮೆಗೇ ಬೆಚ್ಚಿದರೂ ಕೂಡ, ವೀರಾವೇಶದಿಂದ ಹೋರಾಡುತ್ತಾರೆ. ಪಶ್ಚಿಮ, ಉತ್ತರ ಹಾಗೂ ದಕ್ಷಿಣ ದಿಕ್ಕುಗಳಿಂದ ಮುತ್ತಿಗೆ ಹಾಕಿದ ಆಂಗ್ಲರನ್ನು ಕೊಡಗಿನ ವೀರರು ಬಗ್ಗು ಬಡಿಯುತ್ತಾರೆ. ಪ್ರತಿ ದಾಳಿಯನ್ನು ಎದುರಿಸಲಾರದೆ ಫರಂಗಿ ಸೈನಿಕರು ಪಲಾಯನ ಮಾಡುತ್ತಾರೆ. ಆದರೆ ಪೂರ್ವ ದಿಕ್ಕಿನಿಂದ ಹೆಬ್ಬಾಲೆಯ ಬಳಿ ಕಾವೇರಿ ನದಿಯನ್ನು ದಾಟಿ ಮುನ್ನುಗ್ಗುತ್ತಿದ್ದ ಆಂಗ್ಲರನ್ನು ಎದುರಿಸಲು ಬೋಪು ದಿವಾನನ ನೇತೃತ್ವದಲ್ಲಿ ಕೊಡಗಿನ ಸೇನೆ ನಿಯೋಜಿಸಲ್ಪಡುತ್ತದೆ. ರಾಜರ ವಿರುದ್ಧ ಕಿಡಿ ಕಾರುತ್ತಿದ್ದ ಬೋಪು ದಿವಾನ ಸಂದರ್ಭವನ್ನು ತನ್ನ ಸ್ವಾರ್ಥಕ್ಕೆ ಬಳಸುವ ನಿರ್ಧಾರ ಮಾಡುತ್ತಾನೆ. ರಾಜದ್ರೋಹಿಯಾದ ಬೋಪು ದಿವಾನ ಯುದ್ಧ ಮಾಡುವ ಬದಲು ಆಂಗ್ಲರಿಗೆ ಬಿಳಿ ಧ್ವಜವನ್ನು ತೋರಿಸಿ ಕುಶಾಲನಗರದಲ್ಲಿ ಫಿರಂಗಿ (ಆಂಗ್ಲರು)ಗಳಿಗೆ ಶರಣಾಗತನಾಗುತ್ತಾನೆ. ಕರ್ನಲ್ ಫ್ರೇಜರನನ್ನು ಉದ್ದೇಶಿಸಿ "ಚಿಕ್ಕವೀರ ರಾಜೇಂದ್ರ ಒಡೆಯರನ್ನು ಸದೆ ಬಡಿಯಲು ಒಳ್ಳೆಯ ಸಂದರ್ಭ" ಎಂದು ನುಡಿದು ಚಿಕ್ಕವೀರರಾಜೇಂದ್ರ ಒಡೆಯರನ್ನು ಬಂಧಿಸಲು ಸಹಕರಿಸುತ್ತಾನೆ.

"ವೆರಿಗುಡ್ ಬೋಪು ದಿವಾನ್, ನಿಮ್ಮ ಉಪಕಾರವನ್ನು ಮರೆಯುವುದಿಲ್ಲ, ಸರಿಯಾದ ಸಂದರ್ಭದಲ್ಲಿ ನಿಮಗೆ ಉನ್ನತ ಅಧಿಕಾರ ದೊರೆಯುತ್ತದೆ" ಎಂದು ಕರ್ನಲ್ ಫ್ರೇಜರ್ ನುಡಿಯುತ್ತಾನೆ. ಕರ್ನಲ್ ಫ್ರೇಜರನು ಬೋಪು ದಿವಾನನ ಜೊತೆಗೂಡಿ ಮಡಿಕೇರಿಗೆ ಆಗಮಿಸಿ, ಅರಮನೆ (ಕೋಟೆ)ಯ ಮೇಲೆ ವಿಜೃಂಭಣೆಯಿಂದ ರಾರಾಜಿಸುತ್ತಿದ್ದ ಕೊಡಗಿನ ಮಾನ ಸಮ್ಮಾನ ಧ್ವಜವನ್ನು ಕಿತ್ತೊಗೆಯುತ್ತಾನೆ. ಬ್ರಿಟೀಷ್ ಧ್ವಜವನ್ನು ಮೇಲಕ್ಕೇರಿಸುತ್ತಾನೆ.

ಧೂತರಿಂದ ವಿಷಯ ತಿಳಿದ ಚಿಕ್ಕ ವೀರರಾಜೇಂದ್ರ ಒಡೆಯರು ಹೌಹಾರುತ್ತಾರೆ. ಉಗ್ರರಾಗುತ್ತಾರೆ. **"ಅಭೇದ್ಯ ಕೊಡಗು ರಾಜ್ಯದ ಮೇಲೆ ಆಂಗ್ಲರ ಆಕ್ರಮಣ ಸಾಧ್ಯವಿಲ್ಲ, ಇಲ್ಲೇನೋ ಸಂಚು ನಡೆದಿದೆ. ಯಾರವನು ಕರ್ನಲ್ ಫ್ರೇಜರ, ರಾಜ್ಯದ ಸಾರ್ವಭೌಮ ಧ್ಯೋತಕ ಧ್ವಜವನ್ನು ಮುಟ್ಟಿ ಮೈಲಿಗೆ ಮಾಡಿದ ಅವನ ಕೈಗಳನ್ನು ಕತ್ತರಿಸುತ್ತೇನೆ, ಇದೇ ಖಡ್ಗದಿಂದ ಅವನ ಶಿರಚ್ಛೇದನ ಮಾಡುತ್ತೇನೆ"** ಎಂದು ಘರ್ಜಿಸುತ್ತಾ ಕರ್ನಲ್ ಫ್ರೇಜರನ ಕಡೆಗೆ ಕ್ರೋಧದಿಂದ, ವೀರಾವೇಶದಿಂದ ಮುನ್ನಡಿಯಿಡುತ್ತಾರೆ. ಆದರೆ ಅಷ್ಟರಲ್ಲಿ ಬೋಪು ದಿವಾನನ ಕುತಂತ್ರದಿಂದ ರಾಜನ ಸುತ್ತುವರೆದಿದ್ದ

ರಾಜ ದ್ರೋಹಿಗಳು ಒಡೆಯರ ಪ್ರಯತ್ನಕ್ಕೆ ಅಡ್ಡಿಯಾಗುತ್ತಾರೆ. ಅನಾಯಾಸವಾಗಿ ಒಡೆಯರು ಬ್ರಿಟೀಷರ ಬಂಧನಕ್ಕೆ ಒಳಗಾಗುತ್ತಾರೆ. ಅವರನ್ನು ಮಡಿಕೇರಿಯ ಅರಮನೆಗೆ ಕರೆತಂದು ಗೃಹ ಬಂಧನದಲ್ಲಿರಿಸಿ, ಕ್ಯಾಪ್ಟನ್ ಲೀಹಾರ್ಡಿಗೆ ಕೊಡಗು ರಾಜ್ಯದ ಉಸ್ತುವಾರಿ ವಹಿಸಲಾಗುತ್ತದೆ. ಒಡೆಯರ ಬಂಧನದ ವಿಚಾರ ಪ್ರಜೆಗಳಿಗೆ ತಿಳಿಯದಂತೆ ಎಚ್ಚರ ವಹಿಸಲಾಗುತ್ತದೆ. ಗುಟ್ಟು ರಟ್ಟಾದರೆ ಪ್ರಜೆಗಳು ದಂಗೆ ಏಳಬಹುದು ಎಂಬ ಭೀತಿ ಲೀಹಾರ್ಡಿಯನ್ನು ಕಾಡತೊಡಗುತ್ತದೆ.

ಒಡೆಯರನ್ನು ತೀರ್ಥಯಾತ್ರೆಯ ನೆಪದಲ್ಲಿ ಕಾಶಿಗೆ ಸಾಗಿಸಿದರೆ ಪ್ರಜೆಗಳ ದಂಗೆಯ ಭೀತಿಯಿಂದ ಪಾರಾಗಬಹುದೆಂದು ಬೋಪು ದಿವಾನ ಲಿಹಾರ್ಡಿಗೆ ಸಲಹೆ ನೀಡುತ್ತಾನೆ. ಅದರಂತೆ ಚಿಕ್ಕವೀರರಾಜೇಂದ್ರ ಒಡೆಯರು ಕಾಶಿಗೆ ಸಾಗಿಸಲ್ಪಡುತ್ತಾರೆ.

ಆಂಗ್ಲರು ಎಷ್ಟೇ ಎಚ್ಚರ ವಹಿಸಿದರೂ ರಾಜರಿಗೆ ಆಪ್ತರೆನಿಸಿದ್ದ ಸೂಕ್ಷ್ಮ ಮತಿಯಾದ ಗುಡ್ಡೆಮನೆ ಅಪ್ಪಯ್ಯಗೌಡ, ಹುಲಿಕೊಂದ ನಂಜಯ್ಯ, ಚೆಟ್ಟಿ ಕುಡಿಯ, ಕುರ್ತು ಕುಡಿಯ, ಪುಟ್ಟ ಬಸವರಾಜು, ಸೋಮಯ್ಯ, ಮಾಚಯ್ಯ ಮುಂತಾದ ದೇಶ ಪ್ರೇಮಿಗಳಿಗೆ ಆಂಗ್ಲರ ಸಂಚು ತಿಳಿದುಹೋಗುತ್ತದೆ. ಕ್ರುದ್ಧರಾದ ಈ ವೀರಾಗ್ರಣಿಗಳು ಬ್ರಿಟೀಷರ ವಿರುದ್ಧ ಸಿಡಿದೇಳುವ ನಿರ್ಧಾರಕ್ಕೆ ಬರುತ್ತಾರೆ.

ಆದರೆ ಮೈಸೂರು ಸಂಸ್ಥಾನದಿಂದ ಮೊದಲ್ಗೊಂಡು, ಕೊಡಗು, ದಕ್ಷಿಣ ಕನ್ನಡ ಜಿಲ್ಲೆಯವರೆಗೂ ಸಂಪೂರ್ಣ ಬ್ರಿಟೀಷ್ ಆಡಳಿತಕ್ಕೆ ಒಳಪಟ್ಟಿತ್ತು. ರಾಜರ ಆಳ್ವಿಕೆಯಲ್ಲಿ ತಾವು ಬೆಳೆದ ವಸ್ತುಗಳ ರೂಪದಲ್ಲಿ ನೀಡುತ್ತಿದ್ದ ಹೊರೆಯಾಗದ ಕಂದಾಯದಿಂದ ಪ್ರಜೆಗಳು ಸಂತುಷ್ಟರಾಗಿದ್ದರು. ಆಂಗ್ಲರ ಆಳ್ವಿಕೆ ಪ್ರಾರಂಭವಾದೊಡನೆ ಹಣದ ರೂಪದಲ್ಲಿ ಕಂದಾಯ ನೀಡುವಂತೆ ಘೋಷಣೆಯಾಗುತ್ತದೆ. ಕಂದಾಯದ ಈ ಬದಲಾವಣೆ ಪ್ರಾರಂಭದಲ್ಲಿ ಪ್ರಜೆಗಳಿಗೆ ಅರ್ಥವಾಗದಿದ್ದರೂ ದಿನಗಳು ಉರುಳಿದಂತೆ ಸಮಸ್ಯೆಗಳು ಎದುರಾದವು. ಈ ತನಕ ರೈತರು ತಾವು ಬೆಳೆದ ಬೆಳೆಯ ಸ್ವಲ್ಪ ಭಾಗವನ್ನು ಮಾತ್ರ ಕಂದಾಯ ನೀಡಿ ಸಂತುಷ್ಟರಾಗಿದ್ದರು. ಇದೀಗ ದೊಡ್ಡ ಮೊತ್ತದ ಹಣವನ್ನು ಕಂದಾಯ ರೂಪದಲ್ಲಿ ನೀಡಬೇಕಾದ ಪರಿಸ್ಥಿತಿ ಎದುರಾಯಿತು. ಕಷ್ಟ ಕಾರ್ಪಣ್ಯಗಳು ಹೆಚ್ಚಾದವು. ರೈತರು ಶ್ರೀಮಂತರ ಮನೆಯ ಊಳಿಗ ಮಾಡಬೇಕಾದ ಅನಿವಾರ್ಯತೆ ಉದ್ಭವವಾಯಿತು. ಜನರಲ್ಲಿ ಅಸಹನೆ ಹೆಚ್ಚಾಯಿತು.

ಗುಡ್ಡೆಮನೆ ಅಪ್ಪಯ್ಯಗೌಡರ ನೇತೃತ್ವದ ಗುಂಪು ಸಂಘಟಿತವಾಯಿತು. 1837ನೇ ಇಸವಿ ಮಾರ್ಚ್ 5ನೇ ತಾರೀಕಿನಿಂದು ಮಡಿಕೇರಿ ಕೋಟೆಗೆ ಮುತ್ತಿಗೆ ಹಾಕಿ, ಬ್ರಿಟೀಷರನ್ನು ಬಗ್ಗುಬಡಿದು, ಗಡಿಪಾರು ಮಾಡಬೇಕೆಂದು ನಿಶ್ಚಯವಾಗುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಂಗ್ಲರ ವಿರುದ್ಧ ಸಂಘಟಿತರಾಗುತ್ತಿದ್ದ ಕೆದಂಪಾಡಿ ರಾಮಗೌಡ ಹಾಗೂ ಅಡಕ್ಕಾರು ಅಣ್ಣಿಗೌಡರಿಗೆ ಈ ವಿಚಾರ ತಿಳಿಯುತ್ತದೆ. ಅವರಿಬ್ಬರೂ ಕುದುರೆಯೇರಿ ಸುಳ್ಯದಿಂದ ಬಿಸ್ಲೆಘಾಟಿಗಾಗಿ ಕೊಡಗು ಜಿಲ್ಲೆಯ ಪುಷ್ಪಗಿರಿಗೆ ಆಗಮಿಸುತ್ತಾರೆ. ಅಲ್ಲಿ ಪುಟ್ಟಬಸವರಾಜುವನ್ನು ಭೇಟಿಯಾಗಿ ಗುಡ್ಡೆಮನೆ ಅಪ್ಪಯ್ಯಗೌಡ ಹಾಗೂ ತಂಡವನ್ನು ತಮ್ಮಲ್ಲಿಗೆ ಕರೆಸಿಕೊಳ್ಳುತ್ತಾರೆ.

ಸ್ಥಳೀಯ ಸ್ವಾಮಿ ದ್ರೋಹಿಗಳು ಹಾಗೂ ಬ್ರಿಟೀಷರ ಕುತಂತ್ರದಿಂದ ರೊಚ್ಚಿಗೆದ್ದಿದ್ದ ಅಪ್ಪಯ್ಯಗೌಡರನ್ನು ಉದ್ದೇಶಿಸಿ ಕೆದಂಪಾಡಿ ರಾಮಗೌಡರು **"ವೀರಾಗ್ರಣಿ ಅಪ್ಪಯ್ಯಗೌಡರೇ ದುಡುಕಿನಿಂದ ಪ್ರಯೋಜನವಿಲ್ಲ, ನಮ್ಮ ನಾಡು ಮರಳಿ ನಮ್ಮದಾಗಬೇಕಾದರೆ, ಚಿಕ್ಕವೀರರಾಜ ಒಡೆಯರು ಬಂಧಮುಕ್ತರಾಗಬೇಕಾದರೆ ಉಪಾಯದಿಂದ ಕಾರ್ಯಸಾಧನೆ ಮಾಡಬೇಕು. ನಮ್ಮಲ್ಲಿ ಯಾರಾದರೊಬ್ಬರು ರಾಜಮನೆತನದವರೆಂದು ಹೇಳಿಕೊಂಡು ಪ್ರಜೆಗಳ ಬೆಂಬಲ ಪಡೆಯಬೇಕು. ಹಾಗಾದರೆ ಮಾತ್ರ ಬ್ರಿಟೀಷರನ್ನು ಹಿಮ್ಮೆಟ್ಟಿಸಲು ಸಾಧ್ಯ"** ಎಂಬ ಸಲಹೆ ನೀಡಿದರು.

ಸಾವಧಾನ ಚಿತ್ತದಿಂದ ರಾಮಗೌಡರ ಮಾತನ್ನು ಆಲಿಸುತ್ತಿದ್ದ ಅಪ್ಪಯ್ಯಗೌಡರು ಸ್ವಲ್ಪ ಹೊತ್ತು ಯೋಚಿಸಿ

"ಪುಟ್ಟ ಬಸವರಾಜು ಈ ಕಾರ್ಯಕ್ಕೆ ಸಮರ್ಥ ವ್ಯಕ್ತಿ. ಆದರೆ ಈತನ ಹೆಸರನ್ನು ಬಾಲ್ಯದಲ್ಲಿ ಕರೆಯುತ್ತಿದ್ದ "ಕಲ್ಯಾಣ ಸ್ವಾಮಿ" ಎಂದು ಬದಲಾಯಿಸಿ, ಕಾಶಿಯಾತ್ರೆ ತೆರಳಿರುವ ಚಿಕ್ಕವೀರರಾಜೇಂದ್ರ ಒಡೆಯರು ಹಿಂತಿರುಗಿ ಬರುವ ತನಕ ಕಲ್ಯಾಣ ಸ್ವಾಮಿಯವರನ್ನು ರಾಜ್ಯಪಾಲರಾಗಿ ನೇಮಿಸಿದ್ದಾರೆ" ಎಂಬುದಾಗಿ ಸುದ್ದಿ ಹರಡಿಸಬೇಕೆಂದು ಸಲಹೆ ನೀಡುತ್ತಾರೆ.

ಇಂಗ್ಲೀಷರ ವಿರುದ್ಧ ಯುದ್ಧ ನಿಶ್ಚಯವಾಗುತ್ತದೆ. ಈ ಹಿಂದೆ ನಿಶ್ಚಯವಾಗಿದ್ದ ಮಾರ್ಚ್ 5ನೇ ತಾರೀಕಿನ ಬದಲು. ಏಪ್ರಿಲ್ 6ನೇ ತಾರೀಕು ಯುಗಾದಿಯ ದಿನ ಅಮರ ಸುಳ್ಯದಿಂದ ಯುದ್ಧ ಪ್ರಾರಂಭ ಮಾಡಬೇಕೆಂದು ತೀರ್ಮಾನವಾಗುತ್ತದೆ.

ಕೆದಂಪಾಡಿ ರಾಮಗೌಡರು, ಅಡಕ್ಕಾರು ಅಣ್ಣಿಗೌಡರು ಹಾಗೂ ಮಾಚಯ್ಯನವರು ತಕ್ಷಣ ಸುಳ್ಯಕ್ಕೆ ಹೊರಟು ಯುದ್ಧ ಸಿದ್ಧತೆಯಲ್ಲಿ ತೊಡಗುತ್ತಾರೆ. ಗುಡ್ಡೆಮನೆ ಅಪ್ಪಯ್ಯಗೌಡರು, ಕಲ್ಯಾಣ ಸ್ವಾಮಿ, ಹುಲಿಕೊಂದ ನಂಜಯ್ಯ, ಶಾಂತಳ್ಳಿ ಮಲ್ಲಯ್ಯ, ಚೆಟ್ಟಿಕುಡಿಯ, ಕುರ್ತು ಕುಡಿಯ ಮುಂತಾದವರು ಕಾವೇರಿ ನಾಡಿನ ಎಲ್ಲಾ ಗ್ರಾಮಗಳಲ್ಲಿ ಸುತ್ತಾಡಿ, ಬ್ರಿಟೀಷರ ವಿರುದ್ಧ ಜನಜಾಗೃತಿಗೊಳಿಸಿ, ಸಂಘಟಿಸಿ, ಯುದ್ಧ ಸನ್ನದ್ಧರಾಗಲು ಪ್ರಚೋದಿಸಿ ಸಂಗ್ರಾಮಕ್ಕೆ ಸನ್ನದ್ಧರಾಗುತ್ತಾರೆ. ಜೊತೆಗೆ ಯುದ್ಧ ಸಾಮಗ್ರಿಗಳ ಜಮಾವಣೆಯಂತಹ ಮಹತ್ತರ ಕಾರ್ಯದ ಜವಾಬ್ದಾರಿ ಕೂಡ ಗುಡ್ಡೆಮನೆ ಅಪ್ಪಯ್ಯಗೌಡ ಹಾಗೂ ತಂಡಕ್ಕೆ ವಹಿಸಲಾಗುತ್ತದೆ.

ಸಂಘಟನೆ ಕಾರ್ಯ ಪೂರ್ಣಗೊಂಡ ನಂತರ, ಸ್ವಾತಂತ್ರ್ಯ ಸೇನೆ ಸುಳ್ಯದಲ್ಲಿ ಜಮಾವಣೆಗೊಳ್ಳುವದೆಂದು ತೀರ್ಮಾನವಾಗುತ್ತದೆ. ಕೆದಂಪಾಡಿ ರಾಮಗೌಡರ ಮಗನಿಗೆ ಮದುವೆ ಎಂಬುದಾಗಿ ಸುದ್ದಿ ಹಬ್ಬಿಸಲಾಗುತ್ತದೆ. ಮದುವೆ ಸಿದ್ಧತೆಗೆಂದು ದೊಡ್ಡ ಚಪ್ಪರ ನಿರ್ಮಾಣವಾಗುತ್ತದೆ. ಅದರಡಿಯಲ್ಲಿ ಅತ್ಯುತ್ಸಾಹದ ಸ್ವಾತಂತ್ರ್ಯ ಸಂಗ್ರಾಮದ ಸೇನೆ ಜಮಾವಣೆಗೊಳ್ಳುತ್ತದೆ. ಅಲ್ಲಿಯೇ ಒಂದೆಡೆಯಲ್ಲಿ ಸಿಂಹಾಸನದ ಮೇಲೆ ಕಲ್ಯಾಣ ಸ್ವಾಮಿಯವರನ್ನು ಕುಳ್ಳಿರಿಸಿ ಯೋಧರಲ್ಲಿ ರಣೋತ್ಸಾಹ ತುಂಬುವ ಕಾರ್ಯದತ್ತ ಹೆಚ್ಚು ಗಮನ ಹರಿಸಲಾಗುತ್ತದೆ.

ಬ್ರಿಟೀಷರ ದುರಾಡಳಿತವನ್ನು ವಿರೋಧಿಸುತ್ತಿದ್ದ, ರಾಜನಿಷ್ಠ ಸೇನೆಯನ್ನುದ್ದೇಶಿಸಿ **"ಚಿಕ್ಕವೀರ ರಾಜೇಂದ್ರ ಪ್ರಭುಗಳು ಕಾಶಿಯಿಂದ ಹಿಂತಿರುಗುವವರೆಗೆ ಕಲ್ಯಾಣ ಸ್ವಾಮಿಯವರೇ ನಮ್ಮ ಪ್ರಭುಗಳು, ಸಕಲ ರಾಜ ಮರ್ಯಾದೆ, ಗೌರವಗಳೂ ಅವರಿಗೆ ಸಲ್ಲಿಕೆಯಾಗಬೇಕು. ಎದ್ದೇಳಿ ಕೊಡಗಿನ ವೀರಪುತ್ರರೇ, ವೀರ ಮರಣವನ್ನು ಅಪ್ಪುತ್ತೇವೆಯೇ ಹೊರತು, ಆಂಗ್ಲರ ಆಡಳಿತವನ್ನು ಒಪ್ಪುವುದಿಲ್ಲ"** ಎಂಬುದಾಗಿ ಜಮಾವಣೆಗೊಂಡ ಸೇನೆಯನ್ನು ಉದ್ದೇಶಿಸಿ ಅಪ್ಪಯ್ಯಗೌಡರು ಅಬ್ಬರಿಸುತ್ತಿದ್ದರು, ಹುರಿದುಂಬಿಸುತ್ತಿದ್ದರು.

ಕಲ್ಯಾಣ ಸ್ವಾಮಿಯವರು ಆದೇಶವೊಂದನ್ನು ಹೊರಡಿಸಿ ಸೇನೆಯ ಒಂದು ಭಾಗಕ್ಕೆ ಕೆದಂಪಾಡಿ ರಾಮಗೌಡರು ಮತ್ತು ಹುಲಿಕೊಂದ ನಂಜಯ್ಯನವರನ್ನು ದಂಡನಾಯಕರಾಗಿ ನೇಮಿಸಿದರು. ಕೊಡಗಿನಲ್ಲಿರುವ ಸೈನ್ಯಕ್ಕೆ ಗುಡ್ಡೆಮನೆ ಅಪ್ಪಯ್ಯಗೌಡರು ದಂಡನಾಯಕರಾಗುತ್ತಾರೆ.

"ಬ್ರಿಟೀಷರನ್ನು ಬಗ್ಗುಬಡಿಯಲು ಒಳ್ಳೆಯ ಅವಕಾಶ ಒದಗಿಬಂದಿದೆ, ಅವರ ಅಟ್ಟಹಾಸವನ್ನು ಕೊನೆಗಾಣಿಸಲೇಬೇಕು, ಪ್ರತಿಯೊಬ್ಬರೂ ಆಯುಧ ಸಮೇತರಾಗಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗಿಗಳಾಗಬೇಕು" ಎಂಬ ಸಂದೇಶಗಳನ್ನು ಧೂತರ ಮೂಲಕ ರಾಜ್ಯದ ಮೂಲೆ ಮೂಲೆಗಳಿಗೂ ಕಲ್ಯಾಣಸ್ವಾಮಿ ಕಳುಹಿಸಿಕೊಡುತ್ತಾರೆ.

ಸುಳ್ಯದಲ್ಲಿ ಜಮಾವಣೆಗೊಂಡ ಸ್ವಾತಂತ್ರ್ಯ ಸಮರ ಸೇನೆಯು ಕೊಡಗಿನತ್ತ ಪ್ರಯಾಣ ಬೆಳೆಸುತ್ತದೆ. ಕಲ್ಯಾಣ ಸ್ವಾಮಿ, ರಾಮಗೌಡ, ನಂಜಯ್ಯ, ಸೋಮಯ್ಯ, ಚೆಟ್ಟಿಕುಡಿಯ, ಕುರ್ತು ಕುಡಿಯ ಇವರುಗಳು ಸೇನೆಯ ನೇತೃತ್ವ ವಹಿಸುತ್ತಾರೆ. ಹೊರಡುವಾಗ ಚಿಕ್ಕದಾಗಿದ್ದ ಸೇನೆ ಮುಂದುವರಿದಂತೆ ಸಾಗರದಂತೆ ಹೆಚ್ಚುತ್ತಾ ಹೋಗುತ್ತದೆ.

ಆಂಗ್ಲರ ಅಧೀನದಲ್ಲಿ ದಿವಾನನಾಗಿದ್ದ ಸ್ವಾಮಿ ದ್ರೋಹಿ ಲಕ್ಷ್ಮೀನಾರಾಯಣನ ತಮ್ಮ ರಾಮಪ್ಪಯ್ಯ ಎಂಬವನು

ಸುಳ್ಯದಲ್ಲಿ ಸುಬೇದಾರನಾಗಿದ್ದುಕೊಂಡು, ಈ ವಿಭಾಗದ ಗ್ರಾಮಸ್ಥರಿಗೆ ಕಿರುಕುಳ ನೀಡುತ್ತಿದ್ದನು. ಕೊಡಗಿನತ್ತ ಪ್ರಯಾಣ ಬೆಳೆಸಿದ್ದ ಸೇನೆಯಿಂದ ರಾಮಪ್ಪಯ್ಯ ಬಂಧನಕ್ಕೊಳಗಾಗುತ್ತಾನೆ. ಆಂಗ್ಲರ ಜೊತೆಗೂಡಿ ತಾಯ್ನಾಡಿನ ವಿರುದ್ಧ ಸಂಚು ನಡೆಸುತ್ತಿದ್ದ ರಾಮಪ್ಪಯ್ಯನನ್ನು ನಿರ್ದಾಕ್ಷಿಣ್ಯವಾಗಿ ಕೊಂದುಹಾಕಲಾಗುತ್ತದೆ. ಅವನ ಸ್ಥಾನದಲ್ಲಿ ತಿಮ್ಮಪ್ಪಯ್ಯನವರನ್ನು ಸುಬೇದಾರರಾಗಿ ಕಲ್ಯಾಣಸ್ವಾಮಿ ನೇಮಕ ಮಾಡುತ್ತಾರೆ.

ಮುಂದುವರೆದ ಸೇನೆ ಬೆಳ್ಳಾರೆಯ ಕೋಟೆಯನ್ನು ವಶಪಡಿಸಿಕೊಳ್ಳುತ್ತದೆ. ಖಜಾನೆಯನ್ನು ಲೂಟಿ ಮಾಡುತ್ತದೆ. ನಂತರ ಕಲ್ಯಾಣ ಸ್ವಾಮಿಯವರು ಕೋಟೆಯಲ್ಲಿ ಸಭೆ ನಡೆಸುತ್ತಾರೆ. ಚೆಂಬು ಪೆರಾಜೆಯ ರೈತರು, ಯುವಕರು ಸ್ವಯಂಪ್ರೇರಿತರಾಗಿ ಕಲ್ಯಾಣ ಸ್ವಾಮಿಯ ಸೇನೆಯಲ್ಲಿ ಸೇರ್ಪಡೆಗೊಳ್ಳುತ್ತಾರೆ. ರಾಮಗೌಡರ ಸಲಹೆಯ ಮೇರೆಗೆ ಬೀರಣ್ಣ ಬಂಟರು ಬೆಳ್ಳಾರೆಯ ಸುಬೇದಾರರಾಗಿ ನೇಮಕಗೊಳ್ಳುತ್ತಾರೆ. ಸೇನೆಯ ಸಂಖ್ಯೆ ಅಪಾರವಾಗಿ ಹೆಚ್ಚುತ್ತಾ ಹೋಗುತ್ತದೆ.

ಸೈನ್ಯದ ತುಕಡಿಯೊಂದನ್ನು ಕಲ್ಯಾಣ ಸ್ವಾಮಿಯವರು ಬೇರ್ಪಡಿಸಿ, ರಂಗಪ್ಪ ಮತ್ತು ಚಡಕರಾಮ ಎಂಬ ಇಬ್ಬರನ್ನು ಸುಬೇದಾರರಾಗಿ ನೇಮಕ ಮಾಡುತ್ತಾರೆ. ಇವರಿಬ್ಬರ ನೇತೃತ್ವದಲ್ಲಿ ಈ ತುಕಡಿಯು ಸುಬ್ರಹ್ಮಣ್ಯದ ಕಡೆಗೆ ಪ್ರಯಾಣ ಬೆಳೆಸುತ್ತದೆ.

ಕಲ್ಯಾಣಸ್ವಾಮಿ ನೇತೃತ್ವದ ಸೇನೆ ಪುತ್ತೂರಿನ ಖಜಾನೆಯನ್ನು ವಶಪಡಿಸಿಕೊಳ್ಳುತ್ತದೆ. ಮುಂದುವರಿದ ಸೇನೆಗೆ ನಂದಾವರದ ಬಂಗರಾಜರು ತಮ್ಮ ಬೆಂಬಲ ಸೂಚಿಸಿ ತಮ್ಮ ಸೈನ್ಯದೊಂದಿಗೆ ಸೇರಿಕೊಳ್ಳುತ್ತಾರೆ. ಅಪಾರ ಸಂಖ್ಯೆಯ ಸೇನೆ ನಂದಾವರದಿಂದ ವಿಟ್ಲ ಕಡೆಗೆ ಸಾಗುತ್ತದೆ. ಅಲ್ಲಿಯ ಜನರು ಕೂಡ ಸ್ವಯಂ ಪ್ರೇರಿತರಾಗಿ ಆಯುಧಗಳೊಡನೆ ಸೇನೆಯೊಂದಿಗೆ ಜಮಾವಣೆಗೊಳ್ಳುತ್ತಾರೆ. ಮುಂದುವರಿದ ಸೇನೆ ಮಂಗಳೂರಿನಲ್ಲಿ ಖಜಾನೆಯನ್ನು ವಶಪಡಿಸಿಕೊಂಡು, ಸೆರೆಮನೆಯಲ್ಲಿದ್ದ ಯುದ್ಧ ಖೈದಿಗಳನ್ನು ಬಿಡುಗಡೆಗೊಳಿಸುತ್ತಾರೆ. ಅವರೆಲ್ಲರೂ ಕಲ್ಯಾಣಸ್ವಾಮಿಯ ಸೇನೆಯಲ್ಲಿ ಸೇರಿಕೊಳ್ಳುತ್ತಾರೆ. ಅಲ್ಲಿ ನಡೆದ ಸಂಗ್ರಾಮದಲ್ಲಿ ಕಲ್ಯಾಣ ಸ್ವಾಮಿಯ ಸೈನ್ಯ ಬ್ರಿಟೀಷರನ್ನು ಹೊಡೆದೋಡಿಸುತ್ತದೆ.

ಮಂಗಳೂರಿನ ಅಪಾರ ಸಂಖ್ಯೆಯ ಜನರು ಸಂತಸಗೊಳ್ಳುತ್ತಾರೆ. 13 ದಿನಗಳ ಕಾಲ ಕಲ್ಯಾಣ ಸ್ವಾಮಿ ಅಲ್ಲಿ ರಾಜ್ಯಭಾರ ಮಾಡುತ್ತಾರೆ. ಈ ಸಂತಸದ ವಿಚಾರ ತಿಳಿದ ಬೇಂಗುನಾಡು, ತಾವುನಾಡು ಜನರು ಕಲ್ಯಾಣಸ್ವಾಮಿಯವರ ಸೇನೆಯಲ್ಲಿ ಸೇರ್ಪಡೆಗೊಳ್ಳಲು ಮುಂದಾಗುತ್ತಾರೆ. ಈ ವಿಚಾರ ತಿಳಿದ ಬ್ರಿಟೀಷರ ಅಧೀನದಲ್ಲಿದ್ದ ಸ್ವಾಮಿದ್ರೋಹಿ ಸುಬೇದಾರ ಮಾದಯ್ಯ ಈ ಕಾರ್ಯಕ್ಕೆ ಅಡ್ಡಪಡಿಸುತ್ತಾನೆ. ತನ್ನ ಸೇನೆಯ ಸಹಾಯದಿಂದ ಜನರನ್ನು ಹಿಂಸಿಸಿ, ಹಿಮ್ಮೆಟ್ಟಿಸುವ ಪ್ರಯತ್ನ ಮಾಡುತ್ತಾನೆ.

ಧೂತರ ಮೂಲಕ ಈ ವಿಚಾರ ಅಪ್ಪಯ್ಯಗೌಡರ ಗಮನಕ್ಕೆ ಬರುತ್ತದೆ. ಕ್ರುದ್ಧರಾದ ಅಪ್ಪಯ್ಯಗೌಡರು ತಮ್ಮ ಅಪಾರ ಸಂಖ್ಯೆಯ ಸೇನೆಯೊಂದಿಗೆ ಅಲ್ಲಿಗೆ ದೌಡಾಯಿಸುತ್ತಾರೆ. ಮಾದಯ್ಯನ ನೇತೃತ್ವದ ಬ್ರಿಟೀಷ್ ಸೇನೆಗೂ, ಅಪ್ಪಯ್ಯಗೌಡರ ಸೇನೆಗೂ ಭೀಕರ ಕದನ ನಡೆಯುತ್ತದೆ. **"ಕೊಡಗಿನ ವೀರ ಪುತ್ರರೆ, ಈ ದೇಶದ್ರೋಹಿ ಪರಂಗಿಗಳ ರುಂಡಗಳನ್ನು ಚೆಂಡಾಡಿರಿ"** ಎಂದು ಘರ್ಜಿಸುತ್ತಿದ್ದ ಅಪ್ಪಯ್ಯಗೌಡರ ಮಾತುಗಳಿಂದ ಉತ್ತೇಜಿತರಾದ ಕೊಡಗಿನ ಸೇನೆ ವೀರಾವೇಶದಿಂದ ಹೋರಾಡುತ್ತದೆ. ಬ್ರಿಟೀಷ್ ಸೇನೆಯನ್ನು ಬಗ್ಗು ಬಡಿದ ಅಪ್ಪಯ್ಯ ಗೌಡರು, ವಿದ್ರೋಹಿ ಮಾದಯ್ಯನನ್ನು ಸದೆಬಡಿದು, ಸೆರೆಮನೆಗೆ ತಳ್ಳುತ್ತಾರೆ. ಈ ಸಂತೋಷದ ವಿಚಾರ ಕಾಡ್ಗಿಚ್ಚಿನಂತೆ ಎಲ್ಲೆಡೆ ಹರಡುತ್ತದೆ. ಸ್ವಾಮಿ ದ್ರೋಹಿ ಬೋಪು ದಿವಾನನ ಅಪಾರ ಸಂಖ್ಯೆಯ ಜೊತೆಗಾರರು ಕಲ್ಯಾಣ ಸ್ವಾಮಿಯ ಸೈನ್ಯಕ್ಕೆ ಸೇರ್ಪಡೆಗೊಳ್ಳುತ್ತಾರೆ. ಈ ಪೈಕಿ ನಾಲ್ಕುನಾಡಿನ "ಉತ್ತು" ಎಂಬ ವೀರಾಗ್ರಣಿ ಪ್ರಮುಖ.

ಈ ವಿಜಯದಿಂದ ಉಜ್ಜೀಜಿತರಾದ ಕಲ್ಯಾಣ ಸ್ವಾಮಿ, ಅಪ್ಪಯ್ಯಗೌಡ, ಹುಲಿಕೊಂದ ನಂಜಯ್ಯ,

ಚೆಟ್ಟಿಕುಡಿಯ, ಕುರ್ತುಕುಡಿಯ ಮುಂತಾದ ಆಪ್ತರೊಂದಿಗೆ ಚರ್ಚಿಸಿ, 1837ರ ಮಾರ್ಚ್ 5ರಂದು, ಶಿವರಾತ್ರಿಯ ದಿನ ಕೊಡಗಿನ ಕೋಟೆಗೆ ಮುತ್ತಿಗೆ ಹಾಕಿ, ಆಂಗ್ಲರನ್ನು ಬಡಿದೋಡಿಸಿ, ಕೊಡಗನ್ನು ಸ್ವಾಧೀನಪಡಿಸಿಕೊಳ್ಳುವುದೆಂದು ನಿಶ್ಚಯಿಸಿದರು. ಬಿರುಸಿನ ಕಾರ್ಯಚಟುವಟಿಕೆಗಳು ಪ್ರಾರಂಭಗೊಂಡವು. ಆದರೆ ಈ ವಿಚಾರ ಸುಳ್ಯದಲ್ಲಿ ಆಂಗ್ಲರ ಅಧೀನದಲ್ಲಿ ಸುಬೇದಾರನಾಗಿದ್ದ ರಾಮಪ್ಪಯ್ಯನಿಗೆ ತಿಳಿದುಹೋಗುತ್ತದೆ. ಆತನು ತಕ್ಷಣ ತನ್ನ ಅಣ್ಣ ದಿವಾನ್ ಲಕ್ಷ್ಮೀನಾರಾಯಣನ ಮೂಲಕ ಕ್ಯಾಪ್ಟನ್ ಲೀಹಾರ್ಡಿಗೆ ಸುದ್ದಿ ಮುಟ್ಟಿಸುತ್ತಾನೆ. ಆದರೆ ದಿವಾನ ಲಕ್ಷ್ಮೀನಾರಯಣನ ವಿರೋಧಿಗಳು ಈ ಸುದ್ದಿ ಸುಳ್ಳೆಂದು ವಾದಿಸುತ್ತಾರೆ. ಲಕ್ಷ್ಮೀನಾರಾಯಣನು ಸ್ವಾತಂತ್ರ್ಯ ಹೋರಾಟಗಾರರೊಂದಿಗೆ ಸೇರಿಕೊಂಡು ಪಿತೂರಿ ನಡೆಸುತ್ತಿರುವುದಾಗಿ ಕ್ಯಾಪ್ಟನ್ ಲೀಹಾರ್ಡಿಗೆ ಚಾಡಿ ಹೇಳುತ್ತಾರೆ. ಇವರುಗಳ ಮಾತು ನಂಬಿದ ಲೀಹಾರ್ಡಿ, ಲಕ್ಷ್ಮೀನಾರಾಯಣನನ್ನು ದಿವಾನಗಿರಿಯಿಂದ ವಜಾಗೊಳಿಸುತ್ತಾನೆ.

ಆದರೆ ಕೊಡಗಿನ ಕೋಟೆಗೆ ಮುತ್ತಿಗೆ ಹಾಕುವ ಬಗ್ಗೆ ಕಲ್ಯಾಣ ಸ್ವಾಮಿ ಹೊರಡಿಸಿದ್ದ ನಿರೂಪದ ನಕಲನ್ನು ಸಂಗ್ರಹಿಸಿದ ಸುಬೇದಾರ್ ರಾಮಪ್ಪಯ್ಯ ಅದನ್ನು ಲೀಹಾರ್ಡಿಗೆ ತಲುಪಿಸುತ್ತಾನೆ. ಹೌಹಾರಿದ ಲೀಹಾರ್ಡಿ ತಕ್ಷಣ ಪ್ರಮುಖರೊಂದಿಗೆ ಆಪ್ತ ಸಮಾಲೋಚನೆ ನಡೆಸುತ್ತಾನೆ. ಘಟ್ಟದ ಕೆಳಗಿನ ಈ ಹೋರಾಟ ಕೊಡಗಿಗೆ ಹರಡದಂತೆ ಎಚ್ಚರ ವಹಿಸಬೇಕೆಂದು ನಿಶ್ಚಯವಾಗುತ್ತದೆ. ಸ್ವಾತಂತ್ರ್ಯ ದಾಹಿಗಳ ಹೋರಾಟವನ್ನು ಮೊಳಕೆಯಲ್ಲಿಯೇ ಚಿವುಟಬೇಕೆಂಬ ದೃಢ ನಿರ್ಧಾರಕ್ಕೆ ಬರುತ್ತಾರೆ.

ಈ ಸಂದರ್ಭದಲ್ಲಿ ಸ್ವಾತಂತ್ರ್ಯ ಸಂಗ್ರಾಮಿಗಳು ಘಟ್ಟದ ಕೆಳಗಿನ ತಳನೀರು ಕಣಿವೆಯಲ್ಲಿ ಬೀಡುಬಿಟ್ಟಿದ್ದರು. ಧೂತರ ಮೂಲಕ ಲೀಹಾರ್ಡಿ ವಿಷಯ ಸಂಗ್ರಹ ಮಾಡುತ್ತಾನೆ. ಅವರನ್ನು ಅಲ್ಲಿಯೇ ದಮನ ಮಾಡಬೇಕೆಂಬ ಉದ್ದೇಶದಿಂದ ಲೀಹಾರ್ಡಿಯು ಮಡಿಕೇರಿಯಲ್ಲಿದ್ದ ಹಾಗೂ ಆಂಗ್ಲರ ಅಧೀನದಲ್ಲಿದ್ದ ನೂರಾರು ಜಮ್ಮ ರೈತರನ್ನು ಆಂಗ್ಲರ 36ನೇ ರೆಜಿಮೆಂಟಿನ 510 ಜನರ ತುಕಡಿಯೊಂದನ್ನು ಕಳುಹಿಸುತ್ತಾನೆ. ಈ ತುಕಡಿಯ ನೇತೃತ್ವವನ್ನು ಬೋಪು ದಿವಾನನಿಗೆ ವಹಿಸಲಾಗುತ್ತದೆ. ಈ ತಂಡದಲ್ಲಿ ಸುಮಾರು 55 ಮಂದಿ ಮುಖ್ಯಸ್ಥರಿರುತ್ತಾರೆ. ಈ ಪೈಕಿ ಬೋಪಣ್ಣ, ಸುಬೇದಾರ್ ಬಿದ್ದಯ್ಯ, ಅಪ್ಪಚ್ಚು, ದೊಡ್ಡಯ್ಯ ಪ್ರಮುಖರು.

ಮಂಗಳೂರಿನಲ್ಲಿದ್ದ ಕಲ್ಯಾಣ ಸ್ವಾಮಿಗೆ ಧೂತರ ಮೂಲಕ ವಿಷಯ ತಿಳಿಯುತ್ತದೆ. ತಕ್ಷಣ ಹುಲಿಕೊಂದ ನಂಜಯ್ಯ, ಸೋಮಯ್ಯ, ಚೆಟ್ಟಿ ಕುಡಿಯ, ಕುರ್ತು ಕುಡಿಯರ ನೇತೃತ್ವದಲ್ಲಿ ಒಂದು ಸಾವಿರ ಮಂದಿ ಯೋಧರನ್ನು ತಳನೀರು ಕಣಿವೆಯಲ್ಲಿ ಬೀಡುಬಿಟ್ಟಿದ್ದ ಸ್ವಾತಂತ್ರ್ಯ ಯೋಧರ ಸಹಾಯಕ್ಕೆ ಕಳುಹಿಸಿಕೊಡುತ್ತಾರೆ. ಕಲ್ಯಾಣ ಸ್ವಾಮಿಯ ಸೇನೆಗೂ, ಆಂಗ್ಲರ ಸೇನೆಗೂ ಭೀಕರ ಯುದ್ಧ ನಡೆಯುತ್ತದೆ. ಆಂಗ್ಲರ ಬಳಿ ಅತ್ಯಾಧುನಿಕ ಶಸ್ತ್ರಾಸ್ತ್ರಗಳಿದ್ದವು. ಸ್ವಾತಂತ್ರ್ಯ ಯೋಧರು ಜೀವದ ಹಂಗು ತೊರೆದು ಹೋರಾಡಿದರು. ಆದರೆ ಆಂಗ್ಲರ ಕೋವಿ, ಫಿರಂಗಿಗಳ ಮುಂದೆ ನಮ್ಮ ಯೋಧರು ನಿತ್ರಾಣರಾದರು. ರಕ್ತದ ಕೋಡಿ ಹರಿಯಿತು. ವೀರಾಗ್ರಣಿ ದಳಪತಿಗಳಾದ ಹುಲಿಕೊಂದ ನಂಜಯ್ಯ, ಸೋಮಯ್ಯ, ಚೆಟ್ಟಿಕುಡಿಯ, ಕುರ್ತು ಕುಡಿಯ ಮುಂತಾದವರು ಸೆರೆಯಾಗುತ್ತಾರೆ. ಇವರುಗಳನ್ನು ಮಡಿಕೇರಿಯ ಸೆರೆಮನೆಯಲ್ಲಿಡಲಾಗುತ್ತದೆ.

ವಿಷಯ ತಿಳಿದ ಅಪ್ಪಯ್ಯ ಗೌಡರಿಗೆ ಆಘಾತವಾದಂತೆ ಆಗುತ್ತದೆ. ತಕ್ಷಣ ಕಾರ್ಯೋನ್ಮುಖರಾದ ಅಪ್ಪಯ್ಯಗೌಡರು ಆಪ್ತರೊಂದಿಗೆ ಸಮಾಲೋಚನೆ ಮಾಡುತ್ತಾರೆ. ದೀರ್ಘ ಸಮಾಲೋಚನೆಯ ನಂತರ, ಈ ಹಿಂದೆ ನಿರ್ಧಾರ ಮಾಡಿದ್ದ ಮಾರ್ಚ್ ತಾರೀಕು 5ರ ಬದಲಾಗಿ ಏಪ್ರಿಲ್ ತಾರೀಕು 6ರಂದು ಆಂಗ್ಲರ ಸ್ವಾಧೀನವಲ್ಲಿದ್ದ ಮಡಿಕೇರಿ ಕೋಟೆಗೆ ಮುತ್ತಿಗೆ ಹಾಕುವುದೆಂದು ತೀರ್ಮಾನ ಮಾಡುತ್ತಾರೆ. ಕ್ರೋಧದಿಂದ ಉರಿಯುತ್ತಿದ್ದ ಅಪ್ಪಯ್ಯಗೌಡರು "ತಾಯಿ ನಾಡಿಗಾಗಿ ಮಾಡು ಅಥವಾ ಮಡಿ" ಎಂಬ ನಿರ್ಧಾರಕ್ಕೆ ಬರುತ್ತಾರೆ. ಅಂತೆಯೇ ಮನೆಯಲ್ಲಿದ್ದ ಪತ್ನಿ, ಮಗಳು ಹಾಗೂ ಮನೆಯವರನ್ನು ಭೇಟಿಯಾಗುವ ನಿರ್ಧಾರ ಮಾಡುತ್ತಾರೆ. ಗುಪ್ತ ಮಾರ್ಗದ

ಮೂಲಕ ಮನೆಗೆ ತೆರಳುತ್ತಾರೆ. ತಾಯಿನಾಡಿನ ಉಳಿವಿಗಾಗಿ ತಾನು ಕೈಗೊಂಡಿರುವ ದೃಢ ನಿರ್ಧಾರವನ್ನು ತಿಳಿಸುತ್ತಾರೆ. ಮನೆಯಿಂದ ವೀರ ಉಡಿಗೆಯನ್ನು ತೊಟ್ಟು ಹೊರಟು ನಿಂತ ಅಪ್ಪಯ್ಯಗೌಡರು ತಮ್ಮ ಪತ್ನಿ ಮತ್ತು ಪುತ್ರಿಯನ್ನು ಕಣ್ತುಂಬಿ ದಿಟ್ಟಿಸಿ ನೋಡುತ್ತಾರೆ. ಪ್ರೇಮದ ಪುತ್ರಿಯನ್ನು ಬಾಚಿ ತಬ್ಬಿಕೊಳ್ಳುತ್ತಾರೆ. ಪತ್ನಿ ಗಂಡನ ಹಣೆಗೆ ವೀರ ತಿಲಕವನ್ನಿಡುತ್ತಾರೆ. "ವಿಜಯಶಾಲಿಯಾಗಿ ಹಿಂತಿರುಗಿ ಬನ್ನಿ" ಎಂದು ಹಾರೈಸುತ್ತಾರೆ.

ಮಡಿಕೇರಿ ತಾಲೋಕು ಬಲಮುರಿ ಗ್ರಾಮದ ಗುಡ್ಡೆಮನೆ ಸುಬ್ಬಪ್ಪ ಗೌಡರ ಪುತ್ರರಾದ ಅಪ್ಪಯ್ಯ ಗೌಡರು ವೀರ ನಡಿಗೆಯಿಂದ ಬಂದವರೆ ತಮ್ಮ ಕುದುರೆಯೇರಿ ಸ್ವಾತಂತ್ರ್ಯ ಸಂಗ್ರಾಮದ ಬಿಡಾರದತ್ತ ದೌಡಾಯಿಸುತ್ತಾರೆ. ತಾವುನಾಡು ಮತ್ತು ನಾಲ್ಕುನಾಡಿನ ಸ್ವಾತಂತ್ರ್ಯ ಸಂಗ್ರಾಮದ ಅಪಾರ ಸಂಖ್ಯೆಯ ಯೋಧರೊಂದಿಗೆ, ಮಡಿಕೇರಿಯ ಉತ್ತರ ಭಾಗದಲ್ಲಿ 4 ಮೈಲು ದೂರದಲ್ಲಿ ಬಿಡಾರ ಹೂಡುತ್ತಾರೆ. ಶಾಂತಳ್ಳಿಯ ಮಲ್ಲಯ್ಯನವರ ನೇತೃತ್ವದ ಸೇನೆ, ಅಪ್ಪಯ್ಯ ಗೌಡರ ಸೇನೆಯನ್ನು ಸೇರಿಕೊಳ್ಳುತ್ತದೆ. ಸ್ಥಳೀಯ ರಾಜದ್ರೋಹಿಗಳ ಮೂಲಕ ಲೀಹಾರ್ಡಿಗೆ ವಿಷಯ ತಿಳಿಯುತ್ತದೆ. ತಕ್ಷಣ ಕಾರ್ಯೋನ್ಮುಖನಾದ ಲೀಹಾರ್ಡಿಯು ಆಂಗ್ಲರ ಅಧೀನದಲ್ಲಿರುವ ಜಮ್ಮಾ ಹಿಡುವಳಿದಾರರನ್ನು ಸಂಘಟಿಸುತ್ತಾನೆ. ಪಾಂಡವಪುರದಲ್ಲಿ ಬೀಡುಬಿಟ್ಟಿದ್ದ 19ನೇ ರೆಜಿಮೆಂಟಿನ ಸೇನೆಯನ್ನು ತುರ್ತಾಗಿ ಕರೆಸಿಕೊಳ್ಳುತ್ತಾನೆ. ಆಧುನಿಕ ಶಸ್ತ್ರಾಸ್ತ್ರಗಳನ್ನು ಹೊಂದಿದ್ದ ಈ ಬ್ರಿಟೀಷ್ ಸೇನೆ, ಯಾವುದೇ ಮುನ್ಸೂಚನೆ ನೀಡದೆ ಏಕಾಏಕಿ ಅಪ್ಪಯ್ಯಗೌಡರ ಸೇನೆಯ ಮೇಲೆ ಎರಗುತ್ತದೆ.

ದಿಕ್ಕು ತೋಚದೆ ಗಾಬರಿಗೊಂಡ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಅಪ್ಪಯ್ಯಗೌಡರು, ನಾಲ್ಕುನಾಡಿನ ಉತ್ತು, ಶಾಂತಳ್ಳಿಯ ಮಲ್ಲಯ್ಯ ಮುಂತಾದವರು ರಣೋತ್ಸಹ ತುಂಬುತ್ತಿದ್ದರು. ಆದರೆ ಅನಿರೀಕ್ಷಿತ ಫಿರಂಗಿಗಳ ಹೊಡೆತಕ್ಕೆ ಕೊಡಗಿನ ಸೇನೆ ದಿಕ್ಕಾಪಾಲಾಗುತ್ತದೆ. ಅಪ್ಪಯ್ಯಗೌಡರು ಅಬ್ಬರಿಸುತ್ತಿದ್ದರು. ಜೀವದ ಹಂಗು ತೊರೆದು ಹೋರಾಡಿದರೂ ಕೂಡ ಸ್ವಾತಂತ್ರ್ಯ ಹೋರಾಟಗಾರರ ದೇಹದಿಂದ ಹರಿದ ರಕ್ತದ ಕೋಡಿ ಕಾವೇರಿ ನಾಡಿನ ನೆಲದಲ್ಲಿ ಇಂಗಿ ಹೋಯಿತು. ಅಪ್ಪಯ್ಯಗೌಡರು, ಪೆರಾಜೆಯ ಕೃಷ್ಣಯ್ಯ, ಚೆಟ್ಟಿ ಕುಡಿಯ, ಕುರ್ತು ಕುಡಿಯ, ಉತ್ತು ಮತ್ತು ಮಲ್ಲಯ್ಯನವರು ಅಲೆಮಾರಿ ಆಂಗ್ಲರ ಸೆರೆಯಾಳುಗಳಾದರು. ಎಲ್ಲೆಲ್ಲೂ ನೀರವ ಮೌನ.

ಮಂಗಳೂರಿನಲ್ಲಿ ರಾಜ್ಯಭಾರ ಮಾಡುತ್ತಿದ್ದ ಕಲ್ಯಾಣಸ್ವಾಮಿ ಹಾಗೂ ಅವರ ಪರಮಾಪ್ತ ಸಹಚರರಾದ ರಾಮಗೌಡ, ಅಣ್ಣಿಗೌಡ, ಬಂಗರಾಜ ಮುಂತಾದವರು ಸಮಾಲೋಚನೆಯಲ್ಲಿ ತೊಡಗಿದ್ದ ಸಮಯದಲ್ಲಿ, ಬ್ರಿಟೀಷ್ ಸೇನೆ ಅವರ ಮೇಲೆ ಅನಿರೀಕ್ಷಿತ ಧಾಳಿ ಮಾಡುತ್ತದೆ. ಕಲ್ಯಾಣ ಸ್ವಾಮಿ ಹಾಗೂ ಸಹಚರರು ಚೇತರಿಸಿಕೊಳ್ಳುವುದರೊಳಗೆ ಅನಾಹುತ ನಡೆದು ಹೋಗುತ್ತದೆ. ಯಾವುದೇ ಮುನ್ಸೂಚನೆ ಇಲ್ಲದೆ ಸುಸಜ್ಜಿತ ಫಿರಂಗಿ ಹಾಗೂ ಗುಂಡಿನ ಧಾಳಿಯಲ್ಲಿ ನಮ್ಮವರ ಮಾರಣ ಹೋಮವಾಗುತ್ತದೆ. ಸೆರೆ ಸಿಕ್ಕಿದ ಕಲ್ಯಾಣ ಸ್ವಾಮಿ, ರಾಮಗೌಡ, ಅಣ್ಣಿಗೌಡ, ಬಂಗರಾಜರನ್ನು ಮಂಗಳೂರಿನ ಬಿಕ್ರಾನಕಟ್ಟೆ ಎಂಬಲ್ಲಿ ದುರಾತ್ಮರಾದ ಆಂಗ್ಲರು ಅಮಾನುಷವಾಗಿ ಗಲ್ಲಿಗೇರಿಸುತ್ತಾರೆ.

ಗುಡ್ಡೆಮನೆ ಅಪ್ಪಯ್ಯಗೌಡರೊಂದಿಗೆ ಸೆರೆಯಾಳುಗಳಾದ ನಾಲ್ಕುನಾಡಿನ ಉತ್ತು, ಪೆರಾಜೆಯ ಪಾರುಪತ್ತೆಗಾರ ಕೃಷ್ಣಯ್ಯ, ಶಾಂತಳ್ಳಿಯ ಮಲ್ಲಯ್ಯ, ಚೆಟ್ಟಿಕುಡಿಯ, ಕುರ್ತುಕುಡಿಯ ಇವರುಗಳ ವಿರುದ್ಧ ಆಂಗ್ಲರ ನ್ಯಾಯಾಲಯದಲ್ಲಿ ವಿಚಾರಣೆ ಎಂಬ ನಾಟಕ ನಡೆಯುತ್ತದೆ. ಇವರುಗಳಿಗೆ ಜೀವಾವಧಿ ಶಿಕ್ಷೆ ವಿಧಿಸಿ ಸಿಂಗಾಪುರ ಮತ್ತು ಕಲ್ಲಿಕೋಟೆಯ ಸೆರೆಮನೆಗೆ ತಳ್ಳಲಾಗುತ್ತದೆ. ಅಪ್ಪಯ್ಯಗೌಡರ ಸಹೋದರ ಪಾರುಪತ್ತೆಗಾರ ತಮ್ಮಯ್ಯ ಗೌಡರನ್ನು ಕೂಡ ಸೆರೆಹಿಡಿದು ಸಿಂಗಾಪುರ ಸೆರೆಮನೆಗೆ ತಳ್ಳಲಾಗುತ್ತದೆ. (ಜೈಲಿಗೆ ಹೋದ ತಮ್ಮಯ್ಯ ಗೌಡರು ಏನಾದರೆಂಬ ವಿಚಾರವೇ ತಿಳಿಯುವುದಿಲ್ಲ.)

ಗುಡ್ಡೆಮನೆ ಅಪ್ಪಯ್ಯಗೌಡರ ವಿರುದ್ಧ ವಿಶೇಷ ವಿಚಾರಣೆ ನಡೆಯುತ್ತದೆ. ಅಪ್ಪಯ್ಯಗೌಡರನ್ನು ಜೀವಂತ ಉಳಿಸಿದರೆ, ಮತ್ತೆ ಬ್ರಿಟೀಷರ ವಿರುದ್ಧ ದಂಗೆ ಏಳದೆ ಬಿಡುವುದಿಲ್ಲ ಎಂಬ ಭಯ ಅವರನ್ನು ಕಾಡುತ್ತದೆ. ಆದ್ದರಿಂದ

ದುರಾತ್ಮರಾದ ಆಂಗ್ಲರ ನ್ಯಾಯಾಲಯದಲ್ಲಿ ಅಪ್ಪಯ್ಯಗೌಡರನ್ನು ಸಾರ್ವಜನಿಕರ ಎದುರಿನಲ್ಲಿ ಬಹಿರಂಗವಾಗಿ ಗಲ್ಲಿಗೇರಿಸಬೇಕೆಂದು ಬ್ರಿಟೀಷ್ ನ್ಯಾಯಾಲಯ ತೀರ್ಪು ನೀಡುತ್ತದೆ. 1857ರ ಅಕ್ಟೋಬರ್ 31ರಂದು ಬೆಳಿಗ್ಗೆ 10 ಗಂಟೆಗೆ ಮಡಿಕೇರಿ ಕೋಟೆಯ ಮುಂಭಾಗದಲ್ಲಿ ಬಹಿರಂಗವಾಗಿ ನೇಣಿಗೇರಿಸುವುದೆಂದು ನಿರ್ಧಾರವಾಗುತ್ತದೆ.

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸೆರೆಯಾದ ವೀರ ಪುಂಗವ ಅಪ್ಪಯ್ಯ ಗೌಡರನ್ನು ನೇಣು ಹಾಕುವ ಸಂದರ್ಭದಲ್ಲಿ ಅವರ ಪತ್ನಿ ಮದುವಣಗಿತ್ತಿಯ ಉಡುಪಿನಲ್ಲಿ ಹಾಜರಿರಬೇಕೆಂದು ದುರಾತ್ಮನಾದ ಕ್ಯಾಪ್ಟನ್ ಲೀಹಾರ್ಡಿ ಆದೇಶಿಸುತ್ತಾನೆ. ಜಿಲ್ಲೆಯ ಸಾರ್ವಜನಿಕರು, ರೈತರು, ಊರಿನ ಪಟೇಲರುಗಳು, ಇನ್ನುಳಿದ ಅಧಿಕಾರಿಗಳು ಕೂಡ ಹಾಜರಿರಬೇಕೆಂದು ಆದೇಶಿಸುತ್ತಾರೆ. ಅವರುಗಳ ಬಳಿಯಿದ್ದ ಆಯುಧಗಳನ್ನೆಲ್ಲಾ ತನ್ನ ಕಾಲ ಬಳಿ ಇರಿಸುವಂತೆ ದುರಾತ್ಮ ಲೀಹಾರ್ಡಿ ಆದೇಶಿಸುತ್ತಾನೆ. ಅಂದು ಬೆಳಗಿನ ಜಾವ ಸೂರ್ಯೋದಯಕ್ಕೆ ಮೊದಲೇ ವೀರಾಗ್ರಣಿ ಅಪ್ಪಯ್ಯಗೌಡರು ಸ್ನಾನ ಮಾಡಿ, ಶುಚಿರ್ಭೂತರಾಗಿ, ತಮ್ಮ ಇಷ್ಟ ದೇವತೆಗಳಿಗೆ ಪೂಜೆ ಸಲ್ಲಿಸುತ್ತಾರೆ. ವೀರ ಮರಣವನ್ನಪ್ಪಲು ಸಿದ್ಧರಾಗಿ ನಿಲ್ಲುತ್ತಾರೆ. ಆಂಗ್ಲ ಸಿಪಾಯಿಗಳು ಅಪ್ಪಯ್ಯಗೌಡರ ಬಳಿಗೆ ಆಗಮಿಸಿ, ಅವರ ಕೈಕಾಲುಗಳಿಗೆ ಹಾಗೂ ದೇಹಕ್ಕೆ ಸಂಕೋಲೆ ತೊಡಿಸುತ್ತರೆ. ಗಲ್ಲುಗಂಬದ ಹಾದಿಯ ಎರಡೂ ಬದಿಗಳಲ್ಲಿ ಕೊಡಗು ರಾಜ್ಯದ ಸಾರ್ವಜನಿಕರನ್ನು ಸಾಲಾಗಿ ನಿಲ್ಲಿಸಲಾಗಿರುತ್ತದೆ. ಸಿಪಾಯಿಗಳು ಅಪ್ಪಯ್ಯಗೌಡರ ಎಡ ಮತ್ತು ಬಲ ಬದಿಗಳಲ್ಲಿ ಸಂಕೋಲೆಯಿಂದ ಹಿಡಿದುಕೊಂಡಿರುತ್ತಾರೆ. ಅಪ್ಪಯ್ಯಗೌಡರು ವೀರ ಹೆಜ್ಜೆಗಳನ್ನಿಡುತ್ತ ಗಲ್ಲುಗಂಬದತ್ತ ಸಾಗುತ್ತಾರೆ.

ಗಲ್ಲುಗಂಬದ ಬಳಿ ವೀರಾಗ್ರಣಿ ಅಪ್ಪಯ್ಯಗೌಡರ ಎರಡೂ ಕೈಗಳನ್ನು ಹಿಂದಕ್ಕೆ ಕಟ್ಟಲಾಗುತ್ತದೆ. ಆಂಗ್ಲರ ನ್ಯಾಯಾಲಯದ ಆದೇಶದಂತೆ, ಅಪ್ಪಯ್ಯಗೌಡರನ್ನು ಯಾವ ಕಾರಣಕ್ಕಾಗಿ ನೇಣು ಹಾಕಲಾಗುತ್ತಿದೆ ಎಂಬುದನ್ನು ಓದಿ ಹೇಳಲಾಗುತ್ತದೆ. ನೇಣು ಹಾಕುವುದಕ್ಕೆ ಮೊದಲು ಅವರ ಕೊನೆಯ ಆಸೆ ಏನು ಎಂದು ಕೇಳಲಾಗುತ್ತದೆ.

ಕಣ್ಣುಗಳಲ್ಲಿ ಬೆಂಕಿಯ ಕಿಡಿಗಳನ್ನು ಕಾರುವಂತೆ, ವೀರ ತೇಜಸ್ಸಿನಿಂದ ಹೊಳೆಯುತ್ತಿದ್ದ ವೀರಾಗ್ರಣಿ ಅಪ್ಪಯ್ಯಗೌಡರು ಗಹಗಹಿಸಿ ನಗುತ್ತಾರೆ. "ಬೋನಿನಲ್ಲಿದ್ದರೂ ಸಿಂಹ ಬಯಸುವುದು ರಕ್ತ, ಮಾಂಸ ಖಂಡಗಳನ್ನಲ್ಲದೆ ಬೇರಾವುದೂ ಅಲ್ಲ. ನನ್ನನ್ನು ಸಂಕೋಲೆಗಳಿಂದ ಬಂಧಿಸಿದ ಮಾತ್ರಕ್ಕೆ ನನ್ನ ಚಿಂತನೆಗಳು ಬದಲಾಗುವುದಿಲ್ಲ. ಆಂಗ್ಲರ ಬಿಸಿ ರಕ್ತ ಹೀರಬೇಕೆಂಬುದೇ ನನ್ನ ಮಹದಾಸೆ. ರಣ ಹೇಡಿಗಳೇ ಸಂಕೋಲೆಗಳನ್ನು ಬಿಚ್ಚಿ ನನ್ನ ಮುಂದೆ ಬನ್ನಿ, ನಿಮ್ಮ ರುಂಡಗಳನ್ನು ಹೇಗೆ ಚೆಂಡಾಡುತ್ತೇನೆ ನೋಡುತ್ತಿರಿ. ಈ ಭರತ ಖಂಡ ಕಲಿಗಳ ಹೊನ್ನಾಡು, ಭಾರತ ಮಾತೆ ಬಂಜೆಯಲ್ಲ, ಆಂಗ್ಲರ ಹುಟ್ಟಡಗಿಸುವ ಸಹಸ್ರ ಸಹಸ್ರ ವೀರಾಗ್ರಣಿಗಳಿಗೆ ಆಕೆ ಜನ್ಮ ನೀಡುತ್ತಾಳೆ. ನಿಮ್ಮ ಅಧಃಪತನ ಶತಸಿದ್ಧ. "ಭಾರತ ಮಾತೆ ಬಂಧಮುಕ್ತಳಾಗಲೇಬೇಕು. ಅದೇ ನನ್ನ ಕೊನೆಯಾಸೆ, ದುರಾತ್ಮ ಆಂಗ್ಲರ ಸರ್ವನಾಶವೇ ನನ್ನ ಮಹದಾಸೆ" ಎಂದು ಅಪ್ಪಯ್ಯಗೌಡರು ಮುಗಿಲು ಬಿರಿಯುವಂತೆ ಘರ್ಜಿಸುತ್ತಾರೆ. ಅವರ ಕಂಗಳಲ್ಲಿ ರೋಷಾಗ್ನಿ ಉಕ್ಕಿ ಬರುತ್ತಿತ್ತು.

ಸಾವಿನ ಹೊಸ್ತಿಲಲ್ಲಿ ನಿಂತಿದ್ದರೂ ಕೂಡ ಅಂಜದೆ, ಅಳುಕದೆ ಘರ್ಜಿಸುತ್ತಿದ್ದ ಅಪ್ಪಯ್ಯಗೌಡರ ದೇಶಪ್ರೇಮಕ್ಕೆ ಆಂಗ್ಲರು ಕೂಡ ತಲೆದೂಗಿದರು. ನೆರೆದಿದ್ದ ಜನಸ್ತೋಮ ಉಘೇ ಉಘೇ ಎಂದಿತು. ನೋಡ ನೋಡುತ್ತಿದ್ದಂತೆ ವೀರಪುಂಗವ ಅಪ್ಪಯ್ಯಗೌಡರನ್ನು ಅಮಾನುಷವಾಗಿ ಗಲ್ಲಿಗೇರಿಸಲಾಯಿತು. ಎಲ್ಲೆಲ್ಲೂ ನೀರವ ಮೌನ. ಕೊಡಗು ರಾಜ್ಯದ ಅಸಹಾಯಕ ಜನರು ಅನಾಥ ಭಾವನೆಯಿಂದ ಮಮ್ಮಲ ಮರುಗಿದರು.

ಕೊಡಗು ಜಿಲ್ಲೆಯ ಸ್ಮಾರಕಗಳು



✍ ಮ. ಕ. ಚಂದ್ರಶೇಖರ ಮಲ್ಲೋರಹಟ್ಟಿ
ಎಂ.ಎ.,ಬಿ.ಎಲ್.,ಐ.ಎಸ್‌ಸಿ.,ಡಿಟಿಸಿ (ಜಡಿಆರ್ಪ್)
ಸಾಹಿತಿಗಳು – ಕೊಡ್ಲಿಪೇಟೆ
ಉಪನ್ಯಾಸಕರು, ಸರಸ್ವತಿ ಶಿಕ್ಷಕರ ತರಬೇತಿ ಕಾಲೇಜು, ಮಡಿಕೇರಿ ಕೊಡಗು

ಸ್ಮಾರಕಗಳು ಚಾರಿತ್ರಿಕ ಘಟನೆಗಳನ್ನು ಹೇಳುವ ಗ್ರಂಥಗಳಿದ್ದಂತೆ. ಅವು ದೇಶ, ಕಾಲಕ್ಕೆ ಸೀಮಿತವಾಗದೆ ಜಗತ್ತಿನಾದ್ಯಂತ ಕಾಲಾತೀತವಾಗಿ ಸ್ಥಾಪನೆ ಆಗಿವೆ. ಆಗುತ್ತಲೇ ಇವೆ. ಯಾವುದೋ ಘಟಿಸಿದ ಘಟನೆಯ ನೆನಪಿಗಾಗಿ, ಹಿರಿಯರ ಸ್ಮರಣೆಗಾಗಿ, ಸಾಧಕರ, ಹುತಾತ್ಮರ ಇರುವಿಕೆಯ ಕುರುಹಾಗಿ ಸ್ಮಾರಕಗಳನ್ನು ನಿರ್ಮಿಸುತ್ತಾರೆ. **"ಸ್ಮಾರಕಗಳು ನಮ್ಮ ಸಂಸ್ಕೃತಿಯ ಪ್ರತೀಕ, ಧಾರ್ಮಿಕ ಸಂಪತ್ತು, ರಾಷ್ಟ್ರದ ಆಸ್ತಿ".**

ಸ್ಮಾರಕಗಳನ್ನು ನಿರ್ಮಿಸುವುದರಿಂದ, ಇದ್ದ ಸ್ಮಾರಕಗಳನ್ನು ಹಾಳಾಗದಂತೆ ಉಳಿಸಿಕೊಳ್ಳುವುದರಿಂದ, ಹಾಳಾದವುಗಳನ್ನು ದುರಸ್ತಿ ಮಾಡುವುದರಿಂದ, ಅವುಗಳನ್ನು ನಾಮಾವಶೇಷವಾಗಲು ಬಿಡದೆ ಕಾಪಾಡುವುದರಿಂದ ಕಂಡರಿಯದ ಜ್ಞಾನ ನಿಧಿಯನ್ನು ನಮ್ಮ ಮುಂದಿನ ಪೀಳಿಗೆಗೆ ಕೊಡುಗೆಯಾಗಿ ನೀಡಿದಂತಾಗುತ್ತದೆ. ಕಲಾತ್ಮಕ, ಸುಂದರ ಸ್ಮಾರಕ ಕಟ್ಟಡದಿಂದ ನಮಗೆ ಕಟ್ಟಡದ ತಳವಿನ್ಯಾಸ ರೂಪಿಸುವಲ್ಲಿ ಬಳಸಿದ ತಾಂತ್ರಿಕತೆ, ರೇಖಾ ವಿನ್ಯಾಸ, ವಾಸ್ತು, ಬಳಸಿದ ಶಿಲೆ, ಕಟ್ಟಲು ಉಪಯೋಗಿಸಿದ ಕಲ್ಲು, ಗಾರೆ, ಇಟ್ಟಿಗೆ ಮತ್ತು ವಾಸ್ತು ಶಿಲ್ಪಿಯ ಕೈ ಚಳಕ, ನಿರ್ಮಾಣಕ್ಕೆ ನೆರವಾದ ವಿನ್ಯಾಸ ಇವೆಲ್ಲ ಚಾರಿತ್ರಿಕ ಅಧ್ಯಯನಕ್ಕೆ ನೆರವಾಗುತ್ತವೆ. ನೋಡುಗರ ಮನವನ್ನು ಆಕರ್ಷಿಸುವುದರೊಂದಿಗೆ ಚಾರಿತ್ರಿಕ ನಿಧಿಯನ್ನು ನಮ್ಮ ವಾರಸುದಾರರಿಗೆ ಉಡುಗೊರೆಯಾಗಿ ಕೊಟ್ಟಂತಾಗುತ್ತದೆ. ಹೊಸ ಪೀಳಿಗೆಗೆ ನೆನಪು ಮಾಡಿಕೊಡಲೊಂದು ಸ್ಮಾರಕ ಮತ್ತು ವೈಜ್ಞಾನಿಕ, ಐತಿಹಾಸಿಕ ಸಂಪತ್ತನ್ನು ಮುಂದಿನ ಪರಂಪರೆಗೆ ಉಳಿಸಿಕೊಟ್ಟಂತಾಗುತ್ತದೆ.

"ಶ್ರದ್ಧೆಯಿಂದ, ಉತ್ಸಾಹ, ಹುರುಪಿನಿಂದ ಸ್ಮಾರಕಗಳನ್ನು ನಿರ್ಮಿಸುತ್ತಾರೆ. ಉತ್ಸಾಹ ಹುರುಪು ನಾಲ್ಕು ಕಾಲ ಇದ್ದದ್ದು ಬರುಬರುತ್ತಾ ಮಾಸಲು ತೊಡಗುತ್ತದೆ. ಹತ್ತಾರು ವರ್ಷಗಳಲ್ಲಿ ಮಾಸಿಯೇ ಹೋಗುತ್ತದೆ. ಸ್ಮಾರಕಗಳನ್ನು ನಿರ್ಮಾಣ ಮಾಡಿ ಕೈ ತೊಳೆದುಕೊಂಡುಬಿಟ್ಟರೆ ಅವು ಜ್ಞಾಪಕಾರ್ಥವಾಗಿ ಇಟ್ಟಿರುವ ವಸ್ತು ಅಥವಾ ಪ್ರತಿಮೆ ಇಲ್ಲವೇ ಕಟ್ಟಡ ಉದ್ಯಾನವನ ಅಷ್ಟೇ ಆಗಿ ನಿರ್ಜೀವವಾಗಿ ಬಿಡುತ್ತವೆ. ಹಾಗೆ ಆಗಲು ಬಿಡಬಾರದು". ಸ್ಮಾರಕ ಇರುವ ಪ್ರದೇಶದಲ್ಲಿ ನಿತ್ಯವೂ ಜನ ಬಂದು ಹೋಗುವಂತೆ ಇರಬೇಕು. ಭಜನೆಗಳು, ಚರ್ಚೆಗಳು, ಸಾಂಸ್ಕೃತಿಕ ಚಟುವಟಿಕೆಗಳು ನಡೆಯುತ್ತಿರಬೇಕು. ಜಯಂತಿಗೋ, ವರ್ಧಂತಿಗೋ, ಪುಣ್ಯತಿಥಿಗೋ ಬಂದು ಒಂದು ಹೂವಿನಹಾರ ಹಾಕಿ ಹೋಗುವುದರ ಜೊತೆಗೆ ಆ ಸ್ಮಾರಕದ ಸ್ಥಿತ್ಯಂತರವನ್ನು, ನೈಜತೆಯನ್ನು ಮುಂದಿನ ಪೀಳಿಗೆಗೆ ಪರಿಚಯ ಮಾಡಿಕೊಡುವ ಕಾರ್ಯಕ್ರಮಗಳು ನಡೆಯುತ್ತಿರಬೇಕು. ಇದರಿಂದ ಆ ಸ್ಥಳದ ಮಹತ್ವ ಹೆಚ್ಚುವುದಲ್ಲದೆ, ಸ್ಮಾರಕ ನಿರ್ಮಿಸಿದ್ದಕ್ಕೆ ಸಾರ್ಥಕವೂ ಆಗುತ್ತದೆ.

ಕೊಡಗು ಜಿಲ್ಲೆಯ ಉದ್ದಗಲಕ್ಕೂ ವಿವಿಧ ರೀತಿಯ ಸ್ಮಾರಕಗಳು ಕಂಡು ಬರುತ್ತವೆ. ಭವನಗಳು, ಅರಮನೆಗಳು, ವೀರಗಲ್ಲುಗಳು, ಮಾಸ್ತಿಕಲ್ಲುಗಳು, ನಿಸಿಧಿ ಕಲ್ಲುಗಳು, ಪುತ್ಥಳಿಗಳು, ಯುದ್ಧ ಸ್ಮಾರಕಗಳು, ಶಾಸನಗಳು ಹೀಗೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಜಿಲ್ಲೆಯ ಸ್ಮಾರಕಗಳಲ್ಲಿ ಕೆಲವನ್ನು ಇಲ್ಲಿ ನೋಡೋಣ.

ಮಡಿಕೇರಿ ಕೋಟೆ ಮತ್ತು ಅರಮನೆ :– ಭಾರತೀಯ ಪುರಾತತ್ವ ಇಲಾಖೆಯ ಉಸ್ತುವಾರಿಯಲ್ಲಿರುವ

ಮಡಿಕೇರಿಯ ಕೋಟೆಯನ್ನು ಹಾಲೇರಿ ರಾಜವಂಶದ ಮುದ್ದುರಾಜನು ನಿರ್ಮಿಸಿದನು. ತನ್ನ ಹೆಸರಿನಲ್ಲೇ ನಿರ್ಮಿಸಿದ ಊರೇ ಮುದ್ದುರಾಜಕೇರಿ ಈಗಿನ ಮಡಿಕೇರಿ. 1621ರಲ್ಲಿ ಕೋಟೆ ಮತ್ತು ಮಣ್ಣಿನ ಅರಮನೆಯನ್ನು ಮಡಿಕೇರಿಯ ಮಧ್ಯದ ಎತ್ತರವಾದ ದಿಬ್ಬದ ಮೇಲೆ ಈಗಿರುವ ಜಾಗದಲ್ಲಿಯೇ ನಿರ್ಮಿಸಿದನು.

1781ರಲ್ಲಿ ಕೊಡಗಿನ ರಾಜನಾಗಿದ್ದ ಮುದ್ದುರಾಜನ ಮರಿಮಗ, ಒಂದನೇ ಲಿಂಗರಾಜನ ಮಗ ದೊಡ್ಡವೀರರಾಜೇಂದ್ರ ಒಡೆಯನು 1800ರಲ್ಲಿ ತನ್ನ ರಾಣಿ ಮಹದೇವಮ್ಮಾಜಿಯ ಹೆಸರಿನಲ್ಲಿ "ಮಹದೇವಪೇಟೆ"ಯನ್ನು ಮಡಿಕೇರಿಯಲ್ಲಿ ನಿರ್ಮಿಸಿದನು. ದೊಡ್ಡವೀರರಾಜೇಂದ್ರ ಒಡೆಯನ ನಂತರ ಆಳಿದ ಆತನ ತಮ್ಮ ಎರಡನೇ ಲಿಂಗರಾಜೇಂದ್ರ ಒಡೆಯ 1812ರಲ್ಲಿ ಅರಮನೆಯನ್ನು ಇಟ್ಟಿಗೆ ಗಾರೆಯಿಂದ ಪುನರ್ ನಿರ್ಮಿಸಿದನು.

ಕೋಟೆಯೊಳಗೆ ಜೀವಂತ ಆನೆಯಂತೆ ಕಾಣುವ ಆನೆಯ ಎರಡು ಪ್ರತಿಮೂರ್ತಿಗಳಿವೆ. ಈಡುಗಾರನಾಗಿದ್ದ ಎರಡನೇ ಲಿಂಗರಾಜೇಂದ್ರ ಒಡೆಯರ ಮುದ್ದಿನ ಎರಡು ಆನೆಗಳ ಸ್ಮರಣೆಗಾಗಿ ಇಟ್ಟಿಗೆ ಗಾರೆಯಿಂದ ನಿರ್ಮಿಸಲಾಗಿದ್ದು, ಇಂದು ನಿಜವಾದ ಆನೆಗಳಂತೆಯೇ ಸ್ಮಾರಕಗಳಾಗಿ ನಿಂತಿವೆ.

1834ರವರೆಗೆ ರಾಜರ ಆಳ್ವಿಕೆಯಲ್ಲಿದ್ದ ಕೋಟೆ ಮತ್ತು ಅರಮನೆ ಭಾರತ ದೇಶ ಸ್ವಾತಂತ್ರ್ಯ ಸಿಗುವವರೆವಿಗೂ ಆಂಗ್ಲರ ಆಳ್ವಿಕೆಗೆ ಒಳಪಟ್ಟಿತ್ತು. ಈಗ ಕೋಟೆ ಮತ್ತು ಅರಮನೆಯನ್ನು ಸ್ಮಾರಕಗಳು ಎಂದು ಘೋಷಿಸಿ ರಕ್ಷಿಸಲಾಗುತ್ತಿದೆ.

ನಾಲ್ಕುನಾಡು ಅರಮನೆ :– ದೊಡ್ಡ ವೀರರಾಜೇಂದ್ರ ಒಡೆಯ 1782ರಲ್ಲಿ ನಾಲ್ಕುನಾಡು ಅರಮನೆಯನ್ನು ಕಟ್ಟಿಸಿದನು. ಉತ್ತಮ ವಾಸ್ತು ಶೈಲಿ ಹೊಂದಿರುವ ಅರಮನೆಯನ್ನು ಇಟ್ಟಿಗೆ ಗಾರೆಯಿಂದ ನಿರ್ಮಿಸಿದ್ದಾರೆ. ಹಜಾರದ ಗೋಡೆಯ ಮೇಲೆ ಅಂದಿನ ಕಾಲದ ವರ್ಣಚಿತ್ರಗಳಿವೆ. ಕಂಬ ಮತ್ತು ಬೋದಗೆಯ ಮೇಲೆ ಉಬ್ಬುಕೆತ್ತನೆಯ ಶಿಲ್ಪಗಳಿವೆ. ಅರಮನೆಯ ಮುಂಭಾಗದಲ್ಲಿ ರಾಜರ ವಿವಾಹಕ್ಕೆಂದೇ ನಿರ್ಮಿಸಿದ ಸುಂದರವಾದ "ವಿವಾಹ ಮಂಟಪ"ವಿದೆ. ಅರಮನೆಯ ಹಿನ್ನೆಲೆಯಲ್ಲಿ ರಮಣೀಯವಾದ ತಡಿಯಂಡಮೋಳ್ ಬೆಟ್ಟದ ಸಾಲು ಗೋಚರಿಸುತ್ತದೆ. ಮಡಿಕೇರಿಯಿಂದ 28 ಕಿಲೋಮೀಟರ್ ದೂರವಿರುವ ಅರಮನೆ ಪ್ರಾಚ್ಯವಸ್ತು ಇಲಾಖೆಯ ಸುಪರ್ದಿಯಲ್ಲಿದ್ದು ಅತ್ಯಮೂಲ್ಯ ಸ್ಮಾರಕವಾಗಿದೆ.

ಓಂಕಾರೇಶ್ವರ ದೇವಾಲಯ :– ಧಾರ್ಮಿಕ ದತ್ತಿ ಇಲಾಖೆಯಡಿ ಇರುವ ಓಂಕಾರೇಶ್ವರ ದೇವಾಲಯ ಮಡಿಕೇರಿ ನಗರದ ಮಧ್ಯ ಭಾಗದಲ್ಲಿದೆ. ಗಾಥಿಕ್ ಮತ್ತು ಇಂಡೋಸಾರ್ಸನಿಕ್ ಶೈಲಿಯಲ್ಲಿ ನಿರ್ಮಿಸಲಾಗಿದೆ. ಇದರ ನಿರ್ಮಾಣದ ಹಿಂದೆ ದೊಡ್ಡ ಕಥೆಯೇ ಇದೆ. ಎರಡನೇ ಲಿಂಗರಾಜೇಂದ್ರ ಒಡೆಯನು 1817ರಲ್ಲಿ ದೇವಸ್ಥಾನವನ್ನು ಕಟ್ಟಿಸಿದನು. ಕಾಶಿಯಿಂದ ತರಿಸಿದ ಓಂಕಾರೇಶ್ವರ ಲಿಂಗವನ್ನು ಇಲ್ಲಿ ಪ್ರತಿಷ್ಠಾಪಿಸಿದ್ದಾನೆ. ದೇವಾಲಯದ ಮುಂಭಾಗದಲ್ಲಿ ದೊಡ್ಡ ಪುಷ್ಕರಿಣಿಯಿದೆ. ದೇವಾಲಯದ ಬಾಗಿಲು ಪಟ್ಟಿಯ ಮೇಲೆ, ಕಿಟಕಿಯ ಪಂಚ ಲೋಹದ ಸರಳುಗಳ ಮೇಲೆ "ಲಿಂ" ಎನ್ನುವ ಲಿಂಗರಾಜರ ರಾಜಮುದ್ರೆಯಿದೆ. ದೇವಸ್ಥಾನದ ಮೇಲ್ಛಾವಣಿಯಲ್ಲಿ ನಾಲ್ಕು ಮೂಲೆಗೂ ನಾಲ್ಕು ಗೋಪುರಗಳಿದ್ದು, ಮಧ್ಯಭಾಗದಲ್ಲಿ ಗೋಳಾಕಾರದ ಗುಮ್ಮಟವಿದೆ. ಪ್ರತಿಯೊಂದರ ಮೇಲೂ ಪಂಚ ಲೋಹದ ಹೊಳೆಯುವ ಕಳಸಗಳಿವೆ. ಘಟನೆಯನ್ನಾಧರಿಸಿ ನಿರ್ಮಿಸಿದ ಓಂಕಾರೇಶ್ವರ ದೇವಾಲಯ ಇಂದು ಒಂದು ಸ್ಮಾರಕವಾಗಿ ಕಂಗೊಳಿಸುತ್ತಿದೆ.

ಮಾದಾಪುರದ ರಾಜರ ಗದ್ದುಗೆ :– ದೊಡ್ಡವೀರರಾಜೇಂದ್ರ ಒಡೆಯ ಮತ್ತು ಎರಡನೇ ಲಿಂಗರಾಜೇಂದ್ರ ಒಡೆಯರ ತಂದೆ ಒಂದನೇ ಲಿಂಗರಾಜ ಒಡೆಯರ ಸಮಾಧಿ ಸ್ಮಾರಕವು ಮಾದಾಪುರದ ಹೊಳೆಯ ದಂಡೆಯ

ಮೇಲಿದೆ. ಮಡಿಕೇರಿಯಿಂದ ಸೋಮವಾರಪೇಟೆಗೆ ಹೋಗುವ ಮಾರ್ಗದಲ್ಲಿ ಮಾದಾಪುರ ಹೊಳೆಯ ಬಲಭಾಗದಲ್ಲಿ ಸ್ಮಾರಕ ಗೋಚರಿಸುತ್ತದೆ. ಇದು ಕೂಡಾ ಓಂಕಾರೇಶ್ವರ ದೇವಾಲಯ ಮತ್ತು ಮಡಿಕೇರಿ ರಾಜರ ಗದ್ದುಗೆಗಳ ವಿನ್ಯಾಸದಲ್ಲೇ ಇದೆ. ಒಂದನೇ ಲಿಂಗರಾಜರು ದಸರಾ ಸಮಯದಲ್ಲಿ ಜಂಬೂ ಸವಾರಿಯಲ್ಲಿ ಸಾಗುತ್ತಿದ್ದರಂತೆ. ಹಾಗಾಗಿ ಈ ಭಾಗದ ಊರಿಗೆ ಜಂಬೂರು ಎನ್ನುವ ಹೆಸರೂ ಇದೆ. ತನ್ನ ರಾಣಿ ಮಹಾದೇವಮ್ಮಾಜಿ ಹೆಸರಿನಲ್ಲಿ ಅವರ ಜ್ಞಾಪಕಾರ್ಥವಾಗಿ "ಮಹದೇವಪುರ" ನಿರ್ಮಿಸಿದ್ದು ಕಾಲಾನಂತರದಲ್ಲಿ "ಮಾದಾಪುರ" ಎಂದು ಮಾರ್ಪಾಟಾಗಿದೆ. ಮಾದಾಪುರದಲ್ಲಿ ಕೊಡಗನ್ನಾಳಿದ ಇಕ್ಕೇರಿ ರಾಜರ ಪೂರ್ವಿಕರ ಸಮಾಧಿ ಸ್ಮಾರಕಗಳು ಇವೆ.

ಮಡಿಕೇರಿ ಗದ್ದುಗೆಗಳು :- ಮಡಿಕೇರಿ ಮಹದೇವಪೇಟೆ ಉತ್ತರದ ಎತ್ತರವಾದ ದಿಣ್ಣೆಯ ಮೇಲೆ ಕೊಡಗನ್ನಾಳಿದ ದೊಡ್ಡವೀರರಾಜೇಂದ್ರ ಒಡೆಯ ಮತ್ತು ಆತನ ಪತ್ನಿ ಹಾಗೂ ಎರಡನೇ ಲಿಂಗರಾಜೇಂದ್ರ ಒಡೆಯ ಮತ್ತು ಆತನ ಪತ್ನಿಯರ ಸಮಾಧಿ ಸ್ಮಾರಕಗಳಿವೆ. ಇವಕ್ಕೆ ಗದ್ದುಗೆಗಳೆಂತಲೂ ಕರೆಯುತ್ತಾರೆ. ಸಾಮಾನ್ಯವಾಗಿ ವೀರಶೈವರ ಸಮಾಧಿಗಳಿಗೆ ಗದ್ದುಗೆ ಎಂದೇ ಕರೆಯುತ್ತಾರೆ. ದೊಡ್ಡ ವೀರರಾಜೇಂದ್ರ ಕಟ್ಟಿಸುತ್ತಿದ್ದ ಗದ್ದುಗೆಯನ್ನು ಆತ ಮರಣಿಸಿದ ನಂತರ ಆತನ ಸೋದರ ಲಿಂಗರಾಜೇಂದ್ರ ಪೂರ್ಣಗೊಳಿಸಿದ. ಎರಡನೇ ಲಿಂಗರಾಜೇಂದ್ರ ಒಡೆಯನ ಗದ್ದುಗೆಯನ್ನು ಆತನ ಮಗ ಚಿಕ್ಕವೀರರಾಜೇಂದ್ರ ಒಡೆಯನು 1820ರಲ್ಲಿ ಪೂರ್ಣಗೊಳಿಸಿದ.

ರಾಜರ ಗದ್ದುಗೆಯ ಪಕ್ಕದಲ್ಲೇ ರಾಜಗುರು ರುದ್ರಪ್ಪ ಸ್ವಾಮಿಗಳ ಗದ್ದುಗೆ ಇದೆ. ಈ ಗದ್ದುಗೆಗಳನ್ನು ಓಂಕಾರೇಶ್ವರ ದೇವಾಲಯದ ಶೈಲಿಯಲ್ಲಿಯೇ ನಿರ್ಮಿಸಲಾಗಿದೆ. ಪಂಚಲೋಹದ ಕಿಟಕಿ ಸರಳಿನಲ್ಲಿ "ಲಿಂ" ಎಂಬ ರಾಜರ ಮುದ್ರೆ ಇದೆ. ಈ ವಠಾರದ ಒಂದು ಬದಿಯಲ್ಲಿ ಸೇನಾ ತುಕಡಿಗಳ ಮುಖ್ಯಸ್ಥರಾಗಿದ್ದ ಬಿದ್ದಂಡ ಬೋಪು ಮತ್ತವನ ಮಗ ಸೋಮಯ್ಯನ ಸಮಾಧಿಗಳಿವೆ. ಗದ್ದುಗೆಗಳನ್ನು ಪ್ರಾಚ್ಯವಸ್ತು ಮತ್ತು ಸಂಶೋಧನಾ ಇಲಾಖೆಯ ಸ್ಮಾರಕಗಳೆಂದು ಘೋಷಿಸಲಾಗಿದ್ದು, ಹಾನಿ ಮಾಡುವವರಿಗೆ ಶಿಕ್ಷೆ ವಿಧಿಸಲಾಗುವುದು ಎಂದು ಎಚ್ಚರಿಸಲಾಗಿದೆ.

ರಾಜಾಸೀಟು :- ಮಡಿಕೇರಿಯಲ್ಲಿ ರಾಜರು ನಿರ್ಮಿಸಿದ ಮಂಟಪವಿದೆ. ಪ್ರಕೃತಿ ಆರಾಧಕರಾಗಿದ್ದ ಕೊಡಗಿನ ಒಡೆಯರು ಸಂಜೆಯ ಬಿಡುವಿನ ವೇಳೆಯಲ್ಲಿ ಅಡ್ಡಾಡಿಕೊಂಡು ಬಂದು ಈ ಮಂಟಪದಲ್ಲಿ ಆಸೀನರಾಗಿ ನಿಸರ್ಗ ದೃಶ್ಯವನ್ನು ಸವಿಯುತ್ತಿದ್ದ ಸ್ಥಳವಿದು. ಇಲ್ಲಿ ಕುಳಿತು ನೋಡಿದರೆ ಬಹು ದೂರದವರೆಗೆ ಕಾಣುವ ಹಸಿರ ರಾಶಿ, ಪರ್ವತ ಶ್ರೇಣಿ, ಗದ್ದೆ ಬಯಲು, ಕಣಿವೆ, ಬೆಟ್ಟಗಳ ನಡುವೆ ಮಂಜು ಮುಸುಕಿದ ಮನೋಹರ ದೃಶ್ಯ, ಆಕಾಶದಲ್ಲಿ ಹಾರಾಡುವ ಬಿಳಿ ಮೋಡಗಳು ವಿಹಾರಕ್ಕೆ ಬಂದಿವೆಯೋ ಎಂಬಂತೆ ಕಂದರಗಳಿಗಿಳಿದು ಉಂಟು ಮಾಡುವ ಅದ್ಭುತವನ್ನು ನೋಡುವ ಸ್ಥಳವೇ ರಾಜಾಸೀಟು. ರಾಜ ಪರಿವಾರದವರು ಬಂದು ಇಲ್ಲಿ ಕುಳಿತು ಸೂರ್ಯಾಸ್ತ ವೀಕ್ಷಿಸುತ್ತಿದ್ದ ಪುಟ್ಟ ಮಂಟಪ. ಈಗ ಇದೊಂದು ಸ್ಮಾರಕವಾಗಿ ಉಳಿದಿದ್ದು ಕೊಡಗು ಜಿಲ್ಲೆಯನ್ನು ಪ್ರತಿನಿಧಿಸುವ ಗುರುತಾಗಿದೆ (ಎಂಬ್ಲಾಮ್). ತೋಟಗಾರಿಕಾ ಇಲಾಖೆಯವರು ಮಂಟಪದ ಸುತ್ತ ಸುಂದರವಾದ ಉದ್ಯಾನವನ ನಿರ್ಮಿಸಿ ನೀರಿನ ಕಾರಂಜಿ ಅಳವಡಿಸಿದ್ದಾರೆ. ದಿನವೂ ಸಾವಿರಾರು ಸಂಖ್ಯೆಯಲ್ಲಿ ಪ್ರವಾಸಿಗರು ಬಂದು ಹೋಗುತ್ತಾರೆ.

ವೀರಗಲ್ಲುಗಳು :- ಕನ್ನಡ ನಾಡಿನ ಜನ ಮೊದಲಿನಿಂದಲೂ ಶೂರರಾಗಿದ್ದರು ಎಂಬುದಕ್ಕೆ ನಾಡಿನ ಇತಿಹಾಸ ಸಾಕ್ಷಿಯಾಗಿದೆ. ದಕ್ಷಿಣ ಭಾರತವನ್ನು ತಮ್ಮ ಏಕಮೇವ ಆಡಳಿತದ ಕೆಳಗೆ ತಂದ ಕೀರ್ತಿ ಕನ್ನಡ ನಾಡಿನ ಹಲವು ರಾಜರದ್ದಾಗಿದೆ. ಇಂಥ ಸಾಧನೆಗೆ ಬೆಂಗಾವಲಾಗಿ ನಿಂತ ಜನರ, ಸೈನಿಕರ ಪರಾಕ್ರಮವೂ ಕಾರಣವಿರಬೇಕು. ಅಂಥಹ ಪರಾಕ್ರಮಶಾಲಿಗಳು ವೀರರು ಮಾಡಿದ ತ್ಯಾಗ ಬಲಿದಾನದ ನೆನಪಿಗಾಗಿಯೇ

ಅನೇಕ ಸ್ಮಾರಕಗಳು ನಿರ್ಮಾಣವಾದವು. ಅವುಗಳಲ್ಲಿ ವೀರಗಲ್ಲುಗಳು, ಮಾಸ್ತಿ ಕಲ್ಲುಗಳು ಪ್ರಮುಖವಾದವು ಗಳಾಗಿವೆ. ಧರ್ಮಕ್ಕಾಗಿ (ಧರ್ಮ ಎಂದರೆ ಜಾತಿಯಲ್ಲ), ಸತ್ಯಕ್ಕಾಗಿ, ನ್ಯಾಯಕ್ಕಾಗಿ, ದೇಹತ್ಯಾಗ ಮಾಡಿದ ವೀರರ ಸ್ಮಾರಕಗಳು ಕೊಡಗಿನಾದ್ಯಂತ ಕಂಡು ಬರುತ್ತವೆ. ಯೋಧರು ರಣರಂಗದಲ್ಲಿ ವೀರ ಮರಣಹೊಂದಿದರೆ, ಕ್ರೂರ ಮೃಗಗಳೊಡನೆ ಹೋರಾಡಿ ಸತ್ತರೆ, ಪ್ರಭುಗಳನ್ನು ವೈರಿಗಳಿಂದ ರಕ್ಷಿಸಲು ಕಾದಾಡಿ ಪ್ರಾಣ ತೆತ್ತರೆ, ತಮ್ಮ ರಾಜ್ಯದ ಹೆಣ್ಣು ಮಕ್ಕಳನ್ನು ಅಪಹರಿಸಿಕೊಂಡು ಹೋದಾಗ, ಗೋ ಸಂಪತ್ತನ್ನು ಅಟ್ಟಿಸಿಕೊಂಡು ಕದ್ದೊಯ್ಯುವಾಗ ತಡೆದು ಹೋರಾಡುವಾಗ ಮರಣವನ್ನಪ್ಪಿದ ವೀರ ಸೈನಿಕರ ನೆನಪಿಗಾಗಿ ಕೆತ್ತಿಸಿ ನಿಲ್ಲಿಸಿದ ಸ್ಮಾರಕಗಳೇ ಈ ವೀರಗಲ್ಲುಗಳು.

ದಪ್ಪವಿರುವ ಚಪ್ಪಟೆಯಾದ ಗಟ್ಟಿ ಕಲ್ಲಿನ ಒಂದು ಬದಿಯ ಮುಖದಲ್ಲಿ ಮೂರು ಭಾಗ ಮಾಡಿ ಕೆಳಭಾಗದ ಪಟ್ಟಿಕೆಯಲ್ಲಿ ಯಾವ ಉದ್ದೇಶಕ್ಕಾಗಿ ವೈರಿಗಳೊಡನೆ ಕಾದಾಡಲಾಗುತ್ತದೆ ಎಂಬ ದೃಶ್ಯವನ್ನು, ಮಧ್ಯ ಭಾಗದ ಪಟ್ಟಿಕೆಯಲ್ಲಿ ಮರಣಿಸಿದ ವೀರನನ್ನು ಗಂಧರ್ವ ಕನ್ಯೆಯರು ಪಲ್ಲಕ್ಕಿಯಲ್ಲಿ ಕೂರಿಸಿಕೊಂಡು ಕೈಲಾಸಕ್ಕೆ ಕರೆದೊಯ್ಯುವ ದೃಶ್ಯವನ್ನು, ಮೇಲ್ಭಾಗದ ಪಟ್ಟಿಕೆಯಲ್ಲಿ ಸ್ವರ್ಗ ಸೇರಿಕೊಂಡ ವೀರನು ಶಿವಲಿಂಗ ಮತ್ತು ನಂದಿಯನ್ನು ಪೂಜಿಸುವ ದೃಶ್ಯದ ಉಬ್ಬು ಶಿಲ್ಪ ಕೆತ್ತಿರುತ್ತಾರೆ. ಇಂಥ ವೀರರ ಸ್ಮಾರಕಗಳು ಕೊಡಗಿನ ಉತ್ತರದ ಕೊಡ್ಲಿಪೇಟೆಯಿಂದ ದಕ್ಷಿಣದ ಕುಟ್ಟದವರೆಗೂ, ಪೂರ್ವದ ಹೆಬ್ಬಾಲೆಯಿಂದ ಪಶ್ಚಿಮದ ಸಂಪಾಜೆ ಅಂಚಿನವರೆಗೂ ಕಾಣಸಿಗುತ್ತವೆ. ಒಡೆಯರ ಕಾಲದ ವೀರಗಲ್ಲುಗಳು ಹೇರಳವಾಗಿವೆ. ಮಡಿಕೇರಿ ಕೋಟೆಯ ವಸ್ತು ಸಂಗ್ರಹಾಲಯ ಆವರಣದಲ್ಲಿ ಅನೇಕ ವೀರಗಲ್ಲುಗಳನ್ನು ಕಾಣಬಹುದು.

ಮಾಸ್ತಿಕಲ್ಲುಗಳು :- ಪುರುಷರಂತೆ ಸ್ತ್ರೀಯರೂ ಸಮಯ ಬಂದಾಗ ಹೋರಾಡಲು ಹಿಂಜರಿಯುತ್ತಿರಲಿಲ್ಲ ಎನ್ನುವುದನ್ನು ಚರಿತ್ರೆ ನಮಗೆ ತೋರಿಸಿದೆ. ಪ್ರಾಣ ಹೋದರೂ ಸರಿ ಅಳುಕದೆ ಹೋರಾಡಿದ ವೀರ ರಮಣಿಯರು ನಮ್ಮಲ್ಲಿದ್ದರು. ಯುದ್ಧಕ್ಕೆ ಹೋದ ರಾಜ ರಣರಂಗದಲ್ಲಿ ಮೃತನಾದ ವಾರ್ತೆ ಕೇಳಿದ ರಾಣಿಯರು ಗಂಡನಿಲ್ಲದೆ ಬದುಕುವುದು ವ್ಯರ್ಥ ಎಂದು ಭಾವಿಸಿ ಸಹಗಮನ ಪದ್ಧತಿಯನ್ನು ಅನುಸರಿಸುತ್ತಿದ್ದರು. ವೀರಮರಣವಪ್ಪಿದ ಪತಿಯನ್ನು ಹಿಂಬಾಲಿಸಿ ಸಹಗಮನ ಮಾಡಿದ ಮಹಾಸತಿಯರ ಸ್ಮರಣೆಗಾಗಿ ನಿಲ್ಲಿಸಿದ ಕಲ್ಲುಗಳೇ ಮಹಾಸತಿ ಕಲ್ಲುಗಳು ಅಥವಾ ಮಾಸ್ತಿ ಕಲ್ಲುಗಳು. ಸಹಗಮನ ಸಾರ್ವತ್ರಿಕವಾಗಿಯಾಗಲಿ ಬಲವಂತವಾಗಿಯಾಗಲಿ ನಡೆಯುವಂತದ್ದಾಗಿರಲಿಲ್ಲ. ಪತಿಯ ಮರಣ ಸಹಿಸದ ಸಾಧ್ವಿ ಸತಿ ನಿಷ್ಠೆಯಿಂದ ಸ್ವಸಂತೋಷದಿಂದ ತೆಗೆದುಕೊಂಡ ನಿರ್ಧಾರವಾಗಿತ್ತು.

ಮಾಸ್ತಿಕಲ್ಲಿನಲ್ಲಿ ತೋಳನ್ನು ಮೇಲೆತ್ತಿರುವ ಸ್ತ್ರೀಯ ಉಬ್ಬು ಚಿತ್ರ ಕೆತ್ತಿರುತ್ತಾರೆ. ಸಹಗಮನ ಮಾಡಿದವರು ಸ್ವರ್ಗ ಸೇರಿದರು ಎನ್ನುವ ಸಂಕೇತ ಸೂಚಕವಾಗಿರಬಹುದು. ಕೆಲವು ಮಾಸ್ತಿಕಲ್ಲುಗಳಲ್ಲಿ ಸ್ತ್ರೀಯ ಗಂಡನ ಚಿತ್ರ ಕೂಡ ಇರುವುದನ್ನು ಕಾಣಬಹುದು. ಕೊಡ್ಲಿಪೇಟೆ ಸುತ್ತ ಕ್ಯಾತೆ ಗ್ರಾಮದ ಊರ ಬಾಗಿಲಲ್ಲಿ ಮಹಾಸಾಧ್ವಿಯರ ಸ್ಮರಣೆಗಾಗಿ ನಿಲ್ಲಿಸಿದ ಮಾಸ್ತಿ ಕಲ್ಲುಗಳು ದೊರೆತಿವೆ.

ನಿಸಿಧಿ ಕಲ್ಲುಗಳು :- ಜೈನ ಸನ್ಯಾಸಿಗಳು ಸಲ್ಲೇಖನ ವ್ರತಧಾರಿಗಳಾಗಿ ಆಹಾರ ಸೇವಿಸದೆ ದೇಹತ್ಯಾಗ ಮಾಡಿದ್ದುದರ ಸ್ಮರಣೆಗಾಗಿ ನಿಲ್ಲಿಸಿರುವ ಕಲ್ಲುಗಳೇ ನಿಸಿಧಿ ಕಲ್ಲುಗಳು. ಸನ್ಯಸನ ವಿಧಿ ಕೈಗೊಂಡು ಮಡಿದವರ ಸ್ಮಾರಕಗಳು ಕೊಡಗಿನ ಕೆಲವು ಕಡೆ ಕಂಡು ಬಂದಿವೆ. ಬಸದಿಯ ಕಲ್ಲು ಬಂಡೆಗಳ ಮೇಲೆ, ಕಂಬಗಳ ಮೇಲೆ, ಬಸದಿಯ ಮುಂಭಾಗದ ಪ್ರತ್ಯೇಕ ಶಿಲಾಫಲಕದಲ್ಲಿ, ಊರ ಹೊರಗಿನ ಹೊಲ, ಗುಡ್ಡಗಳಲ್ಲಿ, ನಿಸಿಧಿ ಕಲ್ಲುಗಳು ಕಂಡುಬರುತ್ತವೆ. ವೀರಗಲ್ಲಿನಲ್ಲಿರುವಂತೆ ಇದರಲ್ಲೂ ಮೂರು ಹಂತಗಳಿರುತ್ತವೆ. ಕೆಳಹಂತದಲ್ಲಿ ಸಲ್ಲೇಖನವ್ರತ ಸ್ವೀಕರಿಸಿ ಮರಣಿಸಿದ ವ್ಯಕ್ತಿಯ ಚಿತ್ರ, ಮಧ್ಯದ ಹಂತದಲ್ಲಿ ಆತನನ್ನು ವಿಮಾನದಲ್ಲಿ ಕರೆದೊಯ್ಯುವ ದೃಶ್ಯ, ಮೇಲಿನ ಹಂತದಲ್ಲಿ ಜಿನ ಸಾನಿಧ್ಯದಲ್ಲಿ ನಿಂತಿರುವ ವ್ಯಕ್ತಿಯ ಉಬ್ಬು ಕೆತ್ತನೆ ಇರುತ್ತದೆ. ಇಲ್ಲಿ ಮುಕ್ಕೊಡೆ ಇರುವ

ಜಿನ ಗುರುವಿನ ಚಿತ್ರವಿರುತ್ತದೆ.

ಜೈನ ಸ್ಮಾರಕಗಳು :- ಕೊಡಗಿನ ಏಳು ಸಾವಿರ ಸೀಮೆಗೆ ಒಳಪಟ್ಟ ಮುಳ್ಳೂರು ಗ್ರಾಮ ಶನಿವಾರ ಸಂತೆಯಿಂದ ಪೂರ್ವಕ್ಕೆ ಮೂರು ಮೈಲು ದೂರದಲ್ಲಿದೆ. (ಐದು ಕಿಲೋಮೀಟರ್) ಮಳೆ ಮಲ್ಲೇಶ್ವರ ಬೆಟ್ಟವನ್ನೊಳಗೊಂಡ ಮಾಲಂಬಿ, ಆಲೂರು ಸಿದ್ಧಾಪುರ, ನಿಡ್ತ ಮುಂತಾದ 18 ಹಳ್ಳಿಗಳಿಗೆ ಒಡೆಯನಾಗಿದ್ದ ಜೈನ ಪಂಥದ ಚೆಂಗಾಳ್ವ ನಾಯಕ ಎಂಬಾತ ಮುಳ್ಳೂರಿನಲ್ಲಿ ಮೂರು ಜೈನಮಂದಿರ ಕಟ್ಟಿಸಿದನೆಂದು ಭಾವಿಸಲಾಗಿದ್ದು, ಪ್ರಾಚ್ಯವಸ್ತು ಇಲಾಖೆಯ ಪ್ರಕಾರ ಕ್ರಿ.ಶ.980ರಲ್ಲಿ ಬಸದಿಗಳನ್ನು ನಿರ್ಮಿಸಿರಬಹುದೆಂದು ಅಂದಾಜಿಸಲಾಗಿದೆ.

ಬಸದಿಗಳ ನಿರ್ಮಾಣಕ್ಕೆ ನಯವಾದ ಕಲ್ಲುಗಳನ್ನು ಬಳಸಲಾಗಿದೆ. ಪ್ರತಿ ಬಸದಿಯಲ್ಲಿ ಗರ್ಭಗುಡಿ, ನವರಂಗ, ಮುಖಮಂಟಪಗಳಿದ್ದು, ಬಸದಿಯ ಗರ್ಭಗುಡಿಯ ಒಂದರಲ್ಲಿ ಚಂದ್ರನಾಥ, ಇನ್ನೊಂದರಲ್ಲಿ ಶಾಂತಿನಾಥ, ಮೂರನೆಯ ಗರ್ಭಗುಡಿಯಲ್ಲಿ ಪಾರ್ಶ್ವನಾಥ ತೀರ್ಥಂಕರರ ಮೂರ್ತಿಗಳಿವೆ. ಇವನ್ನು ಕಪ್ಪು ಶಿಲೆಯಲ್ಲಿ ಕೆತ್ತಿದ್ದಾರೆ. ಕೊಡಗಿನ ದೊರೆ ಎರಡನೇ ಲಿಂಗರಾಜರು ನಿತ್ಯ ಪೂಜೆಗೆ ಬೇಕಾಗಿ ಜೈನ ಕುಟುಂಬವನ್ನು ತಂದಿರಿಸಿ ಜೀವನಕ್ಕೆ ಬೇಕಾದ ಅನುಕೂಲ ಮಾಡಿದ್ದಲ್ಲದೆ ಉಂಬಳಿಯ ಜಮೀನು ಕೊಟ್ಟು ಸರ್ವ ಧರ್ಮ ಸಹಿಷ್ಣುಗಳು ಎಂಬುದನ್ನು ರಾಜರು ಸಾಬೀತುಪಡಿಸಿದ್ದಾರೆ. ಸೋಮವಾರಪೇಟೆಗೆ ಆರು ಕಿಲೋಮೀಟರ್ ದೂರದಲ್ಲಿರುವ ಕಲ್ಕಂದೂರಿನಲ್ಲಿ ಪಾರ್ಶ್ವನಾಥ ತೀರ್ಥಂಕರರ ಮಂದಿರ ಇದೆ.

ಸಾಕಮ್ಮನ ಬಂಗಲೆ :- ಸೋಮವಾರಪೇಟೆ ಬಸವೇಶ್ವರ ರಸ್ತೆಯಲ್ಲಿರುವ **"ಸಾಕಮ್ಮನ ಬಂಗಲೆ"** ಎನ್ನುವ ಬೃಹದಾಕಾರದ ಮನೆಯನ್ನು ದೊಡ್ಡಮನೆ ಸಾಹುಕಾರ ಚನ್ನಬಸಪ್ಪ 1866ರಲ್ಲಿ ಕಟ್ಟಿಸಿದರು. ಏಕಕಾಲಕ್ಕೆ ಒಂದು ನೂರಕ್ಕೂ ಹೆಚ್ಚು ಮಂದಿ ವಾಸ ಮಾಡಬಹುದಾದ ಬೃಹತ್ ಬಂಗಲೆಯಲ್ಲಿ 50 ಕೊಠಡಿಗಳಿದ್ದು 114 ಬಾಗಿಲುಗಳಿವೆ. ಚನ್ನಬಸಪ್ಪನವರಿಗೆ ಮೂವರು ಪತ್ನಿಯರಿದ್ದರೂ ಮಕ್ಕಳ ಭಾಗ್ಯವಿರದೆ ಹತ್ತಿರ ಸಂಬಂಧಿಯ ಮಗಳನ್ನೇ ದತ್ತು ಪಡೆದು ಸಾಕಿದರು. ಆ ಸಾಕು ಮಗಳೇ ಸಾಕಮ್ಮ. ಈಗ ಯಾರೂ ವಾಸಿಸದೆ ಇರುವ ಸಾಕಮ್ಮನ ಬಂಗಲೆ ಸ್ಮಾರಕವಾಗಿ ನಿಂತಿದೆ.

ಗಾಂಧಿ ಮಂಟಪ : ಮಹಾತ್ಮ ಬಿರುದಾಂಕಿತ ಮೋಹನದಾಸ ಕರಮಚಂದ ಗಾಂಧೀಜಿಯವರು 1933-34ರಲ್ಲಿ ಕೊಡಗಿಗೆ ಬಂದಾಗ ಮಡಿಕೇರಿಯಲ್ಲಿ ಸಭೆಯನ್ನು ಉದ್ದೇಶಿಸಿ ಭಾಷಣ ಮಾಡಿದ ಸ್ಥಳದಲ್ಲಿ ಗಾಂಧೀಜಿ ಹುತಾತ್ಮರಾದ ತರುವಾಯ ಅವರ ಸ್ಮರಣೆಗಾಗಿ ಒಂದು ಸುಂದರ ಪುಟ್ಟದಾದ ಮಂಟಪವನ್ನು ಕಟ್ಟಿದ್ದಾರೆ. ಅದಕ್ಕೆ "ಗಾಂಧಿ ಮಂಟಪ" ಎಂದರು. ಗಾಂಧೀಜಿಯವರ ಚಿತಾಭಸ್ಮವನ್ನು ಇಲ್ಲಿಟ್ಟು ಹುತಾತ್ಮರ ದಿನ ಆಚರಿಸುತ್ತಾರೆ. ಇವತ್ತಿಗೂ "ಗಾಂಧಿ ಮಂಟಪ"ವನ್ನು ಗಾಂಧೀಜಿ ಸ್ಮಾರಕ ಮಂಟಪವಾಗಿಯೇ ಉಳಿಸಿಕೊಳ್ಳಲಾಗಿದೆ.

ಯುದ್ಧ ಸ್ಮಾರಕಗಳು :- ಮಡಿಕೇರಿ ನಗರ ಸಭೆ ಎಡಭಾಗದ ಮುಖ್ಯ ರಸ್ತೆಯಲ್ಲಿ ಸುಂದರವಾದ ಯುದ್ಧ ಸ್ಮಾರಕವಿದೆ. 1939-45ರ ನಡುವೆ ನಡೆದ ಪ್ರಪಂಚದ ಎರಡನೇ ಮಹಾಯುದ್ಧದಲ್ಲಿ ಮರಣ ಹೊಂದಿದ ವೀರ ಯೋಧರ ನೆನಪಿಗಾಗಿ ಯುದ್ಧ ಸ್ಮಾರಕವನ್ನು ನಿರ್ಮಿಸಿದ್ದಾರೆ. ಇಟ್ಟಿಗೆ, ಕಲ್ಲು, ಸಿಮೆಂಟಿನಿಂದ ಕಟ್ಟಿದ ಸ್ಮಾರಕದ ಮುಂಭಾಗ ಪುಷ್ಪಗುಚ್ಛವಿರಿಸಿ, ಮಡಿದ ಯೋಧರಿಗೆ ಸಂತಾಪ ಸೂಚಕ ಸಭೆ ಏರ್ಪಡಿಸಿ ಯೋಧರ ತ್ಯಾಗ, ಬಲಿದಾನ ಮತ್ತು ಆದರ್ಶವನ್ನು ಭಾವಪೂರ್ಣವಾಗಿ ನೆನೆಯುತ್ತಾರೆ.

ಫೀ.ಮಾ. ಕೆ.ಎಂ. ಕಾರ್ಯಪ್ಪ ಸ್ಮಾರಕ ಪ್ರತಿಮೆ :- 21.01.1900ರಂದು ಶನಿವಾರಸಂತೆಯಲ್ಲಿ ಹುಟ್ಟಿದ ಕೊಡಂದೇರ ಕಾರ್ಯಪ್ಪನವರು 1949ರಿಂದ 1953ರವರೆಗೆ ಸ್ವತಂತ್ರ ಭಾರತದ ಮೂರು ಸೇನಾ ಪಡೆಗಳ

ಪ್ರಪ್ರಥಮ ಸೇನಾ ಮಹಾದಂಡನಾಯಕರಾಗಿ (ಕಮ್ಯಾಂಡರ್ ಇನ್ ಚೀಫ್) ಸೇವೆ ಸಲ್ಲಿಸಿದ್ದರು. ಇವರಿಗೆ ಸೇವಾ ನಿವೃತ್ತಿಯ ನಂತರ ಭಾರತ ಸರಕಾರ ಫೀಲ್ಡ್ ಮಾರ್ಷಲ್ ಗೌರವ ನೀಡಿ ಸನ್ಮಾನಿಸಿದೆ. 15.05.1993ರಂದು ತಮ್ಮ 93ನೇ ವಯಸ್ಸಿನಲ್ಲಿ ಮರಣ ಹೊಂದಿದ ನಂತರ ಇವರ ಸ್ಮರಣೆಗಾಗಿ ಮಡಿಕೇರಿಯ ಸುದರ್ಶನ ವೃತ್ತದಲ್ಲಿ 8½ ಅಡಿ ಎತ್ತರದ ಕಂಚಿನ ಪುತ್ಥಳಿಯನ್ನು 4½ ಅಡಿ ಎತ್ತರದ ಪೀಠದ ಮೇಲೆ ಪ್ರತಿಷ್ಠಾಪಿಸಿದ್ದಾರೆ. ಇದು ಕಾರ್ಯಪ್ಪನವರ ಸ್ಮಾರಕ ಪ್ರತಿಮೆಯಾಗಿದೆ.

ಜನರಲ್ ಕೆ.ಎಸ್. ತಿಮ್ಮಯ್ಯ ಸ್ಮಾರಕ ಪ್ರತಿಮೆ : – ಕೊಡಂದೇರ ಸೀತವ್ವ ಸುಬ್ಬಯ್ಯ ದಂಪತಿಗಳ ಪುತ್ರನಾಗಿ 31.03.1906ರಂದು ಮಡಿಕೇರಿಯಲ್ಲಿ ಜನಿಸಿದ ತಿಮ್ಮಯ್ಯನವರು ಸೇನೆಯಲ್ಲಿ ಸೇವೆ ಸಲ್ಲಿಸುತ್ತ, ವಿವಿಧ ಹುದ್ದೆಗಳನ್ನು ಅಲಂಕರಿಸಿ, 1957ರಲ್ಲಿ ಭಾರತ ಸೇನಾ ಪಡೆಯ ದಂಡನಾಯಕರಾಗಿ (ಜನರಲ್) ಸೇವೆಗೈದು 1961ರಲ್ಲಿ ನಿವೃತ್ತಿಯಾದ ತಿಮ್ಮಯ್ಯನವರಿಗೆ ಅನೇಕ ಗೌರವಗಳು ಸಂದಿವೆ. 1945ರ ದ್ವಿತೀಯ ವಿಶ್ವ ಮಹಾಯುದ್ಧದಲ್ಲಿ ಬ್ರಿಗೇಡಿಯರ್ ಆಗಿ ಪಾಲ್ಗೊಂಡಿದ್ದ ತಿಮ್ಮಯ್ಯನವರು ಡೆನ್ಮಾರ್ಕ್‌ನಲ್ಲಿದ್ದಾಗ 18.12.1965ರಲ್ಲಿ ವಿಧಿವಶರಾದರು. ಇವರ ಸ್ಮರಣೆಗಾಗಿ ಜಿ.ಟಿ. ವೃತ್ತದಲ್ಲಿ 8½ ಅಡಿ ಎತ್ತರದ ಕಂಚಿನ ಪ್ರತಿಮೆಯನ್ನು 8½ ಅಡಿ ಎತ್ತರದ ಪೀಠದ ಮೇಲೆ ಪ್ರತಿಷ್ಠಾಪಿಸಿದ್ದಾರೆ. ಈ ಪುತ್ಥಳಿ ತಿಮ್ಮಯ್ಯ ಸ್ಮಾರಕ ಪುತ್ಥಳಿಯಾಗಿ ಕಂಗೊಳಿಸುತ್ತಿದೆ.

ಮಂಗೇರಿರ ಮುತ್ತಣ್ಣ ಸ್ಮಾರಕ ಪ್ರತಿಮೆ :– ಭಾರತದ ಸೈನ್ಯದಲ್ಲಿ ಉನ್ನತ ಹುದ್ದೆಯಲ್ಲಿದ್ದು ವೀರ ಮರಣವನ್ನಪ್ಪಿದ ಮಂಗೇರಿರ ಮುತ್ತಣ್ಣನವರ ಶಿಲಾ ಪ್ರತಿಮೆಯನ್ನು ಮಡಿಕೇರಿ ನಗರ ಸಭೆ ಮುಂಭಾಗದ ಸಹಕಾರ ಕೇಂದ್ರ ಬ್ಯಾಂಕ್‌ನ ವೃತ್ತದಲ್ಲಿ ಪ್ರತಿಷ್ಠಾಪಿಸಲಾಗಿದೆ. ಇದು ಮುತ್ತಣ್ಣನವರ ಸ್ಮಾರಕ ಪುತ್ಥಳಿ.

ಗುಡ್ಡೆಮನೆ ಅಪ್ಪಯ್ಯ ಗೌಡ ಸ್ಮಾರಕ ಪ್ರತಿಮ :– ಹುತಾತ್ಮ ಸ್ವಾತಂತ್ರ್ಯ ಹೋರಾಟಗಾರ ಅಮರ ಸುಳ್ಯದ ಕ್ರಾಂತಿ ವೀರಸ್ವಾಮಿ ಭಕ್ತರಾಗಿದ್ದ ಗುಡ್ಡೆಮನೆ ಅಪ್ಪಯ್ಯ ಗೌಡರ ಸ್ಮಾರಕ ಪುತ್ಥಳಿಯನ್ನು ತಡವಾಗಿಯಾದರೂ ಪ್ರತಿಷ್ಠಾಪಿಸಿರುವುದು ಅಭಿನಂದನಾರ್ಹ. ಕೊಡಗನ್ನಾಳಿದ ಒಡೆಯರ ನಿಷ್ಠಾವಂತ ಅಭಿಮಾನಿಯಾಗಿದ್ದ ಗೌಡ ಜನಾಂಗದ ಗುಡ್ಡೆಮನೆ ಅಪ್ಪಯ್ಯ ಗೌಡ ಅವರು ಸ್ವಾಮಿ ಅಪರಂಪಾರರ ಸಂಬಂಧಿ ಕಲ್ಯಾಣ ಸ್ವಾಮಿಯ ಆಪ್ತರಾಗಿದ್ದರು.

ಬಲಮುರಿ ಗ್ರಾಮದ ಗುಡ್ಡೆಮನೆ ಸುಬ್ಬಪ್ಪನವರ ಪುತ್ರರಾದ ಇವರು ದೇಶಪ್ರೇಮಿ, ಸ್ವಾಮಿನಿಷ್ಠರಾಗಿದ್ದರು. ಚಿಕ್ಕ ವೀರ ರಾಜೇಂದ್ರ ಒಡೆಯರ ಪದಚ್ಯುತಿಯಾದ ನಂತರ ರಾಜ ಸಿಂಹಾಸನದಲ್ಲಿ ರಾಜರ ವಂಶದವರನ್ನೇ ಕುಳ್ಳಿರಿಸಬೇಕೆಂದು ಹತ್ತು ನಾಡಿನ ಜನರನ್ನು ಕಟ್ಟಿಕೊಂಡು ಕಲ್ಯಾಣ ಸ್ವಾಮಿಯನ್ನು ಮುಂದಿಟ್ಟುಕೊಂಡು ಹೋರಾಟ ನಡೆಸಿದರು. ಸುಳ್ಯ ಮಾಗಣೆ ಪ್ರಮುಖರೂ ಇದಕ್ಕೆ ಬೆಂಬಲ ನೀಡಿದರು. ಪ್ರಾಮಾಣಿಕ ದೇಶಭಕ್ತ, ನಾಡಪ್ರೇಮಿ, ಸ್ವಾಮಿನಿಷ್ಠ ಗುಡ್ಡೆಮನೆ ಅಪ್ಪಯ್ಯ ಗೌಡರನ್ನು ವಿದ್ರೋಹಿ, ದಂಗೆಕೋರ ಎಂದು ಕರೆದ ಆಂಗ್ಲರು ಅಮರ ಸುಳ್ಯ ಕಾರ್ಯಾಚರಣೆಯಲ್ಲಿ ಮುಖ್ಯ ಪಾತ್ರ ವಹಿಸಿದ್ದಕ್ಕೆ, ಮಂಗಳೂರಿನ ಮುತ್ತಿಗೆಯಲ್ಲಿ ಒಂದು ತಂಡದ ನಾಯಕತ್ವ ವಹಿಸಿದ್ದಕ್ಕೆ ಬಹಿರಂಗವಾಗಿ ತೂಗುಹಾಕಲಾಗುವುದು ಎಂದು ನಿರ್ಧರಿಸಿ, ದಿನಾಂಕ 31.10.1837ರ ಬೆಳಗ್ಗೆ 10.00 ಗಂಟೆಗೆ ಮಡಿಕೇರಿ ಕೋಟೆಯ ಮುಂದೆ ಇರುವ ಎತ್ತರದ ಬಯಲಲ್ಲಿ ಅಪ್ಪಯ್ಯನವರನ್ನು ಗಲ್ಲಿಗೆ ಹಾಕಿಬಿಟ್ಟರು.

ದೇಶಪ್ರೇಮಿ ಅಪ್ಪಯ್ಯ ಗೌಡರ ಪ್ರಾಮಾಣಿಕತೆಗೆ ಇತಿಶ್ರೀ ಹಾಡಿದ ಇಂಗ್ಲೀಷರು ಮಾಡಿದ್ದು ಹೇಯ ಕೃತ್ಯ, ಅನ್ಯಾಯದ ಪರಮಾವಧಿ.

"ಸತ್ಯಕ್ಕೆ ಸಾವಿಲ್ಲ ಎಂಬಂತೆ ಸತ್ಯ ಎಂಬುದು ಯಾವುದೋ ರೂಪದಲ್ಲಿ ಒಂದು ದಿನ ಎದ್ದು ನಿಲ್ಲುತ್ತವೆ"

ಅಂತ ಅಂತೀವಲ್ಲ, ಅದಕ್ಕೆ ಪೂರಕವಾಗಿ ಸ್ವಾತಂತ್ರ್ಯ ವೀರ ಗುಡ್ಡೆಮನೆ ಅಪ್ಪಯ್ಯ ಗೌಡರು ಅಶ್ವಾರೋಹಿ ಪುತ್ಥಳಿಯಾಗಿ ಮಡಿಕೇರಿ ನಗರದಲ್ಲಿ ನಮ್ಮ ಮುಂದೆ ವಿಜೃಂಭಿಸುತ್ತಿದ್ದಾರೆ. ಪ್ರತಿಮೆ ನಿರ್ಮಾಣದ ಕಾರ್ಯ ಪುಣ್ಯದ ಕೆಲಸವೆಂದು ಭಾವಿಸಿ **"ಹುತಾತ್ಮ ಸುಬೇದಾರ ಗುಡ್ಡೆಮನೆ ಅಪ್ಪಯ್ಯ ಗೌಡರ ಸ್ಮಾರಕ ಉಸ್ತುವಾರಿ ಸಮಿತಿ"** ಸ್ತುತ್ಯಾರ್ಹ ಕೆಲಸ ಮಾಡಿದೆ. ಸಮಿತಿಯ ಅಧ್ಯಕ್ಷರಾಗಿ ಶ್ರೀ ತುಂತಜೆ ಗಣೇಶ್, ಉಪಾಧ್ಯಕ್ಷರಾಗಿ ಶ್ರೀ ಕೋಡಿ ಚಂದ್ರಶೇಖರ್, ಕಾರ್ಯದರ್ಶಿಯಾಗಿ ಶ್ರೀ ಅಮೆ ಪಾಲಾಕ್ಷ, ಸಹ ಕಾರ್ಯದರ್ಶಿಯಾಗಿ ಶ್ರೀ ಸುನೀಲ್ ಕೋರನ, ಆದಿಯಾಗಿ ಸುಮಾರು 30 ಮಂದಿಯ ಸಮಿತಿ ಈ ನಿರ್ಮಾಣ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿತ್ತು. ಈ ನಿರ್ಮಾಣ ಕಾರ್ಯದಲ್ಲಿ ಗೌಡ ಜನಾಂಗದವರಷ್ಟೇ ಅಲ್ಲ, ಕೊಡಗಿನ ಎಲ್ಲಾ ಸಹೃದಯ ಜನತೆ ಕೈಜೋಡಿಸಿತ್ತು. ಪ್ರತಿಮೆಯಾಗಿ ಕಂಗೊಳಿಸುತ್ತಿರುವ ಸ್ವಾತಂತ್ರ್ಯ ವೀರ ಅಪ್ಪಯ್ಯ ಗೌಡರು ಮುಂದಿನ ಪೀಳಿಗೆಗೆ ಆದರ್ಶಪ್ರಾಯರಾಗಲಿ.

ಸ್ಮಾರಕಗಳನ್ನು ಬಹುಕಾಲ ಬಾಳಿಕೆ ಬರುವ ಹಾಗೆ ನಿರ್ಮಿಸುತ್ತಾರೆ. ಮುಖ್ಯವಾಗಿ ಲೋಹ, ಶಿಲೆಯನ್ನೇ ಹೆಚ್ಚಾಗಿ ಬಳಸಿರುತ್ತಾರೆ. ಪ್ರಾಚೀನ ಕಾಲದಲ್ಲಿ ವಿದ್ಯೆ ಸಂಪತ್ತಿಗಿಂತ ವೀರತ್ವದ ಬದುಕಿಗೆ ತುಂಬಾ ಮಹತ್ವವಿತ್ತು. ಹಿಂದಿನ ಕಾಲದ ಸ್ಮಾರಕಗಳೆಲ್ಲ ವೀರರ ತ್ಯಾಗ ಬಲಿದಾನಕ್ಕೆ ಮೀಸಲಾಗಿದ್ದವು ಎಂದರೆ ಅತಿಶಯೋಕ್ತಿಯಲ್ಲ.

ಅನೇಕ ಕಾರಣಗಳಿಗಾಗಿ ಸ್ಮಾರಕಗಳಿಗೆ ತುಂಬಾ ಮಹತ್ವವಿದೆ. ಇತಿಹಾಸ ರಚನೆಗಾಗಿ, ಐತಿಹ್ಯದ ಪರಂಪರೆಗಾಗಿ, ಪುರಾತತ್ವ ಶೋಧನೆಗಾಗಿ, ಸಂಶೋಧಕರಿಗೆ ಅಮೂಲ್ಯ ಆಕರಗಳಾಗಿ ಸ್ಮಾರಕಗಳು ನಿಲ್ಲುತ್ತವೆ.

ಸ್ಮಾರಕಗಳನ್ನು ನಿರ್ಮಿಸಿ ಕರ್ತವ್ಯ ಮುಗಿಯಿತು ಎಂದು ಕೂರುವುದು ತರವಲ್ಲ. ಸ್ಮಾರಕಗಳಿರುವ ಜಾಗವನ್ನು ಆಕ್ರಮಿಸಿಕೊಂಡು ನುಂಗಿ ನೀರು ಕುಡಿಯುವ ಸ್ವಾರ್ಥಿಗಳು ನಮ್ಮ ಸುತ್ತಮುತ್ತ ಇದ್ದಾರೆ. ಸ್ಮಾರಕಗಳ ಅಸ್ತಿತ್ವವೇ ಇಲ್ಲದಂತೆ ಇದ್ದ ಕುರುಹುಗಳನ್ನು ನಾಶಮಾಡಿ ಮನೆ ಕಟ್ಟುವ, ತೋಟಮಾಡುವ ಜನ ದಾಖಲೆಗಳನ್ನು ಗಾಳಿಗೆ ತೂರಿ ತಾನೇ ವಾರಸುದಾರನೆಂದು ಬೀಗುತ್ತ ಸ್ಮಾರಕಗಳ ಮಹತ್ವ ತಿಳಿಯದೆ ಎಲ್ಲವನ್ನು ನಾಮಾವಶೇಷ ಮಾಡಿಬಿಡುತ್ತಾರೆ. ಇಂಥದ್ದಕ್ಕೆ ಪುರಾತತ್ವ ಇಲಾಖೆ ಅವಕಾಶ ಕೊಡಬಾರದು. ಜಿಲ್ಲಾಡಳಿತ ಕೂಡಾ ಅಧ್ವಾನವಾಗದಂತೆ ಹದ್ದಿನ ಕಣ್ಣಿಟ್ಟು ಕಾಯಬೇಕು. ಸ್ಮಾರಕಗಳ ಮೌಲ್ಯ- ಮಹತ್ವ ತಿಳಿದಂಥ ಅಧಿಕಾರಿಗಳಿಂದ ಮಾತ್ರ ಅವುಗಳ ಮೇಲೆ ಆಗುವ ಅಕ್ರಮಗಳನ್ನು ಅತಿಕ್ರಮಣವನ್ನು ತಡೆಯಲು ಸಾಧ್ಯ. ಸ್ಮಾರಕಗಳು ಮುಂದಿನ ಪೀಳಿಗೆಗೆ ಆಕರಗಳಾಗಿ ಉಳಿಯಲು ಸಾರ್ವಜನಿಕರೆಲ್ಲರ ನಿಸ್ವಾರ್ಥ ಮನೋಭಾವ ಅತೀ ಅವಶ್ಯ.

"ಸ್ಮಾರಕಗಳಲ್ಲಿ ನಮ್ಮ ಹಿರಿಯರ ಆತ್ಮವಿದೆ, ಆಶಯವಿದೆ, ಆದರ್ಶವಿದೆ.

ಸ್ಮರಣೆಯಿಲ್ಲದ ಬದುಕು ಬದುಕೇ ಅಲ್ಲ.

ಹಾಗೆಯೇ ಋಣ ತೀರಿಸದ ಜನ್ಮ ಜನ್ಮವೇ ಅಲ್ಲ."

ಒಳ್ಳೆಯ ಗುಣಗಳಿಲ್ಲದಿರುವುದೇ ಮೇಲು. ಒಳ್ಳೆಯ ಗುಣಗಳಿಂದ ಬರುವ ಗೌರವ ಬೇಡ. ಬೇರೆ ಮರಗಳು ಶಾಖೋಪಶಾಖೆಗಳಿಂದ ಮೆರೆಯುತ್ತಿರುವಾಗ ಶ್ರೀಗಂಧದ ಮರಗಳು ಕತ್ತರಿಸಲ್ಪಡುತ್ತವೆಯಲ್ಲಾ!

- ಭಾಮಿನೀ ವಿಲಾಸ

ಕ್ರೀಡಾಶಾಲೆ: ಕೊಡಗಿನ ಹೆಮ್ಮೆ



✍ ಕುಂತಿ ಬೋಪಯ್ಯ
ಮುಖ್ಯೋಪಾಧ್ಯಾಯಿನಿ, ಕ್ರೀಡಾಶಾಲೆ, ಕೂಡಿಗೆ

ಕೊಡಗು ಜಿಲ್ಲೆ ತನ್ನ ಸಂಸ್ಕೃತಿ, ಪರಂಪರೆ, ಸಂಪ್ರದಾಯಗಳಿಂದಾಗಿ ರಾಜ್ಯದಲ್ಲಿ ವಿಶೇಷ ಸ್ಥಾನ ಗಳಿಸಿದೆ. ಕೊಡಗು ಜಿಲ್ಲೆಯಗ ದಕ್ಷಿಣ ಕರ್ನಾಟಕದ ಜೀವನದಿ ಕಾವೇರಿಯ ತವರು. ಇಲ್ಲಿಯ ವನರಾಶಿ, ಆಹ್ಲಾದಕರ ವಾತಾವರಣಗಳಿಂದಾಗಿ ದಕ್ಷಿಣ ಕಾಶ್ಮೀರವೆಂದೇ ಹೆಸರುವಾಸಿ. ಕೊಡಗು ಕಾಫಿ, ಕಿತ್ತಳೆ, ಕಾಳುಮೆಣಸು, ಏಲಕ್ಕಿ ಮುಂತಾದ ಸಂಬಾರ ಪದಾರ್ಥಗಳಿಂದಾಗಿ ವಿಶೇಷ ಸ್ಥಾನ ಪಡೆದಿದೆ. ಮಡಿಕೇರಿ, ರಾಜಾಸೀಟ್, ಗದ್ದುಗೆ, ಅಬ್ಬಿ ಜಲಪಾತ, ತಲಕಾವೇರಿ, ಭಾಗಮಂಡಲ, ಕಾವೇರಿ ನಿಸರ್ಗಧಾಮ, ದುಬಾರೆ, ಇರ್ಪು ಮುಂತಾದ ಪ್ರೇಕ್ಷಣೀಯ ಸ್ಥಳಗಳು ಪ್ರವಾಸಿಗರನ್ನು ಆಕರ್ಷಿಸುವುದರ ಮೂಲಕ ಕೊಡಗಿಗೆ ಹೆಮ್ಮೆ ತರುವ ತಾಣಗಳಾಗಿವೆ. ಇವೆಲ್ಲ ಸಂಗತಿಗಳ ಜೊತೆಗೆ ಇದೀಗ ಕ್ರೀಡಾಶಾಲೆಯೂ ಸೇರ್ಪಡೆಗೊಂಡು ಕೊಡಗಿನ ಹಿರಿಮೆಯನ್ನು ಇಮ್ಮಡಿಗೊಳಿಸಿದೆ.

ಕೊಡಗು ತನ್ನ ಸಂಸ್ಕೃತಿ, ಕಿತ್ತಳೆ, ಕಾವೇರಿಗಳಿಂದಾಗಿ ಪ್ರಸಿದ್ಧವಾಗಿರುವಷ್ಟೇ ಕ್ರೀಡೆಯಲ್ಲೂ ಪ್ರಸಿದ್ಧವಾಗಿದೆ. ನಾಡಿಗೆ ಅನೇಕಾನೇಕ ಸೇನಾನಿಗಳು ಮತ್ತು ಕ್ರೀಡಾಪಟುಗಳನ್ನು ಕೊಡುಗೆಯಾಗಿ ನೀಡಿದೆ. ಇಂದಿಗೂ ಕೊಡಗಿನಿಂದ ಮತ್ತಷ್ಟು ಸೇನಾನಿಗಳು ಮತ್ತು ಕ್ರೀಡಾಪಟುಗಳು ತಯಾರಾಗುತ್ತಿದ್ದಾರೆ. ರಾಷ್ಟ್ರೀಯ ಕ್ರೀಡೆಯಾದ ಹಾಕಿಗೆ ಕರ್ನಾಟಕ ರಾಜ್ಯದಲ್ಲಿ ಕೊಡಗು ಜಿಲ್ಲೆಯೇ ತವರೂರಾಗಿದೆ. ಕೊಡವ ಕುಟುಂಬಗಳ ನಡುವೆ ವರ್ಷಂಪ್ರತಿ ನಡೆಯುತ್ತಿರುವ ಹಾಕಿ ಪಂದ್ಯಾಟಗಳು ಹಾಕಿ ಕ್ರೀಡೆಯ ಗತವೈಭವವನ್ನು ಮರುಕಳಿಸುವುದರ ಜೊತೆಗೆ ಕ್ರೀಡೆಗಳಿಗೆ ಮತ್ತಷ್ಟು ಪ್ರೋತ್ಸಾಹವನ್ನು ನೀಡಲು ಸಹಕಾರಿಯಾಗಿವೆ. ಕೊಡಗು ಜಿಲ್ಲೆ ರಾಜ್ಯ ಮತ್ತು ರಾಷ್ಟ್ರಕ್ಕೆ ಬಿ.ಪಿ. ಗೋವಿಂದ್, ಎಂ.ಪಿ. ಗಣೇಶ್, ಅರ್ಜುನ್ ಹಾಲಪ್ಪ, ಎ.ಕೆ.ಕವಿನ್ ಹೀಗೆ ಅನೇಕಾನೇಕ ಕ್ರೀಡಾಪಟುಗಳನ್ನು ಕೊಡುಗೆಯಾಗಿ ನೀಡಿದೆ. ಕೊಡಗಿನ ನಿವಾಸಿಗಳಲ್ಲಿ ಸಾಹಸ ಪ್ರವೃತ್ತಿ ರಕ್ತಗತವಾಗಿ ಬಂದಿದೆ. ಕ್ರೀಡೆಗಳು ಕೊಡಗಿನವರ ಜೀವನದ ಅವಿಭಾಜ್ಯ ಅಂಗವಾಗಿದೆ. **"ಕೊಡಗಿನ ಕ್ರೀಡಾ ಪ್ರತಿಭೆಗಳನ್ನು ಗುರುತಿಸಿ, ಪ್ರೋತ್ಸಾಹಿಸುವ ಸಲುವಾಗಿ ಅಂದಿನ ಮುಖ್ಯಮಂತ್ರಿ ಕೊಡಗಿನವರೇ ಆದ ದಿವಂಗತ ಶ್ರೀ ಆರ್. ಗುಂಡೂರಾಯರು ಸ್ಥಾಪಿಸಿದ ಸಂಸ್ಥೆಯೇ ಕೂಡಿಗೆ ಕ್ರೀಡಾ ಶಾಲೆ"**. ಕ್ರೀಡೆಗಳು ಪಟ್ಟಣ ಮತ್ತು ನಗರಗಳಲ್ಲಿ ಕೇಂದ್ರೀಕೃತಗೊಂಡಂತಹ ಸಂದರ್ಭದಲ್ಲಿ ಗ್ರಾಮೀಣ ಕ್ರೀಡಾ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸುವ ಸಲುವಾಗಿ ಪ್ರಾರಂಭಗೊಂಡ ಸಂಸ್ಥೆ ಕೂಡಿಗೆ ಕ್ರೀಡಾಶಾಲೆ. ಇದು 1982ರಲ್ಲಿ ಉತ್ತರ ಕೊಡಗಿನ ಕೂಡಿಗೆ ಗ್ರಾಮದಲ್ಲಿ ಪ್ರಾರಂಭಗೊಂಡಿತು. ರಾಜ್ಯದ ಗ್ರಾಮೀಣ ಕ್ರೀಡಾ ಪ್ರತಿಭೆಗಳನ್ನು ಆಯ್ಕೆ ಮಾಡಿಕೊಂಡು, ಅವರಿಗೆ ಕ್ರೀಡಾ ಸಲಕರಣೆಗಳು, ತರಬೇತಿಗಳನ್ನು ನೀಡಿ ಉತ್ತಮ ಕ್ರೀಡಾಪಟುಗಳನ್ನು ರೂಪಿಸುವುದೇ ಈ ಶಾಲೆಯ ಪ್ರಮುಖ ಉದ್ದೇಶವಾಗಿರುತ್ತದೆ. ಈ ಉದ್ದೇಶ ಸಾಧನೆಗಾಗಿಯೇ ಸ್ಥಾಪನೆಗೊಂಡ ರಾಜ್ಯದ ಪ್ರಪ್ರಥಮ ಶಾಲೆ ಕೂಡಿಗೆ ಕ್ರೀಡಾಶಾಲೆ. ಅಂದಿನಿಂದ ಇಂದಿನವರೆಗೂ ಈ ಶಾಲೆಯಿಂದ ಸಾವಿರಾರು ಕ್ರೀಡಾಪಟುಗಳು ಹೊರಹೊಮ್ಮಿದ್ದಾರೆ.

ಕ್ರೀಡಾಶಾಲೆಗೆ ರಾಜ್ಯಾದ್ಯಂತ ಕ್ರೀಡಾಪಟುಗಳನ್ನು ಆಯ್ಕೆ ಮಾಡಿಕೊಂಡು 8ನೇ ತರಗತಿಗೆ ದಾಖಲು ಮಾಡಿಕೊಳ್ಳಲಾಗುತ್ತದೆ. ರಾಜ್ಯದ ಎಲ್ಲಾ ಜಿಲ್ಲೆಗಳಿಗೂ ಪ್ರಾತಿನಿಧ್ಯವನ್ನು ಕಲ್ಪಿಸಲಾಗಿದೆ. ಶಾಲೆಯು ಕೊಡಗು

ಜಿಲ್ಲೆಯಲ್ಲಿರುವುದರಿಂದ ಹಾಗೂ ಕೊಡಗಿನಲ್ಲಿ ಕ್ರೀಡಾ ಪ್ರತಿಭೆಗಳ ಸಾಂದ್ರತೆ ಹೆಚ್ಚಾಗಿರುವುದರಿಂದ ಸಹಜವಾಗಿ ಕೊಡಗು ಜಿಲ್ಲೆಗೆ ಹೆಚ್ಚಿನ ಪ್ರಾತಿನಿಧ್ಯ ದೊರಕುತ್ತಿದೆ. ಆಯ್ಕೆ ಸಂದರ್ಭದಲ್ಲಿ ಗ್ರಾಮೀಣ ಕ್ರೀಡಾಪಟುಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತದೆ. ಆಯ್ಕೆಯಾದ ಕ್ರೀಡಾಪಟುಗಳಿಗೆ ಮೂರು ವರ್ಷಗಳ ಕ್ರೀಡಾ ತರಬೇತಿಯನ್ನು ನೀಡಲಾಗುತ್ತದೆ.

ಕ್ರೀಡಾ ಶಾಲೆಯಲ್ಲಿ ಹಾಕಿ, ಅಥ್ಲೆಟಿಕ್ಸ್ ಮತ್ತು ಜಿಮ್ನಾಸ್ಟಿಕ್ಸ್ ಕ್ರೀಡಾ ವಿಭಾಗಗಳಿದ್ದು ಎಲ್ಲಾ ವಿಭಾಗಗಳಿಗೆ ಸೂಕ್ತ ಪ್ರಮಾಣದಲ್ಲಿ ದಾಖಲಾತಿ ನಡೆಸಲಾಗುವುದು.

ಕೂಡಿಗೆ ಕ್ರೀಡಾಶಾಲೆಯ ಸಮುಚ್ಚಯವು ಸುಮಾರು 20 ಎಕರೆ ಪ್ರದೇಶವನ್ನು ಹೊಂದಿದ್ದು ಸುಂದರವಾದ ಪರಿಸರದಲ್ಲಿ ನಿರ್ಮಾಣಗೊಂಡಿದೆ. ಇಲ್ಲಿ ಕ್ರೀಡಾ ತರಬೇತಿಗೆ ಬೇಕಾಗುವ ಎಲ್ಲಾ ಬಗೆಯ ಮೂಲ ಸೌಕರ್ಯಗಳನ್ನು ಕಲ್ಪಿಸಲಾಗಿದೆ. ಸಮುಚ್ಚಯವು 400ಮೀ ಸಿಂಥೆಟಿಕ್ ಟ್ರ್ಯಾಕ್, ಹಾಕಿ ಕ್ರೀಡಾಂಗಣ, ಒಳಾಂಗಣ ಕ್ರೀಡಾಂಗಣ, ಫುಟ್‌ಬಾಲ್ ಕ್ರೀಡಾಂಗಣ, ಬಾಸ್ಕೆಟ್ ಬಾಲ್ ಕ್ರೀಡಾಂಗಣಗಳನ್ನು ಒಳಗೊಂಡಿದೆ. **ಇದೀಗತಾನೆ ನಿರ್ಮಾಣಗೊಂಡು ಬಳಕೆಗೆ ಸಿದ್ಧವಾಗಿರುವ 400ಮೀ ಸಿಂಥೆಟಿಕ್ ಟ್ರ್ಯಾಕ್ ರಾಜ್ಯದಲ್ಲಿಯೇ ಎರಡನೆಯ ಟ್ರ್ಯಾಕ್ ಎಂಬುದು ಕೊಡಗಿಗೆ ಹೆಮ್ಮೆ ತರುವ ವಿಷಯ.** ಸುಮಾರು 2.85 ಕೋಟಿ ರೂ.ಗಳ ವೆಚ್ಚದಲ್ಲಿ ನಿರ್ಮಾಣಗೊಂಡಿರುವ ಟ್ರ್ಯಾಕ್ ಅಂತರಾಷ್ಟ್ರೀಯ ಗುಣಮಟ್ಟವನ್ನು ಹೊಂದಿದ್ದು, ಸರ್ವಕಾಲಗಳಲ್ಲಿಯೂ ಕ್ರೀಡಾ ತರಬೇತಿಗೆ ಲಭ್ಯವಾಗುವುದು. ಶಾಲೆಯಲ್ಲಿ ಉತ್ತಮ ಹಾಕಿ ಕ್ರೀಡಾಂಗಣವಿದ್ದು 12ನೇ ಹಣಕಾಸು ಆಯೋಗದಲ್ಲಿ ಇದನ್ನು ಮೇಲ್ದರ್ಜೆಗೆ ಏರಿಸಿ ಆಸ್ಟ್ರೋಟರ್ಫ್ ಹಾಕಲು ಅನುಮೋದನೆ ಪಡೆದಿದ್ದು, ಶೀಘ್ರವೇ ಆಸ್ಟ್ರೋಟರ್ಫ್ ಹಾಕಿ ಕ್ರೀಡಾಂಗಣದ ಕಾರ್ಯ ಪ್ರಾರಂಭವಾಗಲಿದೆ.

ಕ್ರೀಡಾ ಸಮುಚ್ಚಯದಲ್ಲಿ ಬಾಲಕರ ವಸತಿಗೃಹ, ಬಾಲಕಿಯರ ವಸತಿ ಗೃಹ, ಅಡುಗೆ ಮನೆ ಮತ್ತು ಭೋಜನಾಲಯ ಶಾಲಾ ಕಟ್ಟಡ, ಸಿಬ್ಬಂದಿಗಳ ವಸತಿ ಗೃಹಗಳು ಪ್ರತ್ಯೇಕವಾಗಿವೆ. ಕ್ರೀಡಾಶಾಲೆಯಲ್ಲಿ 130 ಕ್ರೀಡಾಪಟುಗಳಿಗೆ ವಸತಿ ಸೌಕರ್ಯ ಕಲ್ಪಿಸಬಹುದಾಗಿದೆ. ಕ್ರೀಡಾ ತರಬೇತಿಗೆ ಬೇಕಾಗುವ ಸಕಲ ಕ್ರೀಡಾ ಸಲಕರಣೆಗಳನ್ನು.ಶಾಲೆಯು ಹೊಂದಿದೆ.

ಕ್ರೀಡಾ ಶಾಲೆಯು ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯಡಿ ಕಾರ್ಯ ನಿರ್ವಹಿಸುತ್ತಿದ್ದು, ಕ್ರೀಡಾಪಟುಗಳಿಗೆ ಉಚಿತ ಶಿಕ್ಷಣ ಮತ್ತು ಕ್ರೀಡಾ ತರಬೇತಿಯನ್ನು ನೀಡಲಾಗುತ್ತಿದೆ. ಕ್ರೀಡಾ ತರಬೇತಿಯ ಜೊತೆಗೆ 8ನೇ ತರಗತಿಯಿಂದ 10ನೇ ತರಗತಿಯವರೆಗೆ ವಿದ್ಯಾಭ್ಯಾಸವನ್ನು ನೀಡಲಾಗುತ್ತಿದೆ. ಇಲಾಖೆಯು ಎಲ್ಲಾ ಜಿಲ್ಲೆಗಳಲ್ಲಿಯೂ ಕ್ರೀಡಾ ವಸತಿ ನಿಲಯಗಳನ್ನು ನಿರ್ವಹಿಸುತ್ತಿದ್ದರೂ ಕ್ರೀಡಾಶಾಲೆ ಇರುವುದು ಕೊಡಗಿನಲ್ಲಿ ಮಾತ್ರ. ವಿದ್ಯಾರ್ಥಿಗಳಿಗೆ ಆಯಾ ವಿಭಾಗದಲ್ಲಿ ತರಬೇತಿ ನೀಡಲು ನುರಿತ ಅನುಭವಶಾಲಿಗಳಾದ ಕ್ರೀಡಾ ತರಬೇತುದಾರರಿದ್ದಾರೆ.

ಕ್ರೀಡಾಪಟುವಿನ ಸಾಧನೆಗೆ ಅಪಾರ ಶಕ್ತಿ, ಪರಿಶ್ರಮ ಬೇಕಾಗಿರುವುದರಿಂದ ಇಲ್ಲಿನ ಕ್ರೀಡಾಪಟುಗಳಿಗೆ ಉತ್ತಮ ಗುಣಮಟ್ಟದ ಪೌಷ್ಠಿಕ ಆಹಾರವನ್ನು ಒದಗಿಸಲಾಗುತ್ತದೆ. ಕ್ರೀಡಾಪಟುಗಳ ಸರ್ವತೋಮುಖ ಬೆಳವಣಿಗೆಗೆ ವೈಜ್ಞಾನಿಕವಾಗಿ ನಿರ್ಧರಿಸಲ್ಪಟ್ಟ ಎಲ್ಲಾ ಪೋಷಕಾಂಶಗಳನ್ನು ಒಳಗೊಂಡ ಆಹಾರವನ್ನು ಸರಬರಾಜು ಮಾಡಲಾಗುತ್ತದೆ.

ಕ್ರೀಡಾ ಶಾಲೆಯಲ್ಲಿ ಕ್ರೀಡಾಭ್ಯಾಸವನ್ನಲ್ಲದೆ ಶೈಕ್ಷಣಿಕವಾಗಿಯೂ ಒತ್ತು ನೀಡಲಾಗುತ್ತದೆ. ಶಾಲೆಯಲ್ಲಿ 8ರಿಂದ 10ನೇ ತರಗತಿಯವರೆಗೆ ಕನ್ನಡ ಮತ್ತು ಆಂಗ್ಲ ಮಾಧ್ಯಮಗಳಲ್ಲಿ ಬೋಧಿಸಲಾಗುತ್ತದೆ. ಉತ್ತಮ ತರಗತಿ ಕೊಠಡಿಗಳು, ಪೀಠೋಪಕರಣಗಳು, ಪ್ರಯೋಗಾಲಯ, ಗ್ರಂಥಾಲಯಗಳನ್ನು ಶಾಲೆಯು

ಒಳಗೊಂಡಿವೆ. ಅನುಭವಿ ಶಿಕ್ಷಕರನ್ನು ಹೊಂದಿದ್ದು ಎಸ್.ಎಸ್.ಎಲ್.ಸಿ. ಪರೀಕ್ಷೆಗಳಲ್ಲಿ ಉತ್ತಮ ಫಲಿತಾಂಶವನ್ನು ಪಡೆದಿರುತ್ತದೆ. ಹಿಂದಿನ ವರ್ಷಗಳಲ್ಲಿ ಶೇ.100 ಫಲಿತಾಂಶ ಹಾಗೂ ಕಳೆದ 10 ವರ್ಷಗಳಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಗಳಲ್ಲಿ ಶಾಲೆಯು ಸರಾಸರಿ ಶೆ.90ಕ್ಕಿಂತಲೂ ಹೆಚ್ಚಿನ ಫಲಿತಾಂಶ ಪಡೆದಿರುತ್ತದೆ.

ಕೂಡಿಗೆ ಕ್ರೀಡಾಶಾಲೆಯು ಇದೀಗ ಸುವರ್ಣ ಮಹೋತ್ಸವದ ಕಡೆಗೆ ತನ್ನ ಪಯಣವನ್ನು ಆರಂಭಿಸಿದೆ. ಈ ಸುದೀರ್ಘ ಪಯಣದಲ್ಲಿ ಶಾಲೆಯು ರಾಜ್ಯಕ್ಕೆ ಮತ್ತು ರಾಷ್ಟ್ರಕ್ಕೆ ಅನೇಕಾನೇಕ ಶ್ರೇಷ್ಠ ಕ್ರೀಡಾಪಟುಗಳನ್ನು ಕೊಡುಗೆಯನ್ನಾಗಿ ನೀಡಿದೆ. ಇಲ್ಲಿ ತರಬೇತಿ ಪಡೆದ 14 ಕ್ರೀಡಾಪಟುಗಳು ಏಕಲವ್ಯ ಪ್ರಶಸ್ತಿಯನ್ನು ಪಡೆದಿರುತ್ತಾರೆ. ಇವರಲ್ಲಿ ಕೊಡಗಿನವರಾದ ಜಿ.ಜಿ.ಪ್ರಮೀಳಾ, ಎನ್.ಎಂ. ಹೇಮಲತ, ಬಿ.ಎ. ಭಾಗೀರಥಿ, ಪದ್ಮಾವತಿ ಪ್ರಮುಖರು. ಜಿಲ್ಲೆಯವರಾದ ಗುಡ್ಡಂಡ ಪ್ರಮೀಳಾ ಅಯ್ಯಪ್ಪನವರು ಒಲಿಂಪಿಕ್ಸ್ ಪಂದ್ಯಾವಳಿಯಲ್ಲಿ ರಾಷ್ಟ್ರವನ್ನು ಪ್ರತಿನಿಧಿಸಿ ಕೊಡಗಿನ ಹಿರಿಮೆಯನ್ನು ಸಾರಿದ್ದಾರೆ. ಹಾಗೆಯೇ ಎ.ಕೆ. ಕವಿನ್, ರವಿ ನಾಯಕರ್ ಅಂತರಾಷ್ಟ್ರೀಯ ಹಾಕಿ ಪಂದ್ಯಾವಳಿಯಲ್ಲಿ ಭಾರತ ತಂಡವನ್ನು ಪ್ರತಿನಿಧಿಸಿರುತ್ತಾರೆ.

ಮೇಲ್ಕಂಡ ಎಲ್ಲಾ ಸಾಧನೆ, ಪ್ರಗತಿಗೆ ಮೂಲ ಕಾರಣಕರ್ತರು ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ಆಯುಕ್ತರು, ನಿರ್ದೇಶಕರು, ಜಂಟಿನಿರ್ದೇಶಕರು, ಸ್ಥಳೀಯ ಜನಪ್ರತಿನಿಧಿಗಳು, ಶಾಲಾ ಶಿಕ್ಷಕರು, ತರಬೇತಿದಾರರು ಹಾಗೂ ಸಿಬ್ಬಂದಿವರ್ಗದವರು ಎಂದು ತಿಳಿಸಲು ಹರ್ಷಿಸುತ್ತೇನೆ.

ಇಪ್ಪತ್ತೊಂದನೇ ಶತಮಾನದಲ್ಲಿ ಮಹಿಳೆ



✍ ಆನೇರ ಜಾನಕಿ ಮೋಹನ್
ಪ್ರಾಂಶುಪಾಲರು
ಶ್ರೀ ಕಾವೇರಿ ಪ.ಪೂ. ಕಾಲೇಜು, ಭಾಗಮಂಡಲ

ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾ॥
ಯತ್ರೈತಾಸ್ತ್ರು ನ ಪೂಜ್ಯಂತೇ ಸರ್ವಾಸ್ತತ್ರಾ ಫಲಾ: ಕ್ರಿಯಾ ಶೋಚಂತಿ॥

ಎಲ್ಲಿ ನಾರಿಯರನ್ನು ಪೂಜ್ಯ ಭಾವನೆಯಿಂದ ಕಾಣುವರೋ ಅಲ್ಲಿ ದೇವತೆಗಳು ಸುಪ್ರೀತರಾಗುವರು, ಎಲ್ಲಿ ಅವರನ್ನು ಅಗೌರವದಿಂದ ಕಾಣುವರೋ ಅಲ್ಲಿ ಪುರುಷರು ಮಾಡುವ ಕೆಲಸವೆಲ್ಲ ನಿಷ್ಫಲವಾದಂತೆ ಎಂದು ಮನು ಹೇಳಿದ್ದಾನೆ.

"21ನೇ ಶತಮಾನದಲ್ಲಿ ಮಹಿಳೆ"ಯ ಕುರಿತು ಹೇಳುವ ಮೊದಲು 21ನೇ ಶತಮಾನಕ್ಕೆ ಮೊದಲು ಮಹಿಳೆ ಹೇಗಿದ್ದಳು ಎಂಬುದನ್ನು ಸಿಂಹಾವಲೋಕನ ಕ್ರಮದಿಂದ ಅವಲೋಕಿಸುವುದು ಸೂಕ್ತವೆಂದು ತಿಳಿದು ಚುಟುಕಾಗಿ ತಮ್ಮ ಮುಂದಿಡುವ ಪ್ರಯತ್ನ ಇದಾಗಿದೆ.

ವೇದಗಳ ಕಾಲದಲ್ಲಿ ಸ್ತ್ರೀಯರು ಉತ್ತಮ ಸ್ಥಾನವನ್ನು ಹೊಂದಿದ್ದರೆಂದು ಇತಿಹಾಸದಿಂದ ತಿಳಿದುಬರುವುದು. ಸಾಮಾಜಿಕ, ಆರ್ಥಿಕ, ರಾಜಕೀಯ, ಧಾರ್ಮಿಕ, ಶೈಕ್ಷಣಿಕ, ಸಾಂಸ್ಕೃತಿಕ ಮೊದಲಾದ ಕ್ಷೇತ್ರಗಳಲ್ಲಿ ಪುರುಷರಿಗೆ ಸರಿಸಮಾನವಾದ ಸ್ಥಾನಮಾನ ಅಂತಸ್ತುಗಳಿದ್ದುವುವೆಂದು ತಿಳಿದುಬರುವುದು.

ರಾಮಾಯಣ ಹಾಗೂ ಮಹಾಭಾರತ ಕಾಲದಲ್ಲಿ ಸ್ತ್ರೀಯರು ಸಾಮಾಜಿಕ, ರಾಜಕೀಯ ಹಾಗೂ ನೈತಿಕ ವಿಷಯಗಳಲ್ಲಿ ತಮ್ಮ ಗಂಡಂದಿರಿಗೆ ಸಲಹೆ – ಸೂಚನೆ ಹಾಗೂ ಮಾರ್ಗದರ್ಶನ ನೀಡುತ್ತಿದ್ದರೆಂದು ತಿಳಿದು ಬರುವುದು.

ಮಧ್ಯ ಯುಗವನ್ನು "ಕತ್ತಲೆಯುಗ"ವೆಂದು ಹೇಳಬಹುದು. ಕಾರಣ ಬಾಲ್ಯ ವಿವಾಹ, ಸತಿ ಪದ್ಧತಿ, ಪರದಾ ಪದ್ಧತಿ, ದೇವದಾಸಿ ಪದ್ಧತಿ ಈ ಎಲ್ಲಾ ಅನಿಷ್ಟ ಪದ್ಧತಿಗಳನ್ನು ಈ ಯುಗದಲ್ಲಿ ನಾವು ಕಾಣಬಹುದು.

ಬ್ರಿಟಿಷರ ಕಾಲದಲ್ಲಿ ಪಾಶ್ಚಿಮಾತ್ಯ ಸಂಸ್ಕೃತಿಯ ಪ್ರಭಾವದಿಂದ ಜೀವನ ಶೈಲಿ ಮತ್ತು ದೃಷ್ಟಿಕೋನವೇ ಬದಲಾಗಿ ಭಾರತೀಯರ ಸಾಂಪ್ರದಾಯಿಕ ಮೌಲ್ಯಗಳೇ ಬದಲಾದವು. ಸ್ತ್ರೀಯರು ಕೌಟುಂಬಿಕ ಮತ್ತು ಸಾರ್ವಜನಿಕ ಕ್ಷೇತ್ರದಲ್ಲಿ ಸ್ವಾತಂತ್ರ್ಯವನ್ನು ಹೊಂದಲಾರಂಭಿಸಿದರು.

ದಯಾನಂದ ಸರಸ್ವತಿ, ರಾಜಾರಾಮ್ ಮೋಹನ್ ರಾಯ್, ಜ್ಯೋತಿರಾವ್ ಪುಲೆ, ಈಶ್ವರ ಚಂದ್ರ ವಿದ್ಯಾಸಾಗರ್, ದಾದಾಬಾಯಿ ನವರೋಜಿ, ನಿವೇದಿತಾ, ಮಾರ್ಗರೇಟ್ ಕಸಿನ್ಸ್, ರಮಾಬಾಯಿ ರಾನಡೆ ಮುಂತಾದವರು ವಿವಿಧ ಸಮಸ್ಯೆಗಳಿಗೆ ಸ್ಪಂದಿಸಿ, ಸ್ತ್ರೀಯರಿಗೆ ಶಿಕ್ಷಣ ನೀಡಿ ಜಾಗೃತಿ ಮೂಡಿಸಲು ಪ್ರಯತ್ನಿಸಿದರು.

ಸ್ತ್ರೀಯರು ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರಿಂದ ಅವರಲ್ಲಿ ಹೊಸ ಚೈತನ್ಯ ಮೂಡಲಾರಂಭಿಸಿತು. ತಮ್ಮ ಪ್ರತಿಭೆ, ಸಾಮರ್ಥ್ಯ, ಧೈರ್ಯ, ಸಾಹಸಗಳಿಂದ ಮುಂದಾಳುಗಳಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿ ಜಾಗೃತಿ ಮೂಡಿಸಿದರು.

ಇದೀಗ "21ನೇ ಶತಮಾನದಲ್ಲಿ ಮಹಿಳೆ" ಎಂಬ ವಿಚಾರವಾಗಿ ನನ್ನ ಮನಸ್ಸಿಗೆ ಜ್ಞಾನಕ್ಕೆ ನಿಲುಕಿದ್ದನ್ನು ಓದುಗರ ಮುಂದಿಡಲು ಸಂತೋಷಪಡುತ್ತೇನೆ.

ಈ ಸಮಯದಲ್ಲಿ ಸಮಾಜ ಸಾಕಷ್ಟು ಬದಲಾಗತೊಡಗಿತು. ಅಂತೆಯೇ ಜನತೆಯೂ ಕೂಡ ಬದಲಾದ ಜಗತ್ತಿನೊಂದಿಗೆ ತಮ್ಮನ್ನು ತೊಡಗಿಸಿಕೊಳ್ಳುವ ಪ್ರಯತ್ನದಲ್ಲಿ ಶಿಕ್ಷಣಕ್ಕೆ ವಿಶೇಷ ಆದ್ಯತೆಯನ್ನು ನೀಡಿರುವರು. ಯಾವುದೇ ಕ್ಷೇತ್ರವನ್ನು ನಾವಿಂದು ನೋಡಿದಲ್ಲಿ ಹೆಣ್ಣು ಮಕ್ಕಳ ವಿಶೇಷ ಮುನ್ನಡೆಯನ್ನು ಕಾಣಬಹುದು. ಅವರಲ್ಲಾಗಿರುವ ವಿಶೇಷವಾದ ಬದಲಾವಣೆಯೇ ಇದಕ್ಕೆ ಸಾಕ್ಷಿ. **"ಒಂದು ಕುಟುಂಬದಲ್ಲಿ ಒಬ್ಬ ಪುರುಷನಿಗೆ ವಿದ್ಯೆ ಕಲಿಸಿದರೆ ಒಬ್ಬ ವ್ಯಕ್ತಿಗೆ ವಿದ್ಯೆ ಕಲಿಸಿದಂತೆ. ಆದರೆ ಒಬ್ಬ ಸ್ತ್ರೀಗೆ ವಿದ್ಯೆ ಕಲಿಸಿದರೆ ಇಡೀ ಕುಟುಂಬಕ್ಕೆ ವಿದ್ಯೆ ಕಲಿಸಿದಂತೆ. ಸ್ತ್ರೀಗೆ ಶಿಕ್ಷಣ ಕೊಡುವುದರಿಂದ ಶಾಲೆಯೊಂದನ್ನು ತೆರೆದಂತೆ" ಎಂಬ ನಾಣ್ನುಡಿಗಳು ಸ್ತ್ರೀ ಶಿಕ್ಷಣದ ಮಹತ್ವವನ್ನು ಸಾರಿ ಹೇಳುತ್ತದೆ.**

ಮನೆಯೇ ಮೊದಲ ಪಾಠಶಾಲೆ
ಜನನಿ ತಾನೆ ಮೊದಲ ಗುರುವು
ಜನನಿಯಿಂದ ಪಾಠ ಕಲಿತ ನಾವು ಧನ್ಯರು... ಎಂಬ ಮಾತು ನಿತ್ಯ ಸತ್ಯವಾಗಿದೆ.

ಕೇವಲ ಅಡುಗೆ ಮನೆಗೆ ಸೀಮಿತವಾಗಿದ್ದ ಹೆಣ್ಣು ಮಗುವು ಇಂದು ಶಿಕ್ಷಣದಿಂದಾಗಿ ವಿವಿಧ ಕ್ಷೇತ್ರಗಳಲ್ಲಿ ತನ್ನನ್ನು ತೊಡಗಿಸಿಕೊಂಡು ಪುರುಷನಿಗೆ ಸರಿಸಮಾನವಾಗಿ ಸ್ಪರ್ಧಿಸುತ್ತಿದ್ದಾಳೆ. ಮಹಿಳೆಯಿಂದು ಅಬಲೆಯಲ್ಲ ಸಬಲೆಯೆಂಬುದನ್ನು ಸಾಬೀತುಪಡಿಸಿದಂತಾಗಿದೆ. ವಿವಿಧ ಕ್ಷೇತ್ರಗಳಲ್ಲಿ ಆಕೆ ಹೇಗೆ ತನ್ನನ್ನು ತೊಡಗಿಸಿಕೊಂಡಿದ್ದಾಳೆ ಎಂಬುದನ್ನು ಸಿಂಹಾವಲೋಕನ ಕ್ರಮದಿಂದ ಕ್ಷಣಹೊತ್ತು ಅವಲೋಕಿಸೋಣ. ಉದಾ :–

ಸಾಮಾಜಿಕ ಕ್ಷೇತ್ರದಲ್ಲಿ :– ಸರೋಜಿನಿ ನಾಯ್ಡು, ಮಾರ್ಗರೇಟ್ ಕಸಿನ್ಸ್, ಅನಿಬೆಸೆಂಟ್, ಕಸ್ತೂರಬಾ ಗಾಂಧಿ, ಪಂಡಿತ ರಮಾಬಾಯಿ ರಾನಡೆ, ಅಮೃತಕೌರ್ – ಇವರೆಲ್ಲರೂ ಅನಕ್ಷರತೆ – ಅಜ್ಞಾನ ಮುಂತಾದ ಸಮಸ್ಯೆಗಳ ಬಗ್ಗೆ ಸಾಕಷ್ಟು ಹೋರಾಟ ನಡೆಸಿದ್ದಾರೆ. ಹೊರ ದೇಶದ ಮಹಿಳೆಯಾಗಿ ಮದರ್ ತೆರೇಸಾ ಇವರ ಸೇವೆಯಂತೂ ಅವಿಸ್ಮರಣೀಯ. 'ನಿರ್ಮಲ ಹೃದಯ' ಮತ್ತು 'ಶಿಶುಭವನ್' ಸಂಸ್ಥೆಗಳನ್ನಿವರು ಸ್ಥಾಪಿಸಿರುವರು. ಪರಿಸರ ಪ್ರೇಮಿ ಮೇಧಾಪಾಟ್ಕರ್ 'ನರ್ಮದಾ ಬಚಾವೋ' ಆಂದೋಲನದ ಮೂಲಕ ವಿಶ್ವದ ಜನರ ಗಮನ ಸೆಳೆದಿದ್ದಾರೆ.

ಆರ್ಥಿಕ ಕ್ಷೇತ್ರದಲ್ಲಿ :– ಪುರುಷರ ಅಧೀನಳಾಗಿ ಅಡುಗೆ ಮನೆಯೊಳಗಡೆ ಸೀಮಿತವಾಗಿದ್ದ ಹೆಣ್ಣು ಇಂದು ವ್ಯಾಪಾರ, ವ್ಯವಹಾರ, ಕಾರ್ಖಾನೆ, ಉದ್ದಿಮೆಗಳಲ್ಲಿ ತೊಡಗಿಸಿಕೊಂಡು ಸ್ವಾವಲಂಬಿಯಾಗಿ ಜೀವಿಸುತ್ತಿದ್ದಾಳೆಂದು ಹೇಳಿದರೆ ತಪ್ಪಾಗಲಾರದು. ಕರ್ನಾಟಕದ ಮಧುರಾ ಎಂ. ಛತ್ರಪತಿ – ಮೈಸೂರಿನ ಸಿ.ಎಫ್.ಟಿ.ಆರ್.ಐ.ನಲ್ಲಿ ಆಹಾರ ತಂತ್ರಜ್ಞಾನದ ತರಬೇತಿ ಪಡೆದು ಅಂತರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿಯನ್ನು ಪಡೆದಿದ್ದಾರೆ. ಬೆಂಗಳೂರಿನ ಸುಧಾಮೂರ್ತಿ ಇನ್ಫೋಸಿಸ್‌ನ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿ ಹೆಸರು ಮಾಡಿದಾರೆ. ಹಳ್ಳಿಗಳಲ್ಲಿ ಸ್ತ್ರೀಶಕ್ತಿ, ಸ್ವಸಹಾಯ ಸಂಘಗಳು, ಧರ್ಮಸ್ಥಳದ ಗ್ರಾಮೋದ್ಯೋಗದಂತಹ ಸಂಘಗಳು ಇಂದು ಸ್ತ್ರೀಯರನ್ನು ಸುಶಿಕ್ಷಿತ ಸಮಾಜದತ್ತ ಮುನ್ನಡೆಸುವಲ್ಲಿ ಸಹಕಾರಿಗಳಾಗಿವೆ.

ರಾಜಕೀಯ ಕ್ಷೇತ್ರ :– ವಿಜಯಲಕ್ಷ್ಮಿ ಪಂಡಿತ್ ಪ್ರಥಮ ಮಹಿಳಾ ಮುಖ್ಯಮಂತ್ರಿಯಾಗಿ, ಇಂದಿರಾಗಾಂಧಿ ಮೊದಲ ಮಹಿಳಾ ಪ್ರಧಾನಿಯಾಗಿ ಸೇವೆ ಸಲ್ಲಿಸಿದ್ದಾರೆ. ಪ್ರತಿಭಾಪಾಟೀಲ್ ಮೊಟ್ಟ ಮೊದಲ ಮಹಿಳಾ ರಾಷ್ಟ್ರಾಧ್ಯಕ್ಷರಾಗಿ ಆಯ್ಕೆಗೊಂಡು ಸೇವೆ ಸಲ್ಲಿಸುತ್ತಿರುವರು. ಸುಷ್ಮಾ ಸ್ವರಾಜ್, ಮನೇಕಾ ಗಾಂಧಿ,

ಸೋನಿಯಾ ಗಾಂಧಿ, ಶೀಲಾದೀಕ್ಷಿತ್, ರಮಾದೇವಿ, ಸಾಧ್ವಿ, ಉಮಾಭಾರತಿ, ಮಾಯಾವತಿ, ಮಮತಾ ಬ್ಯಾನರ್ಜಿ, ಜಯಲಲಿತ, ಬಿ.ಟಿ.ಲಲಿತಾ ನಾಯಕ್, ಶೋಭಾ ಕರಂದ್ಲಾಜೆ ಒಂದೇ ಎರಡೇ! ಸಾಕಷ್ಟು ಮಂದಿ ರಾಜಕೀಯ ಕ್ಷೇತ್ರದಲ್ಲಿ ಕಾಣಿಸಿಕೊಂಡಿರುವರು.

ಕಲಾಕ್ಷೇತ್ರ : – ಕನಕ ಮೂರ್ತಿ – ಶಿಲ್ಪಕಲಾ ಅಕಾಡೆಮಿ ಪ್ರಶಸ್ತಿಗಳಿಗೆ ಪಾತ್ರರಾಗಿರುವರು. ರುಕ್ಮಿಣಿದೇವಿ ಅರುಂಡೇಲ್‌ರವರು ಸಂಸ್ಕೃತಿ, ಕಲೆ, ಗಾಯನ, ಸಾಹಿತ್ಯ ಮೊದಲಾದ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಮಾಡಿರುವರು. ಬೆಂಗಳೂರಿನ ಮಾಯಾರಾವ್ – ಕಥಕ್, ಮಣಿಪುರಿ, ಜಾನಪದ ನೃತ್ಯಕಲೆಯಲ್ಲಿ ತೊಡಗಿಸಿಕೊಂಡಿರುವರು.

ಸಂಗೀತ ಕ್ಷೇತ್ರ :– ಎಂ.ಎಸ್. ಸುಬ್ಬಲಕ್ಷ್ಮಿ – ಹಿಂದೂಸ್ಥಾನಿ, ಕರ್ನಾಟಕ ಸಂಗೀತ, ದೇವರನಾಮ, ಸುಪ್ರಭಾತಗಳನ್ನು ಹಾಡಿ ಭಾರತೀಯರ ಮನಸ್ಸನ್ನು ಗೆದ್ದಿದ್ದಾರೆ. ಗೌರವ ಡಾಕ್ಟರೇಟ್ ಪದವಿಯನ್ನೂ ಪಡೆದಿರುವರು. ಲತಾ ಮಂಗೇಷ್ಕರ್ – ಹಿಂದಿ ಭಾವಗೀತೆ, ಭಕ್ತಿಗೀತೆ, ದೇಶಭಕ್ತಿಗೀತೆಯನ್ನು ಹಾಡಿದ್ದಾರೆ. ಗಂಗೂಬಾಯಿ ಹಾನಗಲ್, ಡಾ। ಸಂಪದಾ ಭಟ್ ಮರವಳಿ, ಆಶಾ ಬೋಸ್ಲೆ, ಪಿ. ಸುಶೀಲ, ಎಸ್. ಜಾನಕಿ, ಬಿ. ಕೆ. ಸುಮಿತ್ರ, ಕಸ್ತೂರಿ ಶಂಕರ್ ಮುಂತಾದವರು ಕಾಣಿಸಿಕೊಂಡಿರುವರು.

ಸಾಹಿತ್ಯ ಕ್ಷೇತ್ರ :– ಪ. ಬಂಗಾಳದ ಆಶಾಪೂರ್ಣ ದೇವಿ – ಪುರುಷರ ಶೋಷಣೆ, ಅರ್ಥಹೀನ ಸಂಪ್ರದಾಯದ ವಿರುದ್ಧ ಸಿಡಿದೆದ್ದ ಮಹಿಳೆ. ಅಮೃತಾ ಪ್ರೀತಂ, ಮಹಾಶ್ವೇತಾದೇವಿ, ಅರುಂಧತಿ ರಾಯ್, ಡಾ॥ ಅನುಪಮ ನಿರಂಜನ, ತಸ್ಲೀಮಾ ನಸ್ರೀನ್, ಡಾ। ಕಮಲಾ ಹಂಪನಾ, ಶಾಂತಾದೇವಿ ಮಾಳವಾಡ, ಎಂ.ಕೆ.ಇಂದಿರಾ, ವಾಣಿ, ತ್ರಿವೇಣಿ, ಉಷಾ ನವರತ್ನರಾವ್, ಸಾರಾ ಅಬೂಬಕರ್ ಮೊದಲಾದ ಕೆಲವರನ್ನು ಮಾತ್ರ ನಾನಿಲ್ಲಿ ಹೆಸರಿಸಿರುವೆನು. ಲೆಕ್ಕವಿಲ್ಲದಷ್ಟು ಮಹಿಳೆಯರು ಸಾಹಿತ್ಯ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವರು.

ಕ್ರೀಡೆ : – ಪಿ.ಟಿ. ಉಷಾ – ಅಥ್ಲೆಟ್, ಅಪರ್ಣಾ ಪೋಪಟ್ – ಬ್ಯಾಡ್‌ಮಿಂಟನ್, ಮಿಲಾ ಚೌಧರಿ – ಈಜುಗಾರ್ತಿ, ಶಾಂತ ರಂಗಸ್ವಾಮಿ – ಕ್ರಿಕೆಟ್, ರೀತ್ ಇಬ್ರಾಹಿಂ, ಅಶ್ವಿನಿ ನಾಚಪ್ಪ, ನಿಶಾ ಮಿಲ್ಲೆಟ್, ಕರ್ಣಂ ಮಲ್ಲೇಶ್ವರಿ, ಗುಡ್ಡಂಡ ಪ್ರಮೀಳ, ಅಶ್ವಿನಿ, ಸಾನಿಯಾ ಮಿರ್ಜಾ ಇವರನ್ನು ಹೆಸರಿಸಬಹುದು.

ಆಡಳಿತ :– ಕಿರಣ್ ಬೇಡಿ ಐ.ಪಿ.ಎಸ್., ಕಾಂಚನಾ ಭಟ್ಟಾಚಾರ್ಯ ಐ.ಪಿ.ಎಸ್., ಮೀರಾದತ್ತ ಐ.ಎ.ಎಸ್., ವಿಜಯಲಕ್ಷ್ಮಿ ಬಿದರಿ, ಶಾಲಿನಿ ರಜನೀಶ್ ಮೊದಲಾದವರು ಭಾರತೀಯ ಆಡಳಿತದಲ್ಲಿ ಅಮೋಘ ಸೇವೆಯನ್ನು ಸಲ್ಲಿಸಿರುವರು.

ನ್ಯಾಯಾಂಗ :– ಮಹಿಳೆಯರು ನ್ಯಾಯವಾದಿಗಳಾಗಿ, ನ್ಯಾಯಾಧೀಶರಾಗಿ ಉತ್ತಮ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಕೇರಳದ ಮೀರಾ ಸಾಹಿಬಾ ಫಾತಿಮಾದೇವಿ, ಕರ್ನಾಟಕದ ಮಂಜುಳ ಚೆಲ್ಲೂರ್, ಹೇಮಲತಾ ಮಹಿಷಿಯವರನ್ನು ಹೆಸರಿಸಬಹುದು.

ವಿಜ್ಞಾನ ಮತ್ತು ತಂತ್ರಜ್ಞಾನ :– ಕರ್ನಾಟಕದ ಮಾನವ ಕಂಪ್ಯೂಟರೆಂದೇ ಪ್ರಸಿದ್ಧಿ ಪಡೆದಿರುವ ಶಕುಂತಲಾದೇವಿ, ಹರಿಯಾಣದ ಕಲ್ಪನಾ ಚಾವ್ಲಾ, ನಾಸಾ ಗಗನಯಾತ್ರಿ ಸುನೀತಾ ವಿಲಿಯಮ್ಸ್ 190 ದಿನಗಳಷ್ಟು ದೀರ್ಘಕಾಲ ಅಂತರಿಕ್ಷದಲ್ಲಿ ತಂಗಿದ್ದ ವಿಶ್ವದ ಮೊದಲ ಮಹಿಳೆ ಎಂಬ ಹಿರಿಮೆಗೆ ಪಾತ್ರರಾಗಿದ್ದಾರೆ.

ಒಟ್ಟಿನಲ್ಲಿ 'ಅಡುಗೆ ಮನೆಯಲ್ಲಿ ಸ್ತ್ರೀ' 'ಹೊಲದಲ್ಲಿ ಪುರುಷ' ಎಂಬ ನಾಣ್ನುಡಿ ಇಂದು ಅರ್ಥಹೀನವಾಗಿದೆ. ನಗರೀಕರಣ, ಕೈಗಾರೀಕರಣ, ಶಿಕ್ಷಣ, ಉದ್ಯೋಗ ಇವೆಲ್ಲವುಗಳಿಂದ ಸ್ತ್ರೀಯರು

ಸುಶಿಕ್ಷಿತರಾಗಿ ಸಾಕಷ್ಟು ಉದ್ಯೋಗದ ಅವಕಾಶಗಳನ್ನು ಗಿಟ್ಟಿಸಿಕೊಂಡು "ಉದ್ಯೋಗಂ ಸ್ತ್ರೀ ಲಕ್ಷಣಂ" ಎಂಬಂತೆ ಪುರುಷರಿಗೆ ಸರಿಸಾಟಿಯಾಗಿ ವ್ಯವಹರಿಸತೊಡಗಿರುವರು.

ಸರಕಾರ ಕೂಡ ಸ್ತ್ರೀಯರ ಸಾಕ್ಷರತೆಯ ಪ್ರಮಾಣಕ್ಕೆ ಒತ್ತುಕೊಡುವ ನಿಟ್ಟಿನಲ್ಲಿ ಪಿ.ಯು.ಸಿ.ವರೆಗೆ ಸರ್ಕಾರಿ ಕಾಲೇಜಿನಲ್ಲಿ ಓದುತ್ತಿರುವ ವಿದ್ಯಾರ್ಥಿನಿಯರಿಗೆ ಉಚಿತ ಶಿಕ್ಷಣ, ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಶುಲ್ಕದಲ್ಲಿ ರಿಯಾಯಿತಿ, ವಿದ್ಯಾರ್ಥಿ ವೇತನ, ವಸತಿ ನಿಲಯದ ಸೌಕರ್ಯ ಹಾಗೂ ಸಾಲ ಸೌಲಭ್ಯ ನೀಡಲಾಗುತ್ತಿದೆ. ಹಳ್ಳಿಯ ಮಹಿಳೆ ದಿಲ್ಲಿಯವರೆಗೆ ತಲುಪಿದ್ದಾಳೆ. ಕುಟುಂಬದ ನಿರ್ವಹಣೆಯಲ್ಲಿ ವಿಶೇಷ ಜವಾಬ್ದಾರಿಯನ್ನು ಹೊತ್ತು ಇಡೀ ಕುಟುಂಬವನ್ನು ಆಧುನೀಕತೆಯತ್ತ ಮುನ್ನಡೆಸುವಲ್ಲಿ ಸಫಲಳಾಗಿದ್ದಾಳೆ. ಸಮಾಜದ ಕಣ್ಣಾಗಿ, ನಿಷ್ಪಕ್ಷವಾದ ಮನಸ್ಸಿನಿಂದ ದುಡಿಯುತ್ತ, ಮಗುವಿಗೆ ತಾಯಿಯಾಗಿ, ಗಂಡನಿಗೆ ಒಳ್ಳೆಯ ಹೆಂಡತಿಯಾಗಿ, ಹೆತ್ತವರಿಗೆ ಕೀರ್ತಿ ತರುವ ಮಗಳಾಗಿ ಸಮಾಜದ ಏಳಿಗೆಯಲ್ಲಿ ಪುರುಷರಷ್ಟೇ ಸರಿಸಮಾನಳಾಗಿ ದುಡಿಯುತ್ತಿರುವಳು.

ಬೆತ್ತಲಾಗದ ಬದುಕು



ಹುಚ್ಚು ಮನಸಿದು ಮೆಟ್ಟಿ ನಡೆದಿದೆ
ಕಟ್ಟಿ ಹೃದಯದ ತಲ್ಲಣ
ಸುಪ್ತ ಭಾವದಿ ಸುಖದ ಸಾಲಿದೆ
ಇನಿಯನೊಲವಿನ ರಿಂಗಣ

✍ ಕೊಟ್ಟಕೇರಿಯನ ಲೀಲಾದಯಾನಂದ
ಸಬ್ ಡಿವಿಷನಲ್ ಇಂಜಿನಿಯರ್
ಬಿ.ಎಸ್.ಎನ್.ಎಲ್, ಮಡಿಕೇರಿ


ಪ್ರೇಮ ನಿಸ್ವನ ನಲವು ಜೀವನ
ಭರವಸೆಯು ಅನಿಕೇತನ
ಮನದ ನೋವಿಗೆ ಮಾತೆ ಲೇಪನ
ಬೊಗಸೆ ಮಮತೆಯ ಸಿಂಚನ

ಬರಡು ಬದುಕಲಿ ಬೇಕು ಕಾತರ
ಹಲವು ನಂಬಿಕೆ ಹಂದರ
ಮುಗಿಲ ತಬ್ಬಿದೆ ಬಾನ ಚಂದಿರ
ಮುಚ್ಚಿ ಮನಸಿನ ಹಾದರ



ಕಾಷ್ಠ ವ್ಯಸನಕೆ ಕನಸು ಕರಗಿದೆ
ಒಳಗೆ ಭೀತಿಯ ತಳಕಿದೆ
ಸವಿಯ ಸ್ವಪ್ನದ ಸಾಲು ನೂರಿದೆ
ಬೆತ್ತಲಾಗದ ಬದುಕಿದೆ

ಪ್ರವಾಸದ ಪ್ರಾಮುಖ್ಯತೆ



✍ ಕುಯಿಂತೋಡು ದಾಮೋದರ

'ದೇಶ ಸುತ್ತು ಕೋಶ ಓದು' ಎಂಬ ಜನಪ್ರಿಯ ನಾಣ್ನುಡಿ ನೀವು ಕೇಳಿರಬಹುದು. ಪುಸ್ತಕ ಜ್ಞಾನದೊಂದಿಗೆ ದೇಶ – ವಿದೇಶ ಸುತ್ತಿ ಪ್ರತ್ಯಕ್ಷ ಜ್ಞಾನ ಪಡೆದಾಗ ಅದಕ್ಕೊಂದು ಅರ್ಥ ಬಂದಂತಾಗುತ್ತದೆ. ಇಲ್ಲಿ ಗಳಿಸುವುದು ಅನುಭವ ಜನ್ಯ ಜ್ಞಾನ. ನಾವು ಓದಿ ತಿಳಿದ ಕೇಳಿದ ಸ್ಥಳಗಳನ್ನೋ, ವಿಷಯಗಳನ್ನೋ ಕಣ್ಣಾರೆ ಕಂಡು ಅನುಭವಿಸಿ ಜೀರ್ಣಿಸಿಕೊಳ್ಳುವ ಸುವರ್ಣಾವಕಾಶ ಸಿಗುವುದು ಪ್ರವಾಸದಲ್ಲಿ. ಪರ್ಯಟನೆಯ ಸಂದರ್ಭದಲ್ಲಿ ಆಯಾಚಿತವಾಗಿ ಹತ್ತು ಹಲವು ವೈವಿಧ್ಯಮಯವಾದ ಸಂಗತಿಗಳು ಅನುಭವ ಸಂಪತ್ತನ್ನು ತುಂಬಿಕೊಡುತ್ತವೆ. ನೋಟಕ್ಕೆ ನಿಲುಕದ ದೃಶ್ಯ ವೈಭವ, ಮೈ–ಮನಗಳನ್ನು ಮುದಗೊಳಿಸುವ ಆನಂದಾನುಭವ, ಬುದ್ಧಿ ನೋಟಗಳಿಗೆ ಅತೀತವಾದ ಮತ್ಯಾವುದೋ ಅನುಭೂತಿ, ನಮ್ಮ ಚಿಂತನಾಶಕ್ತಿಯನ್ನು ಹರಿತಗೊಳಿಸುವ ಸ್ಥಿತಿ, ಇವೆಲ್ಲವೂ ಒಂದೊಂದಾಗಿ ಅಥವ ಒಟ್ಟಾಗಿ ಆವಿರ್ಭವಿಸುತ್ತಾ ಪ್ರವಾಸಿಯನ್ನು ಅನುಕ್ಷಣವೂ ತೆರೆದ ಮನದ ನಿರಂತರ ಗ್ರಾಹಕನನ್ನಾಗಿ ಮಾಡಿಬಿಡುತ್ತದೆ.

ಪ್ರವಾಸ ಒಂದು ವಿಶಿಷ್ಟ ಅನುಭವ. **"ಪ್ರವಾಸವನ್ನು ಇಷ್ಟಪಡದವರು ಯಾರೂ ಸಿಗಲಾರರು. ಪ್ರವಾಸವೆಂದೊಡನೆ ಹುರುಪು, ಉತ್ಸಾಹ, ಲವಲವಿಕೆ, ಏನೇನೋ ನಿರೀಕ್ಷೆಗಳು, ನಮ್ಮನ್ನು ಮುತ್ತಿಕೊಳ್ಳುತ್ತವೆ."** ಎಳೆಯ ಮಗುವೊಂದನ್ನು ತೊಟ್ಟಿಲಿನಿಂದ ಎತ್ತಿ ಹೊರತಂದರೆ ಸುತ್ತುಮುತ್ತಲ ನೋಟವನ್ನು ಬೆರಗುಗಣ್ಣಿಂದ ನೋಡುತ್ತಾ ಆನಂದಿಸುವುದನ್ನು ಕಾಣಬಹುದು. ಪ್ರವಾಸ ಪ್ರಯಾಸಕರವೂ ಹೌದು. ಯಾತ್ರೆ ಆದರೂ ಅಷ್ಟೆ. ಪ್ರವಾಸಕ್ಕೂ ಯಾತ್ರೆಗೂ ಮೂಲಭೂತ ವ್ಯತ್ಯಾಸವಿದೆ. ಯಾತ್ರೆ ಎನ್ನುವ ಪದ ಕಿವಿಗೆ ಬಿದ್ದೊಡನೆ ಸಾಮಾನ್ಯವಾಗಿ ಒಂದು ಪವಿತ್ರ ವಾತಾವರಣ ನಿರ್ಮಾಣವಾಗುತ್ತದೆ. ಕಾಶಿಗೋ, ರಾಮೇಶ್ವರಕ್ಕೋ, ಪ್ರಯಾಗಕ್ಕೋ ಹೊರಟಿದ್ದಾರೆ ಎನ್ನುವ ಭಾವನೆ ಮೂಡುತ್ತದೆ. ಪ್ರವಾಸವೆಂದರೆ ಕೇವಲ ಪುಣ್ಯ ಕ್ಷೇತ್ರಗಳಿಗೆ ಹೋಗಿ ಬರುವುದಲ್ಲ. ಅದು ದೇಶ ವಿದೇಶಗಳಲ್ಲಿನ ಚಾರಿತ್ರಿಕ ಸ್ಥಳ, ಕೈಗಾರಿಕಾ ನಗರ, ಬಂದರು, ವ್ಯಾಪಾರ ಕೇಂದ್ರ, ಗಿರಿ, ಕಾನನ, ಕಣಿವೆಗಳಿಂದ ಕೂಡಿದ ಪ್ರಾಕೃತಿಕ ಸುಂದರ ಸ್ಥಳಗಳ ವೀಕ್ಷಣೆ ಆಗಿರುತ್ತದೆ. ಅಂತೂ ದೇಶ – ವಿದೇಶ ಸುತ್ತುವುದಕ್ಕೆ ಪ್ರವಾಸವೆಂದು ಹೇಳುವುದು ರೂಢಿ. ನಮ್ಮ ಅಭ್ಯಾಸಗಳನ್ನು, ದೈನಂದಿನ ಕರ್ತವ್ಯಗಳನ್ನು ಬದಿಗೊತ್ತಿ, ನಮ್ಮ ಆವಶ್ಯಕತೆಗಳನ್ನು ಕಡಿತಗೊಳಿಸಿ ಪರಿಚಿತ ಜಗತ್ತಿನಿಂದ ಅಪರಿಚಿತ ಜಗತ್ತಿಗೆ ಹೋಗುವುದೇ ಪ್ರವಾಸ. ಇಲ್ಲಿ ನೋಡಲಿರುವುದೆಲ್ಲ ಅನಿರೀಕ್ಷಿತ ಮತ್ತು ಹೊಸತಾದದ್ದು. ನಮ್ಮ ದೇಶದ ಮಟ್ಟಿಗೆ ಹೇಳುವುದಾದರೆ ಭಾರತವೊಂದು ಮಿನಿಜಗತ್ತೇ ಸರಿ. ಇಲ್ಲಿಯ ಹಳ್ಳಿ, ನಗರ, ನದಿ, ಕೆರೆ, ಪರ್ವತ ಸಾಲುಗಳು, ಆಗಸವನ್ನು ಚುಂಬಿಸುವ ಗಿರಿ, ಶಿಖರಗಳು, ಶಿಲ್ಪ, ಸಾಹಿತ್ಯ, ಕಲೆ, ಸಂಗೀತ, ವಿಜ್ಞಾನ, ಮಾನವ ನಿರ್ಮಿತ ಗುಹಾಲಯ, ಕೋಟೆ, ಕೊತ್ತಲ ಸೌಧಗಳು, ವಿಭಿನ್ನ ಜಾನಪದ ಜೀವನ ಶೈಲಿ ಎಲ್ಲವೂ ಹೃದಯವನ್ನು ಮುಟ್ಟಿ ವಿಶಾಲಗೊಳಿಸಿ ಏಕತಾ ಭಾವನೆಯನ್ನು ನೆಲೆಗೊಳಿಸುತ್ತದೆ. ಸರ್‌ಸಿ.ಆರ್. ರೆಡ್ಡಿಯವರು ಕಾಲೇಜಿನಲ್ಲಿ ಇಂಗ್ಲೀಷ್ ಪಾಠ ಮಾಡುವಾಗ ವಿದ್ಯಾರ್ಥಿಗಳನ್ನು ಉದ್ದೇಶಿಸಿ "Make a pilgrimage to the Library" ಎಂದು ಗಂಭೀರವಾದ ಧ್ವನಿಯಲ್ಲಿ ಉಪದೇಶ ಮಾಡುತ್ತಿದ್ದರಂತೆ. ಇದು ಜ್ಞಾನಾರ್ಜನೆಯ ಯಾತ್ರೆ.

ಹಿಂದೆ ಆದುದನ್ನು, ಈಗ ಇರುವುದನ್ನು ತಿಳಿದುಕೊಂಡು ಇರಬೇಕಾದುದನ್ನು ಬೆಳೆಸಿಕೊಳ್ಳಲು ಪ್ರಯತ್ನಿಸುವುದು ಮನುಷ್ಯ ಲಕ್ಷಣ. ನಮ್ಮ ಭಾರತೀಯತೆಯ – ನಮ್ಮ ಸಂಸ್ಕೃತಿ, ಪರಂಪರೆ, ಇತಿಹಾಸ, ತತ್ವಜ್ಞಾನ, ಜೀವನಾದರ್ಶಗಳ ಹಿರಿಮೆ ಈ ಲೋಕದಲ್ಲಿ ಸಾಟಿಯಿಲ್ಲದ್ದು. ಈ ದೇಶದ ಮೇಲಾದ ಅವ್ಯಾಹತ ಧಾಳಿಯನ್ನು ಎದುರಿಸಿ, ಅನುಭವಿಸಿ, ನೂರಾರು ಶತಮಾನಗಳವರೆಗೆ ನಮ್ಮ ರಾಷ್ಟ್ರ ಜೀವನವನ್ನು ವೈಭವಶಾಲಿಯನ್ನಾಗಿ ಮಾಡಿದ್ದಷ್ಟೆ ಅಲ್ಲ. ಜಗತ್ತಿಗೆಲ್ಲ ದಿವ್ಯ ಜೀವನದ ಸುಧೆ ಕುಡಿಸಿದಂತಹ ಅದ್ಭುತ ಚೈತನ್ಯ ದೇಶದ ಉದ್ದಗಲಕ್ಕೆ ಸುತ್ತಾಡಿಯೇ ತಿಳಿದುಕೊಳ್ಳಬೇಕಾಗುತ್ತದೆ. ಇಂದಿಗೂ ಸಹ ಆಧುನಿಕ ಜೀವನದ ಅನೇಕ ವಿಕಟ ಸಮಸ್ಯೆ ಸವಾಲುಗಳಿಗೆ ಸಮರ್ಪಕವಾಗಿ ಸಮಾಧಾನ ನೀಡಬಲ್ಲಂತಹ ಸಮಗ್ರ ಜೀವನದೃಷ್ಟಿ ವಿಚಾರ ಸಂಪತ್ತು ಈ ನೆಲದಲ್ಲಿದೆ. ಇದೆಲ್ಲ ಹೌದಾದರೂ ಇಂದು ಇಲ್ಲಿರುವುದೆಲ್ಲ ಸರಿಯೆಂದೂ ಅರ್ಥವಲ್ಲ. ಇದನ್ನೆಲ್ಲ ತಿಳಿದುಕೊಳ್ಳಲು ಪ್ರವಾಸ ನೆರವಿಗೆ ಬರುತ್ತದೆ.

ಪ್ರವಾಸದ ಕಲ್ಪನೆ ಮಾನವನ ಇತಿಹಾಸದೊಂದಿಗೆ ಬೆಳೆದು ಬಂದಿರಬೇಕು. ನಮ್ಮ ಪುರಾಣಗಳಲ್ಲಿಯೂ ಇದರ ಉಲ್ಲೇಖವಿದೆ. ನಾರದನಂತೂ ತ್ರಿಲೋಕ ಸಂಚಾರಿ. ಅವನು ತ್ರಿಲೋಕಗಳಲ್ಲಿ ಸಂಚರಿಸಿ ಮಾಹಿತಿಗಳನ್ನು ಹಂಚುವ ಕೆಲಸ ಮಾಡುತ್ತಿದ್ದ. ಈಶ್ವರ ಪಾರ್ವತಿಯರ ಮಕ್ಕಳಾದ ಷಣ್ಮುಖ, ಗಣಪತಿಯರ ಪ್ರಪಂಚ ಪರ್ಯಟನ ಸ್ಪರ್ಧೆಯಲ್ಲಿ ವಿನಾಯಕನ ಪ್ರಜ್ಞೆ, ಷಣ್ಮುಖನ ಸಾಹಸ ವ್ಯಕ್ತವಾಗುತ್ತದೆ. ಒಬ್ಬನದು ಅಂತರ್ಮುಖ ದೃಷ್ಟಿಯಾದರೆ ಇನ್ನೊಬ್ಬನದು ಬಹಿರ್ಮುಖ ದೃಷ್ಟಿ. ಅರ್ಜುನ ಬಲರಾಮರ ತೀರ್ಥಯಾತ್ರಾ ಪ್ರಸಂಗ ಮಹಾಭಾರತ ಕತೆಯಲ್ಲಿದೆ.

ಇಲ್ಲೊಂದು ಉಲ್ಲೇಖಿಸಬಹುದಾದ ಸ್ವಾರಸ್ಯ ಸಂಗತಿಯೆಂದರೆ **'ಪ್ರವಾಸ'** ಅನ್ನುವ ಒಂದು ಕಲ್ಪನೆ. ಅದರ ಆಧುನಿಕ ಅರ್ಥದಲ್ಲಿ ಸಾಂಪ್ರದಾಯಿಕವಾದ ಭಾರತೀಯ ಮನಸ್ಸಿಗೆ ಹೊಂದಿಕೊಳ್ಳುವುದಿಲ್ಲ. ಧಾರ್ಮಿಕತೆಗೆ ಹೊರತಾದ ಮತ್ತು ಸುಮ್ಮನೆ ಸಂತೋಷಕ್ಕೋಸ್ಕರ ಕೈಗೊಳ್ಳುವ ಯಾವುದೇ ಸಂಚಾರ ಭಾರತೀಯ ಹಿಂದೂ ಮನಸ್ಸಿಗೆ ಅಷ್ಟಾಗಿ ಪ್ರಿಯವಾದುದಾಗಿರಲಿಲ್ಲ. ಆದ್ದರಿಂದ ಧಾರ್ಮಿಕ ವಿಧಿಗಳಿಗಾಗಿ ಪಾಪ ಪರಿಹಾರಕ್ಕೆ ಮತ್ತು ಪುಣ್ಯ ಸಂಪಾದನೆಗಾಗಿ ಕೈಗೊಳ್ಳುವ ಪರ್ಯಟನೆಯನ್ನು ಓರ್ವ ಪ್ರವಾಸಿಯ ಮನೋಧರ್ಮದೊಂದಿಗೆ ಸಮೀಕರಿಸಿ ನೋಡಲಾಗುವುದಿಲ್ಲ.

ಪ್ರವಾಸಿಯ ಅನುಭವಗಳು ಚರಿತ್ರೆಯ ಒಂದು ಭಾಗವಾಗಿರುವ ಹಾಗೆ ಸಾಹಿತ್ಯದ ಒಂದು ಭಾಗವೂ ಆಗಿರುತ್ತದೆ ಎಂಬ ತಿಳುವಳಿಕೆ ಮೂಡಿದ್ದು ಪಾಶ್ಚಿಮಾತ್ಯರಿಂದ. ನಾವು ನಮ್ಮ ಪ್ರಾಚೀನ ಚರಿತ್ರೆ ಕಟ್ಟಿದ್ದೇ ಮೆಗಸ್ತನೀಸ್, ಪಾಯಸ್, ಫಾಹಿಯಾನ್, ಹೂಯೆನ್‌ತ್ಸಾಂಗ್, ಅಬ್ದುಲ್ ರಝಾಕ್ ಮುಂತಾದ ವಿದೇಶಿ ಪ್ರವಾಸಿಗರ ಬರಹಗಳಿಂದ. ಅದೇ ಕಾಲದಲ್ಲಿ ಏಕೆ ಮೊನ್ನೆ ಮೊನ್ನೆಯವರೆಗೂ ಸಾಗರದಾಚೆಯ ಪ್ರವಾಸಗಳಿಗೆ ಧಾರ್ಮಿಕ ನಿಷೇಧವಿತ್ತಲ್ಲ, ಒಂದು ಕಾಲದಲ್ಲಿ ಹಾಗೆ ಹೋದವರನ್ನು ಜಾತಿ ಬಹಿಷ್ಕಾರಕ್ಕೆ ಒಳಗಾಗಿಸುತ್ತಿದ್ದರು. ಇಲ್ಲವೇ ಅವರಿಗೆ ಪ್ರಾಯಶ್ಚಿತ ಮಾಡಿ ಸ್ವೀಕರಿಸುತ್ತಿದ್ದರು. ಸಾಗರ ದಾಟಿದವರು ಪ್ರಬಲರಾದರು. ವಸಾಹತು ಸ್ಥಾಪನೆ ಮಾಡಿದರು. ಅಂಜಿದವರು ದುರ್ಬಲರಾದರು. ವಸಾಹತು ನೀತಿಗೆ ಒಳಗಾದರು.

ಪ್ರವಾಸವನ್ನು ಕೈಗೊಳ್ಳುವವರು ಬದುಕಿನ ಬೇರೆ ಬೇರೆ ಕ್ಷೇತ್ರಗಳಿಗೆ ಸಂಬಂಧಪಟ್ಟವರಾಗಿದ್ದರೆ ನಿದರ್ಶನಕ್ಕೆ ವಿಜ್ಞಾನ, ಸಮಾಜಶಾಸ್ತ್ರ, ಚರಿತ್ರೆ, ಕಲೆ, ಸಂಗೀತ, ರಾಜಕೀಯ ಇತ್ಯಾದಿ ವಿಷಯಾಸಕ್ತರಾಗಿದ್ದರೆ ಅವರ ವೈವಿಧ್ಯಮಯ ಅನುಭವಗಳನ್ನು ಹಂಚಿಕೊಂಡಾಗ ನಮ್ಮ ಅನುಭವಗಳು ಶ್ರೀಮಂತವಾಗುತ್ತವೆ. ಪಾಶ್ಚಿಮಾತ್ಯ–ಪೂರ್ವಾತ್ಯ ದೇಶಗಳಲ್ಲಿ ವಸಾಹತು ಸ್ಥಾಪನೆ ಸಾಧ್ಯವಾದ ಬಗೆ, ಜಪಾನಿನಂತಹ ದ್ವೀಪರಾಷ್ಟ್ರ


ಯುರೋಪಿನ ರಾಷ್ಟ್ರಗಳಿಗೆ ಪೈಪೋಟಿ ನೀಡುವ ಸಾಮರ್ಥ್ಯ ಪಡೆದ ರಹಸ್ಯ, ಮೊನ್ನೆ ಮೊನ್ನೆಯವರೆಗೆ ಅಂತರ್‌ಯುದ್ಧದಲ್ಲಿ ಮುಳುಗಿದ್ದ ವಿಯೆಟ್ನಾಂ, ಕೊರಿಯಾ ದೇಶಗಳು ಆರ್ಥಿಕ ಶಕ್ತಿಯಾಗಿ ಬೆಳೆದ ರೀತಿ **"ಬಡತನದಲ್ಲಿ ಭಾರತಕ್ಕಿಂತ ಹಿಂದಿದ್ದ ಚೀನ ಕೃಷಿ, ಕೈಗಾರಿಕೆ, ತಾಂತ್ರಿಕತೆ ಎಲ್ಲ ರಂಗಗಳಲ್ಲಿ ಮುನ್ನಡೆ ಸಾಧಿಸಿದ ಪವಾಡ ತಿಳಿಯಬೇಕಾದರೆ ಓದುವುದರೊಂದಿಗೆ ಕಣ್ಣಾರೆ ಕಂಡು ತಿಳಿದುಕೊಳ್ಳುವುದೇ ಮೇಲಲ್ಲವೇ?"** ಅಂಧಾನುಕರಣೆಯ ಬದಲು ಅಲ್ಲಿಯ ಜನಜೀವನದ ಅಂತಃಸತ್ವವನ್ನು ತಿಳಿದುಕೊಂಡು ಅಳವಡಿಸಿಕೊಳ್ಳುವುದರಲ್ಲಿ ಅರ್ಥವಿದೆ.

ನಮ್ಮ ಕಾರ್ಯಕ್ರಮ ಯಾವುದೇ ಇರಲಿ, ಅದಕ್ಕೊಂದು ಯೋಜನೆ ಇರಬೇಕು. ಯೋಜನೆ ಪ್ರಗತಿಗೆ ಮತ್ತು ಯಶಸ್ಸಿಗೆ ಅಡಿಗಲ್ಲು. ಪ್ರವಾಸ ಹೊರಡುವ ಮೊದಲು ಪ್ರವಾಸದ ಉದ್ದೇಶ, ಸಂದರ್ಶಿಸಬೇಕಾದ ಸ್ಥಳ, ದಾರಿ ಇತ್ಯಾದಿ ಮಾಹಿತಿ ಪಡೆದಿರಬೇಕು. ಪ್ರವಾಸ ಸಾಹಿತ್ಯಗಳಲ್ಲದೆ ಪ್ರವಾಸ ಇಲಾಖೆಯೂ ನೆರವಿಗೆ ಬರುತ್ತದೆ. ಆರೋಗ್ಯ ಪಾಲನೆ ಪ್ರವಾಸದ ಯಶಸ್ಸಿಗೆ ಬಹುಮುಖ್ಯ.

ಪ್ರವಾಸಿಯು ಭಾಷೆಗಳನ್ನು ಬಲ್ಲವನಾಗಿದ್ದು ಒಬ್ಬ ಚಿಂತಕ, ವಿಷಯ ಗ್ರಾಹಿ, ಸೌಂದರ್ಯೋಪಾಸಕ, ದೈವಾರಾಧಕ, ವ್ಯವಹಾರ ತಜ್ಞ, ಕಷ್ಟ ಸಹಿಷ್ಣು ಹೀಗೆ ಹಲವಾರು ರೀತಿಯ ಗುಣ ಸ್ವಭಾವಗಳನ್ನು ಹೊಂದಿದ್ದರೆ ಅವನ ಪ್ರವಾಸವೋ ಯಾತ್ರೆಯೋ ಸುಖಪ್ರದವಾಗಿ, ಯಶಪ್ರದವಾಗಿ ಕೊನೆಗೊಳ್ಳುತ್ತದೆ. ಒಟ್ಟಾರೆಯಾಗಿ ಪರ್ಯಟನ ಮನೋಭಾವನೆ ಎಂಬುದು ಮಾನವ ಸ್ವಭಾವಜನ್ಯ ಸಂಗತಿ. ಇದರ ಇತಿಹಾಸ ಮನುಕುಲದ ಇತಿಹಾಸ.

◈◈◈◈◈◈◈◈◈◈◈◈◈◈◈◈◈◈◈◈◈◈◈◈◈◈◈◈◈◈◈◈◈◈◈◈

ಮಿನುಗು ತಾರೆ



ಗುರುತಿಸಿಕೊಂಡಿದ್ದೀರಿ ಅಪ್ಪಯ್ಯ ಗೌಡ ಎಲ್ಲೂ ಅಸ
ಡ್ಡೆ ತೋರಿಸದೆ ಮುಂದೆ ಮುಂದೆ ಸಾಗಿ ಹೆಸರನ್ನು ಗಳಿಸಿದ್ದೀರಿ
ಮರೆಯಲು ಅಸಾಧ್ಯ ಎಂದೆಂದೂ... ನಿಮ್ಮಾ...
ನೆಚ್ಚಿನ ಶಿಸ್ತಿನ ಸಿಪಾಯಿ ನೀವು
ಅಂದುಕೊಂಡಿದ್ದನ್ನು ಮಾಡಿಯೇ ತೀರಿಸುವ ಛಲ, ಅ
ಪ್ಪನ ನಿಯತ್ತಿನ ನಿಮ್ಮಯ ಧೈರ್ಯ – ಸದ್ಗುಣಿ, ಅ
ಯ್ಯ ಎಂದರೆ ಹಿರಿಯರೆಂಬ ಭಾವನೆಯ
ಗೌರವಾನ್ವಿತ ಹುದ್ದೆಯ ಅಲಂಕರಿಸಿ
ಡಮ್ ಡಮ್ ಗುಂಡಿನ ಮಳೆಗರೆದು ಶತ್ರುಗಳ
ಸದೆ ಬಡಿದು **"ಅಪ್ಪಯ್ಯ ಗೌಡ"** ಹೆಸರಿನಲ್ಲಿ
ರಾರಾಜಿಸುತ್ತಿರೋ ನಿಮಗೆ ನನ್ನಯ
"ಕೋಟಿ ಕೋಟಿ ನಮನ"



✍ ಕಡ್ಲೇರ ಅಂಕಿತ ಧರ್ಮಪಾಲ್‌ಪ್ರಭು
ಮಡಿಕೇರಿ

ಆಯುರ್ವೇದ ಮಹತ್ವ



✍ ಮೂಡಗದ್ದೆ ಡಾ॥ ಅರ್ಚನಾ ಸುಮನ್
2ನೇ ರುದ್ರುಗುಪ್ಪೆ ಗ್ರಾಮ
ಕಂಡಂಗಾಲ ಅಂಚೆ, ವೀರಾಜಪೇಟೆ ತಾಲೂಕು

"ಸ್ವಸ್ಥಸ್ಯ ಸ್ವಾಸ್ಥ್ಯ ರಕ್ಷಣಂ, ಆತುರಸ್ಯ ವಿಕಾರ ಪ್ರಶನಂ ಚ" ಅಂದರೆ, ಆರೋಗ್ಯವಂತನಲ್ಲಿ ಆರೋಗ್ಯವನ್ನು ಕಾಪಾಡುವುದು ಹಾಗೂ ರೋಗಗ್ರಸ್ಥನಿಂದ ರೋಗವನ್ನು ಹೋಗಲಾಡಿಸುವುದು ಆಯುರ್ವೇದದ ಪ್ರಥಮ ಉದ್ದೇಶ. ಆಯುರ್ವೇದದ ಉಪಯೋಗ, ಅದರಿಂದಾಗುವ ಸತ್ಪರಿಣಾಮ ಕೇವಲ ರೋಗಿಗಳಿಗೆ ಮಾತ್ರವಲ್ಲ, ಪ್ರತಿಯೊಬ್ಬ ಮಾನವನ ಮೇಲೂ ಆಗಬೇಕು ಎನ್ನುವುದು ಮುಖ್ಯವಾಗಿದೆ.

ಹಿಂದೆ ಎಲ್ಲೆಡೆ ಕಾಯಿಲೆಗಳು ತುಂಬಿ ಹೋಗಿದ್ದವು. ಇದರಿಂದ ಸಮಸ್ಯೆಗೆ ಒಳಗಾದ ಋಷಿ ಮುನಿಗಳು ಒಟ್ಟಾಗಿ ಸೇರಿ ಬ್ರಹ್ಮ ದೇವರ ಮೊರೆಹೋದರಂತೆ. ಸಸ್ಯಗಳು, ನಾರು–ಬೇರುಗಳು, ಗೆಡ್ಡೆ–ಗೆಣಸುಗಳು ಜಗತ್ತಿಗೆ ಪ್ರಕೃತಿ ಕೊಡುಗೆಯಾಗಿ ನೀಡಿರುವ ಅಮೂಲ್ಯ ಸಿದ್ಧೌಷಧಗಳೆಂದು ಪ್ರತಿಪಾದಿಸಿದ ಬ್ರಹ್ಮಾದಿ ದೇವತೆಗಳು ಅವುಗಳ ಉಪಯೋಗದಿಂದ ಆರೋಗ್ಯ ಭಾಗ್ಯ ಹೇಗೆ ಸಿದ್ಧಿಸುತ್ತದೆ ಎಂಬುದಾಗಿ ತಿಳಿಹೇಳಿದರಂತೆ. ಹೀಗೆ ದೈವದತ್ತವಾಗಿ ಬಂದ ದಿವ್ಯೌಷಧ ಪದ್ಧತಿಯನ್ನು ಮರೆತಿರುವ ಸಮಾಜ ಇಂದು ಕೇವಲ ರಾಸಾಯನಿಕ ಜಗತ್ತಿಗೆ ಒಗ್ಗಿಹೋಗಿದೆ.

ನಮ್ಮ ಆರೋಗ್ಯ – ಅನಾರೋಗ್ಯಗಳನ್ನು ಪ್ರತಿಬಿಂಬಿಸುವ ವಾತ – ಪಿತ್ಥ–ಕಫ ಇವುಗಳ ಸಾಮ್ಯಾವಸ್ಥೆ ಹಾಗೂ ವಿಷಮಾವಸ್ಥೆಗಳೇ ಕ್ರಮವಾಗಿ ಸಮುಚ್ಚಿತ ಆಹಾರ – ವಿಹಾರಗಳಾಗಿ ಆರೋಗ್ಯಕ್ಕೆ ಕಾರಣವಾದರೆ, ಇದರ ವಿಪರೀತತೆ ಅನಾರೋಗ್ಯಕ್ಕೆ ಕಾರಣವಾಗುತ್ತದೆ. ಕಾಲಕಾಲಕ್ಕೆ ಉಂಟಾಗುವ ನೈಸರ್ಗಿಕ ಬದಲಾವಣೆಗಳಿಂದಲೂ ಕೂಡ ವಾತ – ಪಿತ್ಥ – ಕಫಗಳಲ್ಲಿ ಏರುಪೇರು ಉಂಟಾಗುತ್ತದೆ. **"ಊಟ ಬಲ್ಲವನಿಗೆ ರೋಗವಿಲ್ಲ"** ಎನ್ನುವ ಮಾತಿದೆ. ಹಾಗೆಯೇ ನಾವು ಮೊದಲೇ ನಮ್ಮ ಜೀವನದಲ್ಲಿ ಒಳ್ಳೆಯ ಆಚರಣೆಗಳನ್ನು, ಹಿತಮಿತವಾದ ಆಹಾರ – ವಿಹಾರ ಕ್ರಮಗಳನ್ನು ಅಳವಡಿಸಿಕೊಳ್ಳಬೇಕು. ಇದನ್ನೇ "ಸ್ವಸ್ಥ ವೃತ್ತ" ಪರಿಪಾಲನೆ ಎಂಬುದಾಗಿ ಆಯುರ್ವೇದದಲ್ಲಿ ವಿಶೇಷವಾಗಿ ವಿಶ್ಲೇಷಿಸಲಾಗಿದೆ. ದಿನನಿತ್ಯ ಮುಂಜಾನೆಯಿಂದ ರಾತ್ರಿ ನಿದ್ರಿಸುವವರೆಗೆ ನಮ್ಮ ದಿನಚರ್ಯೆಗಳೇನಿರುತ್ತವೆಯೋ, ಹಾಗೆಯೇ ಋತುಗಳಲ್ಲಿ ಆಗುವ ಬದಲಾವಣೆಗಳಿಗೆ ತಕ್ಕಂತೆ ನಮ್ಮ ಆಹಾರ – ವಿಹಾರ ಹೇಗಿರಬೇಕು ಎಂಬುದನ್ನು ಈ "ಸ್ವಸ್ಥ ವೃತ್ತ"ದಲ್ಲಿ ನಾವು ತಿಳಿದುಕೊಳ್ಳಬಹುದು.

ಆಯುರ್ವೇದದಲ್ಲಿ ಕೇವಲ ರೋಗಕ್ಕೆ ಚಿಕಿತ್ಸೆ ನೀಡುವುದಲ್ಲ. ಬದಲಾಗಿ ರೋಗದ ಜೊತೆಗೆ ರೋಗಿಗೆ ಶಾರೀರಿಕ ಮತ್ತು ಮಾನಸಿಕ ಚಿಕಿತ್ಸೆ ನೀಡಲಾಗುತ್ತದೆ. ನಾವು ಮಾಡುವ ವೃತ್ತಿಯೇ ಮನಸ್ಸಿನ ಮೇಲೆ ಪ್ರಭಾವ ಬೀರುತ್ತದೆ. ಹಾಗಾಗಿ ನಾವು ಸದಾಚಾರಗಳನ್ನು ಬೆಳೆಸಿಕೊಳ್ಳುವುದರ ಜೊತೆಗೆ ಯೋಗ, ಧ್ಯಾನ ಇವುಗಳನ್ನು ಕೂಡ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು. ಇವುಗಳನ್ನು ಸ್ವಸ್ಥ ವೃತ್ತ ಪರಿಪಾಲನೆಯಲ್ಲಿ ವಿಶ್ಲೇಷಿಸಲಾಗಿದೆ.

ಆಯುರ್ವೇದದಲ್ಲಿ ಚಿಕಿತ್ಸೆಯನ್ನು ಅಷ್ಟಾಂಗಗಳಲ್ಲಿ ವಿಭಜಿಸಿದ್ದಾರೆ.

1. ಕಾಯ ಚಿಕಿತ್ಸೆ : ಇಲ್ಲಿ "ಕಾಯ" ಎಂದರೆ ಜಠರಾಗ್ನಿ (ಅಂತಃರಾಗ್ನಿ). ಜಠರಾಗ್ನಿ ಸರಿಯಾಗಿದ್ದರೆ ಮಾತ್ರ, ಪಚನ ಕ್ರಿಯೆ ಸರಿಯಾಗಿ ನಡೆಯುತ್ತದೆ. ಪಚನಕ್ರಿಯೆ ಸರಿಯಾಗಿಲ್ಲ ಎಂದಾದರೆ "ಆಮ" ಎಂಬ

ವಿಷರೂಪ ಉತ್ಪತ್ತಿಯಾಗುತ್ತದೆ. ಇದು ಶರೀರದ ಸಂಧು ಸಂಧುಗಳಲ್ಲಿ ಸೇರಿಕೊಂಡು "ರೋಗ" ಉತ್ಪತ್ತಿ ಮಾಡುತ್ತದೆ.

2. ಬಾಲ ಚಿಕಿತ್ಸೆ : ಇದರಲ್ಲಿ ಬಾಲರಿಗೆ (ಮಕ್ಕಳಿಗೆ) ಚಿಕಿತ್ಸೆ ನೀಡಲಾಗುತ್ತದೆ. ಇದನ್ನು "ಕೌಮಾರ ಭೃತ್ಯ"ದಲ್ಲಿ ಕಾಣಬಹುದು. ಇತ್ತೀಚಿನ ದಿನಗಳಲ್ಲಿ ಇದನ್ನು 16 ವರ್ಷದೊಳಗಿನ ಬಾಲರಿಗೆ ರೋಗ ನಿರೋಧಕ ಶಕ್ತಿ ಹೆಚ್ಚಿಸಲು ಹಾಗೂ ಬುದ್ಧಿಶಕ್ತಿ ವೃದ್ಧಿಸಲು "ಸ್ವರ್ಣ ಪ್ರಾಶನ" ಚಿಕಿತ್ಸೆ ನೀಡಲಾಗುತ್ತಿದೆ.

3. ಗ್ರಹ ಚಿಕಿತ್ಸೆ : ಇಲ್ಲಿ ಗ್ರಹ ಬಾಧೆಗಳಿಗೆ ಚಿಕಿತ್ಸೆ ನೀಡಲಾಗುತ್ತದೆ.

4. ಊರ್ದ್ವಾಂಗ ಚಿಕಿತ್ಸೆ : ಇಲ್ಲಿ ಕಿವಿ, ಮೂಗು, ಗಂಟಲು ರೋಗಗಳಿಗೆ ಚಿಕಿತ್ಸೆ ನೀಡಲಾಗುತ್ತದೆ.

5. ಶಲ್ಯ ಚಿಕಿತ್ಸೆ : ಇಲ್ಲಿ ಶಸ್ತ್ರ ಚಿಕಿತ್ಸೆಗಳ ಮೂಲಕ ಚಿಕಿತ್ಸೆ ನೀಡಲಾಗುತ್ತದೆ.

6. ದಂಷ್ಟ್ರ ಚಿಕಿತ್ಸೆ : ಇಲ್ಲಿ ವಿಷ ಜಂತುಗಳಿಂದ ಉಂಟಾಗುವ ಬಾಧೆಗಳಿಗೆ ಚಿಕಿತ್ಸೆ ನೀಡಲಾಗುತ್ತದೆ.

7. ಜರಾ ಚಿಕಿತ್ಸೆ : ಮುಪ್ಪು ಎಂಬುದು ವಯೋಮಾನ. ಇದು ಕಾಯಿಲೆಯಲ್ಲ. ಹಾಗಾಗಿ ಮುಪ್ಪಿನಲ್ಲಿ ಕೂಡ ಆರೋಗ್ಯವನ್ನು ಹೇಗೆ ಕಾಪಾಡಿಕೊಳ್ಳುವುದು ಎಂಬ ಬಗ್ಗೆ ತಿಳುವಳಿಕೆ ನೀಡಿ ಈ ಸಂದರ್ಭದಲ್ಲಿ ಅಡರುವ ಕಾಯಿಲೆಗಳಿಗೆ ಚಿಕಿತ್ಸೆ ನೀಡಲಾಗುತ್ತದೆ.

8. ವೃಷಾ ಚಿಕಿತ್ಸೆ : ಇದರಲ್ಲಿ ಬಂಜೆತನ ನಿವಾರಣೆ ಹಾಗೂ ವಾಜೀಕರಣಗಳನ್ನು ಹೇಳಲಾಗುತ್ತದೆ.

ಆದರೆ ಈ ಎಲ್ಲಾ ಚಿಕಿತ್ಸೆಗಳ ಪೂರ್ವ ಶರೀರವನ್ನು ಶುದ್ಧೀಕರಿಸಿ ಅನಂತರ ಕಾಯಿಲೆಯ ಶಮನಕ್ಕೆ ಔಷಧಿಗಳನ್ನು ನೀಡುವುದರಿಂದ ಔಷಧಿಗಳು ಶರೀರದಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತವೆ. **ಉತ್ತಮ ಆರೋಗ್ಯ ಕಾಪಾಡಲು, ಅಕಾಲ ನೆರೆ – ಮುದಿತನ ಹೋಗಲಾಡಿಸಲು ಶರೀರಕ್ಕೆ ಕಾಯಕಲ್ಪ ನೀಡಬೇಕು. ದೀರ್ಘಾಯುಷಿಗಳಾಗಲು ರಸಾಯನ ಚಿಕಿತ್ಸೆ, ಉತ್ತಮ ಸಂತಾನ ಪ್ರಾಪ್ತಿ ಹಾಗೂ ವಾಜೀಕರಣ ಚಿಕಿತ್ಸೆಗಳ ಪೂರ್ವದಲ್ಲಿ ಪಂಚಕರ್ಮ (ಶರೀರದಲ್ಲಿ ಕೊಳೆ ತೆಗೆಯುವ ವಿಧಾನ)ಗಳಿಂದ ಚಿಕಿತ್ಸೆ ಅತ್ಯಗತ್ಯ.**

ಇತ್ತೀಚಿನ ದಿನಗಳಲ್ಲಿ ನಾವೇನು **"ಪಂಚಕರ್ಮ"** ಎಂದು ಹೇಳುತ್ತಿದ್ದೇವೆಯೋ ಅದುವೆ ಐದು ಶೋಧನಾ ಕರ್ಮಗಳು, ಹಾಗೂ ಉಪಕರ್ಮಗಳಿಂದ ಶರೀರವನ್ನು ಶುದ್ಧಿಕರಿಸಲಾಗುತ್ತದೆ. ಪಂಚಕರ್ಮ ಹಾಗೂ ಉಪಕರ್ಮಗಳೆಂಬುದು ವಿಶೇಷ ಚಿಕಿತ್ಸೆಗಳು ದೀರ್ಘ ಕಾಲದಿಂದ ಬೇರೂರಿರುವ ರೋಗಗಳನ್ನು ಈ ಶೋಧನಾ ಕರ್ಮಗಳಿಂದಲೇ ಹೋಗಲಾಡಿಸಬಹುದು. ಉದಾಹರಣೆಗೆ,

- **ಸ್ನೇಹನ :** ತೈಲಗಳಿಂದ ಅಭ್ಯಂಜನ (ಬಾಹ್ಯ+ಆಂತರಿಕ) ಮಾಡಿಸುವುದು.
- **ಸ್ವೇದನ :** ಹಬೆ ಕೊಡುವ ಚಿಕಿತ್ಸೆ
- **ವಮನ :** ಔಷಧಿಗಳ ಮೂಲಕ ವಾಂತಿ ಮಾಡಿಸುವುದು.
- **ವಿರೇಚನ :** ಔಷಧಿಗಳ ಮೂಲಕ ಬೇಧಿ ಮಾಡಿಸುವುದು
- **ಬಸ್ತಿ :** ಔಷಧ ಸಿದ್ಧ ತೈಲ / ಕಷಾಯಗಳನ್ನು ಗುದ ದ್ವಾರದ ಮೂಲಕ ನೀಡುವುದು.
- **ನಸ್ಯ :** ಮೂಗಿನ ರಂಧ್ರಗಳ ಮೂಲಕ ಔಷಧಿ ಬಿಡುವುದು
- **ರಕ್ತ ಮೋಕ್ಷಣ:** ರಕ್ತಸ್ರಾವ ಉಂಟುಮಾಡುವುದರ ಮೂಲಕ ಚಿಕಿತ್ಸೆ ನೀಡುವುದು.
- **ಶಿರೋಬಸ್ತಿ :** ತಲೆಯ ಮೇಲೆ ಔಷಧಿ ಸಿದ್ಧ ತೈಲ ತುಂಬಿಸಿಡುವುದು.

● **ಶಿರೋಧಾರ :** ವ್ಯಕ್ತಿಯನ್ನು ಅಂಗಾತ ಮಲಗಿಸಿ, ಹಣೆಯ ಮೇಲೆ ಔಷಧಿ ಸಿದ್ಧ ತೈಲ / ತಕ್ರವನ್ನು ಧಾರೆಯಂತೆ ಬಿಡುವುದು.

ಈ ಎಲ್ಲಾ ಆಯುರ್ವೇದ ಚಿಕಿತ್ಸೆಗಳು ಅತ್ಯಂತ ಪ್ರಭಾವಶಾಲಿಯಾಗಿದ್ದು, ನುರಿತ ವೈದ್ಯರ ಮಾರ್ಗದರ್ಶನದಲ್ಲಿಯೇ ಚಿಕಿತ್ಸೆಗೆ ಒಳಪಡಬೇಕಾಗುತ್ತದೆ.

ಕಾಯಿಲೆ ಬಂದ ನಂತರ ವೈದ್ಯರ ಬಳಿ ಚಿಕಿತ್ಸೆಗಾಗಿ ಪರದಾಡುವುದರ ಬದಲು, ರೋಗವೇ ಬಾರದಂತೆ ತಡೆದು, ಪ್ರತಿಯೊಬ್ಬರೂ ಉತ್ತಮ ಆರೋಗ್ಯದಿಂದ ದೀರ್ಘಾಯುಷಿಗಳಾಗಿ ಬಾಳಬೇಕೆಂಬುದು ಆಯುರ್ವೇದದ ಮೂಲ ಧ್ಯೇಯ.

ಆಯುರ್ವೇದ ಔಷಧಗಳಿಂದ ಯಾವುದೇ ರೀತಿಯ ಅಡ್ಡ ಪರಿಣಾಮಗಳು ಇರುವುದಿಲ್ಲ. ಆದ್ದರಿಂದ ಅಡ್ಡ ಪರಿಣಾಮ ಬೀರುವ ಔಷಧಿಗಳಿಗೆ ಮಾರು ಹೋಗದೆ, ಆಯುರ್ವೇದವನ್ನು ಬದುಕಿನಲ್ಲಿ ಅಳವಡಿಸಿಕೊಂಡು ಜೀವನ ಹಸನಾಗಿಸೋಣ ಎಂಬುದು ಆಯುರ್ವೇದದ ಸಂದೇಶ.

–: ನಮೋ ಧನ್ವಂತರಿ:–

ಚುಟುಕುಗಳು

ಕಂತೆ ಪುರಾಣ

ಇದ್ದುದನ್ನು ಇದ್ದಂತೆ
ಹೇಳುವವ ಕೋಣ
ಇಲ್ಲದನ್ನು ಕತೆಕಟ್ಟಿ
ಹೇಳುವವ ಜಾಣ
ಇದೇ ರಾಜಕೀಯದ
ಕಂತೆ ಪುರಾಣ


ಆಘಾತ

ಪ್ರಚಾರದ ವೇಳೆ
ಹುರಿಯಾಳು ಹೇಳ್ತಿದ್ದ
ಈ ಬಾರಿ ನನ್ನ ಗೆಲುವು
ಶತಸಿದ್ಧ
ಫಲಿತಾಂಶ ಪ್ರಕಟಣೆ ವೇಳೆ
ಆತ ಸದ್ದಿಲ್ಲದೆ
ಕುಸಿದು ಬಿದ್ದ

ಆಯ್ಕೆ

ನೆರೆ ಮನೆಗಳಲ್ಲಿ
ಹುಡುಗರೇ ಇದ್ದರೆ
ನಮ್ಮನೆ ಹಿತ್ಲಲ್ಲಿ
ನೆಡಬಾರದು
ಹಣ್ಣಿನ ಗಿಡ
ಹುಡುಗಿಯರೇ ಇದ್ದರೆ
ನೆಡಬಾರದು
ಹೂವಿನ ಗಿಡ

✍ ಕುಲ್ಲಚನ ಕಾರ್ಯಪ್ಪ
ನಿವೃತ್ತ ಶಿಕ್ಷಕರು
ಕಂಬಳದಾಳು, ಮೂರ್ನಾಡು



ಚಿತ್ರಕಲೆಯ ಹುಟ್ಟು, ಬೆಳವಣಿಗೆ ಮತ್ತು ಇತಿಹಾಸ



✍ ಡಾ। ಚರಿತಾ
1255, 4ನೇ ತಿರುವು, ಪಡುವಣ ರಸ್ತೆ
ಕುವೆಂಪುನಗರ, ಮೈಸೂರು – 570 023

'ಪುಡಿ, ದ್ರವ ಅಥವಾ ಘನರೂಪದ ಬಣ್ಣವನ್ನು ಒಂದು ಸಮತಲದ ಮೇಲ್ಭಾಗದಲ್ಲಿ ನಮ್ಮ ಇಚ್ಛೆಯನುಸಾರ ಹಚ್ಚುವುದನ್ನು / ಪ್ರಯೋಗಿಸುವುದನ್ನು 'ಪೇಂಟಿಂಗ್' ಎನ್ನಬಹುದು'. ಇದು ಚಿತ್ರಕಲೆಗೆ ಇರುವ ತಾಂತ್ರಿಕ ವ್ಯಾಖ್ಯಾನ. ಆದರೆ 'ಚಿತ್ರಕಲೆ' ಎಂಬುದು ಕೇವಲ ಬಣ್ಣ, ಮೈವಳಿಕೆ ಮುಂತಾದ ಬಾಹ್ಯರೂಪಕ್ಕೆ ಮಾತ್ರ ಸೀಮಿತವಾದುದಲ್ಲ. ಇದು ಮನುಷ್ಯನ ಮನಸ್ಸನ್ನು ಬಿಂಬಿಸುವ ಕನ್ನಡಿಯೂ ಹೌದು. ತನ್ನ ಸುತ್ತಲಿನ ದೃಶ್ಯ ಜಗತ್ತನ್ನು ಪರಿವೀಕ್ಷಿಸುತ್ತ, ಅವುಗಳ ಮೂಲಕ ತನ್ನನ್ನು ತಾನು ಅರಿತುಕೊಳ್ಳುವ ಸಂವೇದನಾಶೀಲ ಮಾನವನ ಸಹಜ ಅಭಿವ್ಯಕ್ತಿ ಮಾಧ್ಯಮ – 'ಚಿತ್ರಕಲೆ' ಮನಸ್ಸಿನ ಭಾವ ರೂಪವನ್ನು ದೃಶ್ಯರೂಪದಲ್ಲಿ ಕಟ್ಟಿಕೊಡುವ ಈ ವಿಶಿಷ್ಟ ಮಾಧ್ಯಮದ ಹುಟ್ಟು – ಬೆಳವಣಿಗೆಯ ಇತಿಹಾಸವನ್ನು ಸಂಕ್ಷಿಪ್ತ ರೂಪದಲ್ಲಿ ಇಲ್ಲಿ ಚರ್ಚಿಸಲಾಗಿದೆ. ಚಿತ್ರಕಲೆಯ ಹುಟ್ಟು – ಬೆಳವಣಿಗೆ – ಇಂದಿನ ಸ್ವರೂಪ ಇವುಗಳನ್ನು ನಾಲ್ಕು ಪುಟಗಳಲ್ಲಿ ಚರ್ಚಿಸುವುದು ಕಷ್ಟಸಾಧ್ಯವಾದುದು. ಈ ನಿಟ್ಟಿನಲ್ಲಿ ಭಾರತೀಯ ಚಿತ್ರಕಲಾ ಇತಿಹಾಸವನ್ನು ಮುಂಚೂಣಿಯಲ್ಲಿರಿಸಿ ಅದಕ್ಕೆ ಪೂರಕವಾಗಿ ಜಾಗತಿಕ ಚಿತ್ರಕಲೆಯನ್ನು ಪರಿಚಯಿಸುತ್ತ, ಒಟ್ಟಾರೆ ಸಂಕ್ಷಿಪ್ತ ನೋಟವನ್ನು ಕೊಡುವ ಪ್ರಯತ್ನ ಇದಾಗಿದೆ. ಓದುಗರನ್ನು ಚಿತ್ರಕಲೆಯ ಕುರಿತು ಮತ್ತಷ್ಟು ಸವಿವರ ಅಧ್ಯಯನದೆಡೆಗೆ ಒಯ್ಯಲು ಈ ಸಂಕ್ಷಿಪ್ತ ಪ್ರಬಂಧ ಸಹಕಾರಿಯಾಗಬಲ್ಲದೆಂಬ ಆಶಯ ನನ್ನದು.

"ಎಲ್ಲಾ ಮಕ್ಕಳೂ ಚಿತ್ರಕಲಾವಿದರೇ, ಆದರೆ ಬೆಳೆದು ದೊಡ್ಡವರಾದ ಮೇಲೆಯೂ ಮಕ್ಕಳ ಗ್ರಹಿಕೆ ಮತ್ತು ಅಪ್ಪಟ ಸೃಜನಶೀಲತೆಯನ್ನು ಉಳಿಸಿಕೊಳ್ಳುವುದೇ ಕಲಾವಿದರಿಗಿರುವ ದೊಡ್ಡ ಸವಾಲು" ಹೀಗೆಂದವರು ಫ್ರೆಂಚ್‌ನ ಖ್ಯಾತ ಕಲಾವಿದ ಪಿಕಾಸೊ. ನಾವು, ನೀವೆಲ್ಲ ಕಂಡಂತೆ ಮಕ್ಕಳ ಮೊದಲ ಸೃಜನಶೀಲ ಮಾಧ್ಯಮ ಬಹುಶಃ ಚಿತ್ರಕಲೆಯೇ. ಪುಸ್ತಕದ ಬಿಳಿ ಹಾಳೆಯಿಂದ ಹೊರಗೆ ಮನೆಯ ಗೋಡೆ, ನೆಲ, ಟೇಬಲ್, ನಿಲುವುಗನ್ನಡಿ... ಹೀಗೆ ಸಪಾಟಾದ ಎಲ್ಲವೂ ಮಕ್ಕಳ ಚಿತ್ರಕಲಾ ಪ್ರಪಂಚದ 'ಕ್ಯಾನ್ವಾಸ್'ಗಳಾಗಿ ಬಿಟ್ಟಿರುತ್ತವೆ!. ಪ್ರಾಯಶಃ ನಿಮ್ಮ ಬಾಲ್ಯ ಕೂಡ ಇದಕ್ಕೆ ಹೊರತಾಗಿರಲಿಕ್ಕಿಲ್ಲ!. ಅಂದರೆ, ಮಗುವಿನ ಗ್ರಹಿಕೆ – ಅಭಿವ್ಯಕ್ತಿ ಮೊದಲು ರೂಪುಗೊಳ್ಳುವುದು 'ನೋಟ'ದ ಮೂಲಕ. ತನ್ನ ಸುತ್ತಲ ಪ್ರಪಂಚವನ್ನು ಗ್ರಹಿಸುವುದು, ಅರಿಯುವುದು ಮತ್ತು ಅಭಿಪ್ರಾಯ ರೂಪಿಸಿಕೊಳ್ಳುವುದು ದೃಶ್ಯ ಗ್ರಹಿಕೆಯಿಂದಲೇ. ಅಂತೆಯೇ ದೃಶ್ಯ ಮಾಧ್ಯಮ ಮನುಷ್ಯನ ಮೂಲ ಸಂವೇದನೆಯ ಸಹಜ ಅಭಿವ್ಯಕ್ತಿ ಮಾಧ್ಯಮ. ಇದಕ್ಕೆ ಸುಮಾರು ಮೂವತ್ತೈದು ಸಾವಿರದಿಂದ ಐವತ್ತು ಸಾವಿರ ವರ್ಷಗಳ ಇತಿಹಾಸವಿದೆ.

ಹಳೆ ಶಿಲಾಯುಗದ ಕೊನೆಯ ಹಂತದಲ್ಲಿ, ಅಂದರೆ ಸುಮಾರು ಮೂವತ್ತೈದು ಸಾವಿರ ವರ್ಷಗಳಷ್ಟು ಹಿಂದೆ ರಚಿಸಲ್ಪಟ್ಟ ಕಲಾಕೃತಿಗಳು ಮೊಟ್ಟಮೊದಲಿಗೆ ದೊರೆತಂಥವು. ಆದರೆ ಇವೇ ಮೊದಲು ರಚಿಸಲ್ಪಟ್ಟವೆ ಎನ್ನಲಾಗದು. ಸಾವಿರಾರು ವರ್ಷಗಳಿಂದ ಹಂತಹಂತವಾಗಿ ರೂಪಾಂತರಗೊಂಡು ರಚಿತವಾದವುಗಳು ಇವು. 19ನೇ ಶತಮಾನದ ಕೊನೆಯಲ್ಲಿ ಯುರೋಪಿನ ಪಶ್ಚಿಮ ಭಾಗಗಳಲ್ಲಿ ಗುಹಾಚಿತ್ರಗಳು ಶೋಧಿಸಲ್ಪಟ್ಟವು. ಸ್ಪೇನ್‌ನ ಅಲ್ತಾಮಿರ ಗುಹೆಗಳಲ್ಲಿ ಮೊಟ್ಟ ಮೊದಲಿಗೆ ಇಂಥ ಚಿತ್ರಗಳು ಕಂಡುಬಂದವು. ಚರಿತ್ರೆಯ ಮೊಟ್ಟಮೊದಲ ಕಲಾಕೃತಿ ಎಂದು ನಂಬಲಾಗಿರುವ ಮತ್ತೊಂದು ಚಿತ್ರವೆಂದರೆ ಅದು ಮಾನವನ ಮುಂಗೈಯ ಛಾಪು. ಅಂಗೈಯನ್ನು ಕಲ್ಲಿನ ಗೋಡೆಯ ಮೇಲಿರಿಸಿ, ಕೊಳವೆಯ ಮೂಲಕ ಕಡುಪಳದಿ ಬಣ್ಣವನ್ನು ಊದಿ,

ಕೈಯನ್ನು ಹೊರತೆಗೆದಾಗ ಕಾಣುವ ಮುಂಗೈಯ ಆಕಾರದ ಚಿತ್ರಗಳಿವು..ಆಗ್ನೇಯ ಫ್ರಾನ್ಸ್‌ನ ಪೆಕ್ - ಮರ್ಲ್ ಎಂಬಲ್ಲಿ ಮೂವತ್ತು ಸಾವಿರ ವರ್ಷಗಳಷ್ಟು ಹಳೆಯದೆನ್ನಬಹುದಾದ ಇಂಥ ಚಿತ್ರಗಳು ಸಿಕ್ಕಿವೆ.

ಮಾನವ ಚಿತ್ರ ಬರೆಯುವುದನ್ನು ಪ್ರಾರಂಭಿಸಿದ್ದು ಅಲಂಕರಣ ಅಥವಾ ಮನರಂಜನೆಗಾಗಿ ಅಲ್ಲ, ಬದಲಿಗೆ ತನ್ನ ಮನೋಬಲ ವೃದ್ಧಿಸಿಕೊಳ್ಳಲು! ಆದಿಮಾನವನ ಬದುಕಿನ ಅಸ್ತಿತ್ವ ಭಾಗಶಃ ತನ್ನ ಬೇಟೆಯ ಮೇಲೆ ಅವಲಂಭಿಸಿತ್ತು. ಗುಹೆಗಳಲ್ಲಿ ವಾಸಿಸುತ್ತಿದ್ದ ಆತನ ಆಯುಧಗಳೂ ಸೀಮಿತವಾಗಿದ್ದವು. ಸಣ್ಣಪುಟ್ಟ ಹಕ್ಕಿ, ಮೀನುಗಳಿಗಿಂತ ಜಿಂಕೆ, ಕಡವೆ, ಕೋಣಗಳಂಥ ದೊಡ್ಡ ಮಿಕಗಳ ಬೇಟೆ, ಗುಂಪಿನಲ್ಲಿ ವಾಸಿಸುತ್ತಿದ್ದ ಆತನ ಬಹುಮಟ್ಟಿನ ಆಹಾರವನ್ನು ಪೂರೈಸುತ್ತಿತ್ತು. ಸಹಜವಾಗಿ ಆತ ಇಂಥ ಬೇಟೆಗಳ ಕುರಿತು ಹೆಚ್ಚು ಯೋಚಿಸುತ್ತಿದ್ದಿರಬೇಕು. ಹಾಗಾಗಿ ಬಹುಶಃ ಗುಹೆಯ ಗೋಡೆಯ ಮೇಲ್ಮೈಯಲ್ಲಿ ಪ್ರಾಣಿಗಳ ಅಸ್ಪಷ್ಟ ಆಕಾರ ಕಂಡು, ಇದ್ದಲಿನಿಂದ ಹೊರರೇಖೆಗಳನ್ನು ರಚಿಸಿರಬಹುದು. ನಂತರ ಈ ಅಭ್ಯಾಸ ಮುಂದುವರೆದಂತೆ ಕೊನೆಗೆ ತಾನೇ ಸ್ವತಂತ್ರವಾಗಿ ಚಿತ್ರ ರಚಿಸಲು ಸಮರ್ಥನಾಗಿರಬಹುದು ಎಂದು ಊಹಿಸಲಾಗಿದೆ. ಬೇಟೆಗಾಗಿ ಗುಂಪಿನಲ್ಲೇ ಹೋಗುತ್ತಿದ್ದನಾದರೂ, ಸಾಕಷ್ಟು ಪ್ರಬಲ ಆಯುಧಗಳಿಲ್ಲದ್ದರಿಂದ ಬಲಿಷ್ಠ ಪ್ರಾಣಿಗಳ ಜೊತೆ ಸೆಣಸುವುದೆಂದರೆ ಜೀವನ್ಮರಣದ ಘಟನೆಯೇ ಆಗಿರುತ್ತಿತ್ತು. ಬೇಟೆಯ ಪ್ರಸಂಗಗಳು ಆತನ ಅತ್ಯಂತ ಕಠಿಣ ಸವಾಲಿನದ್ದಾಗಿತ್ತು. ಇಂಥ ಸಂದರ್ಭಗಳಲ್ಲಿ ತನ್ನ ಮನೋಬಲವನ್ನು ವೃದ್ಧಿಸಿಕೊಳ್ಳುವ ಸಲುವಾಗಿ ಆತ ಮೊರೆಹೋದದ್ದು ಚಿತ್ರಗಳಿಗೆ!

ತಾನು ಬೇಟೆಯಾಡಬೇಕಾದ ಪ್ರಾಣಿಯ ಚಿತ್ರವನ್ನು ಬರೆಯುತ್ತಿದ್ದ ಆತ, ಬೇಟೆಗೆ ಹೋಗುವ ಮುನ್ನ ಸಾಂಕೇತಿಕವಾಗಿ ಚಿತ್ರದ ಪ್ರಾಣಿಯನ್ನು ಬೇಟೆಯಾಡುತ್ತಿದ್ದ. ಅಂದರೆ, ಚಿತ್ರಿತ ಪ್ರಾಣಿಯನ್ನು ತನ್ನ ಆಯುಧಗಳಿಂದ ಗಾಯಗೊಳಿಸಿ ಕೊಂದರೆ, ಅದನ್ನು ತನ್ನ ವಶಗೊಳಿಸಿಕೊಂಡ ಅನುಭವ ಪಡೆಯುತ್ತಿದ್ದ. ಇದರಿಂದ ಆತನಿಗೆ ಮಾನಸಿಕ ಸ್ಥೈರ್ಯ, ಸ್ಫೂರ್ತಿ ದೊರೆಯುತ್ತಿದ್ದುದರಿಂದ ನಿಜವಾದ ಬೇಟೆ ಆತನಿಗೆ ಸಲೀಸಾಗುತ್ತಿತ್ತು. ಹೀಗೆ ಪ್ರತೀಸಲ ಬೇಟೆಗೆ ಹೊರಡುವ ಮುನ್ನ ಪ್ರಾಣಿಗಳ ಚಿತ್ರರಚನೆ ಮತ್ತು ಅವುಗಳನ್ನು ಚಿತ್ರದಲ್ಲೇ ಕೊಲ್ಲುವ ಪರಿಪಾಠ ರೂಢಿಸಿಕೊಂಡಿರಬೇಕು. ಮನುಷ್ಯಾಕೃತಿಗಿಂತಲೂ ಎತ್ತರ, ಬೃಹತ್ ಗಾತ್ರದ ಕಾಡೆಮ್ಮೆ, ಕಾಡುಕೋಣ, ಕಡವೆ, ಜಿಂಕೆ, ಕಾಡುಹಂದಿ, ಸಾರಂಗ ... ಹೀಗೆ ಹತ್ತು ಹಲವು ಪ್ರಾಣಿಗಳ ಚಿತ್ರಗಳು ಅಚ್ಚರಿ ಹುಟ್ಟಿಸುವಷ್ಟು ಸಹಜವಾಗಿವೆ! ಅಷ್ಟು ಪುರಾತನ ಮಾನವನಿಂದ ಸಾಧ್ಯವಾದ ಅಸಾಧಾರಣ ರಚನೆ ನಿಜಕ್ಕೂ ಅದ್ಭುತವಾದುದು!.

ಚಿತ್ರರಚನೆ ಎಂಬುದು **'ಕಲೆ'** ಎಂದು ಕರೆಯಲ್ಪಟ್ಟು ಅಲಂಕಾರಿಕ ಮಾಧ್ಯಮವಾಗಿ ಮಾರ್ಪಡುವ ಮೊದಲು ಚಾಲ್ತಿಯಲ್ಲಿದ್ದುದು ಇಂಥ ಮನೋಬಲವೃದ್ಧಿಗೆ ಪೂರಕವಾದ ಆಚರಣೆಗಳಲ್ಲಿ. ಈ ಹಿನ್ನೆಲೆಯಲ್ಲಿ ಇವನ್ನು **'ಮಾಂತ್ರಿಕ ಚಿತ್ರಗಳು'** ಎಂದೂ ಕರೆಯಬಹುದು. ಇಂದಿಗೂ ಭಾರತದಲ್ಲಿ **'ತಾಂತ್ರಿಕ ಕಲೆ'** ಎಂದು ಕರೆಯಲ್ಪಡುವ ಕಲಾಪ್ರಕಾರವೂ ಇಂಥ ಆಚರಣೆಗಳಿಗೆ ಪೂರಕವಾಗಿಯೇ ಉಳಿದುಬಂದಿದೆ. ಪೂಜೆ ಪುನಸ್ಕಾರಗಳಲ್ಲಿ ಅಥವಾ ಸಾಂಪ್ರದಾಯಿಕ ಆಚರಣೆಗಳಲ್ಲಿ ರಚಿಸಲ್ಪಡುವ ಕೆಲವು ರಂಗೋಲಿಗಳು, ರೇಖಾಚಿತ್ರಗಳೂ ಕೂಡ ಸಾಂಕೇತಿಕ ಚಿತ್ರಗಳಾಗಿ ಇಂದಿಗೂ ಚಾಲ್ತಿಯಲ್ಲಿರುವುದನ್ನು ನೀವು ಕಂಡಿರಬಹುದು.

ಆದಿಮಾನವನು ಚಿತ್ರರಚನೆಗೆ ಭೂಮಿಯಲ್ಲಿ ಸಿಗುವ ಹಳದಿ, ಕೆಂಪು ಮಣ್ಣಿನ ಗಟ್ಟಿ, ಕಲ್ಲಿದ್ದಲಿನ ಕಪ್ಪು, ಹಸಿರು ಕಲ್ಲು - ಇವುಗಳಿಂದ ಬಣ್ಣ ತಯಾರಿಸಿಕೊಂಡಿರಬಹುದು. ಇವುಗಳೊಂದಿಗೆ ಪ್ರಾಣಿಗಳ ರಕ್ತವನ್ನೋ ಕೊಬ್ಬನ್ನೋ ಬೆರೆಸಿ ಬಳಸಿರಬಹುದು. ರಕ್ತದ ಬಳಕೆ ಮಾಡಿದ್ದರೆ ಅದು ಕಾಡು ಹಂದಿಯದ್ದೇ ಆಗಿರಬಹುದು (ಇದು ಇತರೆ ಪ್ರಾಣಿಗಳ ರಕ್ತದಂತೆ ಬೇಗ ಹೆಪ್ಪುಗಟ್ಟುವುದಿಲ್ಲವಾದ್ದರಿಂದ) ಎಂದು ಇತಿಹಾಸಕಾರರು ಊಹಿಸುತ್ತಾರೆ. ಹಾಗೆಯೇ ಗಿಡದ ರೆಂಬೆಯ ತುದಿಯನ್ನು ಜಜ್ಜಿ ಬ್ರಷ್‌ನಂತೆ ಬಳಸಿರಬಹುದೆಂದು ಅಂದಾಜಿಸಲಾಗಿದೆ. ಅಲ್ಲದೆ ಕೆಲವು ಚಿತ್ರಗಳಲ್ಲಿ ಬೆರಳುಗಳ ಅಚ್ಚಿನ ಗುರುತೂ ಸಿಗುವುದರಿಂದ ಬೆರಳುಗಳಿಂದಲೂ ಬಣ್ಣ ತುಂಬಿರುವ ಸಾಧ್ಯತೆಗಳಿವೆ ಎನ್ನಲಾಗಿದೆ.

ಭಾರತದಲ್ಲಿ ಮೊದಲ ಬಾರಿಗೆ ಇತಿಹಾಸ ಪೂರ್ವಕಾಲದ ಚಿತ್ರಗಳು ಮಧ್ಯಪ್ರದೇಶದ ಭೀಂಬೆಟ್ಕಾ ಗುಹೆಗಳಲ್ಲಿ ಕಾಣಸಿಕ್ಕಿವೆ. ಅವುಗಳನ್ನು ಸುಮಾರು ಇಪ್ಪತ್ತು ಸಾವಿರದಿಂದ ಐವತ್ತು ಸಾವಿರ ವರ್ಷಗಳಷ್ಟು ಹಳೆಯದೆಂದು ಗುರ್ತಿಸಲಾಗಿದೆ. ಉತ್ತರಪ್ರದೇಶ, ಗುಜರಾತ್, ರಾಜಸ್ಥಾನ, ಕರ್ನಾಟಕ, ಆಂಧ್ರ, ತಮಿಳ್ನಾಡು, ಕೇರಳದಲ್ಲಿ ಇಂಥ ನೂರಾರು ಚಿತ್ರಗಳು ಬೆಳಕಿಗೆ ಬಂದಿವೆ.

"ಮಾನವ ನಾಗರಿಕನಾಗುತ್ತಾ ಹೋದಂತೆಲ್ಲ ಆತನ ಜೀವನ ಶೈಲಿ, ರೂಢಿಗಳಿಗೆ ತಕ್ಕಂತೆ ಚಿತ್ರಕಲೆಯೂ ತನ್ನ ಸ್ವರೂಪವನ್ನು ಬದಲಿಸಿಕೊಳ್ಳುತ್ತ ಸಾಗಿತು. ಮಾನವನ ಮನೋಲ್ಲಾಸ, ಆಕಾಂಕ್ಷೆ, ಸುಪ್ತ ಭಾವನೆಗಳನ್ನು ಬಿಂಬಿಸುವ ಸಾಂಕೇತಿಕ ಪ್ರತಿನಿಧಿಯಾಗಿ ಮಹತ್ವದ ಮಾಧ್ಯಮವಾಗಿ ಚಿತ್ರಕಲೆ ಬೆಳೆಯುತ್ತ ಬಂದಿದೆ". ಸಿಂಧೂ ನಾಗರೀಕತೆಯ ಸಂಸ್ಕೃತಿಯಲ್ಲಿ ಕಂಡುಬರುವ ಚಿತ್ರಗಳಲ್ಲಿ ಅಲಂಕಾರಿಕ ಅಂಶಗಳು ಕಾಣಸಿಗುತ್ತವೆ. ನಾಗರೀಕತೆ ಬೆಳೆಯುತ್ತ ಹೋದಂತೆಲ್ಲ ಮನುಷ್ಯನ ಸೌಂದರ್ಯಪ್ರಜ್ಞೆಯೂ ಬೆಳೆದದ್ದನ್ನು ಚಿತ್ರಗಳ ಮೂಲಕ ಕಾಣಬಹುದು.

ಚಿತ್ರಕಲೆಯು ಆಯಾ ನಾಗರೀಕತೆಯ ಹುಟ್ಟು, ಬೆಳವಣಿಗೆ, ಆಚಾರ–ವಿಚಾರ, ಉಡುಗೆ–ತೊಡುಗೆ ಮುಂತಾದ ಪ್ರಮುಖ ವಿಷಯಗಳನ್ನು ಬಿಂಬಿಸುವ ಮಾಧ್ಯಮವಾಗಿರುವುದರಿಂದಲೇ ಇತಿಹಾಸ ರಚನೆಯಲ್ಲಿ ಮತ್ತು ಸಮಾಜದ ರೀತಿ–ನೀತಿಗಳ ಅಧ್ಯಯನದಲ್ಲಿ ಪ್ರಮುಖ ಆಕರವಾಗಿ ಕಾರ್ಯನಿರ್ವಹಿಸುತ್ತದೆ. ಜಗತ್ತಿನ ಎಲ್ಲ ಪ್ರಮುಖ ನಾಗರೀಕತೆಯ ಹುಟ್ಟು – ಬೆಳವಣಿಗೆಗಳ ಸಾಧಾರಣ ಅಧ್ಯಯನಕ್ಕೆ ಸಹಕಾರಿಯಾಗುವ ಅಂಶಗಳಲ್ಲಿ ಚಿತ್ರಕಲೆ ಮುಖ್ಯವಾದುದು.

ಭಾರತೀಯ ಶಿಷ್ಟ ಸಾಂಪ್ರದಾಯಿಕ ಚಿತ್ರಕಲೆ ಎಂಬುದು ಆದರ್ಶ ನಾಗರೀಕತೆಯ ಲಕ್ಷಣಗಳಲ್ಲಿ ಒಂದಾಗಿತ್ತು. 64 ರಾಜವಿದ್ಯೆಗಳಲ್ಲಿ ಚಿತ್ರಕಲೆಯೂ ಒಂದು. ಚಿತ್ರಕಲೆಯ ಅರಿವಿಲ್ಲದವನು ಸಂಪೂರ್ಣ 'ಸುಸಂಸ್ಕೃತ' ನಾಗರಿಕನೆನಿಸುತ್ತಿರಲಿಲ್ಲ. ಚಿತ್ರಕಲೆಗೆ ಭಾರತೀಯ ಸಂಸ್ಕೃತಿಯಲ್ಲಿ ಸಿಕ್ಕ ಪ್ರಾಶಸ್ತ್ಯ ಅನನ್ಯ. 'ಸೌಂದರ್ಯ'ಕ್ಕೆ ಪರ್ಯಾಯ ಎಂಬಷ್ಟರ ಮಟ್ಟಿಗೆ ಭಾರತೀಯ ಸೌಂದರ್ಯೋಪಾಸನೆಯ ಅವಿಭಾಜ್ಯ ಮಾಧ್ಯಮವಾಗಿ 'ಚಿತ್ರಕಲೆ' ಸ್ಥಾನ ಪಡೆದಿದೆ. ಅಷ್ಟೇ ಅಲ್ಲದೆ ಕಲಾವಿದನ ಆಧ್ಯಾತ್ಮದ ಸಾಧನೆಯ ಮಾರ್ಗವಾಗಿಯೂ ಚಿತ್ರಕಲೆ ಗೌರವಿಸಲ್ಪಟ್ಟಿದೆ. 'ಚಿತ್ರ' ಎಂಬುದಕ್ಕೆ ಆಕೃತಿ, ಶುಭ, ಚಮತ್ಕಾರ, ಆಶ್ಚರ್ಯ, ಸೋಜಿಗ, ಅದ್ಭುತ, ವಿಸ್ಮಯ ಎಂಬ ಹಲವು ಅರ್ಥಗಳಿವೆ. ಒಟ್ಟಾರೆ ಅದ್ಭುತವಾದ, ಸುಂದರವಾದ ಹಲವು ವರ್ಣಗಳಿಂದ ಕೂಡಿದ ರಚನೆಯೇ **'ಚಿತ್ರ'** ಎಂಬುದು ಭಾರತೀಯ ಚಿತ್ರಕಲೆಯ ಶಾಸ್ತ್ರೀಯ ವ್ಯಾಖ್ಯಾನ.

॥ಕಲಾನಾಂ ಪ್ರವರಂ ಚಿತ್ರಂ

ಧರ್ಮ ಕಾಮಾರ್ಥ ಮೋಕ್ಷದಂ॥

ಚಿತ್ರವು ಕಲೆಗಳಲ್ಲಿ ಶ್ರೇಷ್ಠ. ಧರ್ಮ, ಅರ್ಥ, ಕಾಮ, ಮೋಕ್ಷ ಚತುರ್ವಿಧ ಪುರುಷಾರ್ಥಗಳನ್ನೂ ಕೊಡಬಲ್ಲುದು ಎನ್ನುತ್ತದೆ ವಿಷ್ಣುಧರ್ಮೋತ್ತರ ಪುರಾಣ. ವಾತ್ಸ್ಯಾಯನನ ಕಾಮಸೂತ್ರ, ವಿಷ್ಣುಧರ್ಮೋತ್ತರ ಪುರಾಣ, ಚಿತ್ರ ಸೂತ್ರ, ವಿನಯಪಿಟಕ, ಬೃಹತ್ ಸಂಹಿತೆ ಮುಂತಾದ ಗ್ರಂಥಗಳಲ್ಲಿ ಚಿತ್ರಕಲೆಯ ಮಹತ್ವ, ಶಾಸ್ತ್ರಬದ್ಧ ನಿಯಮಗಳು, ಪ್ರಮಾಣ, ಚಿತ್ರ ಪರಿಕರಗಳ ತಯಾರಿಕೆ ಇತ್ಯಾದಿ ವಿಷಯಗಳನ್ನು ಸವಿವರವಾಗಿ ಹೇಳಲಾಗಿದೆ. ಇವು ಕ್ರಿ. ಶ. 2 ನೇ ಶತಮಾನದಿಂದ ಸುಮಾರು 15ನೇ ಶತಮಾನದ ನಡುವೆ ರಚಿತವಾದ ಗ್ರಂಥಗಳು.

ಸಮಾಜದ ಧಾರ್ಮಿಕ, ಸಾಮಾಜಿಕ, ಆಧ್ಯಾತ್ಮಿಕ ಜೀವನದೊಂದಿಗೆ ಚಿತ್ರಕಲೆಯ ಅವಿನಾಭಾವ ಸಂಬಂಧವಿರುವುದನ್ನು ಕಾಣಬಹುದು. ವೇದಗಳ ಕಾಲದಲ್ಲಿ (ಸುಮಾರು ಕ್ರಿ.ಪೂ.1500ರಿಂದ ಕ್ರಿ.ಪೂ.500) ಭಾರತದ ಚಿತ್ರಕಲೆ ಧಾರ್ಮಿಕ ಸ್ವರೂಪವನ್ನು ಪಡೆದುಕೊಂಡಿತು. ಶಿಷ್ಟ ಸಂಪ್ರದಾಯದ ಪರಿಧಿಯಲ್ಲಿ

ರೂಪುಗೊಳ್ಳುತ್ತಾ ಬೆಳೆದ ಚಿತ್ರಕಲೆಯನ್ನು ಧಾರ್ಮಿಕ ತತ್ವಗಳ ಪ್ರಚಾರ ಪ್ರಕ್ರಿಯೆಯಲ್ಲಿ ತೀವ್ರವಾಗಿ ಬಳಸಿಕೊಳ್ಳಲಾಯಿತು. ಧರ್ಮ ಪ್ರಚಾರ ಎಂಬುದು ಸಾಮ್ರಾಜ್ಯ ವಿಸ್ತರಣೆ ಮತ್ತು ಸಮಾಜ ಸುಧಾರಣೆಯಲ್ಲಿ ಪ್ರಮುಖ ಪಾತ್ರ ವಹಿಸಿತ್ತಾದ್ದರಿಂದ ಧಾರ್ಮಿಕ ವಕ್ತಾರರು ತಮ್ಮ ಧರ್ಮದ ಸಾರವನ್ನು, ತತ್ವ – ವಿಚಾರಗಳನ್ನು ಸಶಕ್ತ ಮಾಧ್ಯಮವಾದ ಚಿತ್ರಗಳ ಮೂಲಕ ಅನಕ್ಷರಸ್ಥರಿಗೂ ಸುಲಭವಾಗಿ ತಲುಪಿಸುವ ನಿಟ್ಟಿನಲ್ಲಿ ತೊಡಗಿಸಿಕೊಂಡರು.ಹಾಗೆ ನೋಡಿದಲ್ಲಿ ಚಿತ್ರಕಲೆ ಎಂಬುದು ಸಾಹಿತ್ಯ ಅಥವಾ ಧಾರ್ಮಿಕ ತತ್ವಗಳನ್ನು ನಿರೂಪಿಸುವ 'ನಿರೂಪಣಾ ಮಾಧ್ಯಮ'ವಾಗಿದ್ದುದು ವ್ಯಾಪಕವಾಗಿ ಕಂಡುಬರುತ್ತದೆ.

ಭಾರತದಲ್ಲಿ ಕ್ರಿ.ಶ. 12ನೇ ಶತಮಾನದಲ್ಲೇ ಕಾಗದದ ಬಳಕೆಯಿತ್ತಾದರೂ 15ನೇ ಶತಮಾನದವರೆಗೆ ಹೆಚ್ಚಾಗಿ ಕಂಡುಬರುವುದು ಭಿತ್ತಿಚಿತ್ರಗಳು. ನಂತರದ ಕಾಲದಲ್ಲಿ ಭಿತ್ತಿ ಚಿತ್ರಗಳೊಂದಿಗೆ ಬಟ್ಟೆ, ಮರದ ಹಲಗೆ, ಕಾಗದ ಮುಂತಾದ ಹಿನ್ನೆಲೆಗಳಲ್ಲಿ ರಚಿತವಾದ ಚಿಕಣಿ ಚಿತ್ರಗಳೂ (Miniature Paintings)ಕಂಡುಬರುತ್ತವೆ. ಶಾತವಾಹನ, ವಾಕಾಟಕ, ಗುಪ್ತ, ಚಾಲುಕ್ಯ, ರಾಷ್ಟ್ರಕೂಟ, ಪಲ್ಲವ, ಚೋಳ, ವಿಜಯನಗರ ಮತ್ತು ನಾಯಕ ದೊರೆಗಳ ಆಡಳಿತಾವಧಿಯಲ್ಲಿ ಚಿತ್ರಕಲೆಗೆ ಹೆಚ್ಚಿನ ಪ್ರೋತ್ಸಾಹ ದೊರೆಯಿತು ಮತ್ತು ಹಲವಾರು ಭಿತ್ತಿಚಿತ್ರಗಳು, ಪ್ರತಿಚಿತ್ರಗಳ ರಚನೆಯಾಯಿತು. ಧರ್ಮದೊಂದಿಗಿನ ಚಿತ್ರಕಲೆಯ ನಂಟು ಕೇವಲ ಭಾರತಕ್ಕಷ್ಟೇ ಸೀಮಿತವಾದುದಲ್ಲ. ಜಾಗತಿಕ ನೆಲೆಯಲ್ಲಿಯೂ ಚಿತ್ರಕಲೆಯು ಧಾರ್ಮಿಕ ನಿರೂಪಣೆಯ ಮಾಧ್ಯಮವಾಗಿ ತನ್ನ ವ್ಯಾಪಕತೆಯನ್ನು, ಮಹತ್ವವನ್ನು ಕಂಡುಕೊಂಡಿತ್ತು. ಭಾರತದಲ್ಲಿ ಬೌದ್ಧ, ಹಿಂದೂ ಜೈನ ಧರ್ಮಗಳು ಚಿತ್ರಕಲೆಯನ್ನು ಪ್ರಚಾರಮಾಧ್ಯಮವಾಗಿಯೂ, ಧರ್ಮ ತತ್ವಗಳ ಸಂರಕ್ಷಣಾ ಮಾಧ್ಯಮವಾಗಿಯೂ ಬಳಸಿಕೊಂಡವು. ಅಜಂತಾದ ಗುಹೆಗಳಲ್ಲಿ ರಚಿಸಲಾದ ಬುದ್ಧನ ಜಾತಕ ಕಥೆಗಳು (ಕ್ರಿ.ಪೂ.2ನೇ ಶತಮಾನದಿಂದ ಕ್ರಿ.ಶ.4ನೇ ಶತಮಾನ), ಕರ್ನಾಟಕದ ಬಾದಾಮಿಯ ಗುಹಾ ಚಿತ್ರಗಳು, ಲೇಪಾಕ್ಷಿ, ಹಂಪಿ, ತಂಜಾವೂರು ಇತ್ಯಾದಿ ಪ್ರದೇಶಗಳಲ್ಲಿ ರಚಿತವಾದ ಭಿತ್ತಿಚಿತ್ರಗಳೆಲ್ಲವೂ ಧಾರ್ಮಿಕ ಶಾಸ್ತ್ರ, ಗ್ರಂಥ, ಪುರಾಣಗಳ ನಿರೂಪಣಾ ಚಿತ್ರಗಳು. ಯುರೋಪಿನ ರಾಷ್ಟ್ರಗಳಲ್ಲಿಯೂ ಚಿತ್ರಕಲೆ ಧರ್ಮ ಪ್ರಚಾರಕ ಸಾಧನವಾಗಿ / ಮಾಧ್ಯಮವಾಗಿ ವ್ಯಾಪಕವಾಗಿ ಬಳಕೆಯಾಯಿತು. ಮುಖ್ಯವಾಗಿ ಇಟಲಿಯ ಸಿಸ್ಟೈನ್ ಛಾಪೆಲ್‌ನಲ್ಲಿ ಮೈಕೆಲಾಂಜಲೊನಿಂದ ರಚಿತವಾದ ಅದ್ಭುತ ಚಿತ್ರಗಳನ್ನು ಉದಾಹರಿಸಬಹುದು (ಕ್ರಿ.ಶ.15–16ನೇ ಶತಮಾನ). ಇವು ಕ್ರಿಸ್ತನ ಜೀವನಗಾಥೆಯನ್ನು ವಿವರಿಸುವ ಚಿತ್ರಗಳು.

ಯುರೋಪಿನ ರಿನೈಸಾನ್ಸ್ (ಪುನರುಜ್ಜೀವನ ಯುಗ) ನಂತರದ ಕ್ಲಾಸಿಸಂ, ನಿಯೋ ಕ್ಲಾಸಿಸಂ, ರೊಮ್ಯಾಂಟಿಸಿಸಂ ಚಿತ್ರಣ ಶೈಲಿಗಳ ಏಕತಾನತೆ, ಕ್ಲೀಷೆ ಮತ್ತು ನಿಯಮಬದ್ಧತೆಯನ್ನು ಕಟುವಾಗಿ ಟೀಕಿಸುವ 'ಆಧುನಿಕ' ಅವಧಿ 19ನೇ ಶತಮಾನದ ಪೂರ್ವಾರ್ಧದ ಮೊದಲ ದಶಕಗಳಲ್ಲಿ ರೂಪುಗೊಂಡಿತು. ಈ ಅವಧಿಯಲ್ಲಿ ಉಂಟಾದ ಸಾಮಾಜಿಕ, ವೈಜ್ಞಾನಿಕ ಕ್ರಾಂತಿಗಳ ಜೊತೆ ಜೊತೆಗೆ ಚಿತ್ರಕಲಾಕ್ಷೇತ್ರದಲ್ಲಿಯೂ ಬದಲಾವಣೆಯ ಬಿರುಗಾಳಿ ಬೀಸಿತು. ಕಲಾವಿದರು ಚಿತ್ರಮಾಧ್ಯಮದ ಮೂಲಕ ವೈಜ್ಞಾನಿಕ, ಮನೋವಿಶ್ಲೇಷಣಾತ್ಮಕ ನೆಲೆಯಲ್ಲಿ 'ಸತ್ಯ'ದ ಹುಡುಕಾಟಕ್ಕೆ ತೊಡಗಿದರು. ಈ ಮನಸ್ಥಿತಿಯು ಕಲಾವಿದನು ಜಗತ್ತನ್ನು ತನ್ನದೇ ವಿಶಿಷ್ಟ 'ದೃಷ್ಟಿ'ಯಿಂದ ನೋಡಿ, ಗ್ರಹಿಸಿದ ಒಳನೋಟವನ್ನು ಚಿತ್ರ ಮಾಧ್ಯಮದ ಮೂಲಕ ಅಭಿವ್ಯಕ್ತಿಸಿ ಒಟ್ಟಾರೆ ದೃಶ್ಯ ಗ್ರಹಿಕೆ ಮತ್ತು ದೃಶ್ಯ ಮಾಧ್ಯಮದ ಅಗಾಧ ಸಾಧ್ಯತೆಗಳನ್ನು ತೆರೆದಿಡುವ ಮಹತ್ವದ ಅವಧಿ ಇದಾಯಿತು. ರಿಯಲಿಸಂ, ಇಂಪ್ರೆಷನಿಸಂ, ಎಕ್ಸ್‌ಪ್ರೆಷನಿಸಂ, ಫ್ಯಾಸಿಸಂ, ಪಾಯಿಂಟಲಿಸಂ, ದಾದಾಯಿಸಂ, ಸರ್ರಿಯಲಿಸಂ, ಕ್ಯೂಬಿಸಂ, ಅಬ್‌ಸ್ಟ್ರಾಕ್ಷನ್ ಇತ್ಯಾದಿ ಹತ್ತು ಹಲವು ಪಂಥಗಳು ಚಾಲ್ತಿಗೆ ಬಂದವು. ಇವುಗಳಲ್ಲದೆ ಎರಡನೇ ಜಾಗತಿಕ ಮಹಾಯುದ್ಧದ ನಂತರದ ಕಾಲದಲ್ಲಿ ರೂಪುಗೊಂಡ ಆಧುನಿಕೋತ್ತರ ಕಲಾಪಂಥಗಳು ಜಾಗತಿಕ ಮಟ್ಟದಲ್ಲಿ ಸಾಕಷ್ಟು ಪ್ರಭಾವ ಮೂಡಿಸಿದವು.

ಭಾರತೀಯ ಚಿತ್ರಕಲೆ ಮೂಲತಃ ಸಾಂಪ್ರದಾಯಿಕ ನೆಲೆಗಟ್ಟಿನ ಮೇಲೆ ರೂಪುಗೊಂಡಿತಾದರೂ

ಕಾಲಕ್ಕನುಗುಣವಾಗಿ ತನ್ನ ಸ್ವರೂಪದಲ್ಲಿ ಅನಿವಾರ್ಯ ಬದಲಾವಣೆಗಳನ್ನೊಳಗೊಳ್ಳುತ್ತಾ ಸಾಗಿಬಂದಿದೆ. ವಿದೇಶೀಯರ ಅತಿಕ್ರಮಣ ಆಡಳಿತದಿಂದಾಗಿ ಸಾಮಾಜಿಕ, ಸಾಂಸ್ಕೃತಿಕ ಜೀವನದ ಮೇಲೆ ಆದ ಪ್ರಭಾವಗಳು, ಕೊಡು ಕೊಳ್ಳುವಿಕೆ ಸಹಜವಾಗಿಯೇ ಚಿತ್ರಕಲಾ ಪರಿಕರ, ವಿಷಯ ಶೈಲಿಗಳ ಮೇಲೂ ಆಯಿತು. ಪರ್ಷಿಯನ್, ಮುಘಲ್ ಚಿತ್ರ ಶೈಲಿ ಭಾರತೀಯ ಚಿತ್ರಕಲೆಯ ಮೇಲೆ ಗಾಢವಾದ ಪ್ರಭಾವ ಬೀರಿದವು. ಪಹಾಡಿ, ರಾಜಸ್ಥಾನಿ, ಗುಲೇರ್, ಕಾಂಗ್ರಾ, ಬಸೋಲಿ, ದಖನ್ನಿನ ಚಿತ್ರಶೈಲಿಗಳಲ್ಲಿ ಈ ಪ್ರಭಾವ ಕಾಣಬಹುದು. ಭಾರತೀಯ ರಾಜ-ಮಹಾರಾಜರೂ ಕೂಡ ಇಂಥ ಸಾಂಸ್ಕೃತಿಕ ಕೊಡು ಕೊಳ್ಳುವಿಕೆಗೆ ಸಾಕಷ್ಟು ಪ್ರೋತ್ಸಾಹವಿತ್ತುದರಿಂದಾಗಿ ಹೊರಗಿನ ಪ್ರಭಾವಗಳನ್ನು ಅರಗಿಸಿಕೊಂಡು, ಅವುಗಳನ್ನು 'ಭಾರತೀಯ'ಗೊಳಿಸಿಕೊಳ್ಳುವುದು ಇಲ್ಲಿನ ಕಲಾವಿದರಿಗೆ ಸಾಧ್ಯವಾಯಿತು.

ಕ್ರಿ.ಶ. 1850ರಿಂದ 1950ರವರೆಗಿನ ಅವಧಿಯಲ್ಲಿ ಭಾರತೀಯ ಚಿತ್ರಕಲಾ ಕ್ಷೇತ್ರ ಮತ್ತೊಂದು ಮಹತ್ತರ ಬದಲಾವಣೆ / ಪ್ರಭಾವವನ್ನು ಕಂಡಿತು. ಬ್ರಿಟಿಷರಿಂದ ಮದ್ರಾಸ್, ಕಲ್ಕತ್ತಾ, ಮುಂಬೈ ಮತ್ತು ಮೈಸೂರಿನಲ್ಲಿ ಪ್ರಾರಂಭಗೊಂಡ ಕೈಗಾರಿಕಾ ತರಬೇತಿ ಶಾಲೆಗಳ ಮೂಲಕ ಇಲ್ಲಿನ ಕಲಾ ಸಂಸ್ಕೃತಿಯನ್ನು ಪಾಶ್ಚಾತ್ಯೀಕರಣಗೊಳಿಸುವ ಪ್ರಯತ್ನ ನಡೆಯಿತು. ಭಾರತೀಯ ರೇಖಾ ಪ್ರಧಾನ ಚಿತ್ರಗಳನ್ನು ಅನರ್ಥ ರೇಖಾ ವಿಲಾಸ ಎಂದು ಜರೆದ ಬ್ರಿಟಿಷ್ ಆಡಳಿತ ಗ್ರೀಕೋರೋಮನ್ ಶೈಲಿಯ 'ರಿಯಲಿಸ್ಟಿಕ್' ಚಿತ್ರಣವನ್ನು ಈ ಶಾಲೆಗಳ ಮುಖಾಂತರ ಭಾರತೀಯರಿಗೆ ಪರಿಚಯಿಸಿ ಇಲ್ಲಿನ ಕುಶಲಕಲಾವಿದರನ್ನು 'ಉತ್ತಮ'ಗೊಳಿಸುವ ಉದ್ದೇಶ ಹೊಂದಿತ್ತು! ಅಲ್ಲದೆ ಇಲ್ಲಿನ ಕುಶಲಕರ್ಮಿಗಳನ್ನು ತಮಗೆ ಬೇಕಾದಂತೆ ಪಳಗಿಸಿ, ಕರಕುಶಲ ವಸ್ತುಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ತಯಾರುಗೊಳಿಸಿ ಮಾರಾಟದ ಸರಕನ್ನಾಗಿಸುವ ವ್ಯಾಪಾರೀ ಉದ್ದೇಶವೂ ಇದರ ಹಿಂದೆಯಿತ್ತು. ಕೇವಲ ಸಾಂಪ್ರದಾಯಿಕ ಅಥವ ನಿರ್ದಿಷ್ಟ ಮನೆತನಗಳಿಗೆ ಮಾತ್ರ ಸೀಮಿತವಾಗಿದ್ದ ಚಿತ್ರಕಲಾಭ್ಯಾಸ ಈ ಶಾಲೆಗಳಿಂದಾಗಿ ಎಲ್ಲಾ ವರ್ಗದ ಕಲಾಸಕ್ತರಿಗೂ ತೆರೆದುಕೊಂಡದ್ದು ಚಿತ್ರಕಲಾ ಕ್ಷೇತ್ರದಲ್ಲಿ ಮಹತ್ತರ ಬದಲಾವಣೆ.

ಭಾರತೀಯ ಕಲೆಯನ್ನು ಪಾಶ್ಚಾತ್ಯೀಕರಿಸುವ ಹುನ್ನಾರದ ಸಾಂಸ್ಕೃತಿಕ ದಬ್ಬಾಳಿಕೆಯನ್ನು ತೀವ್ರವಾಗಿ ವಿರೋಧಿಸಿ ಬಂಡಾಯವೆದ್ದದ್ದು ಕಲ್ಕತ್ತಾದ ಬೆಂಗಾಲ್ ಕಲಾಶಾಲೆ. ಅವನೀಂದ್ರನಾಥ ಠಾಗೋರರ ನೇತೃತ್ವದಲ್ಲಿ ಅವರ ಶಿಷ್ಯ ಬಳಗ ಭಾರತೀಯ ಕಲೆಯನ್ನು 'ಪುನರುಜ್ಜೀವನ'ಗೊಳಿಸುವ ಪ್ರಯತ್ನವನ್ನು ಬಂಡಾಯದೋಪಾದಿಯಲ್ಲಿ ಮಾಡಿತು. ಇದು ಸ್ವಾತಂತ್ರ್ಯ ಸಂಗ್ರಾಮಕ್ಕೆ ಪೂರಕವಾದ ಚಳುವಳಿಯಾಗಿಯೂ ರೂಪ ಪಡೆಯಿತು.

ದಕ್ಷಿಣದಲ್ಲಿ ರವಿವರ್ಮ ಪಾಶ್ಚಾತ್ಯರ ತೈಲವರ್ಣವನ್ನು ಅಭ್ಯಸಿಸಿ, 'ರಿಯಲಿಸ್ಟಿಕ್' ಶೈಲಿಯಲ್ಲಿ ಭಾರತೀಯ ಪುರಾಣಕಥನಗಳನ್ನು ಚಿತ್ರಿಸುವುದರ ಮೂಲಕ ಭಾರತೀಯತೆಯ ಸಮಗ್ರತೆಯನ್ನು ವಿಶಿಷ್ಟ ರೀತಿಯಲ್ಲಿ ಪ್ರತಿಪಾದಿಸಿದರು. ಪಾಶ್ಚಾತ್ಯ ಕಲಾಶಿಕ್ಷಣ, ರವಿವರ್ಮರ ಪ್ರಭಾವ, ಸ್ವದೇಶಿ ಚಳುವಳಿಯ ಉತ್ಕರ್ಷ ಈ ಎಲ್ಲದರ ಪರಿಣಾಮವಾಗಿ ಭಾರತೀಯ ಚಿತ್ರಕಲೆ ತನ್ನ ಸ್ವರೂಪದಲ್ಲಿ ತೀವ್ರತರ ಬದಲಾವಣೆಗಳನ್ನು ಕಂಡಿತು. ಸ್ವಾತಂತ್ರ್ಯೋತ್ತರ ಭಾರತದ ಕಲಾವಿದರು ಈ ಎಲ್ಲಾ ಪ್ರಭಾವಗಳನ್ನು ಮೀರಿ ಮತ್ತೆ ತಮ್ಮತನದ ಪ್ರಾದೇಶಿಕ ಸೊಗಡಿನ ಮಣ್ಣಿನ ವಾಸನೆಯ ಅಂತಃಸತ್ವವನ್ನು ತಮ್ಮ ಚಿತ್ರಗಳ ಮೂಲಕ ಹುಡುಕತೊಡಗಿದರು. ಬಾಂಬೆ, ಮದ್ರಾಸ್, ಕಲ್ಕತ್ತಾಗಳಲ್ಲಿ ಸಮಾನಮನಸ್ಕ ಕಲಾವಿದರು ಜೊತೆಗೂಡಿ ತಮ್ಮದೇ ಕಲಾ ಸಂಘಟನೆಗಳ ಮೂಲಕ ಮತ್ತೆ **'ತಮ್ಮತನ'**ದ ಹುಡುಕಾಟದಲ್ಲಿ ತೊಡಗಿದರು. ಕರ್ನಾಟಕದಲ್ಲಿಯೂ ಇಂತಹ ಸಂಘಟನೆಗಳು ನಡೆದವು.

ಇಂದು ಯಾವ ಕ್ಷೇತ್ರವೂ ಜಾಗತೀಕರಣದ ಪ್ರಭಾವದಿಂದ ಹೊರತಾಗಿಲ್ಲ. ಕಲಾಕ್ಷೇತ್ರ ಕೇವಲ ಚಿತ್ರ, ಶಿಲ್ಪ, ಮುದ್ರಣ ಕಲೆ ಇತ್ಯಾದಿ 'ಅಕಾಡೆಮಿಕ್' ಮಾಧ್ಯಮಗಳಿಗೆ ಮಾತ್ರ ಸೀಮಿತವಾಗಿ ಉಳಿದಿಲ್ಲ. ಇನ್‌ಸ್ಟಲೇಶನ್,

ವೀಡಿಯೋ ಆರ್ಟ್, ಪರ್ಫಾರ್ಮೆನ್ಸ್, ಸೈಟ್ ಸ್ಪೆಸಿಫಿಕ್ ಆರ್ಟ್ – ಹೀಗೆ ಹಲವಾರು ಹೊಸ ಮಾಧ್ಯಮಗಳ ಅಗಾಧ ಸಾಧ್ಯತೆಗಳು ತೆರೆದುಕೊಂಡಿವೆ. ಸಪಾಟು ಮೇಲ್ಮೈ ಮೇಲೆ ರಚಿಸಲಾಗುವ ಟೂ ಡೈಮೆನ್ಷನಲ್ (Two Dimentional) ಚಿತ್ರಮಾಧ್ಯಮ ಇಂದು ಆಧುನಿಕೋತ್ತರ ಮನಸ್ಥಿತಿಯ ಭರಾಟೆಯ ನಡುವೆ 'ಸಾಂಪ್ರದಾಯಿಕ' ಎನಿಸಿಕೊಂಡುಬಿಡುವ ಹಂತದಲ್ಲಿದೆ.

ಯಾವುದೇ ಅತ್ಯಾಧುನಿಕ ಕಲಾಮಾಧ್ಯಮದ ನಡುವೆಯೂ 'ಚಿತ್ರಕಲೆ' ಮನುಷ್ಯನ ಪ್ರಾಮಾಣಿಕ, ಭಾವನಾತ್ಮಕ ಅಭಿವ್ಯಕ್ತಿಯ ಮಾಧ್ಯಮವಾಗಿ ಉಳಿಯುವುದರಲ್ಲಿ ಸಂಶಯವಿಲ್ಲ. ತನ್ನ ಯಾವತ್ತಿನ ಮಾಂತ್ರಿಕತೆಯಿಂದ ಚಿತ್ರಕಲೆ ವಿಶಿಷ್ಟ ಮಾಧ್ಯಮವಾಗಿ ತನ್ನ ಸ್ಥಾನವನ್ನು ಪಡೆದಿರುತ್ತದೆ.

ವೀರ ನಾಯಕ

- ಮುಕ್ಕಾಟಿ ಗಂಗಮ್ಮ
ಸ.ಮಾ.ಪ್ರಾ. ಶಾಲೆ, ಚೇರಂಬಾಣೆ

ಭಾರತ ದೇಶದ ಈ ಮಣ್ಣ್‌ಲಿ
ಕೊಡಗು ರಾಜ್ಯದ ಈ ನೆಲಲಿ
ತಾಯಿ ಕಾವೇರಮ್ಮನ ಮಡ್‌ಲ್‌ಲಿ
ಕೆಚ್ಚೆದೆಯ ಶೂರರ ಸಾಲ್‌ಲಿ |


ಕೊಡಗ್‌ನಾಳ್‌ದ ವೀರ ರಾಜೇಂದ್ರ
ಟಿಪ್ಪುನ ಕೈಗೆ ಸಿಕ್ಕಿ ನರಳಾಡ್ದ
ವೈರತ್ವಂದ ಬಿಳಿಯರ ಕೂಡಿ
ಆತ್ ಇಲ್ಲಿ ಹೊಸ ಗೆಳೆತನ |

ಅಮರ ಸುಳ್ಯ ಕೆನರ ಜಿಲ್ಲೆಯಾಕನ
ಪರದೇಶಗಳ ಕೈ ಚಳಕಕೆ
ನಮ್ಮ ಜನರ ಜೀವ ಉಳಿಸಿಕೆ
ಹೋರಾಟಕ್ಕಿಳಿದ ನಿನ್ನ ಧೀರತನಕೆ|

ಮರೆಕಾಗದ ಈ ಯುಗಲಿ
ಗಂಡೆದೆಯ ಹೋರಾಟಲಿ
ರಾಜ್ಯ ಉಳ್‌ಸುವ ನಿನ್ನ ಕನಸ್‌ಲಿ
ಎದ್ರ್‌ಸಿ ನಿತ್ತ ಕಪಟ ನೀತಿಗೆ |

ಗಲ್ಲು ಸಿಕ್ಷೆಯಾತ್ ನಿನ್ನ ಶರ್‍ರ
ಮಣ್ಣ್‌ಲಿ ಮಣ್ಣಾತ್ ನಿನ್ನ ಹೆಸರ್‍ರ
ಧೀರ ಅಪ್ಪಯ್ಯನಾಗಿ ಉಳ್ದ
ನಮ್ಮ ಹೃದಯಲಿ |

ಕೊಡಗು ಮತ್ತು ರಾಜವಂಶ



✍ ದೋಲ್ಪಾಡಿ ಶಶಿಧರ್
B.Sc.,AMIE,B.E (Arc)
ಅಭ್ಯತ್‌ಮಂಗಲ ಗ್ರಾಮ ಮತ್ತು ಅಂಚೆ

ನಮ್ಮ ದೇಶದ ಇತಿಹಾಸದ ಪುಟಗಳನ್ನು ತಿರುವಿದರೆ, ನಮಗೆ ತಿಳಿಯದೇ ಇರುವ ಸಾಕಷ್ಟು ಮಾಹಿತಿಗಳು ಲಭ್ಯವಾಗುತ್ತವೆ. ಕ್ರಿ.ಪೂ.ದತ್ತ ನಮ್ಮ ಚಿತ್ತ ಹರಿಸಿದರೆ ಮಹಾಮಹಿಮರಾದ ರಾಜ ಮಹಾರಾಜರುಗಳ ಹಾಗೂ ಅವರುಗಳ ವಂಶ ಹೇಗೆ ವಿರಾಜಮಾನವಾಗಿತ್ತು ಎಂಬುದು ವೇದ್ಯವಾಗುತ್ತದೆ. ಆ ಕಾಲದಲ್ಲಿ ಸತ್ಯ, ಧರ್ಮಗಳ ಜೊತೆಜೊತೆಗೆ ಪರಾಕ್ರಮದ ಬದುಕಿಗೆ ಹೆಚ್ಚು ಪ್ರಾಮುಖ್ಯತೆ ಇತ್ತು ಎನಿಸುತ್ತದೆ. ಹಾಗೆಯೇ ಹೆಣ್ಣು, ಹೊನ್ನು, ಮಣ್ಣಿಗಾಗಿ ನಡೆದ ಹೋರಾಟಗಳಲ್ಲಿ ರಾಜ ಮನೆತನಗಳು ಮಣ್ಣಲ್ಲಿ ಮಣ್ಣಾದ ಘಟನೆಗಳು ಸ್ಮೃತಿಪಟಲದಲ್ಲಿ ತೇಲಿ ಬರುತ್ತವೆ. ರಾಮಾಯಣ, ಮಹಾಭಾರತಗಳು ಇಂತಹ ವೈಪರೀತ್ಯಕ್ಕೆ ಜ್ವಲಂತ ಉದಾಹರಣೆಗಳು.

ಕ್ರಿ.ಶ.ದ ಪ್ರಾರಂಭ ಕ್ರಿ.ಪೂ.ಕ್ಕಿಂತ ಸಾಕಷ್ಟು ಬದಲಾವಣೆಗಳನ್ನು ಕಂಡರು ಕೂಡ, ರಾಜ ಮನೆತನದ ಆಡಳಿತ ಮುಂದುವರೆದಿತ್ತು. ಒಬ್ಬ ರಾಜನ ಮೇಲೆ ಮತ್ತೊಬ್ಬ ರಾಜ ದಂಡೆತ್ತಿ ಬರುವುದು, ರಾಜ್ಯವನ್ನು ವಿಸ್ತಾರಗೊಳಿಸುವುದು, ಚಕ್ರವರ್ತಿಯಾಗಿ ಮೆರೆಯುವುದು ಇತ್ಯಾದಿ.

ಮುಂದುವರೆದು ಸುಮಾರು 15 – 16ರ ಶತಮಾನದಲ್ಲಿ ಸಂಪದ್ಭರಿತ ಭಾರತಕ್ಕೆ ಪೋರ್ಚುಗೀಸರು, ಆಂಗ್ಲರು, ಡಚ್ಚರು ಮುಂತಾದ ಪರಕೀಯರು ವ್ಯಾಪಾರದ ನೆಪದಲ್ಲಿ ಆಗಮಿಸಿದರು. ನಂತರ ಭಾರತ ದೇಶ ಆಂಗ್ಲರ ಆಡಳಿತಕ್ಕೆ ಒಳಪಟ್ಟಿದ್ದು ಇತಿಹಾಸ.

ಭರತ ಖಂಡದಲ್ಲಿ ಕರುನಾಡ ಸರಹದ್ದಿನ ಪಶ್ಚಿಮ ದಿಕ್ಕಿನಲ್ಲಿ ಬೆಟ್ಟ, ಗುಡ್ಡ, ಗಿರಿ, ಕಂದರ, ಶಿಖರಗಳಿಂದ ಆವೃತಗೊಂಡು, ಹಸಿರು ಕಾನನಗಳಿಂದ ಕೂಡಿದ ಸುಂಧರ ತಾಣವೇ ಕೊಡಗು. ಸಸ್ಯ ಕಾಶಿಯೆಂದು ಖ್ಯಾತಿಗೊಂಡಿದೆ.

ಕೊಡಗಿನ ನೆಲಕ್ಕೆ ಸುಮಾರು ಒಂದು ಸಾವಿರಕ್ಕೂ ಅಧಿಕ ವರ್ಷಗಳ ಇತಿಹಾಸವಿದೆ. ಅವಿಭಾಜಿತ ಕೊಡಗು ರಾಜ್ಯವನ್ನು ದ್ರಾವಿಡರು, ಆರ್ಯರು, ಚೋಳರು, ಕೊಂಗರಸರು ಆಳಿದ ಉದಾಹರಣೆಗಳಿವೆ. ಕೊಂಗಾಳ್ವರು ಈ ನಾಡನ್ನು ಕ್ರೋಢ ನಾಡು ಎಂದು ಕರೆಯುತ್ತಿದ್ದರು ಎನ್ನಲಾಗಿದೆ. ಮುಂದುವರೆದಂತೆ ಕೊಡಗು ಎಂಬುದಾಗಿ ಪ್ರಸಿದ್ಧಿಗೆ ಬಂತು.

17ನೇ ಶತಮಾನದಲ್ಲಿ ಈ ನಾಡಿಗೆ ಓರ್ವ ಜಂಗಮರ ಆಗಮನವಾಗುತ್ತದೆ. ಇವರು ಈಗಿನ ಸೋಮವಾರಪೇಟೆಯ ಯಡವನಾಡು ಸರಹದ್ದಿನ ಹಾಲೇರಿ ಎಂಬಲ್ಲಿ ಬಂದು ನೆಲೆ ನಿಲ್ಲುತ್ತಾರೆ. ಮಠ, ಮಾನ್ಯಗಳನ್ನು ನಿರ್ಮಿಸುತ್ತಾರೆ. ಅಲ್ಲಿಯ ಜನರ ಪ್ರೀತಿ – ವಿಶ್ವಾಸ ಗಳಿಸುವಲ್ಲಿ ಸಫಲರಾಗುತ್ತಾರೆ. ವೀರಶೈವ ಜಂಗಮರಾದ ಇವರು ತಾವು ರಾಜ ವಂಶಸ್ಥರೆಂದು ಘೋಷಿಸಿಕೊಳ್ಳುತ್ತಾರೆ, ಈ ಜಂಗಮರ ಪೀಳಿಗೆಯೇ ರಾಜ ಮನೆತನವಾಗಿ ಖ್ಯಾತಿಗೆ ಬರುತ್ತದೆ. ಮುಂದಿನ ಸುಮಾರು 300 ವರ್ಷಗಳಿಗೂ ಅಧಿಕ ಕಾಲ ಇವರ ಪೀಳಿಗೆ ಕೊಡಗಿನ ಆಡಳಿತ ಸೂತ್ರ ಹಿಡಿದು ವಿಜೃಂಭಿಸಿದೆ ಎನ್ನಲಾಗುತ್ತದೆ. ಹಾಲೇರಿಯ ಸ್ಥಳೀಯರನ್ನು ವಿಶ್ವಾಸಕ್ಕೆ ತೆಗೆದುಕೊಂಡ ಈ ಅರಸರು, ಕೊಡಗಿನ ಸುತ್ತಮುತ್ತಲಿದ್ದ ಪಾಳೆಗಾರರ ಹುಟ್ಟಡಗಿಸಿ, ತಮ್ಮ

ಅಧಿಪತ್ಯವನ್ನು ಭದ್ರಗೊಳಿಸಿಕೊಂಡನು. 1739ರಲ್ಲಿ ಸಿರಿಬಾಯಿ ದೊಡ್ಡವೀರಪ್ಪ ವಿಧಿವಶರಾಗುತ್ತಾರೆ. ಇವರಿಗೆ ಸಂತಾನವಿಲ್ಲದ ಕಾರಣ, ಇದೇ ವಂಶದ ಚಿಕ್ಕ ವೀರಪ್ಪ ಎಂಬವನು ರಾಜನಾಗಿ ಆಯ್ಕೆಯಾಗುತ್ತಾನೆ. ಚಿಕ್ಕ ವೀರರಾಜನೆಂದು ಖ್ಯಾತಿ ಪಡೆದ ಈತ, ಸುಮಾರು 37 ವರ್ಷಗಳ ಕಾಲ ರಾಜ್ಯಭಾರ ಮಾಡುತ್ತಾನೆ. ಈತನಿಗೂ ಸಂತತಿ ಇಲ್ಲದ ಕಾರಣ, ಇದೇ ವಂಶದ ಮುದ್ದುರಾಜನು ಹಾಲೇರಿಗೆ ಒಡೆಯನಾಗುತ್ತಾನೆ. ಈತನ ತಮ್ಮ ಹೊರಮಲೆಯ ರಾಜನಾಗುತ್ತಾನೆ.

ತನ್ನ ಅಧಿಪತ್ಯವನ್ನು ವಿಸ್ತರಿಸುವ ಉದ್ದೇಶದಿಂದ ಹಾಲೇರಿಯಿಂದ ಹೊರಬಂದ ಮುದ್ದುರಾಜನು ಇಂದಿನ ಮಡಿಕೇರಿ ಇರುವ ಜಾಗದಲ್ಲಿ ನಗರವೊಂದನ್ನು ನಿರ್ಮಿಸುತ್ತಾನೆ. ಅರಮನೆಯೊಂದನ್ನು ನಿರ್ಮಿಸಿ, ವಾಸ್ತವ್ಯ ಹೂಡುತ್ತಾನೆ. ಈ ನಗರಕ್ಕೆ ಮುದ್ದುರಾಜನ ಕೇರಿ "ಮಡಿಕೇರಿ" ಎಂಬುದಾಗಿ ನಾಮಾಂಕಿತವಾಯಿತು ಎಂಬುದು ಪ್ರತೀತಿ.

ಮೈಸೂರನ್ನು ಆಳುತ್ತಿದ್ದ ಹೈದರಾಲಿಯು 1736ರಲ್ಲಿ ಶಿವಮೊಗ್ಗದ ಇಕ್ಕೇರಿಯ ಮೇಲೆ ದಂಡೆತ್ತಿ ಬರುತ್ತಾನೆ. ರಾಜನನ್ನು ಸದೆಬಡಿದು ಇಕ್ಕೇರಿಯ ಅಧೀನದಲ್ಲಿದ್ದ ಸುಳ್ಯ, ಪುತ್ತೂರು, ಪಂಜ, ಮಾಗಣೆ, ಬೆಳ್ಳಾರೆ ಇವುಗಳನ್ನು ಸ್ವಾಧೀನಮಾಡಿಕೊಳ್ಳುತ್ತಾನೆ. ಹೈದರಾಲಿಯ ಪ್ರಾಬಲ್ಯ ಬೆಳೆಯುತ್ತ ಹೋಗುತ್ತದೆ. ಆದರೆ ಕೊಡಗನ್ನು ವಶಪಡಿಸಿಕೊಳ್ಳಬೇಕೆಂಬ ಹೈದರಾಲಿಯ ಇಚ್ಛೆ ನೆರವೇರಲೇ ಇಲ್ಲ. 1782ರಲ್ಲಿ ಈತನ ಅಂತ್ಯವಾಗುತ್ತದೆ.

ಮುದ್ದುರಾಜನ ತಮ್ಮ ಲಿಂಗರಾಜನು 1768ರಲ್ಲಿ ಮೈಸೂರಿನ ರಾಜ ಹೈದರಾಲಿಯ ಮೇಲೆ ಯುದ್ಧ ಸಾರುತ್ತಾನೆ. ಯುದ್ಧದಲ್ಲಿ ಈ ವಿಭಾಗದ ಅರೆ ಭಾಷಿಕ ಗೌಡ ಜನಾಂಗ ಲಿಂಗರಾಜನಿಗೆ ಮುಕ್ತ ಸಹಾಯ ಹಸ್ತ ನೀಡುತ್ತದೆ. ಇಕ್ಕೇರಿಯಿಂದ ಕೈಬಿಟ್ಟು ಹೋಗಿದ್ದ ಸುಳ್ಯ, ಪುತ್ತೂರು, ಪಂಜ, ಮಾಗಣೆ, ಬೆಳ್ಳಾರೆ ಗ್ರಾಮಗಳು ಲಿಂಗರಾಜನ ಕೈವಶವಾಗುತ್ತದೆ. ಹೈದರನು ಸೋತು ಪಲಾಯನ ಮಾಡುತ್ತಾನೆ. ಯುದ್ಧದಲ್ಲಿ ವಿಜಯ ಸಾಧನೆಗೆ ಕಾರಣಕರ್ತರಾದ ಗೌಡ ಜನಾಂಗಕ್ಕೆ ಮಡಿಕೇರಿಯ ಭಾಗಮಂಡಲ, ಗಾಳಿಬೀಡು ಈ ವಿಭಾಗಗಳ ಸರಹದ್ದಿನಲ್ಲಿ ಜಮ್ಮ - ಜಹಗೀರುಗಳನ್ನು ನೀಡಿ ಲಿಂಗರಾಜನು ಗೌರವಿಸುತ್ತಾನೆ.

ಹೈದರಾಲಿಯ ಸೋಲಿನ ಹಗೆ ಸಾಧಿಸುತ್ತಿದ್ದ ಈತನ ಮಗ ಟಿಪ್ಪು ಸುಲ್ತಾನನು, 1796ರಲ್ಲಿ ಕೊಡಗಿನ ಮೇಲೆ ಯುದ್ಧಕ್ಕೆ ಬರುತ್ತಾನೆ. ಕೊಡಗು ಜಿಲ್ಲೆಯನ್ನು ಪೂರ್ವ ದಿಕ್ಕಿನ ಗಡಿಯ ಮೂಲಕ ಪ್ರವೇಶ ಮಾಡಿದ ಟಿಪ್ಪುವಿನ ಸೈನ್ಯ ನಾಲ್ಕುನಾಡು, ಬಾಡಗ, ಚೆಯ್ಯಂಡಾಣೆ, ನಾಪೋಕ್ಲು, ಕೊಂಡಂಗೇರಿ ಈ ವಿಭಾಗಗಳ ಬಹಳಷ್ಟು ಜನರನ್ನು ಬಂಧಿಸಿ ಮೈಸೂರಿಗೆ ಹೊತ್ತೊಯ್ಯುತ್ತದೆ. ಅಲ್ಲಿ ಅವರುಗಳನ್ನು ಬಲಾತ್ಕಾರವಾಗಿ ಮತಾಂತರಗೊಳಿಸಲಾಗುತ್ತದೆ.

ಮುದ್ದುರಾಜ ಹಾಗೂ ಲಿಂಗರಾಜರ ಆಳ್ವಿಕೆಯಲ್ಲಿ ಈಗಿನ ಕೊಡಗಿನ ಒಂದು ವಿಭಾಗವನ್ನು ತಾವುನಾಡು, ಎಡವನಾಡು, ಮಡಿಕೇರಿ ನಾಡು, ನಡುನಾಡು, ಬೇಂಗುನಾಡು, ಕಡಿಯತ್ ನಾಡು, ಕುಯ್ಯಂಗೇರಿನಾಡು ಎಂಬುದಾಗಿ ವಿಭಜಿಸಲಾಗಿತ್ತು. ಇದೇ ಸಂದರ್ಭದಲ್ಲಿ ದಿವಾನ, ಸುಬೇದಾರ, ಪಾರುಪತ್ಯೆಗಾರ, ಅಮಲ್ದಾರ, ಶಾನುಭೋಗ, ಪಟೇಲ ಮುಂತಾಗಿ ಕೊಡಗಿನ ಜನರಿಗೆ ರಾಜರು ನೌಕರಿ ನೀಡಿದ್ದರು. ಪ್ರತಿಯೊಬ್ಬರಿಗೆ ನೀಡಲಾಗಿದ್ದ ಜಮ್ಮ - ಜಹಗೀರುಗಳನ್ನು ಕಡಂಗಗಳನ್ನು ತೋಡುವ ಮೂಲಕ ವಿಭಜಿಸಲಾಗಿತ್ತು. ಈ ಕಡಂಗಗಳನ್ನು "ರಾಜಕಡಂಗ" ಎಂಬುದಾಗಿ ಕರೆಯಲಾಗುತ್ತಿತ್ತು. ಈ ಜಮೀನುಗಳಿಗೆ ಕಂದಾಯ ವಿಧಿಸಿ, ಅಧಿಕಾರಿಗಳು ರಾಜನ ಬೊಕ್ಕಸಕ್ಕೆ ನೀಡುತ್ತಿದ್ದರು. 1780ರಲ್ಲಿ ಲಿಂಗರಾಜನು ವಿಧಿವಶನಾಗುತ್ತಾನೆ.

ಮಡಿಕೇರಿ ಈ ರಾಜವಂಶಸ್ಥರಿಗೆ ಮುಖ್ಯ ನೆಲೆಯಾಗಲು ಕಾರಣರಾದವರು ಮುದ್ದುರಾಜ ಮತ್ತು ಲಿಂಗರಾಜ. ಲಿಂಗರಾಜನು ತನ್ನ ಆಳ್ವಿಕೆಯಲ್ಲಿ ಕೆಳದಿಯಿಂದ ಶಿವಪ್ಪ ನಾಯಕ ಎಂಬವರನ್ನು ಕರೆಯಿಸಿ, ಅವರ ಮೂಲಕ ಮಡಿಕೇರಿಯ ಶ್ರೀ ಓಂಕಾರೇಶ್ವರ ದೇವಾಲಯ ಕಟ್ಟಿಸಿದನು ಮತ್ತು ರಾಜಾಸೀಟನ್ನು ನಿರ್ಮಿಸಿದನು ಎಂಬ ಪ್ರತೀತಿಯಿದೆ. ಶ್ರೀ ಓಂಕಾರೇಶ್ವರ ಲಿಂಗವನ್ನು ಕಾಶಿಯಿಂದ ತರಿಸಲಾಗಿತ್ತು ಎಂದು ಕೂಡ ಹೇಳಲಾಗುತ್ತದೆ.

ನಂತರದ ದಿನಗಳಲ್ಲಿ ದೊಡ್ಡ ವೀರರಾಜನು ಕೊಡಗನ್ನು ಆಳುತ್ತಿದ್ದ ಸಂದರ್ಭದಲ್ಲಿ, 2ನೇ ಮುದ್ದುರಾಜ, ಮುದ್ದಯ್ಯ ರಾಜ, ದೇವಪ್ಪ ರಾಜ, ಅಪ್ಪಾಜಿ ರಾಜ ಇವರುಗಳಲ್ಲಿ ಅಂತಃಕಲಹವೇರ್ಪಡುತ್ತದೆ. ಈ ಕಾರಣಕ್ಕಾಗಿ ದೊಡ್ಡ ವೀರರಾಜನು ಕೊಡಗನ್ನು ವಿಭಜಿಸಿ ಇವರುಗಳಿಗೆ ಪಾಲು ನೀಡುತ್ತಾನೆ ಎಂಬ ಪ್ರತೀತಿ ಕೂಡ ಇದೆ. 1809ರಲ್ಲಿ ದೊಡ್ಡ ವೀರರಾಜನು ವಿಧೀವಶನಾಗುತ್ತಾನೆ.

1834ರಲ್ಲಿ "ಈಸ್ಟ್ ಇಂಡಿಯಾ ಕಂಪೆನಿ" ಕೊಡಗಿಗೆ ಲಗ್ಗೆ ಇಡುತ್ತದೆ. ಆಂಗ್ಲರ ಚೀಫ್ ಕಮೀಶನರ್ ಕಬ್ಬನ್ ದೊರೆ ಎಂಬವನು ತನ್ನ ಆರ್ಮಿ ಕ್ಯಾಪ್ಟನ್ ಲೀ ಹಾರ್ಡಿಯ ಮೂಲಕ 19ನೇ ಬ್ರಿಟಿಷ್ ರೆಜಿಮೆಂಟನ್ನು ಬರಮಾಡಿಕೊಂಡು ಮಡಿಕೇರಿಯನ್ನು ವಶಪಡಿಸಿಕೊಳ್ಳುತ್ತಾನೆ.

ಆಧಾರ :

ಡಾ। ಕೆ. ಸಿ. ಯತೀಶ್‌ಕುಮಾರ್ ಅವರ
"ದಿ ಲ್ಯಾಂಡ್ ರಿಲೇಷನ್ಸ್ ಅಂಡ್ ಸೋಷಿಯಲ್ ಸ್ಟ್ರಕ್ಚರ್ ಆಫ್ ಕೊಡಗು" ಎಂಬ ತೀಸಿಸ್

"ಮಿಸ್ಟರ್ ಗೌಡ" ಬಿರುದಾಂಕಿತ ಸಬ್ಬಂಡ್ರ ಜಗದೀಶ್ ಕುಶಾಲಪ್ಪ



ಪ್ರಸ್ತುತ ಅಮೇರಿಕಾದ "VOCERA" ಕಂಪೆನಿಯಲ್ಲಿ ಪ್ರಧಾನ ವ್ಯವಸ್ಥಾಪಕರಾಗಿ ಕರ್ತವ್ಯ ನಿರ್ವಹಣೆ ಮಾಡುತ್ತಿರುವ ಶ್ರೀ ಸಬ್ಬಂಡ್ರ **ಜಗದೀಶ್**‌ರವರು ಮಕ್ಕಂದೂರು ಗ್ರಾಮದ ಶ್ರೀ ಸಬ್ಬಂಡ್ರ ಕುಶಾಲಪ್ಪ ಮತ್ತು ಶ್ರೀಮತಿ ಚಿಣ್ಣಮ್ಮ ದಂಪತಿಗಳ ಸುಪುತ್ರ.

ಮಡಿಕೇರಿಯ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕಾಲೇಜಿನ ವಿದ್ಯಾರ್ಥಿಯಾಗಿದ್ದ ಶ್ರೀ ಜಗದೀಶ್, ವಿದ್ಯಾರ್ಥಿ ಸಂಘದ ಉಪಾಧ್ಯಕ್ಷರಾಗಿದ್ದರು. 2000 ಇಸವಿಯ ನೂತನ ವರ್ಷವನ್ನು ಸಂಭ್ರಮದಿಂದ ಸ್ವಾಗತಿಸುವ ಸಮಾರಂಭವನ್ನು ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿ, ಮಡಿಕೇರಿಯಲ್ಲಿ ಹಮ್ಮಿಕೊಂಡಿತ್ತು. 1999ರ ಡಿಸೆಂಬರ್ 31ರ ಮಧ್ಯ ರಾತ್ರಿಯಲ್ಲಿ ಅಕಾಡೆಮಿ ಅಧ್ಯಕ್ಷ ಶ್ರೀ ತುಂತಜೆ ಗಣೇಶ್‌ರವರ ಅಧ್ಯಕ್ಷತೆಯಲ್ಲಿ ಆಚರಿಸಲ್ಪಟ್ಟ ಈ ಸಮಾರಂಭದಲ್ಲಿ ಶ್ರೀ ಜಗದೀಶ್‌ರವರಿಗೆ "ಮಿ.ಗೌಡ" ಬಿರುದು ನೀಡಿ, ನೆನಪಿನ ಕಾಣಿಕೆಯೊಂದಿಗೆ ರೂ. 2,000 (ಎರಡು ಸಾವಿರ) ಹಣ ನೀಡುವ ಮೂಲಕ ಸನ್ಮಾನಿಸಲಾಗಿತ್ತು. ತಮಗೆ ದೊರೆತ ಹಣವನ್ನು ಶ್ರೀ ಜಗದೀಶ್‌ರವರು ಉದಾರವಾಗಿ ಗೌಡ ವಿದ್ಯಾ ನಿಧಿಗೆ ನೀಡಿದರು.

ಈ ಸಂಬಂಧ 2014ರ ನವೆಂಬರ್ 12ರಂದು ಕೊಡಗು ಗೌಡ ವಿದ್ಯಾ ಸಂಘದ ವತಿಯಿಂದ ಕೂಡ ಸಬ್ಬಂಡ್ರ ಜಗದೀಶ್ ಕುಶಾಲಪ್ಪನವರನ್ನು ಸನ್ಮಾನಿಸಲಾಗಿತ್ತು.

(ಯಾತ್ರಾನುಭವ)

ಕೈಲಾಸ – ಮಾನಸ ಸರೋವರ



✍ ಡಾ। ಎಂ.ವಿ. ರಮಾ
ಪ್ರಾಂಶುಪಾಲರು
ಸರ್ಕಾರಿ ಪದವಿ ಪೂರ್ವ ಕಾಲೇಜು, ಸುಂಟಿಕೊಪ್ಪ

ನಮ್ಮ ಪೂರ್ವಜರು ದುರ್ಗಮವಾದ ಪರ್ವತ ಶ್ರೇಣಿಗಳ, ವನ್ಯ ಪ್ರದೇಶಗಳ ಹಾಗೂ ಹಿಮಚ್ಛಾದಿತ ಪ್ರದೇಶಗಳ ಮೂಲೆ ಮೂಲೆಗಳನ್ನು ಕಾಲು ನಡಿಗೆಯಲ್ಲೇ ಸುತ್ತಾಡಿ, ಪರಿಶೋಧಿಸಿ ದರ್ಶನಕ್ಕೆ ಯೋಗ್ಯವೆನಿಸಿದ ಸ್ಥಳಗಳನ್ನು ಯಾತ್ರಾಸ್ಥಳಗಳೆಂದು ಗುರುತಿಸಿ ಮುಂದಿನ ಪೀಳಿಗೆಗೆ ಬೆಲೆ ಕಟ್ಟಲಾಗದ ಅಚ್ಚುಕಟ್ಟಾದ ಸುಂದರ ಪರಂಪರೆಯನ್ನು ಕಟ್ಟಿ ಕೊಟ್ಟಿರುತ್ತಾರೆ. ಪರ್ವತಗಳನ್ನೇರಿ, ನದಿ – ತೊರೆಗಳ ಜಾಡುಗಳನ್ನು ಹುಡುಕಿ, ಕಣಿವೆಗಳಿಗೆ, ಗಿರಿ – ವನಗಳಿಗೆ ಹೆಸರನ್ನಿಟ್ಟು ನಮಗೆ ಉಡುಗೊರೆಯನ್ನು ನೀಡಿರುವ ನಮ್ಮ ಹಿರಿಯರು, ಪ್ರಕೃತಿಯಲ್ಲಿ ಕಂಡ ದೈವತ್ವವನ್ನು ಧ್ಯಾನ – ಮೌನ– ತಪಸ್ಸಿನ ಮೂಲಕ ಆರಾಧಿಸಿದವರು. ಅವರ ಜಾಡಿನಲ್ಲಿ ನಡೆಯಲೆಂದು ಸಂಸಾರ ಬಂಧನದಿಂದ ಸ್ವಲ್ಪ ಬಿಡುಗಡೆಯಾದ ನಂತರ, ವೃದ್ಧರು ತಮ್ಮ ಕಡೆಗಾಲದಲ್ಲಿ ಪುಣ್ಯ ಗಳಿಸುವ ಸಲುವಾಗಿಯೇ ಭಕ್ತನ ರೂಪದಲ್ಲಿ ತೀರ್ಥಯಾತ್ರೆಗಳಿಗೆ ಹೋಗುವುದು ಎಲ್ಲಾ ಜನಾಂಗದಲ್ಲಿರುವ ವಾಡಿಕೆ. ಆದರೆ ಇತ್ತೀಚಿನ ದಿನಗಳಲ್ಲಿ ಭಕ್ತರಷ್ಟೇ ಅಲ್ಲದೆ ಪ್ರಕೃತಿ ಪ್ರಿಯರು, ಸಾಹಸಿಗರು, ಚಾರಣಿಗರು ಮತ್ತು ವಿಜ್ಞಾನಿಗಳು ತಮ್ಮದೇ ಆದ ಕಾರಣಗಳಿಗೆ ಶ್ರೇಷ್ಠ – ಕಠಿಣ ತಾಣಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಹೋಗುತ್ತಿರುವುದೊಂದು ಗಮನಾರ್ಹ ಸಂಗತಿ.

ಪಶ್ಚಿಮದಿಂದ ಪೂರ್ವಕ್ಕೆ ಹಬ್ಬಿ, ಪಾಕಿಸ್ಥಾನ, ಭಾರತ, ಬರ್ಮ, ಭೂತಾನ್, ನೇಪಾಲ ಮತ್ತು ಚೀನ ದೇಶಗಳಿಗೆ ಗೋಡೆಯಾಗಿರುವ ಹಿಮಾಲಯದಲ್ಲಿ ಬದರಿನಾಥ, ಕೇದಾರನಾಥ, ಹೇಮಕುಂಡ, ಗಂಗೋತ್ರಿ, ಯಮುನೋತ್ರಿ, ಅಮರನಾಥ, ವೈಷ್ಣವಿದೇವಿಯಂತಹ ಯಾತ್ರಾಸ್ಥಳಗಳಷ್ಟೇ ಅಲ್ಲದೆ, ಅನೇಕ ಚಾರಣ ಹಾದಿಗಳು ಸಾಹಸಿಗರಿಗೆ ಅವರೋಹಣ ಮಾಡಲು ಸವಾಲೆಸೆಯುವ ಗಿರಿಶಿಖರಗಳ ಸಾಲುಗಳು, ಭೋರ್ಗರೆಯುವ ನದಿಗಳಿವೆ. ದೂರ ಪ್ರದೇಶಗಳಿಗೆ ಪ್ರಯಾಣ ಮಾಡಲು ಸೌಕರ್ಯಗಳು ಹೆಚ್ಚಿದಂತೆ ಹಾಗೂ ಮಾನವನ ವಿಚಾರಧಾರೆ ಬದಲಾದಂತೆ, ಮೋಕ್ಷ ಸಂಪಾದನೆಗಷ್ಟೇ ಅಲ್ಲದೆ, ಪ್ರಕೃತಿಯ ವಿಚಿತ್ರ ವೈಭವವನ್ನು ನೋಡಿ ಆನಂದಿಸುವ ಸಲುವಾಗಿ ವಿಶ್ವದ ಛಾವಣಿ ಎನಿಸಿಕೊಂಡಿರುವ ಚೀನ ದೇಶದ ಟಿಬೆಟಿನಲ್ಲಿರುವ ಕೈಲಾಸ – ಮಾನಸ ಸರೋವರಗಳಿಗೆ ವೃದ್ಧರೂ, ಹಿರಿಯರೂ, ಯುವ ಪೀಳಿಗೆಯವರು ಲಗ್ಗೆ ಇಡುತ್ತಿರುವುದು ಸಂತೋಷದ ವಿಷಯವೇ ಹೌದು.

ನಾಲ್ಕು ಮುಖಗಳುಳ್ಳ ಘನಾಕೃತಿಯಾದ ಕೈಲಾಸ ಪರ್ವತವು ಸಮುದ್ರ ಮಟ್ಟಕ್ಕಿಂತ 22,028 ಅಡಿ ಎತ್ತರದಲ್ಲಿದ್ದು, ಹಿಂದೂಗಳಿಗೆ ಶಿವ ಪಾರ್ವತಿಯರ ನೆಲೆ, ಬೌದ್ಧರಿಗೆ ಬುದ್ಧದೇವ ಮತ್ತು 500 ಬೋಧಿ ಸತ್ವರ ವಾಸಸ್ಥಾನ. ಅಲ್ಲದೆ ಜೈನರಿಗೆ ಪ್ರಥಮ ತೀರ್ಥಂಕರನಾದ ಆದಿನಾಥ ವೃಷಭ ದೇವನು ನಿರ್ವಾಣ ಹೊಂದಿದ ಪುಣ್ಯಸ್ಥಳ. 1960ರ ದಶಕದಲ್ಲಿ ಟಿಬೇಟ್ ದೇಶವು ಚೀನಾ ಸರ್ಕಾರದ ಆಡಳಿತಕ್ಕೆ ಒಳಪಟ್ಟ ನಂತರ ಭಾರತೀಯರ ಈ ಯಾತ್ರೆಗೆ ನಿರ್ಬಂಧನೆಗಳನ್ನು ಹೇರಲಾಗಿತ್ತು. 1981ರ ನಂತರ ನಿರ್ಬಂಧನೆ ಇಲ್ಲದೆ ಯಾತ್ರಿಗಳು ಕೈಲಾಸ – ಮಾನಸ ಸರೋವರದ ದರ್ಶನ ಮಾಡಬಹುದಾಗಿದೆ. ಈ ಯಾತ್ರೆಗೆ ಮುಖ್ಯವಾಗಿ ಎರಡು ಮಾರ್ಗಗಳಿವೆ. ಮೊದಲನೆಯ ಮಾರ್ಗ ಭಾರತ – ಚೀನಾ ಸರಕಾರಗಳ ಸಹಯೋಗದೊಂದಿಗೆ ನಡೆಯುವುದು. ದೆಹಲಿಯಿಂದ ಹೊರಟರೆ ಯಾತ್ರೆ ಮುಗಿಸಿ ಬರಲು 27 ದಿನಗಳು ಬೇಕಾಗುವುದು.

ಯಾತ್ರಾರ್ಥಿಗಳಿಗೆ ನಿಗದಿಯಾದ ಆಸ್ಪತ್ರೆಗಳಲ್ಲಿ ಆರೋಗ್ಯ ತಪಾಸಣೆ, ಯಾತ್ರೆಯ ಖರ್ಚು ಎಲ್ಲಾ ಸೇರಿ ಸುಮಾರು 70ರಿಂದ 80 ಸಾವಿರ ರೂಪಾಯಿಗಳು ಬೇಕಾಗುವುದು. ಆದರೆ ಯಾತ್ರೆ ಮುಗಿಸಿ ಬಂದ ಏಳೆಂಟು ತಿಂಗಳುಗಳಲ್ಲಿ ಭಾರತ ಸರ್ಕಾರವು ಮೂವತ್ತು ಸಾವಿರ ರೂಪಾಯಿಗಳನ್ನು ಹಿಂದಿರುಗಿಸುವುದು. ದೆಹಲಿಯಿಂದ ಅಲ್‌ಮೋರ ಮಾರ್ಗವಾಗಿ ಹೊರಟರೆ 9ನೆಯ ದಿನದ ಹೊತ್ತಿಗೆ ಟಿಬೆಟ್‌ನ ಕಕ್ಲಾಕೋಚ್ ತಲುಪಿ ಚೀನ ದೇಶದ ವೀಸಾ ಪಡೆಯುವ ಪ್ರಕ್ರಿಯೆಯನ್ನು ಮುಗಿಸಿ ಮುಂದಕ್ಕೆ ಸಾಗಬೇಕು. ನಡಿಗೆಯಲ್ಲೇ ಹೆಚ್ಚಿನ ದಾರಿ ಸವೆಸುವ ಈ ಮಾರ್ಗದಲ್ಲಿ ಕೈಲಾಸ ಪರ್ವತದ ದರ್ಶನವಾಗುವುದು 11ನೆಯ ದಿನಕ್ಕೆ! ನಂತರದ 8 ದಿನಗಳಲ್ಲಿ ಕೈಲಾಸ ಮತ್ತು ಮಾನಸ ಸರೋವರಗಳ ಪರಿಕ್ರಮ (ಪ್ರದಕ್ಷಿಣೆ) ಮಾಡಬೇಕಾಗುತ್ತದೆ. ಯಾವ ಮಾರ್ಗದಲ್ಲಿ ಹೊರಟರೂ ಕೈಲಾಸ ಪರಿಕ್ರಮವು ದಾರ್ಚಿನ್ ಎಂಬ ಸ್ಥಳದಿಂದ ಪ್ರಾರಂಭವಾಗುತ್ತದೆ. ಒಟ್ಟು 32 ಕಿ.ಮೀ.ನ ಪರಿಕ್ರಮವನ್ನು ಅತೀ ಪ್ರಯಾಸವಾಗುವಂತಹ ಚಳಿ ಗಾಳಿಯ ವಾತಾವರಣದಲ್ಲಿ ಮೂರು ದಿನಗಳ ಕಾಲ ನಡಿಗೆಯಲ್ಲೋ, ಪೋನಿ ಅಥವಾ ಯಾಕ್‌ಗಳ ಮೇಲೆ ಮಾಡಬೇಕಾಗುತ್ತದೆ. ಆಮ್ಲಜನಕ ಕೊರತೆಯೊಂದೇ ಅಲ್ಲದೆ ತಣ್ಣನೆಯ ಗಾಳಿಯನ್ನು ಉಸಿರಾಡಲು ಬಹಳ ತ್ರಾಸವಾಗುವುದೆಂದು ಪರಿಕ್ರಮ ಮಾಡಿದವರು ಹೇಳುತ್ತಾರೆ. ದಾರ್ಚಿನ್‌ನಿಂದ ಕೈಲಾಸದ ದಕ್ಷಿಣ ಮುಖಿ (ಅಷ್ಟಪಾದ)ವನ್ನು ನೋಡಬಹುದು. ಪರಿಕ್ರಮದ ಸಮಯದಲ್ಲಿ ರಾಕ್ಷಸ್‌ತಳ್ ಮತ್ತು ಗೌರಿಕುಂಡಗಳನ್ನು ಕಾಣಬಹುದು. ಈ ಎರಡೂ ಸರೋವರಗಳಲ್ಲಿ ಯಾರೂ ಸ್ನಾನ ಮಾಡುವುದಿಲ್ಲ. ಹತ್ತೊಂಬತ್ತನೆಯ ದಿನದಿಂದ ನಡಿಗೆ ಹಾಗೂ ಬಸ್‌ನಲ್ಲಿ ದೆಹಲಿಗೆ ಹಿಂದಿರುಗುತ್ತಾರೆ. ಈ ಮೊದಲ ಮಾರ್ಗದಲ್ಲಿ ಹೆಚ್ಚಿನ ದಾರಿಯನ್ನು ಕಾಲು ನಡಿಗೆಯಲ್ಲಿ ಸವೆಸುವಾಗ ಅತೀ ಸುಂದರವಾದ ಕಾಡುಗಳು, ರಮ್ಯ ದೃಶ್ಯಗಳು, ನದಿಗಳು, ನೀರ ಧಾರೆಗಳು, ಪ್ರಾಣಿ-ಪಕ್ಷಿಗಳನ್ನು ಕಾಣುವ ಅವಕಾಶ ಹೆಚ್ಚಿನದಾಗಿರುತ್ತದೆ. ಎರಡೂ ಮಾರ್ಗಗಳಲ್ಲಿ ಯಾತ್ರಿಗಳಿಗೆ ರುಚಿಯಾದ ಶಾಖಾಹಾರಿ ಆಹಾರ ಮತ್ತು ತಂಗಲು ಬೆಚ್ಚಗಿನ ಗೆಸ್ಟ್ ಹೌಸ್‌ಗಳಲ್ಲಿ / ಆಶ್ರಮಗಳಲ್ಲಿ ವ್ಯವಸ್ಥೆಯಾಗಿರುತ್ತದೆ.

ಎರಡನೆಯ ಮಾರ್ಗ ನೇಪಾಳದ ರಾಜಧಾನಿಯಾದ ಖಟ್ಮಂಡುವಿನ ಮೂಲಕ. ಈ ಯಾತ್ರೆಯ ಬಗ್ಗೆ ಇನ್ನೂ ಹೆಚ್ಚಿನ ಅರಿವಿಲ್ಲದಿದ್ದಾಗ 2004ನೇ ಇಸವಿಯಲ್ಲಿ ಗೆಳೆಯ ಗೆಳತಿಯರೊಡನೆ ಆಕಸ್ಮಿಕವಾಗಿ ಕೈಲಾಸ ದರ್ಶನ ಮಾಡುವ ಸುಯೋಗ ನನಗೊದಗಿತು. ಮುಂಬೈನ ಖಾಸಗಿ ಪ್ರವಾಸ ಕಂಪೆನಿಗೆ ರೂ. 60,000 ಕೊಟ್ಟು ಯಾತ್ರಾರ್ಥಿಗಳಾಗಿ ನೋಂದಾಯಿಸಿಕೊಂಡೆವು. ಈ ಮಾರ್ಗದ ಯಾತ್ರೆಗೆ 15 ದಿನಗಳು ಬೇಕಾಗಿದ್ದು, ಸುಮಾರು ಸಾವಿರಕ್ಕೂ ಹೆಚ್ಚು ಕಿಲೋ ಮೀಟರ್ ದೂರವನ್ನು ನಾಲ್ಕು ಜನರಷ್ಟೇ ಕುಳಿತುಕೊಳ್ಳಲು (ಚಾಲಕನು ಸೇರಿ 5 ಜನ) ಅವಕಾಶವಿರುವ ಲ್ಯಾಂಡ್ ಕ್ರೂಸರ್ ಎಂಬ ಜೀಪಿನಲ್ಲಿ ಪ್ರಯಾಣ ಮಾಡಬೇಕಾಗುತ್ತದೆ. ಗಂಟೆಗೆ ಸುಮಾರು 25 ಕಿ.ಮೀ.ನಂತೆ ಪ್ರತಿದಿನವೂ 200 ಕಿ.ಮೀ. ದೂರ ಸವೆಸಬೇಕಾಗುವುದು. ಬೆಂಗಳೂರಿನಿಂದ ವಿಮಾನದಲ್ಲಿ ಖಟ್ಮಂಡು ತಲುಪಿದ ನಂತರ ಮೊದಲೆರಡು ದಿನ ಖಟ್ಮಂಡು ನಗರ ವೀಕ್ಷಣೆಯನ್ನು ಪ್ರವಾಸ ಕಂಪನಿಯವರೇ ಮಾಡಿಸುತ್ತಾರೆ. ನಮ್ಮ ಹೆಚ್ಚಿನ ಲಗೇಜು, ಆಭರಣಗಳು ಮತ್ತು ಇತರ ಬೆಲೆಬಾಳುವ ವಸ್ತುಗಳನ್ನು ಹೋಟೆಲಿನಲ್ಲಿಯೇ ಇಟ್ಟು, ಯಾತ್ರೆಯ ಮೊದಲ ಹಂತವಾಗಿ 100 ಕಿ.ಮೀ. ದೂರದಲ್ಲಿರುವ ನೇಪಾಳ - ಚೀನ ದೇಶಗಳ ಗಡಿ ಪ್ರದೇಶವಾದ ಕೊದಾರಿ ಎಂಬಲ್ಲಿಗೆ ಪ್ರಯಾಣ. ಈ 4 ಗಂಟೆಗಳ ಬಸ್ಸಿನ ಪ್ರಯಾಣ ಹಸಿರು ಗಿರಿ ವನಗಳ ಮಧ್ಯೆ ಆಹ್ಲಾದಕರವಾಗಿತ್ತು. ಇಲ್ಲಿ 1770ಮೀ. ಎತ್ತರದಲ್ಲಿ ಪೂಜ್ಯ ದಲೈಲಾಮ ಅವರ ಪ್ರಯತ್ನದಿಂದ ನಿರ್ಮಿತವಾಗಿರುವ 100 ಮೀ ಉದ್ದದ 'ಸ್ನೇಹ ಸೇತುವೆ' (Friendship Bridge) ಇರುವುದು. ಈ ಸೇತುವೆ ದಾಟಿದರೆ ಟಿಬೆಟ್ ಪ್ರದೇಶ. ನೇಪಾಳದಿಂದ ಟಿಬೆಟ್‌ಗಾಗಲಿ ಅಥವಾ ಟಿಬೆಟ್‌ನಿಂದ ನೇಪಾಳಕ್ಕಾಗಲೀ ಯಾವ ವಾಹನವೂ ಹೋಗುವಂತಿಲ್ಲವಾದ್ದರಿಂದ ಈ ಸೇತುವೆಯ ಮೇಲೆ ಸರಕು ಸಾಗಾಣಿಕೆ ಭರದಿಂದ ಸಾಗುತ್ತಿರುತ್ತದೆ. ಸರಕು ಸಾಗಾಣಿಕೆಯೇ ಒಂದು ದೊಡ್ಡ ವ್ಯವಹಾರವಾಗಿ ಜನರು ಅತ್ಯಂತ ಚುರುಕಿನಿಂದ ವಹಿವಾಟು

ನಡೆಸುತ್ತಿರುತ್ತಾರೆ. "ಹಿರಿಯ ನೇಪಾಳಿ ಶೇರ್ಪಾಗಳು ಮತ್ತು ಟಿಬೆಟಿಯನ್ನರು ಬೆನ್ನ ಮೇಲೆ ಮಣ ಭಾರ ಹೊತ್ತು ದಿನದ ಅನ್ನಕ್ಕಾಗಿ ಕಷ್ಟಪಡುತ್ತಿರುವಾಗ ಅವರ ಚಿಕ್ಕ ಕಂದಮ್ಮಗಳು ತಮ್ಮ ತಂಗಿಯರನ್ನು ಬೆನ್ನಿಗೆ ಕಟ್ಟಿಕೊಂಡು ಯಾತ್ರಿಗಳಲ್ಲಿ ತಿಂಡಿ – ತಿನಿಸುಗಳಿಗಾಗಿ ಯಾಚಿಸುವುದು ಅತೀ ನೋವನ್ನುಂಟು ಮಾಡುವ ದೃಶ್ಯ. ಶಾಲೆಗೆ ಹೋಗಬೇಕಾದ ಈ ಮಕ್ಕಳು ಎಳೆ ವಯಸ್ಸಿನಲ್ಲಿ ಭಾರ ಹೊರುವುದನ್ನು ಅಭ್ಯಾಸ ಮಾಡುತ್ತಿರುತ್ತಾರೆ."

ನಮ್ಮ ಯಾತ್ರಾ ಸರಕುಗಳನ್ನು ಸಹ ಇದೇ ಮಾದರಿಯಲ್ಲಿ ಟಿಬೆಟ್ ತಲುಪಿಸಿ, ನಿಗದಿಯಾದ ಜೀಪುಗಳಲ್ಲಿ ಇಡಿಸುತ್ತಾರೆ. ಈ ಸೇತುವೆ ತಲುಪಲು ನಮ್ಮ ಸರದಿಗಾಗಿ ಹಲವು ಗಂಟೆಗಳ ಕಾಲ ಕಾಯಬೇಕಾಗುತ್ತದೆ. ಆ ಸಮಯದಲ್ಲಿ ಚೀನ ದೇಶದ ಯೂಯನ್ (Yuan) ಕರೆನ್ಸಿಯನ್ನು ಸ್ಥಳೀಯರಿಂದ ಖರೀದಿಸಬಹುದು. 2004ರಲ್ಲಿ ಏಷ್ಯಾ ಖಂಡದಲ್ಲಿ ಹರಡಿದ SARS ವೈರಾಣು ಉಸಿರಾಟದ ಕಾಯಿಲೆಗಾಗಿ ಪರೀಕ್ಷಿಸಿದ ನಂತರ ನಮಗೆ ಸೇತುವೆ ದಾಟಲು ಅನುಮತಿ ದೊರಕಿತು. ನಂತರ 30 ಕಿ.ಮೀ. ದೂರ ಜೀಪಿನಲ್ಲಿ ಪ್ರಯಾಣ ಮಾಡಿ 10,000 ಅಡಿ ಎತ್ತರದಲ್ಲಿರುವ ಜಾಂಗ್‌ಮು ನಗರದಲ್ಲಿ ಚೀನಾ ವೀಸಾ ಪಡೆದು ನ್ಯಾಲಂ, ಸಾಗ, ಪರಾಂಗ್, ಮಾನಸ ಸರೋವರ ಹಾದು ದಾರ್ಚಿನ್‌ಗೆ ನಮ್ಮ ಪ್ರಯಾಣ. ಇದು 1000 ಕಿ.ಮೀ. ದೂರದ ಐದು ದಿನಗಳ ಪ್ರಯಾಣ. ಪ್ರಯಾಣ ಮುಂದುವರೆಸಿ ಮೇಲೆ ಹೋದಂತೆ ಕಾಡು ಮಾಯವಾಗಿ ಕುರುಚಲು ಗಿಡಗಳು ಮತ್ತು ಹುಲ್ಲು ಕಾಣಿಸತೊಡಗಿತು. ಮುಂದೆ ಹೊಳಪಿನ ಮರಳು ಗುಡ್ಡೆಗಳೇ ಜೀಪಿಗೆ ದಾರಿಯಾಗುವ ಈ ಮಾರ್ಗದಲ್ಲಿ ಹಸುರಿಲ್ಲದಿದ್ದರೂ ಸ್ವಚ್ಛಂದ ನೀಲಿ ಆಕಾಶ, ಅರಳೆಯಂತಹ ಬಿಳಿ ಮೋಡ, ಅಕ್ಕಪಕ್ಕದಲ್ಲಿ ಖನಿಜ – ಲೋಹಗಳಿಂದ ಬಣ್ಣ ಬಣ್ಣವಾಗಿ ಹೊಳೆಯುವ ಕಪ್ಪು – ಕಂದು ಪದರಗಳಿಂದ ಕೂಡಿದ ಬೆಟ್ಟಗಳ ಸಾಲು, ಹಿಮಾವೃತ ಶ್ವೇತ ಪರ್ವತಗಳು, ಅಲ್ಲಲ್ಲಿ ನೀರಿನ ಸಣ್ಣ – ದೊಡ್ಡ ಕೊಳಗಳು – ಕಲೆಯ ಹಿಂದೆಯೂ ಎರಡು ಕಣ್ಣಿರಬೇಕೆನಿಸುತ್ತಿತ್ತು.

ಗಾಳಿ ಬೀಸಿದಂತೆ ಕ್ಷಣಕ್ಷಣಕ್ಕೂ ಆಕಾರ ಬದಲಿಸುತ್ತಿದ್ದ ಬಿಳಿ ಮೋಡಗಳಿಗೆ ವಿರುದ್ಧವಾಗಿ ಎಷ್ಟು ದಾರಿ ಸರಿದರೂ ಚಲಿಸದೆ ಸ್ಥಿರವಾಗಿ ಪರ್ವತ ತುದಿಗಳಲ್ಲಿ ಬೆಚ್ಚಗೆ ಕುಳಿತಿದ್ದ ಹಿಮ ಗೆಡ್ಡೆಗಳು. ಚಲಿಸುವ ಮೋಡ– ಸ್ಥಿರವಾಗಿದ್ದ ಹಿಮ, ಇವೆರಡಕ್ಕೂ ತನ್ನದೇ ಆದ ರೂಪ ಕೊಡುತ್ತಾ ಹೆಸರಿಡುತ್ತಾ ಹೋದಂತೆ ತಲ್ಲೀನತೆಯಿಂದ ಮಧ್ಯಾಹ್ನ – ಸಂಜೆಯಾದದ್ದು ಅರಿವಾಗುತ್ತಿರಲಿಲ್ಲ. ಸಮುದ್ರ ಮಟ್ಟಕ್ಕಿಂತ ಮೇಲೆ ಮೇಲೆ ಹೋದಂತೆ ಮರಳು ಸೀಳಿ ಏರಿಳಿತದ ಪ್ರಯಾಣ ಹೆಚ್ಚಾಗಿ, ಆಮ್ಲಜನಕದ ಕೊರತೆಯಿಂದ ತಲೆನೋವು, ವಾಕರಿಕೆ, ನಿದ್ರಾಹೀನತೆಯಾಗುವುದು ಸಾಮಾನ್ಯ. ಎಂತಹ ಆರೋಗ್ಯವಂತರೂ ಸಹ ಇದರಿಂದ ಧೃತಿಗೆಡಬಹುದು. ಹಸಿವಾದರೂ ಊಟ ಸೇರುವುದಿಲ್ಲ. ಇಂತಹ ಪ್ರಯಾಣದಲ್ಲಿ ದ್ರವರೂಪದ ಆಹಾರವಾದ ಚಹ, ನೀರು ಹೆಚ್ಚಾಗಿ ಕುಡಿಯುವುದು ಒಳಿತು. ಜೀಪುಗಳು ಒಂದರ ಹಿಂದೊಂದು ಮರಳು ಗುಡ್ಡೆಗಳನ್ನು ಭೇದಿಸಿ ಹೋಗುವಾಗ ಧೂಳು ಎದ್ದು ಕಿಟಕಿಯ ಗಾಜುಗಳನ್ನು ತೆರೆಯುವಂತೆಯೇ ಇಲ್ಲ. ಆದರೂ ಜಿಂಕೆ, ಮೊಲ, ಮುಂಗುಸಿ ಮತ್ತು ಹಲವು ವಿಧದ ಪಕ್ಷಿಗಳನ್ನು, ಪುಷ್ಪಗಳನ್ನು ನೋಡಲು ಅವಕಾಶ ಸಿಕ್ಕಿತು. ಒಂದು ಕೊಳದಲ್ಲಿ ಸಂಸಾರ ಸಮೇತವಾಗಿದ್ದ ಬ್ಲಾಕ್ ನೆಕ್ಡ್ ಕ್ರೇನ್ (Black necked crane) ಅನ್ನು ನೋಡಿದಾಗ ಜೀಪಿನ ಚಾಲಕನನ್ನು ಕಾಡಿ ಬೇಡಿ ನಿಲ್ಲಿಸಿ ಫೋಟೋ ತೆಗೆದುಕೊಂಡೆವು. ಈ ದೊಡ್ಡ ಪಕ್ಷಿ ಚಳಿಗಾಲದಲ್ಲಿ ಭಾರತಕ್ಕೆ ಬರುವುದಲ್ಲದೆ ಇದರ ಸಂತಾನೋತ್ಪತ್ತಿ ಟಿಬೆಟ್‌ನಲ್ಲಾಗುವುದೆಂದು ಓದಿ ತಿಳಿದೆವು.

ಸಾಗದಿಂದ ಪರಾಂಗ್ ಪಟ್ಟಣಕ್ಕೆ ಹೋಗುವಾಗ 100 ಮೀ. ಅಗಲದ ಬ್ರಹ್ಮ ಪುತ್ರ ನದಿಯನ್ನು ಫೆರ್ರಿ ಮೂಲಕ ದಾಟಬೇಕು. ಇದಕ್ಕೆ 30 ನಿಮಿಷ ಬೇಕಾಗುವುದಲ್ಲದೆ, ನಮ್ಮ ಸರದಿಗೆ ಗಂಟೆಗಟ್ಟಲೆ ಕಾಯಬೇಕಾವುದು. ಆ ಸಮಯದಲ್ಲಿ ಇತರ ಯಾತ್ರಿಗಳ ಪರಿಚಯವಾಗುವುದು. ಇತ್ತೀಚಿನ ವರ್ಷಗಳಲ್ಲಿ ಇಲ್ಲಿ ಸೇತುವೆ ನಿರ್ಮಾಣವಾಗಿ ಫೆರ್ರಿ ಪದ್ಧತಿ ನಿಂತುಹೋಗಿದೆ. ಅಂತೆಯೇ ದಾರ್ಚಿನವರೆಗೂ ರಸ್ತೆಯನ್ನು

ಮಾಡಿರುವುದರಿಂದ ಪ್ರಯಾಣ ಅಷ್ಟೊಂದು ತ್ರಾಸದಾಯಕವಾಗಿರುವುದಿಲ್ಲ. " ರಾತ್ರಿ ಎಂಟು ಗಂಟೆಯಾದರೂ **ಸಂಜೆ 4– 5 ಗಂಟೆಯಂತೆ ಸೂರ್ಯನ ಬೆಳಕಿದ್ದರೂ, ಚಳಿಯಿಂದ ಹೆಚ್ಚಿನ ಹೊತ್ತು ಹೊರಗೆ ಓಡಾಡುವುದು ಕಷ್ಟ".** ಪರಾಂಗ್ ತಲುಪುವ ಹೊತ್ತಿಗೆ ಟಿಬೇಟಿಯನ್ನರು ಹಾಲು, ಮಾಂಸ, ಉಣ್ಣೆ ಹಾಗೂ ಸರಕು ಸಾಗಾಣಿಕೆಗೆ ಉಪಯೋಗಿಸುವ ಯಾಕ್ ಪ್ರಾಣಿಗಳ ಹಿಂಡುಗಳನ್ನು ಕಾಣಬಹುದು. ಐದನೆಯ ದಿನ ಪರಾಂಗ್‌ನಿಂದ ಮಾನಸ ಸರೋವರದ ದಿಕ್ಕಿಗೆ ಹೋಗುವಾಗ ಹಿಮದ ಮಳೆ ಅನುಭವಿಸಿ, ಸಂಜೆ ಹೊತ್ತಿಗೆ ದೂರದಿಂದಲೇ ಕೈಲಾಸ ದರ್ಶನವಾದಾಗ ಜೀಪಿನಿಂದ ಕೆಳಗಿಳಿದು 'ಜೈ ಬೋಲೆನಾಥ್' 'ಜೈ ಶಿವಶಂಕರ್' ಘೋಷಣೆಗಳೊಂದಿಗೆ ಸಾಷ್ಟಾಂಗ ನಮಸ್ಕಾರ ಮಾಡುವ ಮೂಲಕ ಭಕ್ತಿ ಭಾವಗಳನ್ನು ವ್ಯಕ್ತ ಪಡಿಸಲಾಯಿತು.

ಅಲ್ಲೇ ಹತ್ತಿರದಲ್ಲಿದ್ದ **"ಮಾನಸ ಸರೋವರ ನನಗೆ ಸಮುದ್ರದಂತೆ ಕಂಡಿತು. 15,000 ಅಡಿ ಎತ್ತರದಲ್ಲಿರುವ ಈ ಸರೋವರದ ಸುತ್ತಳತೆ 56 ಕಿ.ಮೀ. ಮತ್ತು ಆಳ 300 ಅಡಿಗಳು. ಹಿಂದೂ ಪುರಾಣದಂತೆ ಬ್ರಹ್ಮನ ಮನಸ್ಸಿನ ಶಕ್ತಿಯಿಂದ ಸೃಷ್ಟಿಯಾದ ಸರೋವರ "ಮಾನಸ ಸರೋವರ."** ಪ್ರಪಂಚದಲ್ಲೇ ಅತೀ ಎತ್ತರ ಸ್ಥಳದಲ್ಲಿರುವ ಶುದ್ಧ ಸಿಹಿ ನೀರಿನ ಈ ಸರೋವರದ ಪಶ್ಚಿಮ, ದಕ್ಷಿಣ, ಪೂರ್ವ ಮತ್ತು ಉತ್ತರ ದಿಕ್ಕುಗಳಿಗೆ ಅನುಗುಣವಾಗಿ ಸಟ್ಲೇಜ್, ಕರ್ನಾಲಿ, ಬ್ರಹ್ಮಪುತ್ರ ಮತ್ತು ಸಿಂಧು ನದಿಗಳು ಹರಿಯುತ್ತವೆ. ಈ ಸರೋವರದ ಪ್ರದಕ್ಷಿಣೆಯನ್ನು ಜೀಪಿನಲ್ಲಿ 2 ಗಂಟೆಗಳ ಅವಧಿಯಲ್ಲಿ ಮುಗಿಸಿದೆವು. ಕಾಲ್ನಡಿಗೆಯಲ್ಲಿ ನಾಲ್ಕು ದಿನಗಳು ಬೇಕಾಗುವುದು. ಬೆಳಗ್ಗೆ ಸ್ವಲ್ಪ ಬಿಸಿಲು ಬಂದ ನಂತರ ಸರೋವರದಲ್ಲಿ ಸ್ನಾನ ಮಾಡಿ, ನಮ್ಮೊಡನಿದ್ದ ಇತರ 20 ಗುಜರಾತಿ ಮತ್ತು ಮಹಾರಾಷ್ಟ್ರದಿಂದ ಬಂದಿದ್ದ ಯಾತ್ರಿಕರು ದಡದಲ್ಲಿ ಪೂಜಾ – ಹವನ – ಹೋಮಗಳನ್ನು ಮಾಡಿದರು. ಪೂಜಾ ವಿಧಾನಗಳಲ್ಲಿ ಹೆಚ್ಚಿನ ನಂಬಿಕೆ ಇಲ್ಲದ ನಾವು ಸುಂದರ ದೃಶ್ಯಗಳನ್ನು ಸೆರೆ ಹಿಡಿಯುವಲ್ಲಿ ಮಗ್ನರಾಗಿದ್ದೆವು. ಈ ಪವಿತ್ರ ಸರೋವರದ ನೀರು ಮತ್ತು ಅದರ ತೀರದಲ್ಲಿ ಸಿಗುವ ಸಾಲಿಗ್ರಾಮದಂತಹ ಶಿಲೆಗಳೂ ಮತ್ತು ಸ್ಫಟಿಕದಂತಹ ಹೊಳಪಿನ ಕಲ್ಲುಗಳು ಯಾತ್ರೆಯ ಪ್ರಸಾದವಾಗುತ್ತವೆ. ಅತೀ ಜಾಗರೂಕತೆಯಿಂದ ಇವುಗಳನ್ನು ತಂದು ಪ್ರೀತಿ ಪಾತ್ರರೊಡನೆ ಉತ್ಸಾಹದಿಂದ ಹಂಚಿಕೊಂಡಾಗ ಪಟ್ಟ ಕಷ್ಟಗಳು ಸಾರ್ಥಕವೆನಿಸುತ್ತವೆ.

ಮುಂದಿನ ಮೂರು ದಿನಗಳ ಹಿಂದೆ ವಿವರಿಸಿದ ರೀತಿಯಲ್ಲಿ ಕೈಲಾಸದ ಪರಿಕ್ರಮದ ಕಾರ್ಯಕ್ರಮ ನಡೆಯುವುದು. ಆದರೆ ಮಾವೊ ಉಗ್ರವಾದಿಗಳು (ಖಟ್ಮಂಡುವಿನಲ್ಲಿ) ಬಾಂಬ್ ಸಿಡಿಸಿದ್ದರಿಂದ, ಭಾರತಕ್ಕೆ ಹಿಂದಿರುಗುವ ಪ್ರಯಾಣದಲ್ಲಿ ತೊಂದರೆಯಾಗಬಹುದೆಂಬ ಶಂಕೆಯಿಂದ ಕೈಲಾಸ ಪರಿಕ್ರಮ ಮಾಡದಿರುವ ನಿರ್ಧಾರ ಕೈಗೊಂಡು, ಅದರ ದರ್ಶನಕ್ಕಷ್ಟೇ ತೃಪ್ತಿಪಟ್ಟು, ಬಂದ ದಾರಿಯಲ್ಲೇ ನಾಲ್ಕು ದಿನ ಪ್ರಯಾಣ ಮಾಡಿ ಜಾಂಗ್‌ಮು ನಗರಕ್ಕೆ ಬಂದೆವು. ಹಿಂದಕ್ಕೆ ಬರುವಾಗ ಎರಡೂ ಪವಿತ್ರ ಸ್ಥಳಗಳು ಕಣ್ಣಿಗೆ ಅಗೋಚರವಾದಾಗ ಏನೋ ಕಳೆದುಕೊಂಡ ನೋವಿನೊಂದಿಗೆ ಮತ್ತೆ ಈ ಸುಂದರ ಸತ್ಯತೆಯನ್ನು ನೋಡಲು ಆಗುವುದಿಲ್ಲವೆಂಬ ಆತಂಕವಾಯಿತು.

ಜಾಂಗ್‌ಮುಗೆ ಬಂದ ನಂತರ 15 ದಿನಗಳು ಜೀಪಿನಲ್ಲಿ ನಮ್ಮೊಡನಿದ್ದ ಚೀನಿ ಚಾಲಕನಿಗೆ ವಿದಾಯ ಹೇಳುವ ಸಮಯ. ಭಾಷೆಯ ಅಭಾವದಿಂದ ಸಂಭಾಷಣೆಯೇ ಇಲ್ಲದೆ ಮೂಕರಂತೆ ಅವನೊಡನೆ ಪ್ರಯಾಣ ಮಾಡಿದ್ದರೂ, ಬಾಂಧವ್ಯ ಬೆಳೆದು ಅವನನ್ನು ಸ್ನೇಹ ಸೇತುವೆಯ ಆಚೆ ಬದಿಗೆ ಬಿಟ್ಟು ಬರುವಾಗ ವಿಚಿತ್ರ ಸಂಕಟ. ಇಷ್ಟೇ ಅಲ್ಲದೆ ಎಂತಹ ಪ್ರತಿಕೂಲ ವಾತಾವರಣದಲ್ಲೂ ಹೊತ್ತೊತ್ತಿಗೆ ಬಿಸಿ ಊಟದ ಉಪಚಾರ ಮಾಡುವ ಅಡುಗೆಯವರು, ಕಂಡ, ಹೊರಲು ಅಶಕ್ತರಾದಾಗ ಲಗೇಜುಗಳನ್ನು ನಮಗಿಂತ ಮುಂಚೆ ಬಿಡಾರಕ್ಕೆ ತಲುಪಿಸುವ ಪೋರ್ಟರ್‌ಗಳು, ಜಾರದಂತೆ ಕಾಪಾಡುವ ಸ್ನೊ ಗೈಡ್‌ಗಳು, ಇವರೆಲ್ಲರು ಈ ಚೀನಿ ಚಾಲಕರಂತೆ ಮುಗುಳು ನಗೆಯ ಸಹಕಾರ ನೀಡದಿದ್ದಲ್ಲಿ ನಾವು ಗುರಿ ಮುಟ್ಟುವುದು ಅಸಾಧ್ಯ. ಇಂತಹ

ಹಲವರು ನನ್ನ ಜೀವನದ ಅಂಗಳದಲ್ಲಿ ಹಾದು ಹೋಗಿದ್ದಾರೆ. ಇವರೆಲ್ಲರನ್ನೂ ನೆನೆದು ನಮಿಸುತ್ತಾ, ಅಂದುಕೊಂಡದ್ದಕ್ಕಿಂತ ಹೆಚ್ಚು ಉದ್ದವಾದ ಈ ಲೇಖನಕ್ಕೆ ಕಡೆಯ ನಾಲ್ಕು ಸಾಲು ಬರೆದು ನಿಲ್ಲಿಸುತ್ತೇನೆ.

ಮೇಲಿನ ಎಲ್ಲಾ ಬರವಣಿಗೆಯು ಈ ಯಾತ್ರೆಯ ಬಗೆಗಿನ ಕೆಲವು ಮಾತುಗಳಷ್ಟೆ. ಕೈಲಾಸ – ಮಾನಸ ಸರೋವರ ಮತ್ತು ಅದರ ಯಾತ್ರೆಯ ಬಗ್ಗೆ ವಿಸ್ತಾರವಾಗಿ ಬರೆದರೆ ಈಗಾಗಲೇ ಇರುವ ಹಲವು ಪುಸ್ತಕಗಳ ಜೊತೆ ಮತ್ತೊಂದಾದೀತು. ಶಕ್ತಿ ಇರುವಾಗ ಗಟ್ಟಿ ಮನಸ್ಸು ಮಾಡಿ ಯಾತ್ರೆಯ ನೆಪದಲ್ಲಿ ಪ್ರಕೃತಿಯನ್ನು ನೋಡಿ ನಲಿದು ಅನುಭವಿಸಿ ಅದರ ಅಗಾಧತೆಯನ್ನು ಕಿಂಚಿತ್ತಾದರೂ ಅರಿಯುವ ಹವ್ಯಾಸವನ್ನು ಬೆಳೆಸಿಕೊಳ್ಳುವಂತಹ ಜನಾಂಗ ಹೆಚ್ಚಾಗಲೆಂದು ಬಯಸುತ್ತೇನೆ.

❖❖❖

ಸಾಫ್ಟ್‌ವೇರ್ ಬದುಕು



ದೀಪಕ್ ಅಮೆಮನೆ

ಎಲ್ಲೆಲ್ಲೂ ಕಾಣುವ ಗಣಕ ಯಂತ್ರಗಳು
ಎಲ್ಲೆಲ್ಲೂ ಕೇಳುವ ಕೀ ಬೋರ್ಡ್‌ಗಳ ಕಲರವಗಳು
ಮಾನಿಟರ್ ಮುಂದೆ ಕಣ್ಣೆತ್ತಿ ನೋಡದ ತಲೆಗಳು
ಕಣ್ಣ ಮುಂದೆ ಕೆಲಸದ ಸಂದೇಶಗಳ ಸಾಲುಗಳು
ದಿನಕ್ಕೆಂಟು ಗಂಟೆ ಕುಳಿತೇ ಇರುವ ಜ್ಞಾನಿಗಳು.

ತ್ರಾಣವಿಲ್ಲದೆ ಕೆಲಸ ಮಾಡುವ ಶ್ರಮ ಜೀವಿಗಳು
ದಾಸ್ಯಕ್ಕೆ ಇರುವಂತೆ ವರ್ತಿಸುವ ಹದ್ದುಗಳು
ಕೆಲಸ ಇತರರ ಮೇಲೆ ಹೊರಿಸಿ ಆಟ ನೋಡುವ ಮೋಜುಗಾರರು
ದಾರಿ ಕಾಣದಿದ್ದರೂ ತುಟಿ ಪಿಟಿಕ್ ಅನ್ನದ ಆಶಾವಾದಿಗಳು
ಕಂಗಾಲಾಗಿ ಕೆಲಸ ಬಿಡುವೆನೆನ್ನುವ ನಿರಾಶಾವಾದಿಗಳು

ಕೆಲಸವಿಲ್ಲದೆ ಒದ್ದಾಡುವ ಮುಗ್ಧ ಜೀವಿಗಳು
ನೌಕರಿ ಸಿಕ್ಕಮೇಲೆ ಭ್ರಮೆಯಿಂದ ಹೊರಬರುವ ಬುದ್ಧಿ ಜೀವಿಗಳು
ಸಂಬಳ ಎಷ್ಟೇ ಇದ್ದರೂ ಸಾಲದೆಂಬಂತೆ ಕೊರಗುವ ಉದ್ಯೋಗಿಗಳು
ಪರರನ್ನು ತುಳಿದು ಮುಂದೆ ಬರುವ ಮಹಾನುಭಾವರು
ಎಲ್ಲೆಲ್ಲೂ ಸ್ಪರ್ಧೆಯ ಸನ್ನಿವೇಶಗಳು.

ಎಂಟು ಗಂಟೆಗಳ ಏಳು ದಿನದ ವಾರಗಳು
ಸೋಮವಾರದಂದು ದುರುಗುಟ್ಟಿ ನೋಡುವ ಅಳುಮೋರೆಗಳು
ಶನಿವಾರವನ್ನು ಎದುರು ನೋಡುವ್ವ ಶ್ರಮಜೀವಿಗಳು
ಶುಕ್ರವಾರಕ್ಕೆ ಕಾಂತಿ ಬೀರುವ ಹಸನ್ಮುಖಿಗಳು
ಉಳಿದೆಲ್ಲಾ ದಿನಗಳಲ್ಲಿ ಕಾಣುವ ಪೆಚ್ಚುಮೋರೆಗಳು.

ಅತಿಥಿ ಸತ್ಕಾರ : ಕೊಡಗಿನ ವೈಶಿಷ್ಟ್ಯ



✍ ಶ್ರೀಮತಿ ಬೈತಡ್ಕ ಜಾನಕಿ ಬೆಳ್ಯಪ್ಪ
21–16 ರೇಸ್‌ಕೋರ್ಸ್ ರಸ್ತೆ,
ಎಲ್.ಐ.ಸಿ. ಹತ್ತಿರ, ಮಡಿಕೇರಿ

ಕೊಡಗು ಎಂದಾಗ ನೆನಪಾಗುವುದು ಇಲ್ಲಿನ ಪ್ರಕೃತಿ ಸೌಂದರ್ಯವನ್ನು ಮತ್ತು ಆತಿಥ್ಯ ಭಾವನೆಯನ್ನು. ಕೊಡಗಿನ ಪ್ರಕೃತಿ ಸೌಂದರ್ಯವನ್ನು ಕವಿಗಳು ಸ್ವರ್ಗಕ್ಕೆ ಹೋಲಿಸಿದ್ದಾರೆ. ಈ ನೆಲದಲ್ಲಿ ವಾಸಿಸುವ ಯಾವುದೇ ಧರ್ಮದ ಜನರಾಗಲಿ ವಿಶೇಷವಾಗಿ ಕೊಡಗಿನ ಮೂಲ ಹಾಗೂ ನೆಲೆ ವಾಸಿಗಳು ಆತಿಥ್ಯದ ಭಾವನೆಯನ್ನು ಉದಾತ್ತವಾಗಿ ಕೊಡಗಿನಲ್ಲಿ ಪರಿಪಾಲಿಸಿಕೊಂಡು ಬರುತ್ತಿದ್ದಾರೆ.

ಧರ್ಮಕ್ಕೊಂದು ಉದ್ದೇಶವಿರುತ್ತದೆ. ಆಚಾರವೇ ಧರ್ಮದ ಮೂಲವಾದುದರಿಂದ ನೆನಪಿಸುವುದು ಶಿಷ್ಟಾಚಾರವನ್ನು. ಅಂದರೆ ಹಿರಿಯರು ಹಾಕಿಕೊಟ್ಟ ಕಟ್ಟುನಿಟ್ಟುಗಳನ್ನು ಪರಿಪಾಲಿಸುತ್ತಾ ಬರುವುದು. ಸಮಾಜದಲ್ಲಿ ಮಾನ್ಯವಾಗಿರುವ ಈ ಕಟ್ಟು ನಿಟ್ಟುಗಳು ಸಮಾಜ ಜೀವನದ ಜೀವಾಳ. ಅದರಂತೆ ನೀತಿಧರ್ಮಗಳು ಮಾನವನ ಜೀವನವನ್ನು ಮಧುರ ಬಾಂಧವ್ಯದತ್ತ ಕೊಂಡೊಯ್ಯುತ್ತವೆ. ನೀತಿಧರ್ಮಗಳು ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ಅದರಂತೆ ಕೊಡಗಿನ ಜೀವನ ವೈಶಿಷ್ಟ್ಯತೆಯಲ್ಲಿ ಎದ್ದು ಕಾಣುವ ಶಿಷ್ಟಾಚಾರ ಮಧುರ ಬಾಂಧವ್ಯ ಜೀವನದಲ್ಲಿ ಆತಿಥ್ಯತೆಯ ಸಾಂಪ್ರದಾಯಕವಾಗಿ, ಉದಾರವಾಗಿ ಬಂದಿರುವುದು ಅತಿಥಿಯನ್ನು ಗೌರವಪೂರ್ವಕವಾಗಿ ಸತ್ಕರಿಸುವುದೇ ಅತಿಥಿ ಸತ್ಕಾರವೆನಿಸುತ್ತದೆ.

ಕೊಡಗು ಎಂದಾಕ್ಷಣ ಇಲ್ಲಿನ ಪ್ರಕೃತಿ ಸೌಂದರ್ಯವನ್ನು ಹೊರಗಿನವರು ಹೊಗಳುತ್ತಾರೆ. ಇಲ್ಲಿನ ಬೆಟ್ಟ ಗುಡ್ಡಗಳಿಂದ ಇಳಿಯುವ ಕೊಲ್ಲಿ ತೋಡುಗಳ ಜಲ ಎಂದಾಗ ಅದಕ್ಕೊಂದು ಗಾದೆ ಹಿರಿಯರದು. **"ಬೇರೆಯವರು ಕೊಡುವ ತುಪ್ಪದನ್ನಕ್ಕಿಂತ ಇಲ್ಲಿದ್ದು ನೀರು ಕುಡಿದು ಬದುಕುತ್ತೇವೆ"** ಎಂಬ ಮಾತಿನ ಸತ್ಯಕ್ಕೆ ಒಂದು ಒಳ ಅರ್ಥವಿರುವುದಂತೂ ಖಂಡಿತ. ಹಿಂದಿನ ನಮ್ಮ ಹಿರಿಯರ ಲೆಕ್ಕಾಚಾರದಂತೆ 60 ಮೈಲು ಉದ್ದ 40 ಮೈಲು ಅಗಲದ ಈ ಗುಡ್ಡಗಾಡಿನ ಕೊಡಗಿನಲ್ಲೇನಿದೆ? ರಭಸದ ಮಳೆ, ಚಳಿ, ಗಾಳಿಯ ಕೊರೆತ ಸಮಶೀತ ಉಷ್ಣ ಹವಾಮಾನದ ಕೊಡಗು ಅಂದಿನದು.

ಹಾಲೇರಿ ಅರಸರ ಕಾಲದಿಂದಲೂ ಕೊಡಗು ಆತಿಥ್ಯಕ್ಕೆ ಹೆಸರಾಗಿದೆ. ಉದಾಹರಣೆಯಾಗಿ ಹಿಂದೆ ಆಳುತ್ತಿದ್ದ ಅರಸ ಲಿಂಗರಾಜನು ಕಾಡಿನ ಬೇಟೆಗಾಗಿ ಅತಿಥಿಗಳಾಗಿ ಬರುತ್ತಿದ್ದ ಆಂಗ್ಲರೊಡನೆ ಬೆಳೆಸಿದ ಸ್ನೇಹ, ಭವಿಷ್ಯದ ಅಂದಿನ ಅವರ ಆತಿಥ್ಯದಿಂದ ಕೊಡಗು ನೂರು ವರ್ಷ ಆಂಗ್ಲರ ಪಾಲಾದುದು ಎಲ್ಲರೂ ತಿಳಿದ ವಿಷಯವಾಗಿದೆ.

ಮನೆಯ ಹತ್ತಿರದ ಮರದಲ್ಲಿ ಕುಳಿತ ಚೊಂಬುಕ ಪಕ್ಷಿಯೊಂದು ಚುರ್..ಚುರ್ ಎಂದು ದೋಸೆ ಹೊಯ್ಯುವಂತೆ ಮಾಡುವ ಶಬ್ದದಿಂದ ಅಂದು ಯಾರೋ ನೆಂಟರು ಮನೆಗೆ ಬರುವ ಲಕ್ಷಣವಿದೆ ಎಂದುಕೊಂಡರೆ, ಬೆಕ್ಕು ತನ್ನ ಕೈಯಿಂದ ಮುಖವನ್ನು ಒರೆಸಿಕೊಳ್ಳುವುದನ್ನು ನೋಡಿ, ಬೆಕ್ಕು ಮುಖ ತೊಳೆಯುತ್ತಿದೆ ನೆಂಟರು ಬರುತ್ತಾರೆ ಎಂದುಕೊಳ್ಳುತ್ತೇವೆ. ಮನೆಯ ನಾಯಿಯೊಂದು ಬೊಗಳುವ ರೀತಿಯನ್ನು ಕೇಳಿ ಯಾರೋ ಮನೆಕಡೆ ಬರುತ್ತಿದ್ದಾರೆ ಎನ್ನುತ್ತಾ ಅವರನ್ನು ಕಾಣುವ ತವಕದಿಂದ

ಮನೆಯವರು ಹೊರಬರುತ್ತಾರೆ. ದೂರದಲ್ಲಿ ಬರುವುದನ್ನು ಕಂಡ ತಕ್ಷಣ ಮನೆಯ ಆವರಣ ಓರಣದ ಬಗ್ಗೆ ಆತಂಕದಿಂದ ಸುತ್ತಲೂ ಕಣ್ಣಾಡಿಸುತ್ತಾ ಬರುವ ರೀತಿ ಮನೆಯವರದು. ಮಳೆಗಾಲವಾದರೆ ಕೈಯಲ್ಲಿ ಬಿಸಿ ನೀರು ಚೆಂಬು, ಬಿಳಿ ಟವಲನ್ನು ಹಿಡಿದು ತರುವ ರೀತಿ ನಮಗೆ ಸಂಪ್ರದಾಯವಾದರೂ ಬೇರೆಯವರಿಗೆ ಇದು ವಿಶೇಷ. ಕಯ್ಯಾಲೆಯ ಐಮರವನ್ನು ಬಟ್ಟೆಯಿಂದ ಒರೆಸಿ ಬಂದವರಿಗೆ ಕೂರಲು ಅಣಿ ಮಾಡಲಾಗುತ್ತದೆ. ಬಂದವರು ಹಿರಿಯವರಾದರೆ ಅವರ ಕಾಲುಮುಟ್ಟಿ ಮೂರುಸಲ ನಮಸ್ಕರಿಸಲಾಗುತ್ತದೆ ಅಥವಾ ಕೈ ಜೋಡಿಸಿ ನಮಸ್ಕರಿಸಲಾಗುವುದು. ಐಮರದ ಮೇಲೆ ಅತಿಥಿಗಳ ಗೌರವಾರ್ಥವಾಗಿ ಹರಿವಾಣದಲ್ಲಿ ವೀಳ್ಯದೆಲೆ, ಅಡಿಕೆ, ಸುಣ್ಣದ ಡಬ್ಬಿ, ಫಳಫಳ ಹೊಳೆಯುವ ಚೆಂಬಿನಲ್ಲಿ ತುಂಬಿದ ನೀರು ಕೊಡಗಿನ ಪ್ರತಿ ಮನೆಯಲ್ಲಿ ಅಂದೂ ಇಂದೂ ಅತಿಥಿಗಳನ್ನು ಕಾಯುತ್ತಾ ಇರುವುದನ್ನು ಕಾಣುತ್ತೇವೆ. ಹಿರಿಯರಿಂದ ಬಂದ ಸಂಪ್ರದಾಯ, ಪದ್ಧತಿ, ಆಚಾರ ವಿಚಾರ ಪರಂಪರೆಯಿಂದ ಇಂದಿನವರೆಗೂ ನಡೆಯುತ್ತಲೇ ಬಂದಿದೆ.

ಮನೆಗೆ ಬರುವ ಯಾರೇ ಆಗಲಿ, ದಾರಿತಪ್ಪಿ ಹೋಗುತ್ತಿರುವವರೇ ಆಗಲಿ ಅವರಿಗೆ ಸೂಕ್ತ ಮಾಹಿತಿಯನ್ನೊದಗಿಸುತ್ತಾ ಒಂದಷ್ಟು ದೂರ ಮಾತನಾಡುತ್ತಾ ಸಾಗಿ ದಾರಿ ತೋರಿಸುವುದು ಇಲ್ಲಿನ ಮುಖ್ಯವಾದ ಮಾನವೀಯ ಸಂಪ್ರದಾಯವಾಗಿರುತ್ತದೆ. ಮನೆಗೆ ಬಂದವರನ್ನು ನೀರಿನ ಚೆಂಬು ಹಿಡಿದು ನಗುಮೊಗದಿಂದ ಬರಮಾಡಿಕೊಳ್ಳುತ್ತೇವೆ. ಬಂದವರನ್ನು ಕುಳ್ಳಿರಿಸಿ ಕ್ಷೇಮಲಾಭವನ್ನು ವಿಚಾರಿಸಿ ಸಂಬಂಧಿಗಳು ಹಿರಿಯರಾದರೆ ಅವರ ಕಾಲುಗಳನ್ನು ಮುಟ್ಟಿ ನಮಸ್ಕರಿಸಿ ಆಶೀರ್ವಾದ ಪಡೆಯುವಂತಹ ಈ ಹಿರಿಯ ಸಂಪ್ರದಾಯವನ್ನು ನಾವು ಕೊಡಗಿನಲ್ಲಿ ಮಾತ್ರ ಕಾಣಬಹುದಾಗಿದೆ. ನಂತರ ಕಾಫಿ ತಿಂಡಿಕೊಡುವುದು ಇಲ್ಲಿನ ಮುಖ್ಯ ಸಂಪ್ರದಾಯವಾಗಿದೆ. ಬಂದವರು, ಹಿರಿಯರಾದರೆ ಮಣೆ ಮುಕ್ಕಾಲು ಇಟ್ಟು ಕಂಚಿನ ಗಂಗಳದಲ್ಲಿ ಊಟವನ್ನು ಕೊಡುವ ರೀತಿ ಹಿಂದಿನದು. ಹಾಗೆಯೇ ಕಯ್ಯಾಲೆ ಅಥವಾ ಊಟದ ಮನೆಯಲ್ಲಿ ಬೆಂಚು, ಕುರ್ಚಿ, ಮೇಜು ಇಟ್ಟು ಊಟ ಕೊಡುವ ರೂಢಿ ಹಿಂದಿನಿಂದಲೇ ಇದೆ. ಕೊಡಗಿನ ಶೀತ ಹವಾಮಾನಕ್ಕೆ ಮರದ ಪೀಠೋಪಕರಣಗಳ ಬಳಕೆ ಮಾಡಲಾಗುತ್ತದೆ. ಮಕ್ಕಳು ಸ್ತ್ರೀಯರು ಬಿಸಿಲಿನಲ್ಲಿ ಮನೆಗೆ ಬಂದರೆ ಅವರ ತಲೆಗೆ ತೆಂಗಿನ ಎಣ್ಣೆಯನ್ನು ಹಾಕಿ ಬಿಸಿಲ ಉಷ್ಣತೆ ತಡೆಯಲು ಕಲಿಸಿದ ಹಿರಿಯರ ಸಂಪ್ರದಾಯಗಳು ಇಂದೂ ಆಚರಣೆಯಲ್ಲಿವೆ.

ಇನ್ನು ಆಯಾ ಸಂದರ್ಭಕ್ಕೆ ಸರಿಯಾದ ಆಹಾರ ಪದಾರ್ಥಗಳ ಅಡುಗೆ ಬಗ್ಗೆ ಇಲ್ಲಿ ತಿಳಿಸುವುದು ಸಮಯೋಚಿತವಾಗಿದೆ. ಬಿಸಿಲಿನಲ್ಲಿ ಬರುವವರಿಗೆ ಕುಡಿಯಲು ನಿಂಬೆ ಹಣ್ಣಿನ ಶರಬತ್ತು, ಮಜ್ಜಿಗೆ ನೀಡಲಾಗುತ್ತದೆ. ಮಳೆಗಾಲದಲ್ಲಿ ಅತಿಥಿಗಳಿಗಾಗಿ ಚಳಿ ಕಾಯಲು ಅಗ್ಗಿಷ್ಟಿಕೆ, ಬಿಸಿ ಕಾಫಿಯೊಂದಿಗೆ ಹಲಸಿನ ಹಣ್ಣಿನ ಕೂಗಲೆ ಹಿಟ್ಟು ಅಷ್ಟೇ ಅಲ್ಲ, ಹುರಿದ ಜೋಳದ ಅರಳು, ಬೇಯಿಸಿದೆ ಸಿಹಿ ಗೆಣಸು, ಹುರಿದ ಹಲಸಿನ ಬೀಜ ಇರುತ್ತದೆ.

ಮಳೆಗಾಲದ ಮೂರು ತಿಂಗಳು ಕೊಡಗಿನಲ್ಲಿ ಆತಿಥ್ಯಕ್ಕೇನೂ ಕೊರತೆ ಇಲ್ಲ. ಕಾರಣ ಮಳೆಗಾಲದ ತಿನಿಸುಗಳಾದ ಕಣಿಲೆ, ಅಕ್ಕಿ ರೊಟ್ಟಿ ಎಂಥವರನ್ನೂ ತಿನ್ನುವಂತೆ ಮಾಡುತ್ತದೆ. ಜೊತೆಗೆ ಸಮಯಕ್ಕೆ ಸರಿಯಾದ ವಿವಿಧ ಜಾತಿಯ ಅಣಬೆಗಳು ಸಿಕ್ಕಿದಾಗ ಅಂದು ಬಂದ ನೆಂಟನೊಬ್ಬ ಮನೆಯವರ ದೃಷ್ಟಿಯಲ್ಲಿ ಅದೃಷ್ಟಶಾಲಿಯಾಗಿರುತ್ತಾನೆ. ಊಟಕ್ಕೆ ಸಾಮಾನ್ಯವಾಗಿ ಕೋಳಿಯ ಮಾಂಸ ಸಾರು, ಅಕ್ಕಿ ರೊಟ್ಟಿ, ನೀರು ದೋಸೆ ಇರುತ್ತದೆ. ದೊಡ್ಡ ಸಮಾರಂಭಗಳಲ್ಲಿ ಹಂದಿ ಮಾಂಸ ಸಾರು, ಬಟ್ಟಲು ಹಿಟ್ಟು, ಕಡುಬು, ಅಕ್ಕಿ ರೊಟ್ಟಿ, ಇಡ್ಲಿ, ಕುರಿಮಾಂಸ ಮುಖ್ಯವಾಗಿದ್ದು, ಅಪರೂಪಕ್ಕೆ ಪಾಪಿಟ್ಟು, ಇಡ್‌ಮಣೆ ಹಿಟ್ಟು

(ಸೇವಿಗೆ) ಕೂಡಾ ಇರುತ್ತದೆ. ಸಂಜೆಯ ಕಾಫಿಗೆ ಕಜ್ಜಾಯ, ಪಕೋಡಾ, ವಡೆ, ಅಪ್ಪದಿಟ್ಟು, ಸೂಸಲು ಓಟ್ಟು ಇತ್ಯಾದಿಯಾದರೆ, ನಿತ್ಯದೂಟಕ್ಕೆ ಸರಳವಾದ ಅಕ್ಕಿರೊಟ್ಟಿ, ಅಕ್ಕಿ ಕಡುಬು, ನೀರು ದೋಸೆ, ಓಡಿಟ್ಟು, ಅಕ್ಕಿ ಉಪ್ಪಿಟ್ಟು ಹಾಗೂ ಬೆಲ್ಲದ ಕಾಫಿ ಇರುತ್ತದೆ.

ಮದುವೆ ಸಮಾರಂಭಗಳಲ್ಲಿ ವಿಶೇಷವಾಗಿ ತುಪ್ಪದನ್ನ ಮಾವಿನ ಹಣ್ಣು, ಅನಾನಸು ಹಣ್ಣಿನ ಖಾರದ ಗೊಜ್ಜು, ಅನ್ನ, ತರಕಾರಿ ಕೂಟು ಸಾರು, ತರಕಾರಿ ಪಲ್ಯ, ನಿಂಬೆಹಣ್ಣಿನ ಉಪ್ಪಿನಕಾಯಿ, ಮಾವಿನ ಕಾಯಿಯ ಕೊಚ್ಚು ಮತ್ತು ಮಿಡಿಉಪ್ಪಿನಕಾಯಿ, ಪಾಯಸ, ಬಾಳೆಹಣ್ಣು ಹಳೆ ಪದ್ಧತಿಯ ಊಟೋಪಚಾರವಿರುತ್ತದೆ. ಹಿಂದೆ ಬೈನೆಮರದ ಸೇಂದಿ, ಭತ್ತದ ಸಾರಾಯಿ ಮುಖ್ಯ ಪಾನೀಯಗಳಾಗಿದ್ದವು. ಗದ್ದೆಯ ಅಗೆ ಬೆಳೆ ಕೆಲಸಗಳ ಸಾಮೂಹಿಕ ಊಟೋಪಚಾರಗಳಲ್ಲಿ ಅಕ್ಕಿ ಕಡುಬು, ಇಲಾತಿ ಕಾಳು, ಆಲೂಗೆಡ್ಡೆ, ನೂಕೋಲು, ಒಣ ಚಿರಾವು ಮೀನಿನ ಸಾರು, ಹುರಿದು ಒಡೆದ ಕಾಳುಗಳ ಸಾರು ವಿಶೇಷ ಖಾದ್ಯಗಳಾಗಿರುತ್ತವೆ.

ಸಮಯಕ್ಕೆ ಸರಿಯಾದ ವಿವಿಧ ಜಾತಿಯ ಅಣಬೆಗಳು, ಕಾರ್ತಿಂಗಳ ಭೂತಾರಾಧನೆ ಊಟ, ಆಟಿ ತಿಂಗಳ ಆಟಿ ಪಾಯಸ, ಆಟಿ ಕೋಳಿ, ಸೋಣ ತಿಂಗಳ ಮರ ಕೆಸುವಿನ ಪತ್ರೊಡೆ, ಕೈಲ್ ಮುಹೂರ್ತದ ಅದ್ಧೂರಿ ಔತಣದೂಟ, ಕಾವೇರಿ ಸಂಕ್ರಮಣದ ದೋಸೆ, ಜೇನು ತುಪ್ಪದೂಟ, ಹುತ್ತರಿ ಹಬ್ಬದ ದಿನಗಳಲ್ಲಿ ..ಡುವಂತ ತಂಬಿಟ್ಟು, ಹುತ್ತರಿ ಗೆಣಸು, ಅಕ್ಕಿ ಪಾಯಸ, ಕೆಸವಿನ ಗೆಡ್ಡೆ, ಕಾಳು ಸಾರು, ಕಾಡಿನ ಗೆಡ್ಡೆ ಗೆಣಸು, ಮಡಗಲಕಾಯಿ ಇತ್ಯಾದಿ ಗದ್ದಳ ಊಟಕ್ಕೆ ಸಮವಾದರೆ ನಂತರ ಗದ್ದೆ ತೋಡುಗಳಲ್ಲಿ ಸಿಕ್ಕುವ ಕೊಯಿಲೆ ಮೀನು, ಇಟ್ಟಿ, ಮೊರಟೆ ಮೀನಿನೊಡನೆ ಹಸಿ ಅವರೆ ಕಾಳು ಸಾರು, ಹೊಳೆ ತೋಡುಗಳಲ್ಲಿ ಕಟ್ಟೆ ಕಟ್ಟಿ ಮದ್ದು ಹಾಕಿ ಮೀನು ಹಿಡಿಯುವ ಕಿಡ್ಡಾಸ ಹಬ್ಬದ ಕಾಡು ಬೇಟೆ ಮುಗಿಯುವಷ್ಟರಲ್ಲಿ ಬೇವು ಬೆಲ್ಲ ಪಾಯಸದ ಯುಗಾದಿ ಹೊಸವರ್ಷ ಬಂದೇ ಬಿಡುತ್ತದೆ. ಹೀಗೆ ಒಂದೇ ಎರಡೇ? ಪ್ರತೀ ತಿಂಗಳು ಕೊಡಗಿನಲ್ಲಿ ಒಂದಲ್ಲ ಒಂದು ಬಗೆಯ ವಸ್ತುಗಳಿಂದ ಆತಿಥ್ಯದ ಉಪಚಾರಕ್ಕಾಗಿ ತಯಾರಿಸುವ ತಿನಿಸುಗಳು ಕೊಡಗಿನ ಹೆಣ್ಣು ಮಕ್ಕಳ ಕೈಯಲ್ಲಿ ವಿಶೇಷ ರೀತಿಯಿಂದ ರುಚಿರುಚಿಯಾಗಿ ತಯಾರಾಗುವ ಕೌಶಲ್ಯ ಹೇಗಿತ್ತು ಎಂಬ ಕಲ್ಪನೆಯು ನಮಗೆ ಹಿಂದಿನ ತಲೆಮಾರಿನ, ಉದ್ದಕ್ಕೆ ತೋಳಿನ ರವುಕೆ, ತಲೆಗೆ ಚೆಕ್ ವಸ್ತ್ರ ಕಟ್ಟಿ ಊಟ ಬಡಿಸುವ ಹಿರಿಯ ತಾಯಂದಿರ ನೆನಪು ಕಣ್ಣ ಮುಂದೆ ನಿಲ್ಲುತ್ತದೆ.

ಇಂದು ಪ್ರವಾಸೋದ್ಯಮ ಇಲಾಖೆಯವರ ಕೃಪೆಯಿಂದ ಪ್ರವಾಸಿಗಳಿಗಾಗಿ ಪಟ್ಟಣಗಳಿಂದ ಹಿಡಿದು ಹಳ್ಳಿಯ ಗುಡ್ಡಗಾಡಿನವರೆಗೂ ರೆಸಾರ್ಟ್‌ಗಳು ಹೋಟೆಲ್‌ಗಳೂ ಹೋಂ ಸ್ಟೇ ತಲೆ ಎತ್ತಿ ನಿಂತಿವೆ. ಅತಿಥಿ ಸತ್ಕಾರವು ವ್ಯವಹಾರದ ರೀತಿಯಲ್ಲಿ ಹಣಗಳಿಸುವ ಮಾರ್ಗವಾಗಿದೆ. ಕೆಲವು ರೆಸಾರ್ಟ್ ಹೋಂ ಸ್ಟೇಗಳಲ್ಲಿ ಐನ್ ಮನೆಯ ನೆನಪನ್ನು ತರುವ ಗೋಡೆ ಕಂಬಗಳು, ಚಿತ್ತಾರಗಳು, ಮಣ್ಣಿನ ಫ್ಯಾಶನ್ ಪಾತ್ರೆಗಳಲ್ಲಿ ನೀರಿಟ್ಟು ಹೂವಿನ ಅಲಂಕಾರ ಮಾಡಿ ಬಂದವರನ್ನು ಸ್ವಾಗತಿಸುವ ಕಲ್ಪನಾ ಚಿತ್ರಗಳನ್ನು ಕೂಡಾ ಇಂದು ಕೊಡಗಿನಲ್ಲಿ ಕಾಣಬಹುದಾಗಿದೆ.

ವೇದಗಳನ್ನೂ ಶಾಸ್ತ್ರಗಳನ್ನೂ ಓದುತ್ತಾರೆ. ಒಬ್ಬರಿಗೊಬ್ಬರು ಕಲಿಸುತ್ತಾರೆ. ಆದರೆ ಪರತತ್ತ್ವವನ್ನು ಅರಿತಿಲ್ಲ.
ಸೌಟಿಗೆ ಅಡಿಗೆಯ ರುಚಿ ಗೊತ್ತೇ!

- ಗರುಡಪುರಾಣ

ಅನುಭವ

ರಾಷ್ಟ್ರಮಟ್ಟದ ವಿಶೇಷ ಸಾಹಸ ಶಿಬಿರ



✍ ದಯಾನಂದ ಕೆ.ಸಿ., M.A.,UGC-NET,M.Phil
ಮುಖ್ಯಸ್ಥರು ಮತ್ತು ಸಹಾಯಕ ಪ್ರಾಧ್ಯಾಪಕರು
ಅರ್ಥಶಾಸ್ತ್ರ ವಿಭಾಗ
ಸರಕಾರಿ ಪ್ರಥಮ ದರ್ಜೆ ಕಾಲೇಜು, ಮಡಿಕೇರಿ

ಭೂಮಿಯ ಮೇಲಿನ ಸ್ವರ್ಗ, ಭಾರತಾಂಬೆಯ ಶಿರದ ಭಾಗದಲ್ಲಿರುವ ಪ್ರಕೃತಿ ಸೌಂದರ್ಯದ ರಮಣೀಯತೆಯಿಂದ, ಮನಮೋಹಕವಾಗಿರುವ, ಫಲಪುಷ್ಪಗಳು ಬೆಟ್ಟಗುಡ್ಡಗಳಿಂದ, ಕಣಿವೆ ಪ್ರದೇಶಗಳಿಂದ, ಸೌಂದರ್ಯವಂತರ, ಪಂಡಿತರ ನಾಡು ಎಂದು ಸರ್ವ ವಿಧಿತವಾದ ಪ್ರದೇಶವೇ ಜಮ್ಮು ಕಾಶ್ಮೀರ. ಆದರೆ ಇನ್ನೊಂದೆಡೆಯಲ್ಲಿ ಅಶಾಂತಿಯ ಬೀಡು, ಮೈಜುಂ ಎನಿಸುವ ತಾಣವೂ ಹೌದು.

ಜಮ್ಮು ಕಾಶ್ಮೀರದ ಪಾಟ್ನಿಟಾಪ್‌ನಲ್ಲಿರುವ JIM-WS (Javahar Institute of Mountaineering and Winter Sports) ಎಂಬ ಭಾರತೀಯ ಸೇನಾ ಸಂಸ್ಥೆ ದಿನಾಂಕ 23.06.2010ರಿಂದ 02.07.2010ರವರೆಗೆ ರಾಷ್ಟ್ರಮಟ್ಟದ ವಿಶೇಷ ಸಾಹಸ ಶಿಬಿರವನ್ನು ಆಯೋಜಿಸಿತ್ತು. ಈ ಸಾಹಸ ಶಿಬಿರದಲ್ಲಿ ಕರ್ನಾಟಕದ ವಿವಿಧ ವಿಶ್ವವಿದ್ಯಾನಿಲಯಗಳಿಂದ ಇಪ್ಪತ್ತು ಮಂದಿ ರಾಷ್ಟ್ರೀಯ ಸೇವಾ ಯೋಜನಾ ಶಿಬಿರಾರ್ಥಿಗಳು ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಿದರು. ಈ ಸಾಹಸ ಶಿಬಿರದ ನೇತೃತ್ವವನ್ನು ರಾಷ್ಟ್ರೀಯ ಸೇವಾ ಯೋಜನಾಧಿಕಾರಿಯಾದ ನಾನು ವಹಿಸಿಕೊಂಡಿದ್ದೆ.

ಈ ವಿಶೇಷ ಸಾಹಸ ಶಿಬಿರದಲ್ಲಿ ಭಾಗವಹಿಸಲು ನನಗೆ ಅವಕಾಶ ದೊರೆತಾಗ ಪ್ರಾರಂಭದಲ್ಲಿ ಸಂತೋಷವಾಯಿತು. ಆದರೆ ಜಮ್ಮುವಿಗೆ ತೆರಳುವ ದಿನಗಳು ಸಮೀಪಿಸುತ್ತಿದ್ದಂತೆ ಮನಸ್ಸಿನಲ್ಲಿ ತಳಮಳ ಉಂಟಾಗುತ್ತಿತ್ತು. ಕಾರಣ ನನ್ನ ಜೊತೆ ಬರುವ ಶಿಬಿರಾರ್ಥಿಗಳು ಅಪರಿಚಿತರು, ಪ್ರಯಾಣ ಬಹಳ ದೂರವಾಗಿರುವುದು ಮತ್ತು ಜಮ್ಮು ಕಾಶ್ಮೀರ ಉಗ್ರಗಾಮಿಗಳ ತಾಣ ಎಂದು ಎಲ್ಲರು ಭಾವಿಸಿರುವುದರಿಂದ ಮನಸ್ಸು ತಳಮಳವಾಗುತ್ತಿತ್ತು. ಆದರೆ ನನ್ನ ಪಾಲಿಗೆ ಬಂದಿರುವ ಭಾಗ್ಯವನ್ನು ಅನುಭವಿಸಲೇಬೇಕು ಎಂದು ದೃಢ ಮನಸ್ಸು ಮಾಡಿ ತಂದೆ ತಾಯಿಯವರ, ಕುಟುಂಬ ವರ್ಗದವರ ಸಹೋದ್ಯೋಗಿಗಳ, ಹಿತೈಷಿಗಳ ಶುಭ ಹಾರೈಕೆಯೊಂದಿಗೆ ಕಾಶ್ಮೀರದ ವಿಶೇಷ ಸಾಹಸ ಶಿಬಿರಕ್ಕೆ ಮುಂದಾದೆ.

ದಿನಾಂಕ 19.06.2010ರಂದು ಬಹಳ ಆಶ್ಚರ್ಯ, ನಿರೀಕ್ಷೆ, ಭಯ, ಉತ್ಸಾಹದೊಂದಿಗೆ ಮಂಗಳೂರು ವಿಶ್ವವಿದ್ಯಾನಿಲಯದ ಬೇರೆ ಬೇರೆ ಪದವಿ ಕಾಲೇಜುಗಳಿಂದ ಬಂದಿದ್ದ ರಾಷ್ಟ್ರೀಯ ಸೇವಾ ಯೋಜನಾ ಶಿಬಿರಾರ್ಥಿಗಳು ಮತ್ತು ಅವರ ಬೀಳ್ಕೊಡುಗೆಗಾಗಿ ಬಂದಿದ್ದ ಪೋಷಕ ವರ್ಗದವರು, ಉಪನ್ಯಾಸಕರು ತಮ್ಮ ಮಕ್ಕಳನ್ನು ನಮ್ಮ ಕೈಗೆ ಒಪ್ಪಿಸಿ ಮಂಗಳೂರಿನಿಂದ ನಿರ್ಗಮಿಸಿದರು. ಮಂಗಳೂರು ವಿಶ್ವವಿದ್ಯಾನಿಲಯದ ರಾಷ್ಟ್ರೀಯ ಸೇವಾ ಸಂಯೋಜನಾಧಿಕಾರಿಗಳ ಕಛೇರಿಯಲ್ಲಿ ಪರಸ್ಪರ ಪರಿಚಿತರು, ಆತ್ಮೀಯರು, ಸ್ನೇಹಿತರೂ ಆದೆವು. ಮಂಗಳೂರು ವಿಶ್ವವಿದ್ಯಾನಿಲಯದ ರಾಷ್ಟ್ರೀಯ ಸೇವಾ ಸಂಯೋಜನಾಧಿಕಾರಿಯಾಗಿರುವ ಡಾ|| ಗಣನಾಥ ಎಕ್ಕರ್‌ರವರ ಶುಭ ಹಾರೈಕೆಯೊಂದಿಗೆ ನಮ್ಮ ಪ್ರಯಾಣ ಜಮ್ಮುವಿನ ಕಡೆಗೆ ಸಾಗಿತು. ಸಂಜೆ ಭೋಜನವನ್ನು ಮುಗಿಸಿ ಶಿಬಿರಾರ್ಥಿಗಳು ತಂದಿರುವ ದೊಡ್ಡ ದೊಡ್ಡ ಬ್ಯಾಗುಗಳನ್ನು ಕೈಯಲ್ಲಿ, ಹೆಗಲಲ್ಲಿ ಏರಿಸಿಕೊಂಡು ಖಾಸಗಿ ವಾಹನದ ಮೂಲಕ ಮಂಗಳೂರಿನ ರೈಲ್ವೆ ನಿಲ್ದಾಣಕ್ಕೆ ಬಂದೆವು.

ಮಂಗಳೂರಿನ ರೈಲ್ವೆ ನಿಲ್ದಾಣದಿಂದ ಸಂಪರ್ಕ ಕ್ರಾಂತಿ ಎಕ್ಸ್‌ಪ್ರೆಸ್ ರೈಲಿನಲ್ಲಿ ನಮ್ಮ ಪ್ರಯಾಣ ನಿಗದಿಯಾಗಿತ್ತು. ಜಮ್ಮುವಿನ ಕಡೆಗೆ ಸಂಜೆ 8.45 ಗಂಟೆಗೆ ಬಿಟ್ಟೆವು. ಮೊದಲಿಗೆ ನಮ್ಮ ನೆರೆಯ ರಾಜ್ಯ ಗೋವಾ, ಮಹಾರಾಷ್ಟ್ರ ನಂತರ ಗುಜರಾತ್, ರಾಜಸ್ಥಾನ, ಉತ್ತರಪ್ರದೇಶ, ಹರಿಯಾಣ, ಪಂಜಾಬ್‌ಗಳ ಮೂಲಕ ದೆಹಲಿಯನ್ನು ತಲುಪಿದೆವು. ದೆಹಲಿ ರೈಲ್ವೆ ಸ್ಟೇಷನ್‌ನಲ್ಲಿ ವಿಶ್ರಾಂತಿ ಪಡೆದು ನಂತರ ಟಾಟಾ ಮೌರ್ಯ ಎಕ್ಸ್‌ಪ್ರೆಸ್‌ನಲ್ಲಿ ದೆಹಲಿಯಿಂದ ಜಮ್ಮು ಕಾಶ್ಮೀರದ ಕಡೆಗೆ ಪ್ರಯಾಣ ಬೆಳೆಸಿದೆವು. ದೆಹಲಿಯ ರೈಲ್ವೆ ಸ್ಟೇಷನ್‌ನಲ್ಲಿ ನಮ್ಮ ಶಿಬಿರಾರ್ಥಿಗಳು ಹರಸಾಹಸ ಮಾಡಬೇಕಾಯಿತು. **"ಜಮ್ಮು ಪ್ರವೇಶಿಸುತ್ತಿದ್ದಂತೆ ಎಲ್ಲಿ ನೋಡಿದರೂ ಶಸ್ತ್ರಸಜ್ಜಿತ ಸೈನಿಕರು ಕಾಣುತ್ತಿದ್ದರು. ಜಮ್ಮು ಪ್ರವೇಶಿಸುತ್ತಿದ್ದಂತೆ ನಮ್ಮ ಬಳಿ ಇದ್ದ ಎಲ್ಲರ ಮೊಬೈಲ್ ಫೋನ್‌ಗಳ ಸಂಪರ್ಕ ಕಡಿತಗೊಂಡಿತು. ಆಗ ಎಲ್ಲಾ ಶಿಬಿರಾರ್ಥಿಗಳ ಮುಖದಲ್ಲಿ ಭಯದ ಛಾಯೆ ಗೋಚರಿಸಿತು."** ಅದರಿಂದಾಗಿ ರೈಲ್ವೆ ನಿಲ್ದಾಣದಲ್ಲಿ ರೈಲು ಇಳಿದ ಕೂಡಲೆ ಎಲ್ಲಾ ಶಿಬಿರಾರ್ಥಿಗಳು ತಮ್ಮ ತಂದೆ ತಾಯಿಯವರೊಂದಿಗೆ ಎಸ್.ಟಿ.ಡಿ. ಬೂತ್‌ನಿಂದ ಫೋನ್ ಮಾಡಿ ಮಾತನಾಡಿ ಇನ್ನು ನಮ್ಮ ಮೊಬೈಲ್ ಫೋನ್‌ಗಳು ಸಂಪರ್ಕಕ್ಕೆ ಸಿಗುವುದಿಲ್ಲ. ತಾವುಗಳು ಭಯಪಡಬೇಕಾಗಿಲ್ಲ. ನಾವೆಲ್ಲಾ ಕ್ಷೇಮವಾಗಿದ್ದೇವೆ ಎಂಬ ಸಮಾಧಾನದ ಸಂದೇಶ ನೀಡಿದರು. ನಂತರ ಜಮ್ಮುವಿನಿಂದ 105 ಕಿ.ಮೀ. ದೂರದಲ್ಲಿರುವ ಪಾಟ್ನಿಟಾಪ್ ಪ್ರದೇಶಕ್ಕೆ ಖಾಸಗಿ ಬಾಡಿಗೆ ವಾಹನದ ಮೂಲಕ ಸುಮಾರು ನಾಲ್ಕು ಗಂಟೆಗಳ ಪ್ರಯಾಣ ಮಾಡಿ ತಲುಪಿದೆವು.

ಪಾಟ್ನಿಟಾಪ್‌ನಲ್ಲಿರುವ JIM - WS ಸಂಸ್ಥೆಯನ್ನು ತಲುಪಿದ ತಕ್ಷಣ ಅಲ್ಲಿನ Instructor ಮನ ತುಂಬಿದ ಸ್ವಾಗತ ನೀಡಿದರು. ಸಂಸ್ಥೆಯ ಪ್ರಾಂಶುಪಾಲರಾದ ಕ್ಯಾಪ್ಟನ್ ವೀರೇಂದ್ರ ಸಿಂಗ್‌ರವರು ದೂರವಾಣಿಯ ಮೂಲಕ ಕುಶಲೋಪಚಾರ ಮಾಡಿದರು. ನಂತರ ಕಾಫಿ, ತಿಂಡಿ ಮುಗಿಸಿ Survival Tent ನಲ್ಲಿ ವಿಶ್ರಾಂತಿ ಪಡೆದೆವು.

ಮರುದಿನ ಮುಂಜಾನೆ ಬೇಗ ಎದ್ದು ನಿಯಮದಂತೆ ನಿತ್ಯಕರ್ಮ, ಪ್ರಾರ್ಥನೆ, ಶ್ರಮದಾನ ಮುಗಿಸಿ ಮಾರ್ಗದರ್ಶಕರ ನೆರವಿನಿಂದ ಪಾಟ್ನಿಟಾಪ್ ನಗರ ಸುತ್ತಾಡಿದೆವು. ನಂತರ ಮರಳಿ Tentಗೆ ಬಂದು ಊಟೋಪಚಾರ ಮುಗಿಸಿಕೊಂಡು ಆ ಸಂಸ್ಥೆಯ ಉಪ ಪ್ರಾಂಶುಪಾಲರಾದ ಕ್ಯಾಪ್ಟನ್ ರಾಹುಲ್ ಮಹಾಜನ್‌ರವರೊಂದಿಗೆ ಸಮಾಲೋಚನೆಯಲ್ಲಿ ತೊಡಗಿದೆವು.

ಮರುದಿನ ಸಂಸ್ಥೆಯ ಮಾರ್ಗದರ್ಶಕರಾದ ಸೈನಿಕರೊಂದಿಗೆ ಚಾರಣ ಕಾರ್ಯಕ್ರಮ ಪ್ರಾರಂಭವಾಯಿತು. ಮೊದಲ ದಿನ ನಮ್ಮ ಚಾರಣಕ್ಕೆ ಜಮ್ಮು ಕಾಶ್ಮೀರದ ನೆಹರೂ ಯುವ ಕೇಂದ್ರದ ನಿರ್ದೇಶಕರಾದ ಶ್ರೀ ಮಲ್ಹೋತ್ರರವರು ಶುಭ ಹಾರೈಸಿದರು. ನಂತರ ಪಾಟ್ನಿಟಾಪ್‌ನಿಂದ ಸುಮಾರು 18 ಕಿ.ಮೀ.ದೂರದಲ್ಲಿರುವ ಗೌರಿಕುಂಡ ಪ್ರದೇಶವನ್ನು ಬೆಟ್ಟಗುಡ್ಡಗಳನ್ನು ಏರುವ, ಇಳಿಯುವ ಮೂಲಕ ಕಾರ್ಲ, ಗಾಳಿಟಾಫ್ ಸ್ಥಳಗಳ ಮೂಲಕ ತಲುಪಿದೆವು. ದಾರಿಯಲ್ಲಿ ಕಾರ್ಲದ ಬಳಿ ಇರುವ ನಾಗದೇವತೆ ಗೌರಿಕುಂಡದ ಬಳಿ ಇದ್ದ ಗೌರಿ ಮಾತಾ ದೇವರ ದರ್ಶನವನ್ನು ಗುಹೆಯ ಒಳಗೆ ಪಡೆದೆವು. ಅಲ್ಲಿ ಮಧ್ಯಾಹ್ನದ ಉಪಹಾರ ಮುಗಿಸಿ ಆಟೋಟಗಳಲ್ಲಿ ತೊಡಗಿ ರಾತ್ರಿ ಊಟ ಮುಗಿಸಿ ನಿದ್ರಿಸಿದೆವು.

ಮೂರನೆಯ ದಿನ ಮುಂಜಾನೆ ಭಾರಿ ಮಳೆಯಿಂದಾಗಿ ಚಾರಣ ಸಾಧ್ಯವಾಗಲಿಲ್ಲ. ಹಾಗಾಗಿ ಕಾರ್ಲ ನಗರವನ್ನು ಸುತ್ತಾಡಿದೆವು. ನಾಲ್ಕನೆಯ ದಿನ ಮುಂಜಾನೆ ಕೆಲಸ ಕಾರ್ಯ ಶ್ರಮದಾನ, ಪ್ರಾರ್ಥನೆ ಮುಗಿಸಿ ಪಾಟ್ನಿಟಾಪ್‌ನಿಂದ ಸುಮಾರು 20 ಕಿ.ಮೀ. ದೂರದಲ್ಲಿರುವ ಶಿವಘಾಡ್ ಬೆಟ್ಟದ ಕಡೆಗೆ ನಮ್ಮ ಚಾರಣ ಪ್ರಾರಂಭವಾಯಿತು. ಈ ಬೆಟ್ಟ ಸುಮಾರು 6,800 ಅಡಿಗಳಿಗಿಂತ ಹೆಚ್ಚು ಎತ್ತರವಾಗಿದೆ. ಈ ಶಿಖರವನ್ನು

ಏರುವಾಗ ಪಲವಾರು ಶಿಬಿರಾರ್ಥಿಗಳು ತುಂಬಾ ಕಷ್ಟ ಅನುಭವಿಸಿದರು. ಶಿವಘಾಡ್ ಬೆಟ್ಟದ ತುತ್ತತುದಿಯಿಂದ ನಾವು ಹಿಮಾಲಯ ಬೆಟ್ಟದ ಸಾಲುಗಳನ್ನು ಹಿಮದ ರಾಶಿಯನ್ನು ಹಾಗೂ ವಜ್ರದಂತೆ ಪ್ರಜ್ವಲಿಸುತ್ತಿದ್ದ ಜೀನಾಬ್ ನದಿಯನ್ನು ಕಣ್ತುಂಬಿ ಆನಂದಿಸಿದೆವು.

ಮರುದಿನ ನಮ್ಮ ಚಾರಣ ಪಾಟ್ನಿಟಾಪ್‌ನಿಂದ ಸನಾಸರ್ ಕಡೆಗೆ ನಡೆಯಿತು. ಸನಾಸರ್ ಪಾಟ್ನಿಟಾಪ್‌ನಿಂದ ಸುಮಾರು 20ಕಿ.ಮೀ. ದೂರದಲ್ಲಿತ್ತು. ದಾರಿಯ ಮಧ್ಯೆ ನಾಥಟಾಪ್ ಹಾಗೂ ವಾಯುಪಡೆಯ ಕೇಂದ್ರಸ್ಥಾನವನ್ನು ವೀಕ್ಷಿಸಿಕೊಂಡು ಸನಾಸರ್ ತಲುಪಿದೆವು.

ಸನಾಸರ್‌ನಲ್ಲಿ ಸೈನಿಕರು ಪಡೆಯುವ ಕೆಲವು ತರಬೇತಿಯನ್ನು ನಾವು ಪಡೆದೆವು. ಅಲ್ಲಿ ನಾವು ಆನಂದಿಸಿದ ದಿನಗಳನ್ನು ಮರೆಯುವಂತಿಲ್ಲ. ಅಲ್ಲಿ Claimbing, Slaping, Rappelling, Zip wairing ಮೊದಲಾದುವುಗಳಲ್ಲಿ ತೊಡಗಿದೆವು. ಆ ಅನುಭವ ವಿಶೇಷ ಮತ್ತು ಅದ್ಭುತವಾಗಿತ್ತು.

ನಾವು ಅಲ್ಲಿಂದ ಹಿಂತಿರುಗುವ ದಿನಗಳು ಸಮೀಪಿಸುತ್ತಿದ್ದಂತೆ ಮನಸ್ಸಿಗೆ ನೋವು ತರುತ್ತಿತ್ತು. ಕಾರಣ ಅಲ್ಲಿಯ ಪರಿಸರ, ಜನರ ಸೌಮ್ಯತೆ ಮತ್ತು ಅವರ ಉಪಚಾರ ನಮ್ಮ ಒಡನಾಡಿಕೆಗಳು ಅದ್ಭುತವಾಗಿತ್ತು.

ದಿನಾಂಕ 01.07.2010ರಂದು ಸಂಸ್ಥೆಯ ಉಪ ಪ್ರಾಂಶುಪಾಲರಾದ ಕ್ಯಾಪ್ಟನ್ ರಾಹುಲ್ ಮಹಾಜನ್‌ರವರು ಸಮಾರೋಪ ಸಮಾರಂಭವನ್ನು ಏರ್ಪಡಿಸಿ, ಪ್ರಶಸ್ತಿ ಪತ್ರಗಳನ್ನು, ಪದಕಗಳನ್ನು ವಿತರಿಸಿ ಆತ್ಮೀಯವಾಗಿ ಬೀಳ್ಕೊಟ್ಟರು. ನಂತರ ನಾವು ವಿಶ್ವ ಪ್ರಸಿದ್ಧವಾದ ಜಮ್ಮುವಿನ ವೈಷ್ಣವಿ ಮಾತೆಯ ದರ್ಶನಕ್ಕೆಂದು ಕಟ್ರಾದ ಕಡೆಗೆ ಪ್ರಯಾಣಿಸಿದೆವು. ವೈಷ್ಣವಿ ದೇವಿಯ ದರ್ಶನ ಮಾಡಬೇಕಾದರೆ ಕಟ್ರಾದಿಂದ ಸುಮಾರು 38 ಕಿ.ಮೀ.ಕಾಲ್ನಡಿಗೆಯ ಮೂಲಕ ತೆರಳಬೇಕಾಗಿತ್ತು. ನಾವೆಲ್ಲರು ದೇವಿಯ ದರ್ಶನಕ್ಕೆ ಕಾಲ್ನಡಿಗೆಯ ಪ್ರಯಾಣ ಬೆಳೆಸಿ, ಬೆಟ್ಟದ ತುತ್ತತುದಿಯಲ್ಲಿ ಗುಹೆಯ ಒಳಗಡೆ ಕಲ್ಲುಬಂಡೆಯ ಒಳಗಡೆ ಇರುವ ವೈಷ್ಣವಿ ದೇವಿಯ ದರ್ಶನ ಮಾಡಿ ಜೀವನ ಪಾವನ ಮಾಡಿಕೊಂಡೆವು. ನಂತರ ಜಮ್ಮುವಿನಿಂದ ದೆಹಲಿಯ ಕಡೆಗೆ ಶಾಲಿಮಾರ್ ಎಕ್ಸ್‌ಪ್ರೆಸ್ ರೈಲಿನಲ್ಲಿ ಪ್ರಯಾಣ ಬೆಳೆಸಿದೆವು. ಅದಕ್ಕೆ ಮೊದಲು ಜಮ್ಮುವಿನಲ್ಲಿರುವ ಪಲವಾರು ಪ್ರವಾಸಿ ಸ್ಥಳಗಳನ್ನು, ಸೈನಿಕರ ಸ್ಮಾರಕಗಳನ್ನು ಉದ್ಯಾನವನಗಳನ್ನು ವೀಕ್ಷಿಸಿ ಆನಂದಿಸಿದೆವು.

ದೆಹಲಿ ತಲುಪಿದ ನಂತರ ಅಲ್ಲಿರುವ ಪ್ರಮುಖ ಸ್ಥಳಗಳಾದ ರಾಜ್‌ಘಾಟ್, ಕೆಂಪುಕೋಟೆ, ವಿಜಯಘಾಟ್, ಕೃಷ್ಣಘಾಟ್, ಇಂದಿರಾಗೇಟ್, ದೆಹಲಿಯ ಮುಖ್ಯ ಮಂತ್ರಿಯವರ ಕಛೇರಿ, ಕಾಂಗ್ರೆಸ್ ಪಕ್ಷದ ಕಛೇರಿ, ರಾಷ್ಟ್ರಪತಿ ಭವನ, ಪಾರ್ಲಿಮೆಂಟ್ ಭವನ, ಇಂದಿರಾಗಾಂಧಿ ಮ್ಯೂಜಿಯಂ, ಇಲ್ತಮಸನ ಗೋರಿ, ಲೋಟಸ್ ಮತ್ತು ಬಾಹೈಯ ದೇವಾಲಯ ಇತ್ಯಾದಿಗಳನ್ನು ವೀಕ್ಷಿಸಿ ಮಹಾದಾನಂದ ಪಡೆದೆವು. ನಂತರ ದೆಹಲಿಯಿಂದ ಮಂಗಳೂರಿನ ಕಡೆಗೆ ಮಂಗಳೂರು ಎಕ್ಸ್‌ಪ್ರೆಸ್ ರೈಲಿನಲ್ಲಿ ಪ್ರಯಾಣ ಬೆಳೆಸಿದೆವು. ಮುಂಜಾನೆ 4.00 ಗಂಟೆಗೆ ನಾವು ಮಂಗಳೂರಿನ ರೈಲ್ವೆ ನಿಲ್ದಾಣವನ್ನು ತಲುಪಿದೆವು. ಎಲ್ಲರ ಮುಖದಲ್ಲಿ ದುಗುಡತೆಯ ಭಾವ ಎದ್ದು ಕಾಣುತ್ತಿತ್ತು. ಪರಿಚಯ ಆಕಸ್ಮಿಕ. ಆದರೆ ನಿರ್ಗಮನ ಅನಿವಾರ್ಯ. ಇದು ವಿಧಿ ನಿಯಮ. ಎಲ್ಲರೂ ಭಾರವಾದ ಹೃದಯ ಹೊತ್ತು ಒಬ್ಬೊಬ್ಬರು ಒಂದೊಂದು ದಿಕ್ಕಿನತ್ತ ಸಾಗಿದೆವು. ಆದರೂ ಕರ್ನಾಟಕವನ್ನು ಪ್ರತಿನಿಧಿಸಿದ ನಮ್ಮ ತಂಡ ಶಿವಘಾಡ್ ಏರಿದ ಮೊದಲ ತಂಡ ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು. ಜಮ್ಮು ಕಾಶ್ಮೀರದಲ್ಲಿ ಸುತ್ತಾಡಿ ನಮ್ಮ ವಿಶೇಷ ಸಾಹಸ ಶಿಬಿರವನ್ನು ಸಾರ್ಥಕ ಮಾಡಿಕೊಂಡೆವು.

ಕೊಡಗಿನ ಜಾನಪದ ಸೊಗಸು



✍ ಡಾ. ಕೋರನ ಸರಸ್ವತಿ ಪ್ರಕಾಶ್
ಸಹ ಪ್ರಾಧ್ಯಾಪಕರು
ಸರಕಾರಿ ಪ್ರಥಮ ದರ್ಜೆ ಕಾಲೇಜು, ವಿರಾಜಪೇಟೆ

ಜಾನಪದದಷ್ಟು ವಿಶಾಲವೂ, ವ್ಯಾಪಕವೂ, ಸರ್ವಾತ್ಮಕವೂ ಆದ ಮತ್ತೊಂದು ಪದವಿಲ್ಲವೆಂದು ತೋರುತ್ತದೆ. ಪರಿಯ ಬಸುರಲ್ಲಿ ಬ್ರಹ್ಮಾಂಡವಡಗಿರುವಂತೆ ಜಾನಪದದ ಕಕ್ಷೆಯಲ್ಲಿ ಜಗತ್ತೆಲ್ಲ ಹುದುಗಿದೆ. ಆಧುನಿಕ ಮಾನವನಲ್ಲಿ ಆದಿಮಾನವತನ ಗುಪ್ತಗಾಮಿನಿಯಾಗಿ ಪ್ರವಹಿಸುತ್ತಿರುವಂತೆ, ಬೀಜದಲ್ಲಿ ವೃಕ್ಷ ಅಡಗಿರುವಂತೆ, ಆಧುನಿಕ ಕಲೆ ವಿಜ್ಞಾನ ಹಾಗೂ ತಾಂತ್ರಿಕ ಜ್ಞಾನಗಳಲ್ಲಿ ಜಾನಪದ ಚೈತನ್ಯ ಸುಪ್ತವಾಗಿರುತ್ತದೆ.

ಜಾನಪದ ಅಭಿವ್ಯಕ್ತಿಗೊಳ್ಳುವ ಎರಡು ಮುಖ್ಯ ಮಾಧ್ಯಮಗಳೆಂದರೆ ಮಾತು ಮತ್ತು ಕೃತಿ. ಪುರಾಣ ಐತಿಹ್ಯ ಕಥೆ, ಗೀತೆಗಾದೆ, ಒಗಟು ಮೊದಲಾದ ಶಾಬ್ದಿಕ ಪ್ರಕಾರಗಳಿಗೆ ಮಾತು ಮಾಧ್ಯಮವಾದರೆ, ನಂಬಿಕೆ ಸಂಪ್ರದಾಯ ಉಪಾಸನೆಗಳಿಗೆ ಶಿಲ್ಪ, ವಾಸ್ತುಶಿಲ್ಪ, ಚಿತ್ರನರ್ತನ, ಆಟ, ಪಾಠ, ಮೊದಲಾದವುಗಳು ಮಾಧ್ಯಮವಾಗುತ್ತದೆ. ಇಂದು ಜಾನಪದ ವಲಯದೊಳಗೆ ಸೇರದ ಜಾಗತಿಕ ಸಂಗತಿಗಳೇ ಇಲ್ಲ. ಈ ಎಲ್ಲ ಸಂಗತಿಗಳ ಮೊತ್ತವನ್ನು ಜಾನಪದ ಸಂಸ್ಕೃತಿಯೆಂದೇ ಕರೆಯುತ್ತೇವೆ.

ಪಶ್ಚಿಮ ಘಟ್ಟಗಳ ಪೂರ್ವ ಮತ್ತು ಪಶ್ಚಿಮ ಇಳಿಜಾರು ಪ್ರದೇಶಗಳನ್ನೊಳಗೊಂಡಿರುವ ಕೊಡಗು ಜಿಲ್ಲೆಯಲ್ಲಿ ಸುಂದರ ಅರಣ್ಯಗಳು, ಸಸ್ಯವರ್ಗಗಳಿಂದ ಕೂಡಿದ ಕಣಿವೆಗಳ ಸಂಪದ್ಭರಿತ ನೆಲ, ಆಕಾಶದೆತ್ತರ ತಲೆಯೆತ್ತಿ ನಿಂತಿರುವಂತೆ ಕಾಣುವ ಬೆಟ್ಟಗುಡ್ಡಗಳ ಸಾಲುಗಳುಳ್ಳ ಪ್ರದೇಶಗಳು ಮತ್ತು ಎತ್ತ ನೋಡಿದರೂ ಒತ್ತೊತ್ತಾದ ಕಡಿದಾದ ಬೆಟ್ಟಗಳ ನಡುವೆ ಆಳ ಕಣಿವೆಗಳಲ್ಲಿ ಹಸಿರು ಬಯಲು ಮತ್ತು ಹುಲ್ಲುಗಾವಲುಗಳು ಕಂಡುಬರುತ್ತವೆ. ಪರ್ವತ ಶಿಖರಗಳು ಹುಲ್ಲಿನಿಂದಲೂ ಕಣಿವೆಗಳು ಮತ್ತು ಬೆಟ್ಟದ ಇಳಿಜಾರುಗಳು ನಿತ್ಯಹರಿದ್ವರ್ಣದ ಕಾಡುಗಳಿಂದ ಕೂಡಿ ಇಡೀ ಕೊಡಗು ನಿಸರ್ಗ ಸಿರಿಯ ತವರೆನಿಸಿದೆ.

ಬ್ರಿಟಿಷರು ಕೊಡಗನ್ನು ತಮ್ಮ ಅಧೀನಕ್ಕೆ ಪಡೆದ ಮೇಲೆ ಈ ಜಿಲ್ಲೆಯ ಜನಜೀವನದ ಬಗ್ಗೆ ಹೆಚ್ಚಿನ ಮಾಹಿತಿ ದಾಖಲೆಯಾಗುವಂತಾಯಿತು. ಇಲ್ಲಿ ಕಾಡಿನಲ್ಲಿಯೇ ವಾಸಮಾಡುವ ನಾಗರಿಕತೆಯ ಸಂಪರ್ಕಕ್ಕೆ ಇತ್ತೀಚೆಗೆ ತಮ್ಮನ್ನು ಒಡ್ಡಿಕೊಳ್ಳುವ ಜನಾಂಗ ಒಂದೆಡೆ ಇದ್ದರೆ ಇನ್ನೊಂದೆಡೆ ನಾಗರಿಕತೆಯ ಎಲ್ಲಾ ಸೌಲಭ್ಯಗಳನ್ನು ಅನುಭವಿಸುವ ಜನಸಮುದಾಯದವರು ಇದ್ದಾರೆ. ಅನೇಕ ಬುಡಕಟ್ಟು ಜನರು, ಅವರಲ್ಲಿಯೇ ಕಾಣಬರುವ ವಿವಿಧ ಪ್ರಭೇದಗಳು, ಹೊರಗಿನಿಂದ ಬಂದು ಇಲ್ಲಿನ ಆಚಾರ ವಿಚಾರಗಳನ್ನು ಅಳವಡಿಸಿಕೊಂಡ ಜನಾಂಗಗಳು ಮತ್ತು ಹೊರಗಿನಿಂದ ಬಂದು ಇಲ್ಲಿ ನೆಲೆಸಿ ತಮ್ಮತನವನ್ನು ಉಳಿಸಿಕೊಂಡಿರುವ ಜನಾಂಗಗಳೆಲ್ಲವನ್ನು ಇಲ್ಲಿ ಕಾಣಬಹುದಾಗಿದೆ. ಇವರೆಲ್ಲರೂ ತಮ್ಮದೇ ಆದ ಸಾಂಸ್ಕೃತಿಕ ಅನನ್ಯತೆಯನ್ನು ಜಾನಪದ ಅನನ್ಯತೆಯನ್ನು ಹೊಂದಿದ್ದಾರೆ.

ಈ ನಿಟ್ಟಿನಲ್ಲಿ ಕೊಡಗಿನಲ್ಲಿರುವ ಕೆಲವು ಸಮುದಾಯದವರ ಜಾನಪದ ಸಂಸ್ಕೃತಿಯನ್ನು ಪರಿಚಯಿಸುವ ಪ್ರಯತ್ನ ನನ್ನದಾಗಿದೆ. ದಕ್ಷಿಣ ಕೊಡಗಿನಲ್ಲಿ ಅಲ್ಲಲ್ಲೇ ಹರಡಿಕೊಂಡಿರುವ ಜನಾಂಗ ಜೇನು ಕುರುಬರದು. ಇವರು ಬಿದಿರಿನಲ್ಲಿ ಮನೆಗಳನ್ನು ಕಟ್ಟುತ್ತಾರೆ. ದೈವ ಕಾರ್ಯವನ್ನೆಲ್ಲಾ 'ದೇವರ ಗುಡ್ಡ ಮತ್ತು ಭೂಮಿಯವನು' ಎಂಬ ಹಿರಿಯರ ಮಾರ್ಗದರ್ಶನದಲ್ಲಿ ನಡೆಸುತ್ತಾರೆ. ಇವರು ಮನೆಯಲ್ಲಿ ಪೂಜೆ ಮಾಡುವ ದೇವರು ಕಾರಣ

ದೇವರು. ಹುತ್ತರಿ, ಕೈಲು ಮುಹೂರ್ತ ಮುಂತಾದ ಹಬ್ಬಗಳನ್ನು ಆಚರಿಸುತ್ತಾರೆ. ಆದರೆ ಇವರ ವಿಶಿಷ್ಟವಾದ ಹಬ್ಬವೆಂದರೆ 'ಬುಂಡೆ ಹಬ್ಬ'. ಈ ದಿನ ಗಂಡಸರು ವಿವಿಧ ವೇಷಗಳನ್ನು ಧರಿಸಿ ಗುಂಪು ಗುಂಪಾಗಿ ಗೋಣಿಕೊಪ್ಪಲು, ಪೊನ್ನಂಪೇಟೆಗಳಲ್ಲಿ ಸುತ್ತಿ ಹಣ ವಸೂಲು ಮಾಡುತ್ತಾರೆ. ಜೇನಿನಲ್ಲಿ ಮಸಿ ಬೆರಸಿ, ಮೈಗೆಲ್ಲಾ ಮಸಿ ಬಳಿದುಕೊಂಡು ಮೊದಲೇ ಕಾಳದೇಹಿಗಳಾಗಿದ್ದವರು ಕರಾಳದೇಹಿಗಳಾಗಿ ವಿಜೃಂಭಿಸುತ್ತಾರೆ. ಸೊಂಟಕ್ಕೆ ಸೊಪ್ಪನ್ನು ಕಟ್ಟಿಕೊಂಡು, ಹೊನ್ನೆ ಹೂವನ್ನು ಮುಡಿದು ಉರಿಯುತ್ತಿರುವ ಹಣತೆಯ ತಟ್ಟೆಯನ್ನು ಹಿಡಿದು ಉದ್ದನೆಯ ಕೈಚೀಲ, ಸೋರೆ ಬುರುಡೆ, ಕೆಲವೊಮ್ಮೆ ಕೈಯಲ್ಲಿ ಕೊಳಲನ್ನು ಹಿಡಿದು ಬಹುವೇಗದ ಧಾಟಿಯಲ್ಲಿ ಅಶ್ಲೀಲವಾದ ಹಾಡನ್ನು ಹಾಡುತ್ತಾ ಜಾತ್ರೆಯಲ್ಲಿ ಉತ್ಸಾಹದಿಂದ ಪಾಲ್ಗೊಳ್ಳುವ ಈ ಭಕ್ತ ವೃಂದವನ್ನು ಕಂಡತಕ್ಷಣ ತಟ್ಟೆಗೆ ಹಣ ಹಾಕಿ ಸುಶಿಕ್ಷಿತರು ಕಳಚಿಕೊಳ್ಳುತ್ತಾರೆ. ಇತ್ತೀಚೆಗೆ ಆಧುನಿಕ ವೇಷಭೂಷಣಗಳು ಇವರ ಸಾಂಸ್ಕೃತಿಕ ಚಿಂತನೆಯನ್ನೇ ಬದಲಾಯಿಸಿದೆ.

ಎಣ್ಣೆಕಪ್ಪಿನ, ಗುಂಗುರು ಕೂದಲಿನ, ಕುಳ್ಳಗಿರುವ ಎರವರು ಮಾತನಾಡುವ ಭಾಷೆ ಮಲಯಾಳದ ಉಪಭಾಷೆಗಳಲ್ಲೊಂದು. ಇವರ ಗುಂಪಿನ ಯಜಮಾನನ್ನು 'ಮೂಪಾ' ಎಂದು ಕರೆಯುತ್ತಾರೆ. ಜಡ ವಸ್ತುಗಳಲ್ಲಿ ಚೇತನವನ್ನು ಪೂಜಿಸುವ ಪದ್ಧತಿ ಎರವರದು. ಮಾಟ ಮಂತ್ರಗಳಲ್ಲಿ ಇವರಿಗೆ ಬಹುನಂಬಿಕೆ. ಇವರ ಜಾನಪದ ನೃತ್ಯ 'ಎರಕದ ಕುಣಿತ'. ಇದು ಸುಗ್ಗಿಯ ಕುಣಿತ. ಈ ಕುಣಿತಕ್ಕೆ ಯಾವ ಜಾಗವಾದರೂ ಸರಿ, ಯಾವ ದಿನವಾದರೂ ಸರಿ, ಅವರು ವಾಸ ಮಾಡುವ ಜಾಗದಲ್ಲಿ ದಿನಾ ರಾತ್ರಿ ಹೊತ್ತು ಬೆಂಕಿಯ ಸುತ್ತು ಕುಣಿಯುವುದು ಸಾಮಾನ್ಯ ದೃಶ್ಯ. ವಯಸ್ಸಿನ ಅಂತರವಿಲ್ಲದೆ ಹೆಣ್ಣು ಗಂಡೆಂಬ ಆತಂಕವಿಲ್ಲದೆ ಕುಣಿಯುವ ಮನಸ್ಸಿರುವ, ತಾಕತ್ತಿರುವ ಎಲ್ಲರೂ ಪಾಲ್ಗೊಳ್ಳುತ್ತಾರೆ. ಕುಣಿತಕ್ಕೆ ವೇಷ-ಭೂಷಣಗಳ ದೈವ ನಿಯಮಗಳ ಕಟ್ಟೇನೂ ಇಲ್ಲ. ಕುಣಿತಕ್ಕೆ ದುಡಿ ಮತ್ತು ಚೀನೀ ವಾದ್ಯಗಳನ್ನು ಬಳಸುತ್ತಾರೆ.

ಮಲೆಯನ್, ಕುಡಿಯನ್, ಗೌಡರ್, ಕುಡಿಯ, ಮಲೆಕುಡಿಯ ಇತ್ಯಾದಿ ಹೆಸರುಗಳಿಂದ ಗುರುತಿಸಲ್ಪಡುವ ಈ ಜನಾಂಗ ಗಿರಿ ನಿವಾಸಿಗಳು. ಹಿಂದಿನ ಕಾಲದಲ್ಲಿ 'ಬಳಿ' ಪದ್ಧತಿಯನ್ನು ಕಟ್ಟು ನಿಟ್ಟಾಗಿ ಅನುಸರಿಸುತ್ತಿದ್ದರು. ಕೊಡಗಿನ ಮಲೆಕುಡಿಯರಲ್ಲಿ ಕೊಡವ ಪದ್ಧತಿ ಕಾಣುತ್ತದೆ. ತುಳು, ಕೊಡವ ಮತ್ತು ಕನ್ನಡ ಭಾಷೆ ಮಾತನಾಡುತ್ತಾರೆ. ಇವರ ಪ್ರಧಾನ ವೃತ್ತಿ ಬಗನಿ ಮರದಿಂದ ಹೆಂಡ ಇಳಿಸುವುದು. ಈ ಕಾರ್ಯವನ್ನು ಮಹಿಳೆಯರು ಮಾಡುತ್ತಾರೆ. ಪುರುಷರು ಕೃಷಿಕರು. ಇವರ ವೃತ್ತಿ ಜೇನು ಸಂಗ್ರಹಣೆ. ಬೆತ್ತ, ಓಟೆ, ಬಿದಿರುಗಳಿಂದ ಹೆಣಿಗೆಯನ್ನು ಮಾಡುತ್ತಾರೆ. ಇವರ ಹುಟ್ಟು – ಮದುವೆ – ಸಾವುಗಳು ವಿಶೇಷ ಆಚರಣೆಯನ್ನು ಹೊಂದಿರುವಂಥದ್ದು.

ಕೊಡಗಿನ ಗೌಡರ ಜಾನಪದವನ್ನು ವಿಶೇಷವಾಗಿ ಗಮನಿಸಿದಾಗ ಇಲ್ಲಿ ಅರೆಭಾಷೆಯಲ್ಲಿ ಶಿಶುಪ್ರಾಸಗಳು ಕ್ವಚಿತ್ತಾಗಿ ಕಂಡುಬರುತ್ತವೆ. ಇವು ಮಕ್ಕಳ ಮೂಲಕ ಉಳಿದು ಬಂದರೂ ಅನೇಕ ಬಾರಿ ಅವು ಯುವ ಮನೋಧರ್ಮವನ್ನು ಪ್ರತಿನಿಧಿಸುತ್ತದೆ. ಪ್ರಾಯಸ್ಥರ ಅನುಭವಗಳ ಹಿನ್ನೆಲೆಯಲ್ಲಿ ಗಂಭೀರ ಅರ್ಥವನ್ನು ತಮ್ಮೊಳಗೆ ಹುದುಗಿಸಿಕೊಂಡಿರುತ್ತದೆ. ಮದುವೆ ಹಾಡುಗಳನ್ನು ಸೋಬಾನೆ ಹಾಡುಗಳೆಂದು ಕರೆಯುವರು. ಎರಡು ಜೀವಗಳು ಸತಿ-ಪತಿಯಾಗುವಲ್ಲಿ ಈ ಹಾಡುಗಳು ಮುಖ್ಯ ಸಾಧನ. ಮದುವೆಯಲ್ಲಿ ಯಾವುದೇ ಶಾಸ್ತ್ರಾಚರಣೆಯೂ ತಪ್ಪಿಹೋಗದಂತೆ ಮೊದಲಿನಿಂದ ಕೊನೆಯವರೆಗೂ ಒಂದೊಂದು ಶಾಸ್ತ್ರಕ್ಕೂ ಹಾಡಿರುತ್ತದೆ. ಹಾಡುಗಳು ಶಿವ – ಪಾರ್ವತಿ, ಕೃಷ್ಣ – ರುಕ್ಮಿಣಿ, ರಾಮ – ಸೀತೆಯರಿಗೆ ಸಂಬಂಧಿಸಿದರೂ ಮದುವೆಯಾಗುತ್ತಿರುವ ಗಂಡು – ಹೆಣ್ಣು ಅಷ್ಟೇ ಮುಖ್ಯವೆಂಬ ಭಾವನೆಯನ್ನು ಹಾಡುಗಳಲ್ಲಿ ಮೂಡಿಸುತ್ತಾರೆ. ಗೌಡ ಜನಪದ ಕಥೆಗಳಲ್ಲಿ ನೀತಿಯ ಬಗ್ಗೆ ಒತ್ತು ಇರುವುದು ಮುಖ್ಯವಾಗಿದೆ. ಇವರ ಜನಪದ ವೈದ್ಯದಲ್ಲಿ ನೈಸರ್ಗಿಕ ಜನಪದ ವೈದ್ಯ ಮತ್ತು ಮಾಟ ಮಂತ್ರದ ವೈದ್ಯ ಎಂಬ ಎರಡು

ಪ್ರಭೇದಗಳನ್ನು ಗುರುತಿಸಬಹುದು. ಬೇಟೆ ಜಾನಪದದಲ್ಲಿ ಸಂರಕ್ಷಣಾರ್ಥ ಬೇಟೆ, ಸಂರಕ್ಷಣೆ ಮತ್ತು ಆಹಾರಕ್ಕಾಗಿ ಬೇಟೆಯನ್ನು ಗಮನಿಸಬಹುದು. 'ಐನ್ ಮನೆ'ಯು ಗೌಡರ ಜೀವನಾದರ್ಶ ಮತ್ತು ಸಂಸ್ಕೃತಿಗಳ ಪ್ರತೀಕಗಳ ಪ್ರತೀಕ. ಹಬ್ಬಗಳಾದ ಕೆಡ್ಡಸ, ಕೈಲುಮುಹೂರ್ತ, ಹುತ್ತರಿಗಳು ಜಾನಪದ ಸೊಗಡಿನ ವಿವಿಧ ರೂಪಗಳು.

ಕೊಡಗಿನಲ್ಲಿರುವ ಇನ್ನೊಂದು ಜನಸಮುದಾಯದಲ್ಲಿ ಪ್ರಮುಖರಾದವರು ಕೊಡವರು. ಇವರ ಸಾಮಾಜಿಕ ಕೇಂದ್ರ ವಕ್ಕ. ಕುಟುಂಬದ ಮೂಲ ಪುರುಷನನ್ನು 'ಕಾರೋಣ' ಎಂದು ಕರೆಯುತ್ತಾರೆ. ಇವರ ವಿವಾಹಗಳನ್ನು ನಾಲ್ಕು ಗುಂಪುಗಳಾಗಿ ಗಮನಿಸಬಹುದು. ಕನ್ನಿಮಂಗಲ, ಕೂಡಾವಳಿ ಮಂಗಲ, ಒಕ್ಕಪರಿಜೆ ಮತ್ತು ಮಕ್ಕಪರಿಜೆ. ಇವರ ಐನ್‌ಮನೆ ಮತ್ತು ಕೈಮಡಗಳಿಗೆ ವಿಶೇಷವಾದ ಸ್ಥಾನವಿದೆ.

ಉಮ್ಮತ್ತಾಟ್, ಬೊಳ್‌ಕಾಟ್, ಕೊಂಬಾಟ್, ವಾಲಗತ್ತಾಟ್, ಪೀಲಿಯಾಟ್, ಕೋಲಾಟ್, ಚೇರಿಯಾಟ್, ರೆಕ್ಕೆಯಾಟ್, ಕೋಲ್‌ಕಳಿ, ಪರಿಯಕಳಿ, ಪಡೆಕಳಿ, ಕಪ್ಪೆಯಾಟ್, ಪಾಂಬಾಟ್ ಮುಂತಾದ ಕೊಡವ ಪುರುಷರ ಕುಣಿತಗಳು. ತುಮ್ಮತ್ತಾಟ್, ತಳಿಯತ್ತಾಟ್, ಕುಮ್ಮಚ್ಚಿಯಾಟ್ ಮೊದಲಾದ ಕುಡಿಯರ ಕುಣಿತಗಳು. ಯರವ ಗಂಡಸರ ಯರವಾಟ್, ಹೆಂಗಸರ ಮಂದಿಯಾಟ್ ಸುಗ್ಗಿಯ ಕುಣಿತ, ಪಣಿಯ ಗಂಡಗ ಕುಣಿತ, ಮಾಪಿಳ್ಳೆಯರ ದಪ್ಪು ಕುಣಿತ, ಮಲಿಯರ ಫಣಿಕರ ಭೂತ ಕುಣಿತ ಮುಂತಾದ ಜಾನಪದ ನೃತ್ಯಗಳು ಕೊಡಗಿನ ಜಾನಪದದ ವಿಶಿಷ್ಟತೆ.

ಹೀಗೆ ಕೊಡಗು ಹಲವು ಜಾತಿ ಜನಾಂಗ ಪಂಗಡಗಳ ಒಂದು ಮೊತ್ತವಾಗಿದ್ದು ವಿವಿಧ ಜಾನಪದ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ. ಪ್ರತೀಯೊಂದು ಜನಸಮುದಾಯವು ತನ್ನದೇ ಆದ ರೀತಿಯಲ್ಲಿ ವಾರ್ಷಿಕಾವರ್ತನ ಮತ್ತು ಜೀವನಾವರ್ತನಕ್ಕೆ ಸ್ಪಂದಿಸುತ್ತಾ ಹೋಗುತ್ತದೆ. ಈ ಆವರ್ತನಗಳು ಜನಪದರ ಬದುಕನ್ನು ರೂಪಿಸುವ ತತ್ವಗಳಂತೆ ಕಾರ್ಯನಿರ್ವಹಿಸುತ್ತದೆ. ನೈತಿಕ ಮೌಲ್ಯಗಳನ್ನು ರೂಪಿಸುತ್ತದೆ. ಜಾನಪದವು ಕೇವಲ ಮನರಂಜನೆಯ ಉದ್ದೇಶವನ್ನಷ್ಟೇ ಹೊಂದಿರದೆ ಆ ಮೂಲಕ ಒಂದು ಸಾಂಸ್ಕೃತಿಕ ಸಂಬಂಧಗಳನ್ನು ಬೆಸೆಯುತ್ತದೆ. ಕೊಡಗಿನ ಜಾನಪದ ನೃತ್ಯಗಳು ಯಾವುದೋ ಒಂದು ನಿರ್ದಿಷ್ಟ ಸಂದರ್ಭದಲ್ಲಿ ಹುಟ್ಟಿಕೊಂಡಿದ್ದು ಆ ಸಂದರ್ಭದ ಅನನ್ಯತೆಯನ್ನು ಸಾರುತ್ತದೆ. ಹಾಗೆಯೇ ಹಬ್ಬಗಳು ಆಚರಣೆಯ ಪದ್ಧತಿ ಪರಂಪರೆಗಳು ಜಾನಪದದ ಸೊಗಸನ್ನು ಎತ್ತಿ ಹಿಡಿಯುತ್ತದೆ.

ಕೊಡಗಿನಲ್ಲಿ ಎರಡು ವರ್ಗದ ಜನರನ್ನು ಗಮನಿಸಬಹುದು. ಒಂದು ಕೊಡಗಿನ ಮೂಲ ನಿವಾಸಿಗಳು ಮತ್ತು ಹೊರಗಿನಿಂದ ಕೊಡಗಿಗೆ ಬಂದು ನೆಲೆಸಿರುವವರು. ಈ ಎರಡು ವರ್ಗದ ಜನಸಮುದಾಯಗಳು ತಮ್ಮ ಮೂಲ ಸಂಸ್ಕೃತಿಯೊಂದಿಗೆ ಇಲ್ಲಿನ ಜನಸಮುದಾಯದೊಂದಿಗೆ ಬೆರೆತು ಪರಸ್ಪರ ಸಾಂಸ್ಕೃತಿಕ ವಿನಿಮಯದಲ್ಲಿ ತಮಗರಿವಿಲ್ಲದಂತೆ ತೊಡಗಿಕೊಂಡಿದ್ದಾರೆ. ಹೀಗಿದ್ದು ಕೊಡಗಿನ ಜಾನಪದದಲ್ಲಿ ಸಂಸ್ಕೃತಿಗಳ ಮಿಶ್ರಿತ ಅಂಶಗಳನ್ನು ಗುರುತಿಸಬಹುದಾಗಿದೆ.

ಕೆರೆಗೆ ಹಾರ ಕವನ ಜನಪದ ಕಾವ್ಯ ಪ್ರಪಂಚದಲ್ಲಿಯೇ ತನ್ನ ವಿನೂತನ ವಸ್ತುವಿನಿಂದ ಕಥೆಯನ್ನು ಹಂತ ಹಂತವಾಗಿ ಸಾಲಿನಿಂದ ಸಾಲಿಗೆ ಕುತೂಹಲಪೂರ್ಣವಾಗಿ ಬೆಳೆಸಿಕೊಂಡು ಬರುವ ಶೈಲಿಯಿಂದ ಭಾಗೀರಥಿಯ ಒಟ್ಟು-ನೋವನ್ನು ಪದರ-ಪದರವಾಗಿ ಬಿಡಿಸಿ ತೋರಿಸುವ ಕುಶಲತೆಯಿಂದ, ಭಾಗೀರಥಿಯ ಗಂಡ ತನ್ನನ್ನೂ ಕೆರೆಗೆ ಆಹಾರವನ್ನಾಗಿಸಿಕೊಂಡ ಅದಮ್ಯ ಒಲವಿನ ಪ್ರದರ್ಶನದಿಂದ ನಾಡಿನ ಸಹೃದಯರನ್ನು ಸೆರೆಹಿಡಿದಿದೆ. ಸೋಮವಾರಪೇಟೆ ತಾಲೂಕಿಗೆ ಸೇರಿದ ಹೊನ್ನಮ್ಮನ ಕೆರೆಯ ಐತಿಹ್ಯಕ್ಕೂ, ಕೆರೆಗೆ ಹಾರ ಕಥನ ಕವನದ ವರ್ಣನೆಗೂ ಸಾಮ್ಯವಿರುವುದರಿಂದ ಕನ್ನಡ ಕಾವ್ಯ ಪ್ರಪಂಚಕ್ಕೆ

ಕೊಡಗು ನೀಡಿದ ಅತ್ಯುತ್ತಮ ಕೊಡುಗೆ ಇದಾಗಿದೆ.

"ಕೊಡಗು ತನ್ನ ಪ್ರಾಕೃತಿಕ ಸೌಂದರ್ಯದಿಂದ, ತನ್ನ ಗತವೈಭವದ ಇತಿಹಾಸದಿಂದ ತನ್ನ ಬೆಟ್ಟ – ಗುಡ್ಡಗಳಲ್ಲಿ ಹರಡಿ ಹೋಗಿರುವ ಮೂಲ ನಿವಾಸಿಗಳು ವೈವಿಧ್ಯಮಯ ಬದುಕಿನಿಂದ ಶ್ರೀಮಂತವಾಗಿದೆ". ಜಾನಪದವು ಸಮಾಜವೊಂದರ ಸಂಸ್ಕೃತಿಯ ಭಾಗಮಾತ್ರ. ಇದನ್ನು ಸಂರಕ್ಷಿಸುವುದಕ್ಕಾಗಿ ಸಮಾಜವೊಂದರ ರಚನೆಯನ್ನು ಯಥಾವತ್ತಾಗಿ ಉಳಿಸಲು ಮಾಡುವ ಪ್ರಯತ್ನ ವ್ಯರ್ಥ. ಅಂದರೆ ಸಮಾಜದ ರಚನೆಯೊಂದು ಜಾನಪದವನ್ನೂ ಒಳಗೊಂಡು ಹೆಚ್ಚು ವ್ಯಾಪಕವಾದ ಆರ್ಥಿಕ ಸಾಮಾಜಿಕ ಸ್ವರೂಪದ್ದಾಗಿರಬೇಕಾಗುತ್ತದೆ. ಈ ದಿಶೆಯಲ್ಲಿ ಕೊಡಗಿನ ಜಾನಪದವು ವೈವಿಧ್ಯತೆಯಿಂದ ಕೂಡಿದ್ದು ಕಾಲಕಾಲಕ್ಕೆ ಹೊಸ ಚಿಂತನೆಗಳನ್ನು ರೂಪವನ್ನು, ಪಡೆದು ವಿಕಸಿಸುತ್ತಾ ಹೋದರೂ ತನ್ನದೇ ಆದ ಅನನ್ಯತೆಯನ್ನು ಉಳಿಸಿಕೊಂಡಿದೆ.

ಸಮರ ವೀರ

ತ್ಯಾಗ ಕಾರ್ಯದ ದಿವ್ಯಚೇತನ
ಕಣ್ಮರೆಯಾದರು ಅರೆಕ್ಷಣದಲಿ
ನೀಲಿ ಬಾನಲಿ ಮಿರ್ರನೆ ಮಿಂಚಿ
ಮಿರುಗುವ ತೆರದಲಿ
ಅಮರರಾದರು ಶೂರ ಕಲಿ ಅಪ್ಪಯ್ಯಗೌಡರು
ಕೊಡಗಿ ಪ್ರತಿಜನರ ಮನಮನೆಯಲಿ

ವೀರ ಕಲಿತನ ಹೆಚ್ಚಿಸಿದ
ಆ ದಿವ್ಯಶಕ್ತಿಯ ಇಂಧನ
ನಾಡಿನ ಮಣ್ಣಿನ ಘನತೆಯ
ಉಳಿಸಿ ಬೆಳೆಸಿತು ಆದಿನ

ಸ್ವತಂತ್ರ ಮಂತ್ರವ ಸಾರಿ
ಹೇಳಿದ ಅಪ್ಪಯ್ಯಗೌಡರ
ಹೆಸರು ಅಳಿಯದಿರಲಿ
ದೇಶದೆಲ್ಲೆಡೆ ನಿರಂತರ

ದೇಶದೆಲ್ಲೆಡೆ ಹರಡಲಿ
ನಿಮ್ಮ ಸ್ವತಂತ್ರ ಮಂತ್ರ
ಯುವ ಜನತೆಗೆ ತುಂಬಲಿ
ಕೆಚ್ಚೆದೆಯ ವೀರ ತಂತ್ರ

ಕೊಡಗಿನ ವೀರಪುತ್ರನೆ
ನಿಮಗಿದೋ ಪುಷ್ಪಾಂಜಲಿ
ನಿಮ್ಮ ತ್ಯಾಗ ಬಲಿದಾನಕ್ಕೆ
ನಮನ ಸುರಿಸಿತು ಅಂದು
ಹೆಮ್ಮೆಯ ಭಾಷ್ಪಾಂಜಲಿ

ರಚನೆ : ಪುದಿಯನೆರವನ ರೇವತಿ ರಮೇಶ
ಮಡಿಕೇರಿ

ಸಾಕು ಪ್ರಾಣಿಗಳೊಂದಿಗಿನ ಒಡನಾಟ



✍ ಕು॥ ಕುದುಕುಳಿ ಮಿಲನ ಭರತ್
ಭಾಗಮಂಡಲ

ಮಾನವ ಸಂಘ ಜೀವಿ. ಆದಿ ಕಾಲದಿಂದಲೂ, ಅನಾದಿ ಕಾಲದಿಂದಲೂ ಈ ಮಾತು ಸತ್ಯವಾಗುತ್ತಲೇ ಬರುತ್ತಿದೆ. ಸಿಂಧೂ ನಾಗರಿಕತೆಯಿಂದ ವೇದಗಳ ಕಾಲ – ಮಧ್ಯಯುಗದಿಂದ ಆಧುನಿಕ ಕಾಲಗಳವರೆಗೂ ಮಾನವ ಪರಸ್ಪರ ಅವಲಂಬಿತವಾಗಿ, ಸಾಮಾಜಿಕವಾಗಿ ಪರಸ್ಪರರೊಂದಿಗೆ ಬೆರೆಯುವ ಪ್ರಯತ್ನವನ್ನು ನಡೆಸುತ್ತಲೇ ಬಂದಿದ್ದಾನೆ. ತನ್ನ ಸಂವೇದನೆಗಳನ್ನು ಅರಿಯುವ ಶಕ್ತಿಯುಳ್ಳ ಹಾಗೂ ಪ್ರತಿಸ್ಪಂದನೆ ನೀಡಬಲ್ಲ ಮತ್ತೊಬ್ಬನೊಂದಿಗಿನ ಈ ಬೆರಕೆ ಸಹಜವೆಂದೇ ಕಾಣುತ್ತದೆ. ಆದರೆ ಬೌದ್ಧಿಕವಾಗಿಯೂ, ಭೌತಿಕವಾಗಿಯೂ ಭಿನ್ನತೆಯನ್ನು ಹೊಂದಿರುವ ಪ್ರಾಣಿಗಳೊಂದಿಗಿನ ಸಂಬಂಧ – ಬದುಕು – ಬೆಳವಣಿಗೆ ಆಶ್ಚರ್ಯವೆಂಬಂತೆ ತೋರುತ್ತದೆ.

ಪುರಾತನ ಕಾಲವನ್ನು ನೋಡಿದಾಗ ಹರಪ್ಪ ಮಹೆಂಜೋದಾರಗಳ ಗೂಳಿಗಳ ಚಿತ್ರಣಗಳು, ಅವರು ಗೂಳಿಗಳನ್ನು ಬೇಸಾಯ, ವ್ಯವಸಾಯ ಕಾರಣಕ್ಕಾಗಿ ಸಾಕುತ್ತಿದ್ದಿರಬಹುದು ಎಂಬ ನಿಲುವನ್ನು ನೀಡಿದರೆ, ವೇದಗಳ ಕಾಲದ ಆರ್ಯನ್ನರು ಉಣ್ಣೆಗಳಿಗಾಗಿ ಕುರಿ – ಆಡುಗಳನ್ನು ಸಾಕುತ್ತಿದ್ದುದು ಸ್ಪಷ್ಟವಾಗಿದೆ. ಅಚ್ಚರಿ ಎಂಬಂತೆ ವೇದಗಳ ಕಾಲದಲ್ಲಿ ಬಹಳಷ್ಟು ಯುದ್ಧ ಕಾಳಗಗಳು, ದನ – ಆಕಳುಗಳನ್ನು ವಶಪಡಿಸಿಕೊಳ್ಳುವುದಕ್ಕೋಸ್ಕರವಾಗಿಯೇ ನಡೆಯುತ್ತಿದ್ದವು. ಹಾಗೂ ಜನರ ಸಿರಿವಂತಿಕೆಯನ್ನು ಅವರ ಪಶು ಸಂಪತ್ತಿನ ಮೇಲೆಯೇ ಅಳೆಯಲಾಗುತ್ತಿತ್ತು. ಹೈನುಗಾರಿಕೆಯೆಂಬುದು ವ್ಯಾವಹಾರಿಕವಾಗಿಯೂ – ಸಾಮಾಜಿಕವಾಗಿಯೂ ಮಹತ್ವದ ಸ್ಥಾನವನ್ನು ಪಡೆದಿತ್ತೆಂದೇ ಹೇಳಬಹುದು. ಹಾಗೂ ಆನೆಗಳನ್ನು ಪಳಗಿಸಿ ಸಾಕುಪ್ರಾಣಿಗಳನ್ನಾಗಿಸುತ್ತಿದ್ದ ಸಣ್ಣ ಸುಳಿವನ್ನು ಇತಿಹಾಸ ನೀಡುತ್ತದೆ.

ಹೀಗೆ ಗೂಳಿ, ಕುರಿ, ಆಡು, ದನ–ಕರುಗಳ ಮೂಲಕ ಪ್ರಾರಂಭವಾದ ಮಾನವನ ಸಂಘ ಜೀವನದ ಆಸಕ್ತಿ ಇಂದು ಮೊಲ, ನಾಯಿ, ಬೆಕ್ಕುಗಳಿಂದ ಹಿಡಿದು ಮೀನಿನಂತಹ ಜಲಚರಗಳವರೆಗೂ ಹರಿದು ಬರುತ್ತಿದೆ.

ಚೀನಾದಲ್ಲಿ ಒಂದು ನಾಣ್ನುಡಿ ಇದೆ: "ಎಲ್ಲೆಲ್ಲಿ ನೀರಿದೆಯೋ ಅಲ್ಲೆಲ್ಲಾ ಮೀನಿರಬೇಕು". ಹಿಂದೆ ಅಲ್ಲಿನ ರಾಜರುಗಳನ್ನು ಯಾರಾದರೂ ಭೇಟಿಗಾಗಿ ಹೋದಾಗ ಅಥವಾ ಅಲ್ಲಿಯ ರಾಜರು ಯಾರನ್ನಾದರೂ ಭೇಟಿ ಮಾಡಲು ಹೋದರೆ ಗೋಲ್ಡ್ ಫಿಶ್‌ಗಳನ್ನು ಉಡುಗೊರೆಯಾಗಿ ಕೊಟ್ಟಂತಹ ಹಲವಾರು ಸನ್ನಿವೇಶಗಳನ್ನು ನಾವು ಓದಿರುತ್ತೇವೆ. ಹಾಗಾಗಿ ಅಲಂಕಾರಿಕ ಮೀನು ಸಾಕಾಣೆಯೂ ಕೂಡ ಒಂದು ಹವ್ಯಾಸವಾಗಿ ಬೆಳೆದಿತ್ತು. ಇಂದಿಗೂ ಬೆಳೆಯುತ್ತಾ ಬರುತ್ತಿರುವುದು ಆಕರ್ಷಕ ವಿಷಯ.

ಆಕರ್ಷಕ ಏಕೆಂದರೆ ಜಲಚರಗಳನ್ನೇ ಹವ್ಯಾಸಕ್ಕಾಗಿ ಮನೆಗಳಲ್ಲಿ ನಮ್ಮ ಆವಾಸಕ್ಕಿಂತ ಭಿನ್ನವಾದ, ಕೃತಕ ಆವಾಸ ಸ್ಥಾನವನ್ನು ಸೃಷ್ಟಿಸಿ ಸಾಕುವುದು ಮಾನವನ ಕುತೂಹಲಕಾರಿ ಆಸಕ್ತಿಗೆ ಹಿಡಿದ ಕೈಗನ್ನಡಿ. ನೀವೆಂದಾದರೂ ಅಲಂಕಾರಿಕ ಮೀನುಗಳೊಂದಿಗೆ ಆತ್ಮೀಯ ಒಡನಾಟ ಇಟ್ಟುಕೊಂಡಿದ್ದೀರಾ? ಇಲ್ಲವಾದರೆ

ಒಮ್ಮೆ ಪ್ರಯತ್ನಿಸಿ. ಮೀನುಗಳೂ ಕೂಡ ನಿಮಗೆ ಪ್ರತಿಕ್ರಿಯಿಸಬಲ್ಲವು.

ಪ್ರತಿನಿತ್ಯ ನಿಗದಿತ ಸಮಯಕ್ಕೆ ಆಹಾರ ಕೊಡುವ ರೀತಿಯನ್ನು ಪಾಲಿಸಿಕೊಳ್ಳಿ. ಸ್ವಲ್ಪ ಸಮಯದ ನಂತರ ಅವುಗಳೇ ನಿಮ್ಮ ಆಹಾರಕ್ಕೆ ನಿಗದಿತ ಸಮಯಕ್ಕೆ ನೀರ ಮೇಲೆ ಕಾಯುತ್ತಿರುತ್ತವೆ. ನೀರಿನ ಮೇಲೆ ಚಿಟಿಕೆ ಹಾಕುತ್ತ ಇರಿ. ಕೆಲವು ದಿನಗಳ ನಂತರ ನಿಮ್ಮ ಚಿಟಿಕೆಗೆ ಪ್ರತಿಕ್ರಿಯೆ ನೀಡಲು ಪ್ರಾರಂಭಿಸುತ್ತವೆ. ಮೀನುಗಳೂ ಸಂಗೀತ ಆಲಿಸುತ್ತವಾ? ಅದನ್ನು ಒಮ್ಮೆ ಪ್ರಯತ್ನಿಸಿ. ನಿಮ್ಮ ಮೀನು ತೊಟ್ಟಿಯ ಬಳಿ ಒಂದಿಷ್ಟು ಹೊತ್ತು ಹಾಡು ಗುನುಗುತ್ತಾ ಇರಿ, ಪ್ರತೀ ದಿನವೂ ಸ್ವಲ್ಪ ದಿನಗಳಲ್ಲೆ ಸ್ತಬ್ದವಾಗಿ ನಿಮ್ಮ ಹಾಡುಗಳನ್ನು ಆಲಿಸುವುದರಲ್ಲೇ ಮುಳುಗಿ ಹೋಗಿಬಿಡುತ್ತವೆ. ಹೀಗೆ ಈ ಮೀನುಗಳು ಹಲವಾರು ಕೌತುಕದ ವಿಷಯಗಳನ್ನು ನಮ್ಮೆದುರಿಗೆ ತೆರೆದಿಡುವುದರಿಂದ ಹಿಡಿದು ಬೇಸರದಲ್ಲಿ ಉತ್ತಮ ಜೊತೆಗಾರರಾಗುತ್ತವೆ.

ಕೇವಲ ಅಲಂಕಾರಕ್ಕಾಗಿ ಪ್ರಾರಂಭವಾದ ಈ ಅಕ್ವೇರಿಯಂ ಇಂದು ಹಲವಾರು ರೂಪಗಳಲ್ಲಿ ನಮ್ಮ ಮೇಜನ್ನಾಕ್ರಮಿಸುತ್ತಿದೆ. ವಾಸ್ತು ಕಾರಣಕ್ಕಾಗಿ, ಮನೆಯ ಸುಖ ಸಮೃದ್ಧಿಗಾಗಿ ಎಂದೆಲ್ಲ ಹಲವಾರು ಕಾರಣಗಳಿಂದ ಇವುಗಳು ನಮ್ಮ ಒಡನಾಡಿಗಳಾಗುತ್ತಿವೆ. 20 ರೂಪಾಯಿಗೆ ಸಿಗಬಹುದಾದ ಗಪ್ಪಿ (guppy) ಯಿಂದ ಹಿಡಿದು 15ಸಾವಿರದಿಂದ 30ಸಾವಿರ ರೂಪಾಯಿವರೆಗೂ ಮಾರಾಟವಾಗುವವು. ಆರೇನ, ಫ್ಲವರ್ ಟ್ವೇಲ್ ಮೀನುಗಳು ನಮ್ಮ ಆಸಕ್ತಿಯನ್ನು ಕೆರಳಿಸುವಲ್ಲಿ ಫಲಪ್ರದವಾಗಿವೆ. ಸಿಂಗಾಪುರದಂತಹ ರಾಷ್ಟ್ರ ತನ್ನ ರಾಷ್ಟ್ರಾದಾಯದಲ್ಲಿ ಅರ್ಧಕ್ಕಿಂತ ಹೆಚ್ಚಿನ ಭಾಗವನ್ನು ಕೇವಲ ಅಲಂಕಾರಿಕ ಮೀನುಗಳ ರಫ್ತಿನಿಂದಲೇ ಗಳಿಸುತ್ತದೆ. 'Guppy Capital of the World' ಎಂದು ಕರೆಯಿಸಿಕೊಳ್ಳುತ್ತಿದೆ ಎಂದರೆ ಯೋಚಿಸಿ! ಪ್ರಪಂಚದಾದ್ಯಂತ ಎಷ್ಟು ಜನರು ಮೀನು ಸಾಕಣೆಯ ಹವ್ಯಾಸವನ್ನು ಬೆಳೆಸಿಕೊಂಡಿರಲಿಕ್ಕಿಲ್ಲ?

"ಮೀನುಗಳು ಜಲಚರಗಳಾದರೂ ನಮ್ಮ ಪ್ರೀತಿಯ ಸಾಕು ಪ್ರಾಣಿಗಳಾಗಿರುವುದಕ್ಕೆ ಕಾರಣ ಹಲವು. ನಗರ ಪ್ರದೇಶಗಳಲ್ಲಿ ವಾಸಿಸುವವರು ಹೆಚ್ಚಿನದಾಗಿ ಜನಜಂಗುಳಿಯ ನಡುವೆ ತಮ್ಮ ಸಣ್ಣ ಅಪಾರ್ಟ್‌ಮೆಂಟ್‌ಗಳಲ್ಲೇ ಕಳೆದು ಹೋಗಿಬಿಟ್ಟಿರುತ್ತಾರೆ. ಇನ್ನು ನಾಯಿ, ದನಗಳನ್ನು ಕಟ್ಟಿ ಹಾಕುವುದೆಲ್ಲಿಂದ? ನಮ್ಮ ಹಳ್ಳಿಗಳಲ್ಲಾದರೆ ನಮ್ಮ ಮನೆ ಬೆಕ್ಕಿಗೆ ಪಕ್ಕದ ಮನೆ ಅಜ್ಜಿಯಾದರೂ ಒಂದಿಷ್ಟು ಹಾಲಿಡುತ್ತಾರೆ". ನಿಮ್ಮ ಮನೆ ಕೋಳಿಗಳು ನಮ್ಮ ಮನೆಯದರೊಂದಿಗೆ ಕಾಳು ಹೆಕ್ಕಿ ತಿನ್ನುತ್ತವೆ. ಆದರೆ ಸಿಟಿಗಳಲ್ಲಿ ನಮ್ಮ ಮನೆಗಳನ್ನು ಸೇರಿಸಿ ಮನಗಳಿಗೂ ಗೋಡೆ ಕಟ್ಟಿಕೊಂಡುಬಿಟ್ಟಿದ್ದೇವೆ. ಆದರೆ ಹವ್ಯಾಸ ನಮ್ಮನ್ನು ಬಿಡಬೇಕಲ್ಲ, ಹಾಗಾಗಿ ಅಕ್ವೇರಿಯಂ ಇಂದು ಎಲ್ಲರನ್ನೂ ಆಕರ್ಷಿಸುತ್ತಿದೆ. ಹಾಗೂ ಮೀನುಗಳೂ, ಮೀನಿನ ಆಹಾರ, ಬೇಕಾದ ಔಷಧಿಗಳು ಯಥೇಚ್ಛವಾಗಿ ಮಾರುಕಟ್ಟೆಯಲ್ಲಿ ಸುಲಭವಾಗಿ ಸಿಗುವ ಕಾರಣ, ಮೀನುಗಳೂ ನಮ್ಮ ಪ್ರೀತಿಯ ಮನೆಮಂದಿಯಲ್ಲೊಂದಾಗುತ್ತಿದೆ.

ಮಕ್ಕಳನ್ನೇ ನೋಡಿ. ಅವರು ಎಲ್ಲರಿಗಿಂತ ಹೆಚ್ಚು ಆಸಕ್ತಿ ಹೊಂದಿರುತ್ತಾರೆ. ಕುತೂಹಲಿಗಳಾಗಿರುತ್ತಾರೆ. ಹೆಚ್ಚು ಹೆಚ್ಚು ವಿಧದ ಮೀನುಗಳ ಬಗ್ಗೆ ಹೆಚ್ಚು ಹೆಚ್ಚು ತಿಳಿದುಕೊಳ್ಳಲು ಪ್ರಯತ್ನಿಸುತ್ತಿರುತ್ತಾರೆ. ಸ್ವಲ್ಪ ಸೂಕ್ಷ್ಮ ಬುದ್ಧಿಯವರಾಗಿದ್ದರಂತೂ, ಬುದ್ಧಿ ಬೆಳೆದಂತೆ ಇನ್ನಷ್ಟು ಸಂಶೋಧನೆಗಿಳಿದುಬಿಡುತ್ತಾರೆ. ಮುಂದೊಂದು ದಿನ ಜಲಚರಗಳ ಬಗ್ಗೆಯೇ ಅಧ್ಯಯನ ನಡೆಸಿ ವಿಜ್ಞಾನಿಗಳಾಗುವ ಮಟ್ಟಕ್ಕೆ ಬೆಳೆದು ಬಿಡುತ್ತಾರೆ. ಹೀಗೆ ಹವ್ಯಾಸಕ್ಕಾಗಿ ಆರಂಭವಾದ ಕೆಲಸ ವಿಜ್ಞಾನಿಯಾಗುವ ಸಾಧನೆಯವರೆಗೂ ಕೊಂಡೊಯ್ಯುತ್ತದೆ.

ಇನ್ನು ನಮ್ಮ ಮನೆಯವರೊಂದಿಗೆ ಒಂದಾಗಿರುವ ಇತರ ಸಾಕು ಪ್ರಾಣಿಗಳನ್ನೇ ತೆಗೆದುಕೊಳ್ಳಿ. ಸಾಕು ಪ್ರಾಣಿಗಳಲ್ಲಿ ಮೊದಲ ಸ್ಥಾನ ನಾಯಿಯದೆ. ನಂತರ ಬೆಕ್ಕು, ಕೋಳಿ, ದನ-ಕರುಗಳು, ಆಡು, ಕುರಿ ಹಂದಿ

ಇವೆಲ್ಲ ಸಾಕಣೆಯ ದೃಷ್ಟಿಯಿಂದಲೂ ನಮ್ಮೊಂದಿಗೆ ನಮ್ಮದಾಗಿಬಿಟ್ಟಿವೆ. ನಿಯತ್ತಿಗೆ ಹೆಸರಾದ ನಾಯಿ ನಮ್ಮೆಲ್ಲರಿಗೂ ಪ್ರಿಯವಾದ ಸಾಕುಪ್ರಾಣಿ. ಇಂದು ವಿಧವಿಧದ ತಳಿಗಳು ಮಾರುಕಟ್ಟೆಯಲ್ಲಿ ಲಭ್ಯವಿದೆ. ಮುದ್ದಾದ ನಾಯಿ ಮರಿಗಳು ಮನೆ ಮಕ್ಕಳ ಸ್ಥಾನವನ್ನೇ ಪಡೆದುಕೊಂಡಿರುತ್ತವೆ. ನಾಯಿಯೂ ಕೂಡ ಅಷ್ಟೇ ಜಾಗರೂಕನಾಗಿ ಮನೆ ಮಂದಿಯನ್ನೆಲ್ಲಾ ಕಾಯುವುದರೊಂದಿಗೆ ತನ್ನದೇ ರೀತಿಯಲ್ಲಿ ಆತ್ಮೀಯತೆಯನ್ನು ವ್ಯಕ್ತಪಡಿಸುತ್ತದೆ. ನಾಯಿ ಸಾಕಾಣೆಯ ಹುಚ್ಚು ಎಷ್ಟಿದೆಯೆಂದರೆ ಚೀನಾವಂತೂ ಒಂದು ಮನೆಗೆ ಒಂದೇ ನಾಯಿ ಎಂಬ ಘೋಷಣೆಯನ್ನು ಸಾರಿ ಬಿಟ್ಟಿದೆ.

ಹಳ್ಳಿಗಳಿಂದ, ಗುಂಪು ಮನೆಗಳಿಂದ ದೂರವಾಗಿ ಗುಡ್ಡಗಳಲ್ಲೋ ಕಾಡಿನ ಮಧ್ಯದಲ್ಲಿ ಬಯಲಲ್ಲೋ ಒಂಟಿಯಾಗಿರುವ ಮನೆಗಳನ್ನೇ ನೋಡಿ. ಆ ಮನೆಯವರಿಗೆ ಜೊತೆಯಾಗಿರುವುದು ಒಂದಲ್ಲ, ಅವರೇ ಸಾಕಿಕೊಳ್ಳುವ ಹಲವಾರು ನಾಯಿಗಳು. ಎಲ್ಲೋ ದಾರಿ ತಪ್ಪಿ ಹೋದರೂ ರಾತ್ರಿಯ ಹೊತ್ತಿಗೆ ತಮ್ಮ ಮನೆಯನ್ನು ಹುಡುಕಿ ಬಂದು ಸೇರಿಕೊಳ್ಳುವ ನಾಯಿಗಳು ನಮಗೆ ಪ್ರೀತಿ ಪಾತ್ರರೆ ಸರಿ. ನಾಯಿಗಳು ಮಕ್ಕಳನ್ನು ಸಾವಿನ ದವಡೆಯಿಂದ ಪಾರು ಮಾಡಿದ, ಮನೆಯನ್ನು ಕಳ್ಳರಿಂದ ರಕ್ಷಿಸಿದ, ಮನೆಯ ಇತರ ಸಾಕುಪ್ರಾಣಿಗಳ ಮೇಲೆ ಇತರ ಪ್ರಾಣಿಗಳ ದಾಳಿಯಿಂದ ತಪ್ಪಿಸಿದ ಹಲವಾರು ಉದಾಹರಣೆಗಳಿವೆ.

ಆದರೆ ಸಂಶೋಧಕರುಗಳ ಪ್ರಕಾರ, ವೈದ್ಯರುಗಳ ಪ್ರಕಾರ ಮಕ್ಕಳಿಗೆ ಹರಡುವ ಸಾಂಕ್ರಾಮಿಕ ರೋಗಗಳಲ್ಲಿ ಬಹಳಷ್ಟು ಸಾಕುಪ್ರಾಣಿಗಳಿಂದ, ಅದರಲ್ಲೂ ನಾಯಿಗಳಿಂದ ಹರಡಬಹುದಾದ ಸಾಧ್ಯತೆ ಹೆಚ್ಚಿರುವುದರಿಂದ ಮೋಜಿನ ಜೊತೆಯಲ್ಲಿ ಆರೋಗ್ಯದ ವಿಷಯ ಬಂದಾಗ ಹೆಚ್ಚಿನ ಕಾಳಜಿ ವಹಿಸುವುದು ಅತ್ಯಗತ್ಯ. ಸಾಕುಪ್ರಾಣಿಗಳೆಂದು ನಮ್ಮ ಅನುಕೂಲಕ್ಕಾಗಿ ಮಾತ್ರ ಸಾಕದೆ, ಅವುಗಳ ಆರೋಗ್ಯದ ಬಗ್ಗೆಯೂ ಕಾಳಜಿ ವಹಿಸುವುದು ಅತ್ಯಗತ್ಯ.

ಪುಟ್ಟ ಮಕ್ಕಳಿಗೆ ನಾಯಿಗಿಂತ ಹೆಚ್ಚು ಪ್ರಿಯವಾಗುವುದು ಬೆಕ್ಕಿನ ಮರಿಗಳೇ. ಮರಿಗಳ ಆಟ, ವಿನೋದ ಎಂತಹವರಿಗೂ ಮುದಕೊಡುವಂತಹದ್ದು. ಬೆಕ್ಕುಗಳನ್ನು ಸಾಕುವಲ್ಲಿಯೂ ಕೆಲವರು ಶಕುನ ಪಾಲಿಸುತ್ತಾರೆ. ಕಪ್ಪು ಬೆಕ್ಕನ್ನು ಹೆಚ್ಚಿನವರು ಸಾಕಲು ಇಷ್ಟಪಡುವುದಿಲ್ಲ. ಬಿಳಿ, ಬೂದು ಬಣ್ಣದ ಬೆಕ್ಕನ್ನೇ ಸಾಕುವತ್ತ ಗಮನ ಇರುತ್ತದೆ. ಹಳ್ಳಿಗಳಲ್ಲಿ ಬೆಕ್ಕು ಸಾಕುವುದು ಖಂಡಿತಾ ಹವ್ಯಾಸಕ್ಕಾಗಿಯೆಂದೆನಿಸುತ್ತದೆಯೇ? ನಿಜವಾಗಿ ನೋಡಿದರೆ ಇಲಿಗಳ ಕಾಟದಿಂದ ತಪ್ಪಿಸಿಕೊಳ್ಳಬೇಕಾದ ಕಾರಣಕ್ಕಾಗಿ ಈ ಮಾರ್ಜಾಲಗಳು ಮನೆ ಮನೆಯಲ್ಲೂ ಸಾಕಲ್ಪಡುತ್ತವೆ. ಒಳ್ಳೇ ಬೇಟೆಗಾರ ಬೆಕ್ಕಾದರೆ ಸರಿ, ಬದಲು ಅದು ಸೋಮಾರಿ ಬೆಕ್ಕೇನಾದರು ಆಗಿದ್ದರೆ, ಹಾಲು, ಮೊಸರು ದರಿಂಡ ಎಂಬ ಮನೆಯೊಡತಿಯ ಬೈಗುಳ ಸರ್ವೇಸಾಮಾನ್ಯ. ನಾಯಿ, ಬೆಕ್ಕು ಎರಡನ್ನೂ ಸಾಕಿರುವವರ ಮನೆಯಲ್ಲಿ ನೋಡಿ, ಮನುಷ್ಯರಿಗಿಂತ ತಾವೇನೂ ಕಡಿಮೆ ಇಲ್ಲ ಎಂಬಂತೆ ಕಚ್ಚಾಡುತ್ತಿರುತ್ತವೆ. ಆದರೆ ನಾಯಿ, ಬೆಕ್ಕು ಆತ್ಮೀಯ ಮಿತ್ರರಂತೆ ಒಂದೇ ಗೂಡಿನಲ್ಲಿರುವ ಹಲವಾರು ವೈಚಿತ್ರ್ಯದ ಉದಾಹರಣೆಗಳೂ ನಮ್ಮ ಮುಂದಿವೆ.

ಇನ್ನುಳಿದಂತೆ ಕೋಳಿ, ಹಸು, ದನ-ಕರುಗಳನ್ನು ಸಾಕುಪ್ರಾಣಿಗಳಂತೆ ಪ್ರೀತಿಯಿಂದಲೂ ಹಾಗೂ ಅವುಗಳಿಂದ ಆಗುವ ಹಲವಾರು ಉಪಯೋಗಗಳಿಗಾಗಿಯೂ ಸಾಕಿಕೊಳ್ಳುವುದು ಸರ್ವೆ ಸಾಮಾನ್ಯ. ಇವು ನಾಯಿ, ಬೆಕ್ಕುಗಳಂತೆ ಮುದ್ದಿನ ಪ್ರಾಣಿಗಳಾಗಿ ಕಂಡು ಬರದಿದ್ದರು, ಮನೆಯವರ ಪ್ರೀತಿ ಪಾತ್ರರಾಗಿ ಬೆಳೆಯುವುದಂತೂ ನಿಜ. ಇಷ್ಟೇ ಏಕೆ ಹವ್ಯಾಸಕ್ಕೆಂದು ಮೊಲ, ಆಮೆ, ಅಳಿಲು, ಗಿಳಿಗಳನ್ನೂ ಸಾಕುವುದುಂಟು. ಲವ್ ಬರ್ಡ್ಸ್ ಸಾಕುವ ಹವ್ಯಾಸವಂತೂ ಇಂದು ನಗರ ಪ್ರದೇಶಗಳಲ್ಲಿ ಸಾಮಾನ್ಯವಾಗಿ ಕಂಡು ಬರುವಂತಹದ್ದು. ಸ್ವಲ್ಪ ಕಾಡು ಪ್ರದೇಶ, ಗುಡ್ಡಗಾಡು ಪ್ರದೇಶಗಳಿಗೆ ಹೋದರಂತೂ ಅಲ್ಲಿನ ಜನ ಕೆಲವು ಕಾಡು

ಪ್ರಾಣಿಗಳನ್ನೇ ಹಿಡಿದು ಪಳಗಿಸಿ ಮನೆ ಮಕ್ಕಳಂತೆಯೇ ನೋಡಿಕೊಳ್ಳುತ್ತಿರುತ್ತಾರೆ. ಪ್ರಾಣಿಗಳು ಮನೆಯವರ ಪ್ರೀತಿ ಪಡೆದು ಮನೆ ಪರಿಸರಕ್ಕೆ ಒಗ್ಗಿಕೊಂಡಿರುತ್ತವೆ.

ಯಾವುದೇ ಪ್ರಾಣಿಯಿರಲಿ, ನಾವು ಅತೀ ಎಂಬಂತೆ ಪ್ರೀತಿಸುವ ನಾಯಿ ಬೆಕ್ಕುಗಳಿರಬಹುದು ಅಥವಾ ಕೋಳಿ, ಕುರಿ, ಆಡು, ಹಸು ಕರುಗಳಿರಬಹುದು. ಪ್ರೀತಿಯನ್ನು ತೋರಿದರೆ ಎಂತಹದ್ದೇ ಪ್ರಾಣಿಯಾದರೂ ನಮಗೆ ಒಗ್ಗಿಕೊಂಡುಬಿಡುತ್ತವೆ. ಮನೆ ಮುಂದೆ ಬಂದು ನಿಲ್ಲುವ ನಾಯಿಗೋ, ಅಪ್ಪಿತಪ್ಪಿ ಮನೆಗೆ ಬರುವ ಯಾರದೋ ಬೆಕ್ಕಿಗೋ, ದಾರಿಯಲ್ಲಿ ಅಂಬೇ ಎಂದು ಕರೆಯುವ ಕರುಗಳಿಗೋ ಒಂದು ಹಿಡಿ ಅನ್ನವನ್ನೋ, ಹಾಲನ್ನೋ ಒಂದಿಷ್ಟು ಹುಲ್ಲು ಸೊಪ್ಪನ್ನು ಕೊಟ್ಟು ನೋಡಿ, ಕಿಟಕಿಯ ಪಕ್ಕದಲ್ಲಿ ಹಾರಾಡುವ ಗುಬ್ಬಚ್ಚಿಗೆ, ಪಾರಿವಾಳಗಳಿಗೆ ಒಂದು ಹಿಡಿ ಅಕ್ಕಿಯನ್ನೇ ಹಾಕಿ ಮರುದಿನವೂ ಅದು ನಮ್ಮನ್ನೇ ಹುಡುಕಿಕೊಂಡು ಬರುತ್ತವೆ. (ಗುಬ್ಬಚ್ಚಿಗಳಿಂದು ಕಾಣೆಯಾಗುತ್ತಿರುವ ಹಕ್ಕಿಗಳ ಗುಂಪಿಗೆ ಸೇರುತ್ತಿರುವುದು ವಿಷಾದನೀಯ) ಸ್ವಲ್ಪ ದಿನ ಕಳೆಯುವಷ್ಟರಲ್ಲಿ ಅದು ನಮ್ಮ ಮನೆಯ ಸದಸ್ಯರಲ್ಲಿ ಒಂದಾಗಿಬಿಟ್ಟಿರುತ್ತದೆ. ತನ್ನದೇ ಮೂಕ ಭಾಷೆಯಲ್ಲಿ ತನ್ನ ಪ್ರೀತಿ ವ್ಯಕ್ತಪಡಿಸಲು ಶುರು ಮಾಡಿಕೊಳ್ಳುತ್ತದೆ. ಅದಕ್ಕೆ ನಾವು ಈ ಸಾಕುಪ್ರಾಣಿಗಳನ್ನು ಮಕ್ಕಳಂತೆ ಆರೈಕೆ ಮಾಡುವುದು.

ಹಾಗಾಗಿ ಸಂಬಂಧಗಳಿಗೆ ಮುಖ್ಯವಾಗಿ ಬೇಕಾಗಿರುವುದು ಅರ್ಥವಿಲ್ಲದ ವ್ಯರ್ಥ ಕಸರತ್ತುಗಳಲ್ಲ. ಪ್ರೀತಿಯನ್ನು ಅಭಿವ್ಯಕ್ತಿಸುವ ಯಾವುದೋ ಒಂದು ವಿಧಾನವಷ್ಟೇ. ಇಲ್ಲವಾದಲ್ಲಿ ನಮ್ಮ ಯಾವುದೇ ಭಾಷೆಗೆ ಪ್ರತಿಕ್ರಿಯೆ ನೀಡಲಾಗದ ನಮ್ಮಿಂದ ಭಿನ್ನವಾಗಿರುವ ಸಾಕುಪ್ರಾಣಿಗಳು ನಮ್ಮ ಪ್ರೀತಿಯನ್ನು ಅರ್ಥೈಸಿಕೊಂಡು, ವಿಶ್ವಾಸ ವ್ಯಕ್ತಪಡಿಸುವ ರೀತಿ ಅವುಗಳಿಗೆ ಹೇಗೆ ಸಾಧ್ಯವಾಗಿರಬಹುದು? ಒಬ್ಬರನ್ನು ಕಂಡರೆ ಒಬ್ಬರಿಗಾಗದಂತೆ ಪರಸ್ಪರ ಕಚ್ಚಾಡಿಕೊಳ್ಳುವ ಮನುಷ್ಯರಾದ ನಾವು ಸಾಕುಪ್ರಾಣಿಗಳ ವಿಷಯ ಬಂದಾಗ ಮೃದುತ್ವ ತಾಳಿ ನಮ್ಮದೇ ಆದ ರೀತಿಯಲ್ಲಿ ಅವುಗಳೊಡನೆ ಒಡನಾಟವಿರಿಸಿಕೊಳ್ಳುವ ಆತ್ಮೀಯ ಶಕ್ತಿ ಅದ್ಯಾವುದಿರಬಹುದು? ಅತೀ ಹಿಂಸೆಯನ್ನು ತಾಳಿಕೊಳ್ಳಲಾಗದಂತಹ ಪರಿಸ್ಥಿತಿಯಲ್ಲಿ ಸಾಕಿದ ಆನೆಯೂ ಕೂಡ ತನ್ನ ಮಾವುತನನ್ನೆ ಎತ್ತಿ ಎಸೆಯುವ ಕ್ರೌರ್ಯ ಎಲ್ಲಾ ಸಾಕುಪ್ರಾಣಿಗಳಿಗೂ ಸಾಧ್ಯವಾಗಿದ್ದರೆ ನಾಯಿ, ಬೆಕ್ಕು ಮುಂತಾದವುಗಳೆಲ್ಲಾ ನಮ್ಮ ಪ್ರೀತಿ ಪಾತ್ರರಾಗಿರುತ್ತಿದ್ದವೇ?

ಪ್ರೀತಿ ವಿಶ್ವಾಸ ಎಲ್ಲ ಸಂಬಂಧಗಳ ಶಕ್ತಿ ಅಡಗಿರುವುದೇ ಅಕ್ಕರೆಯಲ್ಲಿ. ಅದಕ್ಕೆ ಸುರಕ್ಷೆಯ ದೃಷ್ಟಿಯಿಂದ ಗೂಡಿನೊಳಗೆ ಕಟ್ಟಿ ಹಾಕಿದ ನಾಯಿ ತಪ್ಪಿಸಿಕೊಂಡರೂ ರಾತ್ರಿ ಯಜಮಾನನ ಮನೆ ಮುಂದೆ ಬಂದು ನಿಲ್ಲುತ್ತದೆ. ದಾರಿ ತಪ್ಪಿ ಹೋದ ಬೆಕ್ಕನ್ನು ನಾವು ಹುಡುಕಿಕೊಂಡು ಹೋಗದಿದ್ದರೂ ಅದೇ ತನ್ನ ಮನೆಯನ್ನು ಹುಡುಕಿಕೊಂಡು ಬರುತ್ತದೆ. ಬೆಟ್ಟಕ್ಕೋ ಕಾಡಿಗೋ ಮೇಯಿಸಲು ಅಟ್ಟಿದ ದನ ಸಂಜೆಯಾಗುತ್ತಲೇ ತಮ್ಮ ಕೊಟ್ಟಿಗೆಯ ಹಾದಿ ಹಿಡಿಯುತ್ತವೆ. ನಮಗೆ ಕೇಳಲು ಸಾಧ್ಯವಾಗದಂತಹ ನಮ್ಮ ಸಂಗೀತ ಸ್ವರಗಳನ್ನು ಮೀನುಗಳು ಉಸಿರು ಬಿಗಿಹಿಡಿದು ಕೇಳುತ್ತಾ ಸ್ತಬ್ದವಾಗಿಬಿಡುತ್ತವೆ. ನಾವೆಲ್ಲ ಹೀಗೆ ಒಂದಿಷ್ಟು ಅಕ್ಕರೆಯನ್ನು ಪ್ರಾಣಿಗಳ ಮೇಲಾದರೂ ತೋರುವುದರ ಮೂಲಕ ಮನುಷ್ಯರಾಗುತ್ತೇವೆ!

ಧರ್ಮಕ್ಕೆ ವಿರುದ್ಧವಾದ ಅರ್ಥಕಾಮಗಳನ್ನು ಬಿಡಬೇಕು. ಹಿಂದೆ ಆಚರಣೆಯಲ್ಲಿದ್ದ ಧರ್ಮವು ಈಗ ಲೋಕನಿಂದಿತವಾಗಿದ್ದರೆ, ಮುಂದೆ ಒಳ್ಳೆಯ ಫಲವನ್ನು ಕೊಡುವುದಿಲ್ಲವಾದರೆ ಬಿಡಬೇಕು.

- ಮನುಸ್ಮೃತಿ

ಸಾಹಿತ್ಯಪರ ಚಟುವಟಿಕೆಯೊಂದಿಗೆ ನಾನು



✍ ಜಯಮ್ಮ ಚೆಟ್ಟಿಮಾಡ
"ಕಾವ್ಯ ಕಾವೇರಿ"
ಮೊಗರ್ಪಣೆ, ಸುಳ್ಯ, ದಕ್ಷಿಣ ಕನ್ನಡ

ನಾನು ಚಿಕ್ಕ ಮಗುವಿರುವಾಗ ಸಂಗೀತವನ್ನು ಬಹಳ ಇಷ್ಟಪಡುತ್ತಿದ್ದೆನೆಂದು ನಮ್ಮ ತಾಯಿ ಹೇಳುತ್ತಿದ್ದರು. ನನಗೆ ಸಂಗೀತವನ್ನು ಕಲಿಸಬೇಕೆಂಬ ಆಶೆ ಅವರಿಗೆ ತುಂಬಾ ಇತ್ತು. ಆದರೆ ಕಲಿಯುವ ಯೋಗ ನನಗೆ ಇರಬೇಕಲ್ಲಾ? ನಮ್ಮೂರಲ್ಲಿ ಸಂಗೀತ ಕಲಿಸುವವರು ಯಾರೂ ಇರಲಿಲ್ಲ. ಒಮ್ಮೆ ಯಾರೋ ಒಬ್ಬರು ಪಿಳ್ಳೆ ಎಂಬವರು ಸಂಗೀತ ಕಛೇರಿ ಮಾಡಿದ್ದರು. ನಮ್ಮೂರಲ್ಲಿ ಸಂಗೀತ ತರಗತಿ ನಡೆಸಬೇಕೆಂದು ಆ ದಿನದ ಕಛೇರಿಗೆ ಬಂದಿದ್ದ ಹಿರಿಯರು ಅವರಲ್ಲಿ ವಿನಂತಿಸಿಕೊಂಡರು. ಸರಳ ವರಸೆ ಹೇಳಿ ಕೊಡುವಷ್ಟರಲ್ಲಿ ಅವರ ವರಸೆ ಬದಲಾಗಿ ಅವರು ಊರು ಬಿಟ್ಟು ಹೋದರು. ಅಲ್ಲಿಗೆ ನಮ್ಮ ಸಂಗೀತ ಮುಗಿಯಿತು.

ಆ ಮೇಲೆ ನನಗೆ ಚಿತ್ರ ಬಿಡಿಸುವ ಹುಚ್ಚು ಹಿಡಿಯಿತು. ಅದರಲ್ಲೂ ಮನುಷ್ಯ ಚಿತ್ರ. ಚಿತ್ರ ಬಿಡಿಸಲು ನನಗೆ ಯಾರೂ ಪುಸ್ತಕ ತೆಗೆದು ಕೊಡುತ್ತಿರಲಿಲ್ಲವಾದುದರಿಂದ ಯಾರದಾದರೂ ಪುಸ್ತಕ ನನ್ನ ಕಣ್ಣಿಗೆ ಬಿದ್ದರೆ ಸಾಕು ಅಲ್ಲೊಂದು ಚಿತ್ರ ಮೂಡಿರುತ್ತಿತ್ತು. ಹೆಚ್ಚು ಸುಲಭವಾಗಿ ಸಿಗುತ್ತಿದ್ದುದು ಅಮ್ಮನ ಶಾಲಾ ಪಾಠ ಟಿಪ್ಪಣಿ ಮತ್ತು ಪದ್ಯ ಪುಸ್ತಕ. ಚಿತ್ರ ಬಿಡಿಸಿ ಕಾಗದ ಹರಿದು ಹಾಕುತ್ತಿದ್ದೆ. ಅಮ್ಮನಲ್ಲಿ ಈ ಹೊತ್ತು ಬೇಕಾದರೂ ಹೋಗಿ ಕೇಳಿ. "ನನ್ನ ಪದ್ಯ ಪುಸ್ತಕ ಪೂರಾ ಚಿತ್ರ ಮಾಡಿ ಹರಿದು ಹಾಳು ಮಾಡಿ ಹಾಕಿದ್ಲು" ಅಂತ ಪುಸ್ತಕ ಹಾಳಾದ ತಮ್ಮ ಎದೆಗುದಿಯನ್ನು ಅಮ್ಮ ಇಂದಿಗೂ ಹೊರ ಹಾಕುತ್ತಾರೆ.

ಇದನ್ನೆಲ್ಲಾ ಯಾಕೆ ಹೇಳಬೇಕಾಗಿದೆಯೆಂದರೆ ಕಲೆ ಮತ್ತು ಸಾಹಿತ್ಯ ರಸಾತ್ಮಕತೆಯ ಒಂದೊಂದು ಅಂಗಗಳೇ.. ಅಥವಾ ಒಂದೇ ಕುಟುಂಬದ ಒಡ ಹುಟ್ಟುಗಳಂತೆ. ನನ್ನೊಳಗಿದ್ದ ಕವಯಿತ್ರಿಯೋ ಬರೆಹಗಾರ್ತಿಯೋ ತನ್ನ ರೂಪು ಪಡೆಯುವ ಮೊದಲು ಮಾನಸಿಕ ಸ್ತರದಲ್ಲಿ ಆಕಾರ ಹೊಂದುವ ಒಂದು ಪ್ರಯತ್ನ ಈ ಸಂಗೀತ ಯಾ ಚಿತ್ರ ಆಗಿದ್ದಿರಬಹುದು ಎಂಬುದು ಈಗಿನ ನನ್ನ ಊಹನೆ. **"ತನ್ನ ಒಳಗಿರುವುದನ್ನು ಹೊರಹಾಕುವ ತಲ್ಲಣ ಹಾಗೂ ತನ್ಮಯತೆ ಎಲ್ಲಾ ಕಲಾಪ್ರಕಾರಗಳಲ್ಲೂ ಸಾಮಾನ್ಯ ಭಾವನೆಯು ಒಂದು ರಸವಾಗಿ ಪಾಕಗೊಳ್ಳಲು, ಹದಗೊಳ್ಳಲು ನಾನಾ ತರಹದ ಅನುಭವಗಳು ಒಳಗೊಳಗೆ ಕುದಿಗೊಂಡು, ಆವಿಯಾಗಿ ಉಳಿದುದು, ಅಂತಃಪ್ರಜ್ಞೆಯಲ್ಲಿ ಸಂಸ್ಕಾರವಾಗಿ, ಸೂಕ್ತ ಸಂದರ್ಭದಲ್ಲಿ ಅಭಿವ್ಯಕ್ತಗೊಳ್ಳುವುದು ಎಲ್ಲಾ ಕಲೆಗಳ ಸಹಜ ಧರ್ಮ"**. ಮತ್ತೆ ಸಂಸ್ಕಾರ ಈ ಜನ್ಮದ್ದೇ ಆಗಿರಬೇಕೆಂದೂ ಇಲ್ಲ ಎಂಬುದು ನನ್ನ ವೈಯಕ್ತಿಕ ನಿಲುವು. ಬೆಳೆಯ ಸಿರಿ ಮೊಳೆಯಲ್ಲಿ ಎನ್ನುವಂತೆ ಚಿಕ್ಕಂದಿನಿಂದಲೇ ನನಗೆ ಹಾಡು, ಕಥೆ, ನಾಟಕ, ಓದು ಎಲ್ಲವೂ ಇಷ್ಟವೇ. ಸುಮಾರು ನಾಲ್ಕನೆಯ ತರಗತಿಗೆ ಬಂದಾಗ ನನ್ನ ಪುಟ್ಟ ತಲೆಯಲ್ಲಿ ಸಾಹಿತ್ಯ ಸಂಬಂಧಿತ ಪುಟ್ಟ ಪುಟ್ಟ ವಿಚಾರಗಳು ಮೂಡುತ್ತಿದ್ದವು. ಕನ್ನಡ ಪಠ್ಯ ಪುಸ್ತಕದ ಕೆಲವು ಪಾಠ ಹಾಗೂ ಪದ್ಯಗಳು ನನಗೆ ತುಂಬ ಇಷ್ಟವಾಗುತ್ತಿದ್ದವು. ಅವು ನನಗೆ ಯಾಕೆ ಇಷ್ಟವಾದುವು ಎಂದೂ ಹೇಳುತ್ತಿದ್ದೆ.ಆಗಿನ ನನ್ನ ಗುರುಗಳಾದ ಪೂಜ್ಯ ಕೀಲಾರ್‌ಕಜೆ ವೆಂಕಪ್ಪಯ್ಯನವರು ನಮ್ಮ ಅಮ್ಮನಲ್ಲಿ "ಜಯಮ್ಮ ದೊಡ್ಡ ಕ್ಲಾಸಿನ ಮಕ್ಕಳ ಹಾಗೆ ಉತ್ತರ ಬರೆಯುತ್ತಾಳೆ" ಎಂದಿದ್ದರಂತೆ. ಆಗಲೇ ನನ್ನನ್ನು ಕಾಡುತ್ತಿದ್ದ ಸಾಹಿತ್ಯ ಸಮಸ್ಯೆ ಪದ್ಯ ಬರೆಯುವಾಗ ಇಂತಿಷ್ಟೇ ಸಾಲು, ಸಾಲಿನಲ್ಲಿ ಇಂತಿಷ್ಟೇ ಶಬ್ದ ಮತ್ತು ಆ ಪದ್ಯ ಇಷ್ಟರಲ್ಲೇ ನಿಲ್ಲಿಸಬೇಕೆಂದು

ನಿರ್ಣಯಿಸುವುದು ಹೇಗೆ? ಎಂಬುದು. ಇದು ನಾನು ಆರನೆಯ ತರಗತಿಗೆ ಹೋಗುವವರೆಗೆ ಕಾಡಿತ್ತು. ಆರನೆಯ ತರಗತಿಯಲ್ಲಿರುವಾಗ ನಾನೇ ಒಂದು ಪದ್ಯ ಬರದೆನಲ್ಲಾ! ನನ್ನ ಆ ಸಮಸ್ಯೆ ನನಗೆ ತಿಳಿಯದೇ ನಿವಾರಣೆ ಆದದ್ದೇ ಒಂದು ಅದ್ಭುತ! ಅತ್ಯಾಶ್ಚರ್ಯ!

ಆ ಪದ್ಯದ ಹೆಸರು "ಗೆಳತಿಗೆ". ಐವತ್ತು ವರ್ಷಗಳಿಗಿಂತ ಹಿಂದೆ ಯಾವ ಗೆಳತಿಗೆಂದು ಆ ಕವನ ಬರೆದಿದ್ದೆನೋ ಆ ಕೊಳಂಬೆ ಶೀಲಾವತಿ ಇಂದಿಗೂ ನನ್ನ ಗೆಳತಿಯೇ. ನಾನೂ ಆಕೆಯೂ ಶಾಲೆಗೆ ಹೋಗುವ ದಾರಿಯಲ್ಲಿ ಹೇಳಿದ ಕಥೆಗಳೆಷ್ಟೋ, ಕಟ್ಟಿ ಹಾಡಿದ ಹಾಡುಗಳೆಷ್ಟೋ, ನಾವೇ ಕಲ್ಪಿಸಿ ಹೇಳಿದ ಹಾಸ್ಯ ಕಥೆಗಳನ್ನು ನೆನೆನೆನೆದು ನಕ್ಕುದೆಷ್ಟೋ, ಓಫ್! ಆ ಕಾಲವೊಂದಿತ್ತು. ದಿವ್ಯ ತಾನಾಗಿತ್ತು, ಬಾಲ್ಯವಾಗಿತ್ತು..! ಎಷ್ಟು ಸತ್ಯ ಆ ಕವಿವಾಣಿ! ಆ ಕವನ ಬರೆದಂದು ನಾನು ನಾನಾಗಿರಲಿಲ್ಲ! ಆ ಮೇಲೆ ಬರೆದ ಎಷ್ಟೋ ಕವನಗಳನ್ನು ನಾನು ಮರೆತ್ತಿದ್ದೇನೆ. ಆದರೆ ಗೆಳತಿಗೆ ಕವನ ಮಾತ್ರ ಇನ್ನೂ ನನ್ನೊಂದಿಗೆ ಇದೆ, ಬಾಲ್ಯದ ಸವಿ ನೆನಪಾಗಿ..! ಅಷ್ಟೇ ಜೀವಂತವಾಗಿ.

ನನಗೆ ಖುಷಿ ಕೊಟ್ಟ ಇನ್ನೊಂದು ಕವನ ನಾನು ಹತ್ತನೆಯ ತರಗತಿಯಲ್ಲಿ ಇರುವಾಗ ಬರೆದದ್ದು. ಖುಷಿ ಯಾಕೆಂದರೆ ಆ ಕವನವನ್ನು ಓದಿ ನನ್ನ ಸಹಪಾಠಿಗಳನ್ನು ಭಾವಪರವಶರನ್ನಾಗಿ ಮಾಡಿದ್ದೆನಲ್ಲಾ, ಅದಕ್ಕೆ. ಅಂದು ನಾವು ಶಾಲೆಯಿಂದ ಬೀಳ್ಕೊಳ್ಳುವ ದಿನ. "ಪ್ರೀತಿಯ ಶಾಲೆಯನೂ ಗುರುಗಳನೂ ಸಹಪಾಠಿಗಳನು ಅಗಲಿರುವೆವೂ" ಎಂಬ ಮೊದಲ ಸಾಲು ಕೇಳುತ್ತಲೇ ಹುಡುಗಿಯರು ಕಣ್ಣೀರಾಗತೊಡಗಿದರು. ಹುಡುಗರು, ಗುರುಗಳು ಎಲ್ಲರಲ್ಲೂ ಒಂದು ರೀತಿಯ ಕಂಪನ, ಸಂಚಲನ ಉಂಟಾಯಿತು. ಎಲ್ಲರೂ ಭಾವಪರವಶರಾಗಿದ್ದರೆ ನನಗೆ ಖುಷಿ – ಇಷ್ಟು ಜನರನ್ನು ನನ್ನ ಹಾಡಿನಿಂದ ಮೋಡಿ ಮಾಡಿದೆನಲ್ಲಾ ಎಂದು!

ಅದೃಷ್ಟವೋ ದುರದೃಷ್ಟವೋ ಒಳ್ಳೆಯ ಅಂಕಗಳಿದ್ದರೂ ನನಗೆ ಕಾಲೇಜಿಗೆ ಹೋಗಲಾಗಲಿಲ್ಲ. ಕಾಲೇಜಿಗೆ ಹೋಗದ ಕಾರಣ ಕೊಳಂಬೆ ಪುಟ್ಟಣ್ಣ ಗೌಡರೆಂಬ ಅಚ್ಚಗನ್ನಡ ಕವಿಯ ಪಾದ ತಳದಲ್ಲಿ ಕುಳಿತು ಕನ್ನಡ ಸಾಹಿತ್ಯದ ಬಗೆಗೆ ಕೇಳುವ ಪುಣ್ಯ ನನ್ನದಾಯಿತು. ಕೆಲವೇ ತಿಂಗಳಲ್ಲಿ ನಾನವರ ಪಟ್ಟ ಶಿಷ್ಯೆಯಂತಾದೆ. ಅದೇ ಸಂದರ್ಭದಲ್ಲಿ ಶ್ರೀ ವಿ.ಬಿ. ಹೊಸಮನೆಯವರು ನಡೆಸುತ್ತಿದ್ದ ನಾಡ ಹಬ್ಬದ ಕವನ ಸ್ಪರ್ಧೆಯಲ್ಲಿ ನಾನು ಸತತ ಮೂರು ಬಾರಿ ಬಹುಮಾನ ಪಡೆದೆ. ನನ್ನ ಮೊದಲ ಕತೆಯ ಕಲ್ಪನೆ ಹುಟ್ಟಿದ್ದು ಅವರ ಮನೆಯಲ್ಲೇ. ಮೂವರು ಚಿಕ್ಕ ಚಿಕ್ಕ ದಲಿತ ಮಕ್ಕಳು ಕೊಳಂಬೆಯವರ ದನಕರುಗಳಿಗೆಂದು ಅವರಿಂದಾದಷ್ಟು ಹುಲ್ಲು ತರುವುದನ್ನು ನೋಡಿ ಅವರು ಯಾರೆಂದು ವಿಚಾರಿಸಿದಕ್ಕೆ ಅವರು ಕೊಟ್ಟ ಏಳೆಂಟು ವಾಕ್ಯದ ಉತ್ತರವನ್ನು ಮರುದಿನವೇ ಮೂರು ನಾಲ್ಕು ಪುಟದ ಕಥೆಯಾಗಿ ಬರೆದುಕೊಂಡು ಹೋದೆ. ಇದನ್ನು ನಿರೀಕ್ಷಿಸದ ಅವರ ಸಂತೋಷಕ್ಕೆ ಪಾರವೇ ಇರಲಿಲ್ಲ. ಕಥಾವಸ್ತು ಮನಸ್ಸು ಕರಗಿಸುವಂಥದ್ದಾಗಿತ್ತು. ಆದುದರಿಂದ ಆ ಕಥೆ ಚೆನ್ನಾಗಿಯೇ ಬಂದಿತ್ತು. ಅದು ಒಂದು ವರ್ಷದ ಅನಂತರ, 1968ರಲ್ಲಿ ಬೆಂಗಳೂರು ಮತ್ತು ಕೊಡಗು ಗೌಡ ಸಮಾಜದ ಪುಸ್ತಕದಲ್ಲಿ ಪ್ರಕಟಗೊಂಡಿತು. ಕತೆ ಬರೆವ ಕಲೆ ನನಗೊಲಿದುದು ನನ್ನ ಆತ್ಮವಿಶ್ವಾಸವನ್ನು ಒಂದಿಷ್ಟು ಹೆಚ್ಚಿಸಿತು. ಅದೇ ವರ್ಷ ಮಲ್ಲಿಗೆ ಮಾಸ ಪತ್ರಿಕೆಯ ಮಹಿಳಾ ಸಂಚಿಕೆಯಲ್ಲಿಯೂ ನನ್ನ ಕಥೆ (ಹೆಸರು ಮರೆತಿದೆ) ಪ್ರಕಟಗೊಂಡಿತ್ತು.

ಕೊಳಂಬೆಯವರ ಅಚ್ಚಗನ್ನಡ ಕಾವ್ಯ ಕಾಲೂರ ಚೆಲುವೆಯ ಪೂರ್ಣ ವಿವರಣೆಯನ್ನು ಅವರಿಂದಲೇ ಕೇಳುವ ಭಾಗ್ಯ ನನ್ನದಾಯಿತು. ಅಚ್ಚಗನ್ನಡದ ಪ್ರಭಾವ ನನ್ನ ಮೇಲೆ ಅದೆಷ್ಟಾಗಿತ್ತು ಅಂದರೆ ನಾನೂ ಅಚ್ಚಗನ್ನಡದ ಒಂದು ಕವನ ಬರೆದೆ. "ನಗುತಿರಲಿ ಎನ್ನ ಬಾಳ್ ನಗುವೆ ಬಾಳ್ವೆಯ ತಿರುಳು" ಎಂದು ಪ್ರಾರಂಭವಾಗುವ ಈ ಕವನದ ಮೂಲಕ ಹಲವರು ನನ್ನನ್ನು ಗುರುತಿಸಿದರು. ಆ ಮೇಲೆ ಕೊಳಂಬೆಯವರು ಅವರಿವರಲ್ಲಿ "ಜಯಮ್ಮನಿಗೆ ಒಳ್ಳೆಯ ಭವಿಷ್ಯವಿದೆ" ಎನ್ನುತ್ತಾ, ಹಾಗೇ "ನನ್ನ ಹೆಸರನ್ನು ಅವಳು

ಉಳಿಸುತ್ತಾಳೆ" ಎಂಬ ಮಾತನ್ನು ಜೋಡಿಸುತ್ತಿದ್ದರಂತೆ. ಇಂದು ಆ ಮಾತುಗಳನ್ನು ನೆನಪಿಸಿಕೊಳ್ಳುತ್ತಿದ್ದರೆ ಕಣ್ಣು ಹನಿಗೂಡುತ್ತವೆ. ಅವರೆದುರು ನಾನೊಂದು ಹುಲ್ಲು ಕಡ್ಡಿ. ನಾನು ಈ ಹೊತ್ತು ಏನಾದರೂ ಒಳ್ಳೆಯ ಹೆಸರು ಗಳಿಸಿದ್ದರೆ ಅದು ಕೊಳಂಬೆಯವರ ಆಶೀರ್ವಾದದಿಂದ. ಬೀದಿ ಬದಿಯ ಈ ಮೊರಡುಗಲ್ಲನ್ನು ಶಿಲ್ಪವಾಗಿಸಿದ ಶಿಲ್ಪಿ ಅವರು. ಅದಕ್ಕಾಗಿ ಪ್ರತಿದಿನ ಅವರನ್ನು ನೆನೆಯುತ್ತೇನೆ.

ವೆನ್ಲಾಕ್ ಆಸ್ಪತ್ರೆಯಲ್ಲಿ ಪರಿಚಯವಾದ ಶ್ರೀ ಎಂ.ಎಂ. ಬಾಗ್ಲೋಡಿಯವರು ಆಗ ನವಭಾರತ ದೈನಿಕದ ಉಪ ಸಂಪಾದಕರಾಗಿದ್ದರು. ಆ ಪರಿಚಯದ ಕಾರಣದಿಂದ ನನ್ನ ಕಥೆಗಳಾದ "ಕೋಗಿಲೆ ಕಾಡಿನ ಕತ್ತಲೆಯಲ್ಲಿ", "ನಾ ಮರೆಯಲೆಂತು ನಿನ್ನ", " ಹುಲಿ ಬೇಟೆ" (ಇಂಗ್ಲೀಷಿನಿಂದ ಅನುವಾದಿತ) ಹಾಗೂ ಕೆಲವು ಮಕ್ಕಳ ಕವನಗಳು ನವ ಭಾರತದಲ್ಲಿ ಪ್ರಕಟಗೊಂಡವು. ಆಮೇಲೆ ಮುಂಗಾರು ದೈನಿಕ ಪತ್ರಿಕೆಯ ಕಥಾ ಸ್ಪರ್ಧೆಯಲ್ಲಿ "ಮೊಗ್ಗು ಕನಸುಗಳು" ಎಂಬುದು ಮೆಚ್ಚುಗೆ ಗಳಿಸಿದ ಕಥೆ ಪ್ರಕಟವಾದ ನಂತರ ನಾನು ಕಥಾ ಲೋಕಕ್ಕೆ ವಿದಾಯ ಹೇಳಿದೆ.

ಅಳಿಕೆಯಿಂದ ಹೊರಬರುತ್ತಿದ್ದ ಸೇವಾಮೃತದಲ್ಲೂ ನನ್ನ ಕೆಲವು ಕವನಗಳು ಪ್ರಕಟಗೊಂಡಿದ್ದವು. ಅವುಗಳಲ್ಲಿ ಒಂದು ಕವನ ಹಿಂದಿ ಕವಯಿತ್ರಿ ಮಹಾದೇವಿ ವರ್ಮಾ ಅವರ "ಶುಕ್ರಾ ದೋ ಇತಾ ಪ್ಯಾರ್ ಕರೋ" ಎಂಬುದರ ಅನುವಾದಿತ ಕವನ "ತುಳಿ ಅಲ್ಲವೇ ಒಲಿ" ಆಗಿತ್ತು.

ಅನಂತರ ಸುಮಾರು ಹತ್ತು ಹದಿನೈದು ವರ್ಷಗಳ ಅವಧಿಯಲ್ಲಿ ಹೇಳಿಕೊಳ್ಳಬಹುದಾದ ಬರವಣಿಗೆ ನನ್ನಿಂದ ನಡೆಯಲಿಲ್ಲ. (ಮಕ್ಕಳ ಜವಾಬ್ದಾರಿ ಕಡಿಮೆಯಾಗುವವರೆಗೆ) ದೊಡ್ಡ ವಿರಾಮದ ಅನಂತರ ಮೈಕೊಡವಿ ಬರವಣಿಗೆಯಲ್ಲಿ ನನ್ನನ್ನು ತೊಡಗಿಸಿಕೊಂಡೆ.

ನನ್ನ ಮೊದಲ ಪುಸ್ತಕ ಪ್ರಕಟಣೆಗೆ ನನಗೊದಗಿದ ಸದವಕಾಶವನ್ನು ನಾನು ಉಲ್ಲೇಖಿಸಲೇಬೇಕು. ನಾನು ಸುಳ್ಯ ಸರಕಾರಿ ಕಾಲೇಜಿನಲ್ಲಿ ಶಿಕ್ಷಕಿಯಾಗಿದ್ದೆ. 1980-90ರ ದಶಕದಲ್ಲಿ. ಅಲ್ಲಿ ಉತ್ಸಾಹ ಶಿಕ್ಷಕ ತಂಡವೊಂದಿತ್ತು. ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ವಿದ್ಯಾರ್ಥಿಗಳನ್ನು ಪ್ರೇರೇಪಿಸುವ, ತರಬೇತಿ ನೀಡುವ ಉದ್ದೇಶ ಹೊಂದಿದ್ದ ಶಿಕ್ಷಕ ವೃಂದ ಪ್ರೌಢ ಶಾಲಾ ಹಾಗೂ ಪದವಿ ಪೂರ್ವ ವಿದ್ಯಾರ್ಥಿಗಳನ್ನು ಸೇರಿಸಿಕೊಂಡು ಕನ್ನಡ ಸಂಘ, ಹಿಂದಿ ಸಂಘ, ಸಂಸ್ಕೃತ ಸಂಘ, ವಿಜ್ಞಾನ ಸಂಘ, ಪ್ರತಿಭಾ ವಿಕಾಸ ಯೋಜನೆ ಇತ್ಯಾದಿ ಸಂಘಗಳನ್ನು ಹುಟ್ಟು ಹಾಕಿಕೊಂಡು ಅತ್ಯುತ್ತಮ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಯಶಸ್ವಿಯಾಗಿ ನಡೆಸುತ್ತಿದ್ದವು. ಕನ್ನಡ ಸಂಘದ ದಶಮಾನ ಉತ್ಸವಕ್ಕೆ ಶ್ರೇಷ್ಠ ಕವಿ ಕಯ್ಯಾರ ಕಿಂಞಣ್ಣ ರೈ ಅವರನ್ನೇ ಬರಮಾಡಿಸಿಕೊಂಡಿದ್ದೆವು. ದಶಮಾನೋತ್ಸವ ಸ್ಮರಣ ಸಂಚಿಕೆಯನ್ನೂ ಹೊರ ತಂದಿದ್ದೆವು. ಅವರಿಗೆ ಸರಕಾರಿ ಶಾಲೆಯೊಂದು ವಿದ್ಯಾರ್ಥಿ ಪರ ಇಷ್ಟೊಂದು ಸಂಘಗಳನ್ನು ಕಟ್ಟಿಕೊಂಡು ಅಚ್ಚುಕಟ್ಟಾಗಿ ಕಾರ್ಯಕ್ರಮ ನಡೆಸುವುದು ಉಂಟೇ ಎಂದು ಆಶ್ಚರ್ಯವೇ ಆಶ್ಚರ್ಯ!

ಕನ್ನಡ ಸಂಘದ ವೇದಿಕೆಯನ್ನು ವಿದ್ಯಾರ್ಥಿಗಳ ಜೊತೆಗೆ ಅಧ್ಯಾಪಕರೂ ಹಂಚಿಕೊಂಡಿದ್ದರು. ಕೆಲವು ಅಧ್ಯಾಪಕರ ಕೃತಿಗಳು ಈ ಸಂಘದ ಆಶ್ರಯದಲ್ಲಿ ಬೆಳಕು ಕಂಡಿದ್ದವು. ನನಗೂ ಒಂದು ಆಶೆ ಮೂಡಿತ್ತು ನನ್ನದೂ ಒಂದು ಪುಸ್ತಕವನ್ನು ಈ ಕನ್ನಡ ಸಂಘದ ಮೂಲಕ ಪ್ರಕಟಿಸಬಾರದೇಕೆ? ಎಂದು. ಆ ಸಮಯಕ್ಕೆ ಸರಿಯಾಗಿ ಒಂದು ಘಟನೆ ನಡೆಯಿತು. ಪ್ರೌಢ ಶಾಲೆ ಅಥವಾ ಪದವಿ ಪೂರ್ವ ಕಾಲೇಜುಗಳಲ್ಲಿ ಗ್ರಂಥಾಲಯಗಳಿದ್ದರೂ ಗ್ರಂಥಪಾಲಕರು ಇರುವುದಿಲ್ಲ. ಗ್ರಂಥ ಪಾಲಕ ಕೆಲಸವನ್ನು ಹೆಚ್ಚಾಗಿ ಭಾಷಾ ಶಿಕ್ಷಕರ ತಲೆಗೆ ಕಟ್ಟುತ್ತಾರೆ. ಉಳಿದೆಲ್ಲ ಅಧ್ಯಾಪಕರಿಗಿಂತ ಭಾಷಾ ಅಧ್ಯಾಪಕರು, ಅದರಲ್ಲೂ ಕನ್ನಡದವರು ಹೆಚ್ಚು ಸಜ್ಜನರು ಎಂದು ಸರ್ವ (ಸಾ)ಮಾನ್ಯ ಅಭಿಪ್ರಾಯ.

ನನ್ನ ಸ್ನೇಹಿತೆಯ ವಿಚಾರದಲ್ಲಂತೂ ಇದು ನೂರಕ್ಕೆ ನೂರು ನಿಜ. ಹಲವು ವರ್ಷಗಳಿಂದ ಶಾಲಾ ಗ್ರಂಥ ಭಂಡಾರದ ಪ್ರಭಾರ ಗ್ರಂಥಪಾಲಿಕೆಯಾಗಿ ಅವರು ಕೆಲಸ ನಿರ್ವಹಿಸುತ್ತಿದ್ದರು. ಈಗ ಬೇರೆ ಕಾಲೇಜಿಗೆ ಹೋಗುವ ಮೊದಲು ಪುಸ್ತಕಗಳ ಪರಿಶೀಲನೆಯಾಗಬೇಕಿತ್ತು. "ಫ್ರೆಂಡ್ ಇನ್ ನೀಡ್ ಫ್ರೆಂಡ್ ಇಂಡೀಡ್" ಎಂಬಂತೆ ನಾನು ಶೀಲಾವತಿಗೆ ಸಹಾಯ ಮಾಡಲೇ ಬೇಕಿತ್ತು. ಆಗ ಅದರಲ್ಲಿ ಸುಮಾರು ಎಂಟು ಸಾವಿರಕ್ಕಿಂತ ಹೆಚ್ಚು ಪುಸ್ತಕಗಳಿದ್ದುವು. ಪುಸ್ತಕಗಳ ಪರಿಶೀಲನೆಯ ಕೆಲಸದ ಮೂಲಕ ಶೀಲಾವತಿಗೆ ಉಪಕರಿಸುವುದಕ್ಕಿಂತಲೂ ಈ ಗ್ರಂಥಾಲಯದಲ್ಲಿ ಎಂಥೆಂಥ ಪುಸ್ತಕಗಳಿದ್ದಾವೆ ಎಂಬುದನ್ನು ತಿಳಿದುಕೊಳ್ಳುವ ಆಸಕ್ತಿ ನನಗೆ ತುಂಬಾ ಇತ್ತು. ಈ ಮೂಲಕ ನನ್ನ ಭಾಗ್ಯೋದಯ ಆಗಬಹುದೆಂಬ ಕಲ್ಪನೆ ನನಗೆ ಆಗ ಕನಸಿನಲ್ಲೂ ಇರಲಿಲ್ಲ. ಪರಿಶೀಲಿಸುತ್ತಿದ್ದಂತೆ ವಿದ್ಯಾರ್ಥಿಗಳು ತಿಳಿದುಕೊಳ್ಳಬೇಕಾದಂಥ ವಿಚಾರಗಳಿರುವ ಒಳ್ಳೊಳ್ಳೆಯ ಪುಸ್ತಕಗಳನ್ನು ನಾನು ಗಮನಿಸಿದೆ. ಒಳ್ಳೆಯ ಲೇಖನಗಳನ್ನು ಆಯ್ದು ಬರೆದು ಇಟ್ಟುಕೊಂಡೆ. ಪುಸ್ತಕ ಪರಿಶೀಲನೆ ಮುಗಿಯುವಾಗ ನಾನೇ ಒಂದು ಪುಸ್ತಕ ಮಾಡುವಷ್ಟು ವಿಷಯಗಳ ಸಂಗ್ರಹ ನನ್ನಲ್ಲಿ ಸಿದ್ಧವಾಗಿತ್ತು. ಮತ್ತೆ ತಡ ಮಾಡಲಿಲ್ಲ. "ಪುರುಷಾರ್ಥ ಸಾಧಕರು" ಎಂಬ ಪುಸ್ತಕವನ್ನು ಕನ್ನಡ ಸಂಘದ ಆಶ್ರಯದಲ್ಲಿ ಲೋಕಾರ್ಪಣೆಗೊಳಿಸಿದೆ. ಹಾಕಿದ ಹಣ ಬಂತು. ಅದಕ್ಕಿಂತ ಮಿಗಿಲಾಗಿ ನನಗೆ ಒಳ್ಳೆಯ ಹೆಸರು ಬಂತು. ಹೆಜ್ಜೆಯ ರಕ್ಷಾ ಪುಟವಿರುವ ಆ ಪುಸ್ತಕ ಸಾಹಿತ್ಯ ಲೋಕಕ್ಕೆ ನಾನಿರಿಸಿದ ಮೊದಲ ಹೆಜ್ಜೆಯೇ ಆಯಿತು. (ರಕ್ಷಾಪುಟ ವೆಂಕಟ್ ಮೋಂಟಡ್ಕ)

ಆಮೇಲೆ ನಾನು ಹಿಂದೆ ತಿರುಗಿ ನೋಡಲಿಲ್ಲ. ಆ ಕನ್ನಡ ಸಂಘದ ಮೂಲಕ ಕೈಮರ, ತನನ ದಿನನ, ಲಹರಿ ಪುಸ್ತಕಗಳು ಹೊರಬಂದವು. ಸ್ವಲ್ಪ ಸಮಯದಲ್ಲೇ ನಾನೂ ಆ ಕಾಲೇಜಿನಿಂದ ವರ್ಗಾವಣೆಗೊಂಡೆ. "ಆರಂಕುಸಮಿಟ್ಟೊಡಂ ನೆನೆವುದೆನ್ನ ಮನಂ ಈ ಶಾಲೆಯಂ" ಎಂದುಕೊಂಡು ಆ ಶಾಲೆಯಿಂದ ಹೊರಟೆ.

ಸಾಹಿತ್ಯಕ ಸಂಬಂಧದಲ್ಲಿ ನನ್ನಲ್ಲಿ ತುಂಬ ಕನಸುಗಳಿದ್ದವು, ಈಗಲೂ ಇವೆ. ದೂರ ದೃಷ್ಟಿ ಇಟ್ಟುಕೊಂಡು ನನ್ನದೇ ಒಂದು ಪ್ರಕಾಶನ ಸಂಸ್ಥೆ ಕಟ್ಟಿಕೊಂಡೆ. ಮೊದಲಿದ್ದ ಉದ್ದವಾದ ಹೆಸರನ್ನು ಚುಟುಕುಗೊಳಿಸಿ ಈಗ "ಸಾಹಿತ್ಯ ಸಂಜೀವಿನಿ" ಎಂದು ಸ್ವಲ್ಪ ಬದಲಾಯಿಸಿದ್ದೇನೆ. ಮೃಗಯಾ ಸಾಹಿತಿ ಕೆದಂಬಾಡಿ ಜತ್ತಪ್ಪ ರೈ ಅವರ ಪುಸ್ತಕಗಳೊಂದಿಗೆ ನನ್ನ ಪುಸ್ತಕಗಳನ್ನು ಸೇರಿಸಿ 'ಕೆದಂಬಾಡಿ ಜತ್ತಪ್ಪ ರೈ ಗ್ರಂಥಾಲಯ' ಮಾಡಿಕೊಂಡಿದ್ದೇನೆ. ನನ್ನ ಪ್ರಕಾಶನ ಸಂಸ್ಥೆಯಿಂದ ಹನಿ ಹೊನಲು, ಕಾಡು ಮೇಡಿನ ಜಾಡು, ಕತ್ತಲೊಳಗಿನ ಕಿಡಿ ಪುಸ್ತಕಗಳಲ್ಲದೆ "ಹಳಬರ ಜೋಳಿಗೆ"ಯೆಂಬ ಸರಣಿ ಪುಸ್ತಕಗಳನ್ನು ಪ್ರಕಟಿಸುತ್ತಿದ್ದೇನೆ.

ಸಾಹಿತ್ಯಾಸಕ್ತರಾದ ಹಲವರು ನನ್ನಲ್ಲಿ ಹೀಗೆ ಕೇಳಿದ್ದುಂಟು – ಹಳಬರ ಜೋಳಿಗೆ ಒಂದು ವಿಶಿಷ್ಟ ಸಾಹಿತ್ಯ ಪ್ರಕಾರ. ನಿಮಗೆ ಈ ಕಲ್ಪನೆ ಹೇಗೆ ಬಂತು? ಹಳಬರ ಜೋಳಿಗೆಯೆಂಬ ಹೆಸರೂ ಕೂಡಾ ವಿಶಿಷ್ಟವಾದುದು. ಆ ಹೆಸರು ಯಾರು ಸೂಚಿಸಿದರು? ಈ ಪುಸ್ತಕದ ಬಗ್ಗೆ ನಿಮ್ಮ ಅನಿಸಿಕೆಯೇನು? ಇತ್ಯಾದಿ ಪ್ರಶ್ನೆಗಳು ಅವರ ಪ್ರಶ್ನೆಗಳಾದರೂ ಅದು ಎಲ್ಲರ ಪ್ರಶ್ನೆಯೆಂದೇ ಭಾವಿಸಿ ಉತ್ತರಿಸುವುದು ನನ್ನ ಕರ್ತವ್ಯವೆಂದು ನನ್ನ ಒಳಗನ್ನು ತೆರೆದಿಡುತ್ತಿದ್ದೇನೆ.

ಹಿರಿಯರು ಮಾತಾಡುವಾಗ ಕಿರಿಯರು ಕೇಳಬಾರದು ಎಂಬಂಥ ವಾತಾವರಣದಲ್ಲಿ ನಾನು ಬೆಳೆದದ್ದು. ಆದರೆ ಹಿರಿಯರ ಮಾತುಗಳ ಮಧ್ಯೆ ನುಸುಳುತ್ತಿದ್ದ ಕೆಲವು ರೋಚಕ ವಿಷಯಗಳು ಕಿವಿಗೆ ಬಿದ್ದಾಗ ಕಿವಿ ನೆಟ್ಟಗಾಗುತ್ತಿತ್ತು. ಕೇಳಬೇಕೆಂಬ ಕುತೂಹಲವನ್ನು ತಡೆಯಲು ಸಾಧ್ಯವಾಗುತ್ತಿರಲಿಲ್ಲ. ಮಾತು ಕೇಳುವಂತೆ ಬಾಗಿಲ ಹಿಂಬದಿಯಲ್ಲೋ ಕಿಟಕಿಯ ಸಮೀಪವೋ ಅಡಗಿ ನಿಂತು ಕೇಳುತ್ತಿದ್ದೆ ಮತ್ತೂ ತಡೆಯಲಾಗದಿದ್ದರೆ ಹಿರಿಯರಿಗೆ ತಿಳಿಯದಂತೆ ಅವರ ಹಿಂಬದಿಯಲ್ಲಿ ಕುಳಿತು ಕೇಳುತ್ತಿದ್ದೆ. ಅಂದಿನ ಕೆಲವರಂತೂ ಕಣ್ಣಿಗೆ ಕಟ್ಟುವಂತೆ ಎಂಥೆಂಥ ರೋಮಾಂಚಕ ವಿಷಯಗಳನ್ನು ಹಾವ ಭಾವ ಸಹಿತ ಹೇಳುತ್ತಿದ್ದರು! ಅಂಥವನ್ನು

ನಾನು ಮೈಯನ್ನೇ ಕಿವಿಯಾಗಿಸಿಕೊಂಡು ಕೇಳುತ್ತಿದ್ದೆ. ನಮ್ಮ ಹಳೆಯ ಜನರಲ್ಲಿ ಮಾತಾಡಲು ಎಷ್ಟೊಂದು ವಿಷಯಗಳಿದ್ದವು! ಅವುಗಳನ್ನು ಎಷ್ಟು ಚೆನ್ನಾಗಿ ತೆರೆದ ಮನಸ್ಸಿನಿಂದ ಹೇಳುತ್ತಿದ್ದರು! ಎಲೆಯಡಿಕೆ ಹಾಕುತ್ತಾ, ಹೊಗೆಸೊಪ್ಪಿನ ತುಂಡನ್ನು ಬಾಯಿಗೆ ಎಸೆಯುತ್ತಾ ಪೀಕದಾನಿಯಿದ್ದರೆ ಕೆಂಪು ಎಂಜಲನ್ನು ಅದಕ್ಕೆ ಉಗಿಯುತ್ತಾ ಇಲ್ಲವಾದರೆ ಹೆಗಲ ಮೇಲಿನ ಶಾಲು (ಬಹಿರ್ವಸ್ತ್ರ)ನ್ನು ಎಡಗೈಯಲ್ಲಿ ಎದೆಗಾನಿಸಿಕೊಂಡು ಹೊರ ಹೋಗಿ, ನಡುಬೆರಳು ಮತ್ತು ತೋರ್ಬೆರಳುಗಳನ್ನು ತುಟಿ ಮಧ್ಯೆ ಸ್ವಲ್ಪ ಎಡೆ ಬಿಟ್ಟು ಹಿಡಿದು ಘೂತ್ಕರಿಸಿ ಉಗಿದು ಅಷ್ಟು ದೂರಕ್ಕೆ ಕೆಂಪೆಂಜಲನ್ನು ಹಾರಿಸಿ ಪುನಃ ಮಾತು ಸುರು ಮಾಡುವ ತನಕ ಕೇಳುತ್ತ ಕುಳಿತವರ ತವಕ ಏರಿಸುವ ಪರಿ ಇಂದಿನವರಲ್ಲಿ ಎಲ್ಲಿದೆ? ಮನಸ್ಸಿನೊಳಗಿನ ಸಂತೋಷ ಉಕ್ಕಿ ಹರಿವಂತೆ ಸಶಬ್ದವಾದ ನಗು! ಇಂಥ ಅನೇಕಾನೇಕ ರಸಪೂರ್ಣ ಸಂಗತಿಗಳಿಂದ ನಮ್ಮನ್ನು ದೂರವಿರಿಸುವ ಹಿರಿಯರು- ನನಗೆ ಕೋಪ ಬರುತ್ತಿತ್ತು. ಬಂದರೇನು ಮಾಡುವುದು? ಸುಮ್ಮನಿರಬೇಕಿತ್ತು ಅಷ್ಟೇ. ಕೇಳಿದ್ದ ಅನುಭವಗಳನ್ನೆಲ್ಲ ಬರೆದಿಡುವ ಬುದ್ಧಿ ನನಗೆ ಅಂದು ಇದ್ದಿದ್ದರೆ ಎಷ್ಟು ಜೋಳಿಗೆಗಳು ತುಂಬುತ್ತಿದ್ದವೋ ಎಂದು ಪರಿತಪಿಸುತ್ತಿದ್ದೇನೆ.

ನನ್ನ ಚಿಕ್ಕ ತಮ್ಮ ನನಗಿಂತ ಹತ್ತು ವರ್ಷಕ್ಕೆ ಚಿಕ್ಕವನು. ಅವನು ಮಗುವಾಗಿದ್ದಾಗ ಅವನನ್ನು ನೋಡಿಕೊಳ್ಳಲು ಸುಳ್ಯದ ಸಮೀಪದ ಐವರ್ನಾಡು ಎಂಬಲ್ಲಿಂದ ಒಬ್ಬರು ಪ್ರಾಯದ ಹೆಂಗಸನ್ನು ಕರೆದುಕೊಂಡು ಬಂದಿದ್ದರು. ಹಲ್ಲು ಹೋಗಿತ್ತು. ಬೆನ್ನು ಬಾಗಿತ್ತು. ಸಣ್ಣ ಜೀವ. ಆದರೆ ತುಂಬಾ ಚುರುಕು. ತನ್ನಲ್ಲೇ ಏನಾದರೂ ಗುನುಗುತ್ತಾ ಸದಾ ಹಸನ್ಮುಖಿಯಾಗಿ ಇರುತ್ತಿದ್ದರು. ಯಾರದೋ ಕುಟುಂಬವನ್ನು ತನ್ನ ಕುಟುಂಬವನ್ನಾಗಿಸಿಕೊಂಡ ಆ ವಿಶಾಲ ಮತಿತ್ವವನ್ನು ನಾನು ಎಂದಿಗೂ ಮರೆಯಲಾರೆ. ಅವಿದ್ಯಾವಂತೆಯಾದರೂ ಅವರಲ್ಲಿ ಇದ್ದ ವ್ಯಾಕರಣ ಜ್ಞಾನ ಅದ್ಭುತ! ನನ್ನ ಅಕ್ಕನ ಹೆಸರು ಪಾವನಾ ಎಂದು. ಅವರು "ಆ ಹೆಸರು ಹುಡುಗರದು. ಅದು ಪವನಿ ಎಂದಾಗಬೇಕು" ಎಂದು ಹಾಗೆಯೇ ಕರೆಯುತ್ತಿದ್ದರು. ನನ್ನ ಅಣ್ಣನ ಹೆಸರು ವಸಂತ ಎಂದು. ಅದಕ್ಕೆ ಅವರ ಆಕ್ಷೇಪ ಹುಡುಗರ ಹೆಸರಲ್ಲಿ ನಾಥ ಎಂದಿರಬೇಕು ಎಂದು. ಹಾಗೆ ಅಣ್ಣನನ್ನು ವಸನಾಥ ಎಂದೇ ಕರೆಯುತ್ತಿದ್ದರು. ಆ ಕಾಲದ ವಿದ್ಯೆಯ ಗಂಧ ಗಾಳಿಯೂ ಇರದ ಅವರ ಭಾಷಾ ತಜ್ಞತೆಗೆ ಅಂದೇ ಮಾರು ಹೋಗಿದ್ದೆ. ನನ್ನನ್ನು ತಮ್ಮ ಮೊಮ್ಮಗಳ ಹೆಸರಲ್ಲಿ ವಾರಿಜ ಎನ್ನುತ್ತಿದ್ದರು. ನನ್ನ ಚಿಕ್ಕ ತಮ್ಮನನ್ನು ತಮ್ಮ ಮಗನ ಹೆಸರಲ್ಲಿ ಬಾಬಣ್ಣ ಎಂದು ಕರೆಯುತ್ತಿದ್ದರು.

ಅಂಥ ಆ ಹಿರಿಮೆ ಕುವೆಂಪು ಬರೆದಿರುವ ಕಥೆಗಾರ ಮಂಜಣ್ಣನಂತೆ ಕಥಾಸರಿತ್ಸಾಗರವಾಗಿದ್ದರು. ಜನಪದ ಹಾಡುಗಳ ಜೋಳಿಗೆಯಾಗಿದ್ದರು. ನಮ್ಮ ಮನೆಯಲ್ಲಿ ಅವರಿಂದ ಕಥೆ ಹೇಳಿಸಿಕೊಳ್ಳುವ ಉಮೇದು ಇದ್ದುದು ನನಗೆ ಮಾತ್ರ. ರಾತ್ರಿಯಾಗುತ್ತಲೇ ನಾನು ಅವರ ಚಾಪೆಯ ಒಂದು ಬದಿಯಲ್ಲಿ ಮಲಗಿ "ಕಥೆ ಪನ್ಲೆ" ಎನ್ನುತ್ತಿದ್ದೆ. ಅವರು ತುಳು ಭಾಷೆಯವರು. ನಮ್ಮ ಮನೆಯಲ್ಲಿ ತುಳು ಮಾತನಾಡದಿದ್ದರೂ ತುಳು ನನಗೆ ಅರ್ಥವಾಗುತ್ತಿತ್ತು. ಅವರ ಕಥೆಗಳಲ್ಲಿ "ಚಂದಮಾಮ"ದಲ್ಲಿ ಬರುವಂಥ ರಾಜಕುಮಾರ ರಾಜಕುಮಾರಿಯರು, ಅಡುಗೂಲು ಅಜ್ಜಿಯರು, ಅಪಾಯಕ್ಕೆ ಒಳಗಾದಾಗ ಉಪಾಯದಿಂದ ತಪ್ಪಿಸಿಕೊಳ್ಳುತ್ತಿದ್ದ ಜಾಣೆ ಹುಡುಗಿಯರು, ಅತೀಂದ್ರಿಯ ಶಕ್ತಿವಂತರನ್ನು ಸೋಲಿಸುವ ಪುಟಾಣಿಗಳು ಹೀಗೆ ತರಾವರಿ ವ್ಯಕ್ತಿಗಳು ಜೀವ ತಳೆದು ನನ್ನೆದುರು ಬರುತ್ತಿದ್ದರು. ಆದರೆ ಇವರ ಕಥೆಗಳಲ್ಲಿ ಗ್ರಾಮೀಣ ಅಶ್ಲೀಲತೆಯೂ ಇರುತ್ತಿತ್ತು. ಉದಾ : "ಪೋ...ಪೋ...ಪೋ.. ರಾಜಕುಮಾರೆ ಗಣಪಾತಿ ಸೂಳೆನಾಡೆಗ್ ಪೋಯೆ" ಇಲ್ಲಿ ಬಂದಿರುವ ಗಣಪಾತಿ ಸೂಳೆ ವೇಶ್ಯಾ ಗೃಹದ ಮುಖ್ಯಸ್ಥೆ. ಅದೇನೇ ಇರಲಿ ಕಥೆ ಹೇಳುವ ಕಲೆ ಅವರಿಗೆ ಸಿದ್ಧಿಸಿತ್ತು. ಅವರು ಹೇಳಿದ ಕಥೆಗಳು ನನಗಿಂದು ಮರೆತು ಹೋಗಿವೆ. ಆದರೆ ಅವು ಅಂದಿನ ಸಾಮಾನ್ಯರ ಬದುಕಿನ ನಾನಾ ಸಮಸ್ಯೆ, ಅನುಭವಗಳ ಹೂರಣವನ್ನೇ ಹೊಂದಿದ್ದವು ಎಂದು ನನಗನ್ನಿಸುತ್ತಿದೆ. ನಮ್ಮ ಮನೆಯಲ್ಲಿ ಅವರು ಕೆಲವು ತಿಂಗಳುಗಳ ಕಾಲ ಮಾತ್ರ ಇದ್ದರು. ಆ ಅಲ್ಪ ಅವಧಿಯಲ್ಲೇ ನಾನು ಅವರ ಪ್ರಭಾವಕ್ಕೆ ಒಳಗಾಗಿದ್ದೆ ಎಂದರೆ

ತಪ್ಪಲ್ಲ. ಅವರ ಚಿತ್ರ ನನ್ನ ಕಣ್ಣಿಂದ ಮರೆಯಾಗಲಿಲ್ಲ. ಅವರ ನೆನಪು ಮನಸಿನಿಂದ ದೂರ ಸರಿದಿಲ್ಲ. ಅವರೆಸ್ನುತ್ತಿದ್ದ ಆ "ಪೋ... ಪೋ...ಪೋ... " ಶಬ್ದ ಇನ್ನೂ ಕಿವಿಯಲ್ಲಿ ಅನುರಣಿಸುತ್ತಲೇ ಇದೆ. ಹಳಬರ ಜೋಳಿಗೆಯ ಹಿಂದಿರುವ ವ್ಯಕ್ತಿ ಮತ್ತು ಶಕ್ತಿಯ ಮೂಲವನ್ನು ಹುಡುಕುತ್ತಾ ಹೋದರೆ ನನಗೆ ಮೊದಲು ನೆನಪಾಗುವುದು ಅವರನ್ನೇ. ಅವರನ್ನು ಕುರಿತು ಬರೆದು ಒಂದಿಷ್ಟು ಋಣ ಮುಕ್ತಳಾದೆ ಎಂದು ಇಂದು ತೃಪ್ತಿ.

ಹಳಬರ ಜೋಳಿಗೆ ಪುಸ್ತಕ ರೂಪದಲ್ಲಿ ಬರುವ ಮೊದಲೇ – ಬಹಳ ಸಮಯದ ಹಿಂದೆಯೇ ನನ್ನಲ್ಲಿ ಇಂಥ ವಿಷಯಕ್ಕೇ ಮೀಸಲಾದ ಒಂದು ಪುಸ್ತಕ ತರಬೇಕೆಂಬ ಅದಮ್ಯ ಹಂಬಲ ಮೊಳೆತಿತ್ತು. ಆದರೆ ವಿಷಯ ಸಂಗ್ರಹಣೆ ಮತ್ತು ಪುಸ್ತಕ ಪ್ರಕಟಣೆಯ ವೆಚ್ಚವನ್ನು ಸರಿದೂಗಿಸುವುದು ಸಮಸ್ಯೆಯಾಗಿತ್ತು. ಅದಕ್ಕೆ ಮೊದಲು ವಿಷಯ ಸಂಗ್ರಹಿಸೋಣ, ಎಂಥೆಂಥ ವಿಷಯಗಳು ಸಿಗುತ್ತವೆ, ಎಷ್ಟು ಸಿಗುತ್ತವೆ ಎಂದು ನೋಡಿ ಆಮೇಲೆ ಮುದ್ರಣದ ಬಗ್ಗೆ ಚಿಂತಿಸೋಣ ಎಂದು ನಿರ್ಧರಿಸಿಕೊಂಡು ಕಾರ್ಯೋನ್ಮುಖಳಾದೆ. ನನ್ನ ನಿರೀಕ್ಷೆಗೂ ಮೀರಿ ಒಳ್ಳೆಯ ಲೇಖನಗಳು ದೊರೆತು ಪುಸ್ತಕ ಪ್ರಕಟವಾಯಿತು. ಹಳಬರ ಜೋಳಿಗೆ ಸರಣಿ ಪುಸ್ತಕವಾಗಿ ಬರಲಿದೆ ಎಂಬ ಸೂಚನೆಯಾಗಿ ಅದನ್ನು ಭಾಗ –1 ಎಂದು ಪ್ರಕಟಿಸಿದೆ. ಇಷ್ಟರಲ್ಲಿ ಕನ್ನಡದಲ್ಲಿ 6, ಇಂಗ್ಲೀಷ್‌ನಲ್ಲಿ 1 ಪುಸ್ತಕ ಬಂದಿವೆ. ಇದೀಗ 7ನೆಯ ಪುಸ್ತಕ ಸಿದ್ಧವಾಗುತ್ತಿದೆ.

ಈಗಾಗಲೇ ನಾವು ನಮ್ಮ ಹಿರಿಯರ ಬದುಕಿನ ಬಹಳಷ್ಟು ವಿಚಾರಗಳನ್ನು ಕಳೆದುಕೊಂಡಿದ್ದೇವೆ. ಉಳಿದುದನ್ನಾದರೂ ದಾಖಲಿಸಿ ಇಡುವ ಕಾಳಜಿ ನನ್ನದು. ಈ ಕೆಲಸ ಶೀಘ್ರವಾಗಿ ಮತ್ತು ವ್ಯಾಪಕವಾಗಿ ನಡೆಯಬೇಕಾದ ಅಗತ್ಯವಿದೆ. ಬಾಹ್ಯ ಶಕ್ತಿಗಳ ದೈತ್ಯ ಬೀಸಿನಲ್ಲಿ ನಮ್ಮದೆನ್ನುವುದು ನೆಲಸಮವಾಗುವ ಮೊದಲು ನಮ್ಮದೇನಿತ್ತು ಎಂಬ ಅರಿವು ನಮ್ಮ ಮುಂದಿನ ಪೀಳಿಗೆಗೆ ಇರಬೇಕು. ನಾಳಿನ ನಮ್ಮ ಪೀಳಿಗೆಗಾಗಿ ಸಂಚಯಿಸಿ ಇಡುವ ಈ ಹೊತ್ತಗೆ ಅವರಿಗೆ ಖುಷಿಕೊಡುವ, ಬೆರಗಾಗಿಸುವ, ರೋಮಾಂಚನವನ್ನು ಉಂಟುಮಾಡುವ, ಹೆಮ್ಮೆ ಪಡುವ ಹಾಗೂ ನಮ್ಮ ಸಂಸ್ಕೃತಿಯ ಬಗ್ಗೆ ಅಭಿಮಾನ ಮೂಡಿಸುವಂತಿರಲಿ ಎಂಬ ಆಶಯವನ್ನು ಹೊಂದಿದೆ.

ಕೃತಿಗೆ ಹೆಸರು ಕೊಡುವುದು ಸುಲಭದ ಕೆಲಸವಲ್ಲ. ಇಂಥ ಪುಸ್ತಕಕ್ಕೆ ಎಂಥ ಹೆಸರು ಕೊಡಲಿ ಎಂದು ನಾನೂ ಸಾಕಷ್ಟು ಯೋಚಿಸಿದವಳೇ. ನಾನು ಒಮ್ಮೆ ಪುತ್ತೂರು ಕಡೆಗೆ ಬಸ್ಸಿನಲ್ಲಿ ಹೋಗುತ್ತಿದ್ದೆ. ದಾರಿ ಮಧ್ಯೆ ಒಬ್ಬ ಭಿಕ್ಷುಕನೋ ಅಥವಾ ಬೈರಾಗಿಯೋ ಬಸ್ಸಿಗೆ ಹತ್ತಿದ. ಅವನ ಹೆಗಲಲ್ಲಿ ನೇತಾಡುತ್ತಿತ್ತು ಜೋಳಿಗೆ. ತಕ್ಷಣ ನನ್ನ ತಲೆಯೊಳಗೆ ಹೆಸರು ಮಿಂಚಿತು. ಕೇಳಲು ಸೊಗಸಿಲ್ಲವಾದರೂ ಆಳವೂ ವಿಸ್ತರಿಸಿಕೊಂಡು ಹೋಗಬಲ್ಲ ಅರ್ಥವೂ ಇದಕ್ಕಿದೆ ಎಂದು ನನ್ನ ಭಾವನೆ.

ಹಳಬರ ಜೋಳಿಗೆಯ ಕೆಲಸ ಅತ್ಯಂತ ಜರೂರಾಗಿ ನಡೆಯಬೇಕಾಗಿದೆ. ನಮ್ಮ ಊರಲ್ಲಿ ಮಾತ್ರವಲ್ಲ, ಸಮಗ್ರ ಭಾರತ ದೇಶದಲ್ಲಿಯೇ ಆಗಬೇಕಾದ ಕೆಲಸ ಇದು. ಅಷ್ಟು ವ್ಯಾಪಕವಾಗಿ ವಿಷಯ ಸಂಗ್ರಹಿಸಿದರೆ ಮಾತ್ರ ಶ್ರೀಸಾಮಾನ್ಯರ ಸಂಸ್ಕೃತಿಯ ಚರಿತ್ರೆ ನಮಗೆ ಸಿಗುತ್ತದೆ. ಮುಂದಿನ ಪೀಳಿಗೆಗೆ ಇದೊಂದು ಅಮೂಲ್ಯ ದಾಖಲೆಯಾಗುತ್ತದೆ. ನಾವೀಗ ಓದುವುದು ರಾಜಕೀಯ ಚರಿತ್ರೆ. ನಮಗೆ ಬೇಕಾಗಿರುವುದು ಜನಸಾಮಾನ್ಯರ ಚರಿತ್ರೆ. ದಾಖಲಿಸಿ ಇಟ್ಟರೆ ಅಂಥ ಜನಪರ ಚರಿತ್ರೆಗೆ ಮುಂದೆ ಹಳಬರ ಜೋಳಿಗೆ ಆಕರ ಪುಸ್ತಕವೂ ಆಗಬಹುದು.

ನನ್ನ ಈ ಕೆಲಸದಲ್ಲಿ ಸಾಕಷ್ಟು ಶ್ರಮವಿದೆ. ಆರ್ಥಿಕವಾಗಿ ನಷ್ಟವನ್ನೂ ಅನುಭವಿಸಿದ್ದೇನೆ. ಆದರೆ ನನಗಿದು ತೃಪ್ತಿ ಕೊಟ್ಟಿದೆ. ಬದುಕಿಗೊಂದು ಸಾರ್ಥಕತೆ ನೀಡಿದೆ. ನೂರಾರು ಬಗೆಗಳ ಲೇಖನಗಳನ್ನು ಓದುತ್ತಾ ಅವುಗಳನ್ನು ಬರೆಯುತ್ತಾ ಹೋಗುವಾಗ ಆ ಘಟನೆಗಳು, ವ್ಯಕ್ತಿಗಳು ಮರುಹುಟ್ಟುಗೊಂಡು, ಆ ಸನ್ನಿವೇಶ ನನ್ನ ಕಣ್ಣೆದುರು ನಿಜವಾಗಿ ನಡೆಯುತ್ತಿರುವಂತೆ ಭಾಸವಾಗುವಾಗ ನಾನೂ ಆ ಕಾಲದವಳಾಗಿ

ಅದಕ್ಕೆ ಸಾಕ್ಷಿಯಾಗುತ್ತಾ ಅನಿರ್ವಚನೀಯ ಆನಂದವನ್ನು ಅನುಭವಿಸುತ್ತೇನೆ.

ಅದೋ – ಹಿಂದಿನಿಂದೊಂದು ಧ್ವನಿ "ಜಯಮ್ಮನಿಗೆ ಒಳ್ಳೆಯ ಭವಿಷ್ಯವಿದೆ" ಆ ಭವಿಷ್ಯವಾಣಿ ಮತ್ತೆ ಜೋಳಿಗೆಯನ್ನು ಹೆಗಲಿಗೇರಿಸಲು ನಿರಂತರ ಸ್ಫೂರ್ತಿಯಾಗುತ್ತಿದೆ ನನಗೆ! ನನ್ನ ಹಿಂದೆಯೂ ಜೋಳಿಗೆಯನ್ನು ಹೆಗಲಿಗೆ ಏರಿಸಿಕೊಳ್ಳುವವರ ಸಾಲಿರಲಿ ಎಂದು ಹಾರೈಸುತ್ತೇನೆ.

ಬಾಷ್ಪಾಂಜಲಿ

ನಮ್ಮದೀ ಮನೆ, ನೆಮ್ಮದಿಯ ತವರ್ಮನೆ
ಫರಂಗಿಗಳಿಗಿಲ್ಲೇನು ಕೆಲಸ?
ಪ್ರಭುಗಳ ಕಾಲ ಬಳಿಯೇ ಕುಸಿತ! ಗಡಿಪಾರಿನಾದೇಶ !!

ಬಡಿದೆದ್ದಿತು, ಮೈ ಕೊಡವಿತು ಕೊಡಗಿನ ವೀರಜನ
ಕ್ರಾಂತಿಯ ಸೆಲೆಯೊಡೆಯಿತು, ಬೋರ್ಗರೆಯಿತು ಧುಮುಕಿ
ಗಿರಿಗಿರಿಯಲೂ ಮಾರ್ಮೊಳಗಿತು ರಣ ಕಹಳೆಯ ಮೊರೆತ
ದುರುಗುಟ್ಟಿತು, ಥರಗುಟ್ಟಿತು, ಮಡುಗಟ್ಟಿತು ಭೀತಿ
ಜನ ಮನದಲಿ ನೆಲೆ ನಿಂತಿತು ಅಮರ ಸುಳ್ಯದ ಕ್ರಾಂತಿ

ಸೆಳೆ ಮಿಂಚಿಗೆ ಎದೆ ಸೀಳುತ ಮುನ್ನುಗ್ಗಿತು ಸೇನೆ
ಒಳ ಸಂಚಿನ ಅರಿವಿಲ್ಲದೆ ಸೆರೆಯಾಯಿತು 'ಸಿಂಹ'
ಶರಣಾಗದೆ ನೇಣಾಯಿತು ಅಪ್ಪಯ್ಯಗೆ ಅಂದು
ಸ್ವಾತಂತ್ರ್ಯದ ನೆರಳಾಯಿತು ಕೊಡಗಿಗೆ ಇಂದು
ಕರ ಮುಗಿಯುತ ಶಿರಬಾಗುವ ಅಪ್ಪಯ್ಯಗೆ ಎಂದೂ.

ಮಡಿಕೇರಿಯಲ್ಲಿ ಸ್ಥಾಪಿಸಲಾಗಿರುವ ಗುಡ್ಡೆಮನೆ ಅಪ್ಪಯ್ಯಗೌಡರ ಪ್ರತಿಮೆಯಲ್ಲಿ
ಅಳವಡಿಸಲಾದ ಶಿಲೆಯಲ್ಲಿ ಈ ನನ್ನ ಕವನ ಕೆತ್ತಲ್ಪಟ್ಟಿದೆ.

✍ ಬಾರಿಯಂಡ ಆರ್. ಜೋಯಪ್ಪ
ಮದೆ

ಅನುಭವ ಲೇಖನ

ಜನರ ಧ್ವನಿಯಾಗಿ, ಕಿವಿಗೆ ಇಂಪಾಗಿ ಮಡಿಕೇರಿ ಆಕಾಶವಾಣಿ



✍ ಪಟ್ಟಡ ಶಿವಕುಮಾರ್
ಉಪನ್ಯಾಸಕರು
ಸರಕಾರಿ ಸ್ವತಂತ್ರ ಪ.ಪೂ.ಕಾಲೇಜು,
ಕಾರ್ಯ, ದೊಡ್ಡಕವಲಂದೆ ಹೋಬಳಿ,
ನಂಜನಗೂಡು ತಾಲೂಕು, ಮೈಸೂರು ಜಿಲ್ಲೆ

ಸುಮಾರು ಎಂಟತ್ತು ವರ್ಷಗಳ ಹಿಂದಿನ ಮಾತು. ಅದಾಗ ಮಡಿಕೇರಿ ಆಕಾಶವಾಣಿ ಹುಟ್ಟಿ ಹತ್ತು ವರ್ಷ ಸಂದ ಸಂದರ್ಭ. ತನ್ನ ದಶಮಾನೋತ್ಸವವನ್ನು ಆಚರಿಸಿಕೊಳ್ಳುತ್ತಿತ್ತು. ಜುಲೈ ತಿಂಗಳ ಧೋ... ಎಂದು ಸುರಿಯುತ್ತಿರುವ ಮಳೆಯ ಮಧ್ಯೆ ಮುತ್ತಾರ್ಮುಡಿಯ ದೇರಜೆ ಕುಟುಂಬಸ್ಥರ ಗದ್ದೆಯಲ್ಲಿ ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿಯ ಆಶ್ರಯದಲ್ಲಿ ಕೆಸರುಗದ್ದೆ ಕ್ರೀಡಾಕೂಟ ನಡೆಯುತ್ತಿತ್ತು. ಅಕಾಡೆಮಿ ನಿರ್ದೇಶಕನಾಗಿ ನಾನು ಕೆಲಸ ನಿಮಿತ್ತ ಅತ್ತಿಂದಿತ್ತ ಓಡಾಡುತ್ತಿದ್ದ ಸಂದರ್ಭದಲ್ಲೇ ಮಾರುತಿ ಓಮ್ನಿ ಕಾರಿನಲ್ಲಿದ್ದ , ಆಕಾಶವಾಣಿಗೆ ಸೇರಿದ ನನಗೆ ಅಪರಿಚಿತರಾದ ಇಬ್ಬರು ನನ್ನನ್ನು ಬಳಿಗೆ ಕರೆದು ಮಡಿಕೇರಿ ಆಕಾಶವಾಣಿಯ ಬಗ್ಗೆ ಅಭಿಪ್ರಾಯ ಕೇಳಿದರು. ನಿಜ ಹೇಳಬೇಕೆಂದರೆ ಮಡಿಕೇರಿ ಆಕಾಶವಾಣಿಯ ಬಗ್ಗೆ ನನಗಾಗ ಇದ್ದ ತಿಳಿವಳಿಕೆ ಅಷ್ಟಕ್ಕಷ್ಟೇ. ಆದರೂ ಎಲ್ಲಾ ಕಾರ್ಯಕ್ರಮಗಳು ಸ್ಪಷ್ಟವಾಗಿ ಮೂಡಿಬರುತ್ತಿವೆ ಎಂದಷ್ಟೇ ಹೇಳಿ ಅಲ್ಲಿಂದ ಜಾರಿಕೊಂಡೆ.

ಮುಂದೊಂದು ದಿನ ನಾಪೋಕ್ಲು ಪದವಿ ಪೂರ್ವ ಕಾಲೇಜಿನಲ್ಲಿ ನಾನು ಗೌರವ ಉಪನ್ಯಾಸಕನಾಗಿ ಕಾರ್ಯ ನಿರ್ವಹಿಸುತ್ತಿದ್ದಾಗ, ಕಾಲೇಜು ವಾರ್ಷಿಕೋತ್ಸವಕ್ಕೆ, ಆಗಿನ ಆಕಾಶವಾಣಿ ನಿರ್ದೇಶಕರನ್ನು ಮುಖ್ಯ ಅತಿಥಿಯಾಗಿ ಆಹ್ವಾನಿಸಿದ್ದರು. ಆಗ ನಾನು ಅತ್ಯುತ್ಸಾಹದಿಂದ ಕಾರ್ಯಕ್ರಮ ನಿರೂಪಣೆ ಮಾಡುತ್ತಿದ್ದೆ. ಅದನ್ನು ಗಮನಿಸಿದ ನಿರ್ದೇಶಕರು ತಮ್ಮ ಭಾಷಣದಲ್ಲಿ ನನ್ನನ್ನು ಪ್ರಶಂಸಿಸಿದಲ್ಲದೆ, ಕಾರ್ಯಕ್ರಮ ಮುಗಿದ ಮೇಲೆ ನನ್ನನ್ನು ವೈಯಕ್ತಿಕವಾಗಿ ಭೇಟಿಯಾಗಿ, ಆಕಾಶವಾಣಿಯಲ್ಲಿ ನಿಮ್ಮಂತಹವರಿಗೆ ಸಾಕಷ್ಟು ಅವಕಾಶಗಳಿದ್ದು , ಆಕಾಶವಾಣಿ ಕೇಂದ್ರಕ್ಕೆ ಬರುವಂತೆ ಆಹ್ವಾನಿಸಿದರು. ತಡಮಾಡದೆ ನಾನು ಬಹಳ ಹರ್ಷದಿಂದಲೇ ಆಕಾಶವಾಣಿಯತ್ತ ಹೆಜ್ಜೆ ಹಾಕಿದೆ.

ಆಕಾಶವಾಣಿಯಲ್ಲಿ ಕೆಲಸವೇ ಸಿಕ್ಕಿಬಿಡುತ್ತದೆನ್ನುವ ಆಶಾವಾದದೊಂದಿಗೆ, ನೂರೆಂಟು ಕನಸುಗಳನ್ನು ಹೊತ್ತು ಅಂದು ಆಕಾಶವಾಣಿಯತ್ತ ಮೊದಲ ಬಾರಿಗೆ ಹೆಜ್ಜೆ ಹಾಕಿದೆ. ಅಲ್ಲಿ ಅದೇ ಹಳೆ ಪರಿಚಯದ ನಿರ್ದೇಶಕರನ್ನು ಭೇಟಿ ಮಾಡಿದಾಗ, ಅವರು ಬಹಳ ಸಂತಸದಿಂದಲೇ ಸ್ವಾಗತಿಸಿ, ಆಗಿನ ಕಾರ್ಯಕ್ರಮ ನಿರ್ವಾಹಕರಾದ ವಿ.ಮಾ.ಜಗದೀಶ್‌ರವರನ್ನು ಪರಿಚಯಿಸಿ ಅವರ ಬಳಿ ಕಳುಹಿಸಿಕೊಟ್ಟರು. ನಾನೇನೋ ಯಾವುದೋ ಒಂದು ಕೆಲಸ ನೀಡುತ್ತಾರೆ ಎಂದು ಹೋದವನಿಗೆ ವಿ.ಮಾ. ಜಗದೀಶ್‌ರವರು ಕೇಳಿದ ಪ್ರಶ್ನೆ 'ನೀವು ಯಾವ ಕಾರ್ಯಕ್ರಮ ಕೊಡುತ್ತೀರಿ' ಎಂದು. ಯಾವುದೇ ಪೂರ್ವಸಿದ್ಧತೆಯಿಲ್ಲದೆ ಹೋದವನಿಗೆ, ಏನು ಹೇಳಬೇಕೆಂದು ತೋಚದೆ ನೀವು ಹೇಳಿದ ಕಾರ್ಯಕ್ರಮ ಕೊಡುತ್ತೇನೆ ಎಂದೆ. ಸುಮಾರು ಒಂದು ಗಂಟೆ ನನ್ನ ತಲೆ ಕೊರೆಯಿಸಿಕೊಂಡು ಅಲ್ಲಿಂದ ಹೊರಬಿದ್ದೆ. ಆದರೂ ಛಲ ಬಿಡದೆ 'ಕೊಡಗಿನಲ್ಲಿ ಗೌಡ ಸಂಸ್ಕೃತಿ' ಎಂಬ ಲೇಖನವನ್ನು (ಮುಂದೆ ಆ ಲೇಖನ 'ಆಂದೋಲನ' ದಿನಪತ್ರಿಕೆಯಲ್ಲಿ ಪ್ರಕಟಗೊಂಡಿತು.) ಬರೆದು ಮತ್ತೊಮ್ಮೆ ಜಗದೀಶ್‌ರವರನ್ನು ಭೇಟಿಯಾದೆ. ಅವರು ಅದು ಹಾಗೆ ಆಗಬೇಕು, ಹೀಗೆ ಆಗಬೇಕು

ಎಂದೆಲ್ಲಾ ಸಲಹೆ ಕೊಟ್ಟರು. ಇದಾದ ಮೇಲೆ ಅತ್ತ ಇನ್ನೆಂದೂ ತಲೆ ಹಾಕಲೇಬಾರದೆಂದು ನಿರ್ಧರಿಸಿ ಮರಳಿದೆ. ವಿ.ಮಾ.ಜಗದೀಶ್‌ರವರೇ ಹಾಗೆ. ಅವರಿಗೆ ಎಲ್ಲಾ ವಿಷಯಗಳ ಬಗ್ಗೆ ಅಪಾರ ಜ್ಞಾನವಿತ್ತು. ಆದುದರಿಂದ ಎದುರಿಗೆ ಕುಳಿತವರನ್ನು ನೂರೆಂಟು ಪ್ರಶ್ನೆ ಹಾಕಿ ಪೇಚಿಗೆ ಸಿಲುಕಿಸುತ್ತಿದ್ದರು. ಎದುರಿಗೆ ಕುಳಿತವರು ಉತ್ತರ ಹೇಳಿದರೂ ಅದನ್ನು ಒಪ್ಪಿಕೊಳ್ಳುವವರಲ್ಲ. ಆದುದರಿಂದ ಅವರೊಡನೆ ಮಾತಾಡಲೂ ಕೆಲವರು ಅಂಜುತ್ತಿದ್ದರು. ಆದರೆ ಎಂತಹವರಿಂದಲೂ ಉತ್ತಮ ಕಾರ್ಯಕ್ರಮ ಮಾಡಿಸುವ ಕಲೆಗಾರಿಕೆ ಅವರಲ್ಲಿತ್ತು.

ಮುಂದೆ ನಾನು ಮದೆನಾಡಿನ ಮದೆಮಹೇಶ್ವರ ಕಾಲೇಜಿನಲ್ಲಿ ಉಪನ್ಯಾಸಕನಾಗಿ ಸೇರಿಕೊಂಡಾಗ ನನ್ನ ಗುರುಗಳಾದ ಬಾರಿಯಂಡ ಜೋಯಪ್ಪನವರ ಸಾನ್ನಿಧ್ಯ ದೊರೆಯಿತು. ಅದಾಗ ಮಡಿಕೇರಿ ಆಕಾಶವಾಣಿಗೆ ಸ್ಫೂರ್ತಿಯ ಸೆಲೆ, ಉತ್ಸಾಹಿ ಮಹಿಳೆ ಏಸುಪ್ರಿಯ ಇಂದಿರಾ ಗಜರಾಜ್‌ರವರು ನಿರ್ದೇಶಕರಾಗಿ ಬಂದಿದ್ದು , ಮಡಿಕೇರಿ ಆಕಾಶವಾಣಿಯಲ್ಲಿ ಹೊಸ ಹೊಸ ಜನಪ್ರಿಯ ಕಾರ್ಯಕ್ರಮಗಳು ಬಿತ್ತರಗೊಳ್ಳಲಾರಂಭಿಸಿದವು. ಅಂತಹ ಕಾರ್ಯಕ್ರಮಗಳಲ್ಲೊಂದು 'ಸ್ನೇಹ ಕಾವೇರಿ'. ಪ್ರತಿ ಸೋಮವಾರ ರಾತ್ರಿ ಎಂಟು ಗಂಟೆಗೆ ಪ್ರಸಾರವಾಗುವ ಈ ಕಾರ್ಯಕ್ರಮದಲ್ಲಿ ಒಂದೊಂದು ವಾರ ಒಂದೊಂದು ಭಾಷೆಗೆ ಆದ್ಯತೆ ನೀಡಲಾಗಿತ್ತು. ಅರೆಭಾಷೆ ಕಾರ್ಯಕ್ರಮ ನೀಡಲು ಬಾರಿಯಂಡ ಜೋಯಪ್ಪನವರಿಗೆ ಆಹ್ವಾನ ನೀಡಿದಾಗ, ನಾವು ಒಂದು ತಂಡವನ್ನು ರಚನೆ ಮಾಡಿಕೊಂಡು ಅದರ ಮೂಲಕ ಕಾರ್ಯಕ್ರಮ ನೀಡಲು ಆರಂಭಿಸಿದೆವು. ಅದೇ ವಿ.ಮಾ. ಜಗದೀಶ್ ನಿರ್ದೇಶನ ಮಾಡುತ್ತಿದ್ದರು.

ಹೊಸೂರು ರುಕ್ಮಿಣಿ, ಬೈನೆರವನ ಪ್ರಮೀಳಾ, ಮಣಿಂಡ್ರ ರೇಖಾ ಉಲ್ಲಾಸ, ಬೈತಡ್ಕ ಜಾನಕಿ ಬೆಳ್ಯಪ್ಪ, ಬಾರಿಯಂಡ ದಿವ್ಯಾ ಜೋಯಪ್ಪ, ಬೈತಡ್ಕ ದೇವಮ್ಮ ಮೊಣ್ಣಪ್ಪ ಇನ್ನೂ ಹಲವಾರು ಮಂದಿ ನಮ್ಮ ತಂಡದಲ್ಲಿ ಇರುತ್ತಿದ್ದರು. ಪ್ರಸ್ತುತ ಸಮಾಜದಲ್ಲಿರುವ ಸಮಸ್ಯೆಗಳನ್ನು ವಿಡಂಬನೆ ಮಾಡುವ ಬಾರಿಯಂಡ ಜೋಯಪ್ಪ ವಿರಚಿತ 'ಮಾತೊಳಗೆ ಮಾತ್'ಬಹಳ ಜನಮನ್ನಣೆ ಗಳಿಸಿತು. ಇದರೊಂದಿಗೆ ಅವರೇ ಬರೆದ 'ಬದ್ಕೊಳಗೆ ಬದ್‌ಕ್', 'ಇಲ್ಲಿ ಕಲ್ಲ್ ಪಿಸುಗುಟ್ಟಿದೆ' ಎನ್ನುವ ನಾಟಕಗಳಲ್ಲಿ ಭಾಗವಹಿಸುವ ಅವಕಾಶ ನನಗೆ ಸಿಕ್ಕಿತು. ಇದೇ ಹೊತ್ತಿನಲ್ಲಿ ಕೊಡಗು ಗೌಡ ಮಹಿಳಾ ಒಕ್ಕೂಟದವರೂ ಹಲವಾರು ಕಾರ್ಯಕ್ರಮಗಳನ್ನು ನೀಡುತ್ತಾ ಬಂದರು.

ಅಲ್ಲಿಂದ ಮುಂದೆ ಆಕಾಶವಾಣಿಯೊಂದಿಗಿನ ನನ್ನ ಒಡನಾಟ ಹೆಚ್ಚಾಯಿತು. ಅದರಲ್ಲೂ ಸುಬ್ರಾಯ ಸಂಪಾಜೆ, ಕೂಪದಿರ ಶಾರದಾ ನಂಜಪ್ಪ ಮೊದಲಾದವರ ಪ್ರೋತ್ಸಾಹದಿಂದ ಕಾರ್ಯಕ್ರಮ ನೀಡುವ ಉತ್ಸಾಹವೂ ಹೆಚ್ಚಾಯಿತು. ಮುಂದೆ ಮಡಿಕೇರಿಯಲ್ಲಿ ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿ ಆಶ್ರಯದಲ್ಲಿ ನಡೆಯುವ ಗೌಡ ಕುಟುಂಬಗಳ ನಡುವಿನ ಕ್ರಿಕೆಟ್ ಕಪ್ ಪಂದ್ಯಾಟದ ಅರೆಭಾಷೆಯಲ್ಲಿ ನೇರ ವೀಕ್ಷಕ ವಿವರಣೆ, ಮಡಿಕೇರಿ ದಸರಾ ಉತ್ಸವದ ದಶಮಂಟಪಗಳ ನೇರ ವೀಕ್ಷಕ ವಿವರಣೆ, ತುಲಾ ಸಂಕ್ರಾಂತಿಯಂದು ತಲಕಾವೇರಿಯಲ್ಲಿ ಜರುಗುವ ತೀರ್ಥೋದ್ಭವದ ನೇರ ವೀಕ್ಷಕ ವಿವರಣೆ, ವಿರಾಜಪೇಟೆಯಲ್ಲಿ ಕೊಡವ ಕುಟುಂಬಗಳ ಕ್ರಿಕೆಟ್ ಪಂದ್ಯಾಟದ ಉದ್ಘಾಟನಾ ಕಾರ್ಯಕ್ರಮ, ಭಾಗಮಂಡಲದ ಕಾವೇರಿ ಮರಾಥಾನ್‌ನ ವೀಕ್ಷಕ ವಿವರಣೆ–ಹೀಗೆ ಅರೆಭಾಷೆಯ ವೀಕ್ಷಕ ವಿವರಣೆಗಳ ಜವಾಬ್ದಾರಿ ನನಗೆ ದೊರೆಯಿತು. ಮದೆ ಮಹೇಶ್ವರ ಕಾಲೇಜು ವತಿಯಿಂದಲೂ ಹಲವು ಕಾರ್ಯಕ್ರಮಗಳನ್ನು ನೀಡುವ ಅವಕಾಶ ದೊರೆಯಿತು. ಕೆಲವು ನಾಟಕ, ಸಂದರ್ಶನಗಳಲ್ಲಿ ಭಾಗವಹಿಸುವ ಅವಕಾಶ ದೊರೆಯಿತು.

ಅಷ್ಟೊತ್ತಿಗಾಗಲೇ ಮಡಿಕೇರಿ ಆಕಾಶವಾಣಿಯಲ್ಲಿ 'ಸುದ್ದಿ ಸಮಾಚಾರ' ಕೊಡವ ಭಾಷೆಯಲ್ಲಿ ಸ್ಥಳೀಯ

ವಾರ್ತೆಯನ್ನು ಹೊತ್ತು ತಂದು ಬಹಳ ಜನಪ್ರಿಯವಾಗಿತ್ತು. ಅರೆಭಾಷೆಯಲ್ಲಿ ವಾರ್ತೆಯನ್ನೂ ಓದುವಂತಾಗಬೇಕೆಂದು ಯಾಲದಾಳು ಕೇಶವಾನಂದರವರ ನೇತೃತ್ವದಲ್ಲಿ 'ಅರೆಭಾಷೆ ಅಭಿವೃದ್ಧಿ ಸಮಿತಿ' ರಚನೆಯಾಯಿತು. ಅದರ ಆಶ್ರಯದಲ್ಲಿ ವಾರಕ್ಕೊಮ್ಮೆ ಅರೆಭಾಷೆ ವಾರ್ತೆ "ಸುದ್ದಿ ಜೊಂಪೆ" ಓದುವುದಕ್ಕಾಗಿ ಓದುಗರ ಸಂದರ್ಶನ ನಡೆದಾಗ, ಮೊಟ್ಟಮೊದಲ ಆಯ್ಕೆಯಾಗಿ ಸುದ್ದಿ ಜೊಂಪೆ ಓದುವ ಅವಕಾಶ ನನಗೆ ದೊರೆಯಿತು. ಸುಬ್ರಾಯ ಸಂಪಾಜೆಯವರ ನಿರ್ದೇಶನದಲ್ಲಿ ವಾರಕ್ಕೊಮ್ಮೆ ಆರಂಭವಾದ ಸುದ್ದಿ ಜೊಂಪೆ, ವಾರಕ್ಕೆರಡು ಬಾರಿ ವಿಸ್ತರಣೆಯಾಗಿ ಈಗ ಪ್ರತೀ ದಿನ ಸಂಜೆ 7.45ಕ್ಕೆ ಪ್ರಸಾರವಾಗುವಂತಾಗಿದೆ. ನನ್ನ ನಂತರ ಕಟ್ಟೆಮನೆ ಸೋನಾ, ಕುಡೆಕಲ್ ಸಂತೋಷ, ಪುದಿಯನೆರವನ ರೇವತಿ ರಮೇಶ್‌ರವರು ಸುದ್ದಿ ಜೊಂಪೆ ಓದಲು ಆರಂಭಿಸಿ ಈಗ ಬಹಳಷ್ಟು ಮಂದಿ ವಾರ್ತೆ ಓದುವಂತಾಗಿದೆ.

ನಾವಿಂದು ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ದಾಪುಗಾಲನ್ನಿಟ್ಟು ಬಹುದೂರ ಕ್ರಮಿಸಿ ಆಗಿದೆ. ನಾನಾ ಮಾಧ್ಯಮಗಳಲ್ಲದೆ, ಮೊಬೈಲ್, ಇಂಟರ್‌ನೆಟ್‌ಗಳೂ ಸಹ ಜನ ಸಾಮಾನ್ಯರನ್ನು ತಲುಪುವ ಕಾಲ ಬಂದಾಗಿದೆ. ಆದರೂ ಇದೆಲ್ಲವನ್ನೂ ಮೀರಿ ಮಡಿಕೇರಿ ಆಕಾಶವಾಣಿ ಹೆಚ್ಚು ಹೆಚ್ಚು ಜನಪ್ರಿಯವಾಗುತ್ತಿದೆ. ಮಡಿಕೇರಿ ಆಕಾಶವಾಣಿಯ ಖದರ್ರೇ ಹಾಗಿದೆ. ಪ್ರಕೃತಿ ರಮಣೀಯ ನಾಡಾದ ಮಡಿಕೇರಿಗೆ ಕಲಶಪ್ರಾಯದಂತೆ ಗೋಚರಿಸುವ ಸ್ಥಳದಲ್ಲಿ ಅಂದರೆ ರಾಜಾಸೀಟಿನ ಪಕ್ಕದಲ್ಲಿ ಆಕಾಶವಾಣಿ ಕೇಂದ್ರ ತಲೆಯೆತ್ತಿ ನಿಂತಿದೆ. ಆಕಾಶವಾಣಿಯಲ್ಲಿ ಕಾರ್ಯಕ್ರಮ ನೀಡುವುದೆಂದರೆ ನಾವು ಕಾರ್ಯಕ್ರಮಗಳನ್ನು ಆಲಿಸುವಷ್ಟು ಸುಲಭವಲ್ಲ. ಪ್ರತಿ ಕಾರ್ಯಕ್ರಮದ ಹಿಂದೆ ಬಹಳಷ್ಟು ಶ್ರಮವಿದ್ದೇ ಇರುತ್ತದೆ. ಇಲ್ಲಿ ಮಾತೇ ಬಂಡವಾಳವಾಗಿರುತ್ತದೆ. ಸ್ಪಷ್ಟ ಉಚ್ಚಾರಣೆಯಷ್ಟೇ ಅಲ್ಲದೆ ಶ್ರೋತೃಗಳ ಬೇಕು – ಬೇಡಿಕೆ, ಅವರ ಮನಸ್ಥಿತಿಯನ್ನು ಆಧರಿಸಿ ಕಾರ್ಯಕ್ರಮ ನೀಡಿದರೆ ಮಾತ್ರ ಯಶಸ್ಸು ಗಳಿಸಲು ಸಾಧ್ಯ.

ಆ ಒಂದು ನಿಟ್ಟಿನಲ್ಲಿ ಮಡಿಕೇರಿ ಆಕಾಶವಾಣಿಯನ್ನು ಗಮನಿಸಿದರೆ ಮಡಿಕೇರಿ ಆಕಾಶವಾಣಿ ರಾಜ್ಯದಲ್ಲಿ ಮಾತ್ರವಲ್ಲದೆ ರಾಷ್ಟ್ರದಲ್ಲೇ ಅತಿ ವಿಶಿಷ್ಟವಾಗಿ ಗೋಚರಿಸುತ್ತದೆ. ಅಷ್ಟೇ ಅಲ್ಲ, ತನ್ನ ಜವಾಬ್ದಾರಿಯನ್ನೂ ಅಚ್ಚುಕಟ್ಟಾಗಿ ನಿರ್ವಹಿಸುತ್ತದೆ. ಕೊಡಗು ಎಂದರೆ ಇಂದಿಗೂ ಕುಗ್ರಾಮಗಳನ್ನು ಹೊಂದಿದ ಜಿಲ್ಲೆ. ಹಲವು ಗ್ರಾಮಗಳಿಗೆ ಈಗಲೂ ಬಸ್ ಸಂಪರ್ಕವಿಲ್ಲ, ವಿದ್ಯುತ್ ಸಂಪರ್ಕವಿಲ್ಲ. ಆದುದರಿಂದ ಇಲ್ಲೆಲ್ಲ ಜನರ ಬಳಿಗೆ ರೇಡಿಯೋ ಬಿಟ್ಟರೆ ಮತ್ತಾವುದೇ ಮಾಧ್ಯಮ ಸುಳಿಯದು. ಪತ್ರಿಕೆ, ಟಿ.ವಿ. ಸಿನೆಮಾ ಯಾವುದೂ ಇಲ್ಲಿಲ್ಲ. ರೇಡಿಯೋವೇ ಅವರಿಗೆಲ್ಲ. ಆದುದರಿಂದ ಕೊಡಗಿನ ಮಟ್ಟಿಗೆ ಮಡಿಕೇರಿ ಆಕಾಶವಾಣಿಯೇ ಅತ್ಯಂತ ದೊಡ್ಡ ಜನಸಂಪರ್ಕದ ಮಾಧ್ಯಮ. ಕೇವಲ ಕೊಡಗು ಮಾತ್ರವಲ್ಲ, ಒಂದು ಕಡೆ ಕಾಸರಗೋಡಿನಿಂದ ಹಿಡಿದು, ಮತ್ತೊಂದು ಕಡೆ ಹುಣಸೂರು, ಕೆ.ಆರ್.ನಗರದವರೆಗೂ ಮಡಿಕೇರಿ ಆಕಾಶವಾಣಿಯ ಕೇಳುಗರಿದ್ದಾರೆ.

ಬೆಳಗಿನ ಉದಯರಾಗದಿಂದು ಹಿಡಿದು ರಾತ್ರಿವರೆಗೆ ಪ್ರಸಾರವಾಗುವ ಪ್ರತಿಯೊಂದು ಕಾರ್ಯಕ್ರಮವೂ ವಿಶಿಷ್ಟವೇ. ಪ್ರತಿಯೊಂದು ಕಾರ್ಯಕ್ರಮಗಳೂ ಗೃಹಿಣಿಯರು, ವಿದ್ಯಾರ್ಥಿಗಳು, ರೈತರು, ವ್ಯಾಪಾರಿಗಳು, ಉದ್ಯೋಗಿಗಳು ಹೀಗೆ ತಮ್ಮದೇ ಶ್ರೋತೃಗಳನ್ನು ಸೆಳೆದಿಟ್ಟುಕೊಳ್ಳುವಲ್ಲಿ ಯಶಸ್ವಿಯಾಗಿದೆ. ಬೇರೆ ಬೇರೆ ಭಾಷೆಯ ಭಕ್ತಿಗೀತೆಗಳನ್ನೊಳಗೊಂಡ ಉದಯ ರಾಗ, ಮಹಾನ್ ವ್ಯಕ್ತಿಗಳ ಮನದೊಳಗಿನಿಂದ ಹೊರಬಂದ ಚಿಂತನ, ಹಳ್ಳಿಗಳ ಸ್ಥಿತಿಗತಿಗೆ ಕನ್ನಡಿ ಹಿಡಿಯುವ ಕಾವೇರಿ ಎಕ್ಸ್‌ಪ್ರೆಸ್, ಹಳ್ಳಿ ರೇಡಿಯೋ, ಕೃಷಿಗೆ ಚೇತನ ನೀಡುವ ರೈತ ಮಾಹಿತಿ ಅಲ್ಲದೇ ವಿವಿಧ ಜಾಹೀರಾತುಗಳೂ ಸಹ ಶ್ರೋತೃಗಳಿಗೆ ಉಪಯುಕ್ತವೇ. ಇಲ್ಲಿ ಪ್ರಸಾರವಾಗುವ 'ಸೇವಾ ಮಾಹಿತಿ'ಯಂತೂ ಯಾವುದೇ ಆಕಾಶವಾಣಿ ಮಾಡದೇ ಇರುವಂತಹ 'ದಿಟ್ಟ

ನಿರ್ಧಾರ' ಎಂದೇ ಹೇಳಬೇಕು. ಆಕಾಶವಾಣಿಯಲ್ಲೇ ಬಿತ್ತರವಾಗುವ 'ಪತ್ರೋತ್ತರ' ಪತ್ರಬಿಂಬ ಪ್ರತಿಬಿಂಬ ಕಾರ್ಯಕ್ರಮದಲ್ಲಿ ಜನಸ್ಪಂದನೆ, ಅಷ್ಟೇ ಏಕೆ? ಹಳ್ಳಿಗಳಿರಲಿ, ನಗರ ಪಟ್ಟಣ ಪ್ರದೇಶಗಳಲ್ಲೂ ಜನ ಟಿ.ವಿ., ಪತ್ರಿಕೆಗಳಿದ್ದರೂ ಬೆಳಗಿನ ಹೊತ್ತು ಅದೆಲ್ಲವನ್ನೂ ಬಿಟ್ಟು ರೇಡಿಯೋ ಆಲಿಸುತ್ತಾ ಕಾರು, ಆಟೋ, ಖಾಸಗಿ ಬಸ್ಸುಗಳಲ್ಲಿಯೂ ಜನ ಎಫ್.ಎಂ.ಹಾಕಿಸಿಕೊಂಡು ಮಡಿಕೇರಿ ಆಕಾಶವಾಣಿಯ ಕಾರ್ಯಕ್ರಮಗಳನ್ನು ಆಸ್ವಾದಿಸುತ್ತಾರೆಂದರೆ ಆಕಾಶವಾಣಿಯ ಮಹತ್ವ ಏನೆಂಬುದನ್ನು ತಿಳಿದುಕೊಳ್ಳಬಹುದು.

ಒಂದು ಸಂಪರ್ಕ ಮಾಧ್ಯಮವಾಗಿ ಮಡಿಕೇರಿ ಆಕಾಶವಾಣಿ ಯಶಸ್ಸಿನ ತುತ್ತತುದಿಯನ್ನೇರಿದೆ. ಸರ್ಕಾರಿ ಸ್ವಾಮ್ಯದಲ್ಲಿದ್ದು, ತನ್ನದೇ ನಿಯಮಗಳಿಗೆ ಕಾರ್ಯನಿರ್ವಹಿಸಿ, ಅದಕ್ಕೆ ತಕ್ಕಂತೆ ರಾಜ್ಯ ರಾಷ್ಟ್ರಮಟ್ಟದ ಪ್ರಶಸ್ತಿಗಳನ್ನು ದಕ್ಕಿಸಿಕೊಂಡಿದೆ. ತಮ್ಮ ಮನದಾಳದ ಇಂಗಿತಗಳನ್ನು ಹಂಚಿಕೊಳ್ಳಲು ಜನತೆಗೆ ಧ್ವನಿಯಾಗಿದೆ. ತನ್ನ ಶ್ರೇಷ್ಠ ಮಟ್ಟದ ಕಾರ್ಯಕ್ರಮಗಳಿಂದ ಬಹಳಷ್ಟು ಕಿವಿಗಳನ್ನು ತನ್ನತ್ತ ಆಕರ್ಷಿಸಿದೆ. ಇಂದು ಉದ್ಯೋಗದ ನಿಮಿತ್ತ ನಾನು ಕೊಡಗಿನಿಂದ ಸ್ವಲ್ಪ ದೂರದಲ್ಲಿದ್ದೇನೆ. ಆದರೂ ಮನಸ್ಸು ಹುಟ್ಟೂರಿನತ್ತ ತುಡಿಯುತ್ತಿರುತ್ತದೆ. ಹಾಗೆಯೇ ಆಕಾಶವಾಣಿಯ ಬಗ್ಗೆಯೂ ಕೂಡ.

ನಮ್ಮ ಸಂಸ್ಕೃತಿ - ಬಾಸೆ



- ಕಡ್ಲೇರ ತುಳಸಿ ಮೋಹನ್

ಎಸ್ಟ್ ಲಾಯ್ಕ ನೋಡಿಕೆ ನಮ್ಮ ಸಂಸ್ಕೃತಿ |
ಎಂತಾ ಪೊರ್ಲು ಕೇಳಿಕೆ ನಮ್ಮ ಬಾಸೆ ||

ಕುಪ್ಪಸ ದಟ್ಟಿಯು ಗೌಡ ಹೈದಂಗೆ |
ಗೇಂಟಿಗೆ ಸೀರೆಯು ಪೊರ್ಲುನ ಗೂಡೆಗೆ |
ಜಂಬರ ಮೊದುವೆಲಿ ಹಿಂಗೇನೆ ಕಾಂಬಕೂ |
ಸಂಸ್ಕೃತಿ ಮೆರಿಯಕೂ
||ಎಸ್ಟ್ ಲಾಯ್ಕ ನೋಡಿಕೆ||

ಕಿತ್ತುಳಿ ಕಾಫಿನಾ ಯಾಲಕ್ಕಿ ಮೆಣ್‌ಸ್‌ನಾ |
ಚಿಂಗ್‌ರಿ ಭತ್ತದ ಲಾಯ್ಕದ ಗಮ ಗಮ ||
ಹೆಸ್‌ರ್ ನಾಡ ಉಸ್‌ರೆ ಬಾಸೆ ಈ ನಮ್ಮ ಬಾಸೆ ||
ಈ ಅರೆ ಬಾಸೆ....
||ಎಸ್ಟ್ ಲಾಯ್ಕ ನೋಡಿಕೆ||

ಪೊರ್ಲುನ ನಾಡ್‌ಲಿ ಹರ್ದುಟ್ಟು ಕಾವೇರಿ |
ಬಾಸೆನ ಕೀರ್ತಿನಾ ಸಾರಿಟ್ಟು ವೈಯ್ಯಾರಲಿ |
ನಾಕ್ ನಾಡ್ ನಾಕ್ ದಿಕ್ಕ್‌ಲಿ
ಅರೆಬಾಸೆ ಕೇಳಲಿ-ಸಂಸ್ಕೃತಿ ಬೆಳೆಯಲಿ ||
||ಎಸ್ಟ್ ಲಾಯ್ಕ ನೋಡಿಕೆ||

ಬಹುಭಾಷೆ ಸಂಸ್ಕೃತಿಯ ಸಂಗಮ – ಕೊಡಗು



✍ ಬಾಚರಣಿಯಂಡ ಅಪ್ಪಣ್ಣ
ಮಾಜಿ ಅಧ್ಯಕ್ಷರು, ಕೊಡವ ಸಾಹಿತ್ಯ ಅಕಾಡೆಮಿ
ಕುಶಾಲನಗರ

ಕೊಡಗು ಇಂದು ಕರ್ನಾಟಕದ ಒಂದು ಸಣ್ಣ ಜಿಲ್ಲೆ. ಪುರಾಣ ಕಾಲದಲ್ಲಿ ಬ್ರಹ್ಮಕ್ಷೇತ್ರ, ಮತ್ಸ್ಯದೇಶ, ಕ್ರೋಢ ದೇಶ ಎಂದೆಲ್ಲ ಕರೆಸಿಕೊಂಡ ಪ್ರದೇಶ. ಇತಿಹಾಸ ಕಾಲದಲ್ಲಿ ಕೊಡಗಿನ ಮೇರೆಗಳು ಉತ್ತರಕ್ಕೆ ಗೋವಾದವರೆಗೂ ಈಗಿನ ತಮಿಳುನಾಡಿನ ಸತ್ಯಮಂಗಲದ ತನಕವೂ ಕೇರಳದ ವೈನಾಡ್‌ವರೆಗೂ ಇತ್ತ ಬಿಸಲೆ ಘಾಟ್ ತನಕವೂ ವಿಸ್ತರಿಸಿದ್ದ ಕಾಲವಿತ್ತೆಂದು ಚಾರಿತ್ರಿಕ ಆಧಾರಗಳಿವೆ ಎಂದು ಇತಿಹಾಸಗಾರರ ಅಭಿಪ್ರಾಯ.

ಭೌಗೋಳಿಕ ಮೇರೆಗಳು ವಿಸ್ತಾರವಾಗುವುದು ಮತ್ತು ಸಂಕುಚಿತವಾಗುವುದುಂಟು. ಬೇರೆ ಬೇರೆ ಅರಸರು ಗೆದ್ದಾಗ ಆ ಪ್ರದೇಶಗಳು ಆಯಾ ರಾಜ್ಯದೊಡನೆ ವಿಲೀನವಾಗಿ ಗಡಿ ವಿಸ್ತಾರವಾಗುತ್ತದೆ. **"ಕೊಡಗಿನ ಇತಿಹಾಸವನ್ನು ಬಗೆದು ನೋಡಿದರೆ ಕದಂಬರು, ಚೆಂಗಾಳ್ವರು, ಕೊಂಗಾಳ್ವರು, ಪಾಂಡ್ಯರು, ಹೊಯ್ಸಳರು, ವಿಜಯನಗರದರಸರೆಲ್ಲ ಕೊಡಗಿನ ಒಂದೊಂದು ಪ್ರದೇಶವನ್ನು ಒಂದೊಂದು ಕಾಲದಲ್ಲಿ ಆಳಿದ ಇತಿಹಾಸವಿದೆ".** ಹೀಗಿರುವಾಗ ಬಹು ಭಾಷೆಗಳ ಪ್ರಭಾವ ಬೀರಲೇಬೇಕು. ಬಹುಭಾಷೆಯೆಂದ ಮೇಲೆ ಬಹುವರ್ಗದ ಸಂಸ್ಕೃತಿಯ ಸಂಗಮವೂ ಆಗಲೇಬೇಕು.

ಕೊಡಗಿನ ಮೂಲ ಭಾಷೆ :– ದ್ರಾವಿಡ ಭಾಷಾ ಸಂಶೋಧಕ ಮತ್ತು ತಜ್ಞ ಬಿಷಪ್ ಕಾಲ್ಡ್‌ವೆಲ್. ಕಾಲ್‌ವೆಲ್‌ನ ಪ್ರಕಾರ ದ್ರಾವಿಡರು ಸಿಂಧೂ ಬಯಲಿನ ತನಕ ಹರಡಿದ್ದರು. ಮಧ್ಯ ಏಷ್ಯದ ಆರ್ಯರಿಂದ ಗೋದಾವರಿ ಬಯಲು ತನಕ ತಳ್ಳಲ್ಪಟ್ಟರು. ಅಲ್ಲಿ ಪಂಚದ್ರಾವಿಡ ಭಾಷೆಗಳಾಗಿ ಕವಲೊಡೆದು, ತಮಿಳು, ತೆಲುಗು, ಕನ್ನಡ, ಮಲೆಯಾಳಂ ಮತ್ತು ತುಳು ಭಾಷೆಗಳು ಹುಟ್ಟಿ ಬೆಳೆದವು. ದ್ರಾವಿಡರಿಗೆ ಒಂದು ಮೂಲ ಭಾಷೆಯಿತ್ತು. ಈ ಮೂಲ ಭಾಷೆಯನ್ನಾಡುವ ಒಂದು ವರ್ಗ ಮಲಯಾದ್ರಿ ಗುಡ್ಡಗಾಡಿನಲ್ಲಿ ನೆಲೆಸಿದ್ದರು. ಅವರೇ ಕೊಡಗಿನ ಮೂಲ ನಿವಾಸಿಗಳು ಮತ್ತು ಅವರ ಭಾಷೆಯೇ ಮೂಲ ದ್ರಾವಿಡ ಭಾಷೆ ಎಂದು ವಾದಿಸಿದ್ದಾನೆ. ಕಾಲ್ಡ್‌ವೆಲ್ಲರ ವಾದವನ್ನು ಖ್ಯಾತ ಭಾಷಾ ತಜ್ಞರು ಒಪ್ಪುತ್ತಾರೆ.

ಅವಲಂಬನೆ : ಗುಡ್ಡಗಾಡು ನಿವಾಸಿಗಳಾಗಿದ್ದ ಮೂಲ ನಿವಾಸಿಗಳು ತಮ್ಮ ಬೇಕು ಬೇಡಿಕೆಗಳನ್ನು ಪೂರೈಸಿಕೊಳ್ಳಲು ನೆರೆರಾಜ್ಯಗಳೊಡನೆ ಸಂಪರ್ಕವಿರಿಸಿಕೊಳ್ಳುವುದು ಅನಿವಾರ್ಯವಾಗಿತ್ತು. ವಸ್ತು ವಿನಿಮಯ ವ್ಯಾಪಾರ ವ್ಯವಹಾರಕ್ಕೆ ನೆರೆಯ ಮಲಯಾಳಂ, ತುಳುನಾಡು, ಮೈಸೂರು ಮತ್ತು ಈಗಿನ ಹಾಸನ ಜಿಲ್ಲೆಯೊಡನೆ ನೇರ ಸಂಬಂಧವಿತ್ತು. ಈಗಿನ ಸೋಮವಾರಪೇಟೆ ತಾಲೂಕಿಗೂ ಹಾಸನದ ಬಯಲು ಪ್ರದೇಶಕ್ಕೂ ಹೆಚ್ಚು ಸಂಪರ್ಕವಿದ್ದುದರಿಂದ ಸೋಮವಾರಪೇಟೆ ತಾಲೂಕಿನ ಹೆಚ್ಚಿನ ಭಾಗದಲ್ಲಿನ ಭಾಷೆ ಮತ್ತು ಸಂಸ್ಕೃತಿಯ ಮೇಲೆ ಹಾಸನ ವಿಭಾಗದ ಪ್ರಭಾವ ಹೆಚ್ಚಿದೆ. ಈಗಿನ ಮಡಿಕೇರಿ ತಾಲೂಕಿನ ಅಂದಿನ ಜನರ ಸಂಪರ್ಕ ತುಳುನಾಡಿನೊಡನೆಯಾದರೆ ವೀರರಾಜಪೇಟೆ ತಾಲೂಕಿನ ಜನರ ಸಂಪರ್ಕ ಮಲಯಾಳಂ ಸೀಮೆಯೊಡನೆ ಇತ್ತು. ದಕ್ಷಿಣ ಕೊಡಗಿಗೆ ಮೈಸೂರು ಪ್ರದೇಶದೊಡನೆ ಸಂಪರ್ಕ ಹೆಚ್ಚಿತ್ತು.

ಮಂತ್ರ ತಂತ್ರಗಳಿಗೂ, ಔಷಧೋಪಚಾರಕ್ಕೂ, ದೈವರಾಧನೆ ಮತ್ತು ಭೂತಾರಾಧನೆಗಳಿಗೆ ಮಲಯಾಳ

ಸೀಮೆಯನ್ನು ಹೆಚ್ಚಾಗಿ ಅವಲಂಭಿಸಿದ್ದರು ಕೊಡಗಿನ ಮೂಲ ನಿವಾಸಿಗಳು. ಹಾಗೆಯೇ ಎತ್ತುಗಳ ಬೆನ್ನ ಮೇಲೆ ಸರಕು ಸಾಗಾಣಿಕೆಗೆ ತುಳುನಾಡು, ಮುಖ್ಯವಾಗಿ ಕೊಡಿಯಾಲ (ಮಂಗಳೂರು)ವನ್ನು ಅವಲಂಭಿಸಿದ್ದರು. ತುಳು ನಾಡಿನ ಭೂತಾರಾಧನೆಯೂ ಈ ಪ್ರದೇಶಕ್ಕೆ ಕಾಲಿಕ್ಕಿತು. ಈಗಿನ ಸುಳ್ಯ, ಪುತ್ತೂರು ಮತ್ತು ಸುಬ್ರಹ್ಮಣ್ಯ ಪ್ರದೇಶಗಳೊಡನೆ ಕೊಡಗಿಗೆ ನಿಕಟ ಸಂಬಂಧವಿತ್ತು.

ಒಂದು ದಂತಕಥೆಯ ಪ್ರಕಾರ ಕಾಸರಗೋಡು ತಾಲೂಕಿನ ಬೊಳ್ಳಿಕೋತ್ ಎಂಬ ಊರಿನ ಪೂಜಾರಿಯ ಮಗಳನ್ನು ಸುಳ್ಯದ ಆಲೆಟ್ಟಿಯ ವಂಶಕ್ಕೆ ತೊಟ್ಟಿಲು ಮದುವೆ ಮಾಡಿ, ಆ ಹುಡುಗ ಸತ್ತಾಗ ಬಾಲ್ಯವಿಧವೆಯಾದ ಕನ್ಯೆ ಭಾಗಮಂಡಲಕ್ಕೆ ಬಂದು ದೈವತ್ವ ಪಡೆದ ಕಥೆ ಸೋಜಿಗವನ್ನುಂಟು ಮಾಡುತ್ತದೆ. ಆಲೆಟ್ಟಿ ವಂಶದ ಕಾವೇರಿಗದ್ದೆ ಎಂಬ ಗದ್ದೆಯ ಬೆಳೆಯನ್ನು ತಲಕಾವೇರಿಗೆ ತಂದೊಪ್ಪಿಸುವ ಸಂಪ್ರದಾಯವಿತ್ತು. ಈ ಸಂಬಂಧದಿಂದಾಗಿ ಸುಳ್ಯ ಪ್ರದೇಶದ ಅರೆಭಾಷೆ ಗೌಡರು ಬಹಳ ಹಿಂದಿನಿಂದಲೇ ಭಾಗಮಂಡಲ ಪ್ರದೇಶದಲ್ಲಿ ನೆಲೆಸಿದರು ಎಂಬ ರೋಚಕ ಮತ್ತು ರಹಸ್ಯ ಕಥೆಯೊಂದಿದೆ. ಆದರೆ ಇದಕ್ಕೆ ಲಿಖಿತ ಆಧಾರವಿಲ್ಲ.

ಇಂದು ಈ ಪುಟ್ಟ ಜಿಲ್ಲೆಯಲ್ಲಿ, ಕೊಡವ ಭಾಷೆಯನ್ನಾಡುವ 22 ವರ್ಗದ ಜನ ನೆಲೆಸಿದ್ದಾರೆ. ಇಲ್ಲಿ ಕನ್ನಡ, ಅರೆಭಾಷೆ, ತುಳು, ಮಲಯಾಳ, ತಮಿಳು, ತೆಲುಗು, ಉರ್ದು, ಹವ್ಯಕ (ಹಳೆಗನ್ನಡ), ಶಿವಳ್ಳಿ, ಯರವ, ಕುರುಬ, ಮರಾಠಿ, ಕೊಂಕಣಿ, ಪಾರ್ಸಿ, ಕುಂಬಾರ, ಇಂಗ್ಲೀಷ್ ಮತ್ತು ಹಿಂದಿಭಾಷೆಗಳಿವೆ. ಇತ್ತೀಚೆಗೆ ರಾಜಾಸ್ಥಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ನೆಲೆಸುತ್ತಿರುವುದರಿಂದ ಆವೊಂದು ಹೊಸ ಭಾಷೆಯೂ ಸೇರ್ಪಡೆಯಾಗಿದೆ.

ಈ ಭಾಷೆಗಳ ಪ್ರವೇಶ ಆದ ಬಗೆ :- ಕನ್ನಡ, ಅರೆಭಾಷೆ, ತುಳು ಮತ್ತು ಮಲಯಾಳಗಳು ಪ್ರಾಚೀನ ಕಾಲದಿಂದಲೇ ಬಳಕೆಯಲ್ಲಿವೆ. ಯರವ ಮತ್ತು ಕುರುಬ ಭಾಷೆಗಳು ಇಲ್ಲಿನ ಬುಡಕಟ್ಟು ಜನರ ಭಾಷೆ.

ಹೈದರಾಲಿಯ ಸೈನಿಕರಿಗೆ ಅಡಿಗೆ ಮಾಡಲೆಂದು ದಿಂಡಿಗಲ್ಲಿನಿಂದ ಬಂದವರು ಇಲ್ಲಿ ನೆಲೆ ನಿಂತಾಗ ತಮಿಳು ಪ್ರವೇಶ ಪಡೆಯಿತು. (ತಮಿಳು ಮುಸಲ್ಮಾನರು) 1940ರಿಂದೀಚೆಗೆ ಕಾಫಿ ತೋಟದ ಕೆಲಸಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಬಂದ ತಮಿಳರಿಂದ ತಮಿಳು ಇಲ್ಲಿ ಹರಡಿತು.

ದೊಡ್ಡ ವೀರರಾಜ ತೆಲುಗು ವರ್ತಕರನ್ನು ಕರೆಸಿ ನೆಲೆಗೊಳಿಸಿದನು. ಕ್ರಿ.ಶ. 16ನೇ ಶತಮಾನದಲ್ಲಿ ಮರಾಠರ ಸುಪೆಕರ್, ಪವಾರ್ ಇತ್ಯಾದಿ ಪಂಗಡಗಳು ಬಂದವರು ಜಮ್ಮ ಹಿಡುವಳಿಯನ್ನು ಪಡೆದಿದ್ದಾರೆ. ದೊಡ್ಡವೀರರಾಜ ಕೊಂಕಣಿ ಮಾತನಾಡುವ ಕ್ರೈಸ್ತರಿಗೆ ಚರ್ಚುಗಳನ್ನು ಕಟ್ಟಿಸಿ ನೆಲೆಗೊಳಿಸಿದ ಮೇಲೆ ಕೊಂಕಣಿ ಭಾಷಿಕರೂ ನೆಲೆಗೊಂಡರು. ಹಾಲೇರಿ ಅರಸರ ಕಾಲದಲ್ಲಿ ಕರಣಿಕ ವೃತ್ತಿ ಮತ್ತು ಪೂಜಾರಿಗಳಾಗಿ ಹವ್ಯಕ ಬ್ರಾಹ್ಮಣರನ್ನು ಕರೆಸಿ ನೆಲೆಗೊಳಿಸಿದನು. ಕೆಲವೇ ಕೆಲವು ಪಾರ್ಸಿ ಕುಟುಂಬವಿತ್ತು. ಕುಂಬಾರ ಭಾಷೆಯೆಂಬ ಪ್ರತ್ಯೇಕ ಭಾಷೆಯಾಡುವ ಜನ ಅತ್ಯಲ್ಪ ಮಂದಿ ಇದ್ದಾರೆ. ದೇವಸ್ಥಾನಗಳಲ್ಲಿ ಪೂಜೆಗಾಗಿ ಬಂದು ನೆಲಸಿದ ಶಿವಳ್ಳಿ ತುಳು ಆಡುವ ಬ್ರಾಹ್ಮಣರ ಸಂಖ್ಯೆ ಸಾಕಷ್ಟಿದೆ. ಆಂಗ್ಲೋ ಇಂಡಿಯನ್ಸ್ ವರ್ಗದ ಭಾಷೆ ಇಂಗ್ಲಿಷ್ ಆದರೂ ಅವರ ಸಂಖ್ಯೆ ಈಗ ಕಡಿಮೆ ಆಗುತ್ತಿದೆ. ಉರ್ದು ಭಾಷಿಕರು ಕೊಡಗಿನ ಪಟ್ಟಣ ಪ್ರದೇಶಗಳಲ್ಲಿ ಬಹಳಷ್ಟು ಇದ್ದಾರೆ.

ಪರ್ಶಿಯನ್ ಮತ್ತು ಉರ್ದುವಿನ ಪ್ರಭಾವ ಒಂದೆರಡು ಶತಮಾನಗಳ ಹಿಂದೆ ಎಷ್ಟಿತ್ತೆಂದು ಅರಿಯಲು ದೊಡ್ಡ ವೀರರಾಜ ಬರೆಸಿದ 'ರಾಜೇಂದ್ರ ನಾಮೆ'ಯಂತ ಕೃತಿಯನ್ನು ಓದಿದರೆ ಅರ್ಥೈಸಿಕೊಳ್ಳಬಹುದು.

ಇಷ್ಟೊಂದು ಸಣ್ಣ ಭೂಪ್ರದೇಶವನ್ನು ಹೊಂದಿದ ಈ ಕೊಡಗಿನಲ್ಲಿ ಇಷ್ಟೊಂದು ಭಾಷಿಕರು ನೆಲಸಿದ್ದಾರೆಂದರೆ ಆಶ್ಚರ್ಯಪಡಬೇಕಾದೀತು. ನಗರಗಳಲ್ಲಿ ನಾನಾ ಭಾಷಿಕರು ನೆಲಸುವುದು ಸಹಜ. ಆದರೆ

ಕೊಡಗು ಬೆಟ್ಟಗುಡ್ಡಗಳಿಂದಾವೃತವಾದ ಹಳ್ಳಿಗಾಡು. ಇಲ್ಲಿನ ಪ್ರತಿಯೊಬ್ಬ ವ್ಯಕ್ತಿಯೂ ಐದಕ್ಕಿಂತ ಹೆಚ್ಚು ಭಾಷೆಗಳನ್ನು ಆಡಬಲ್ಲ ಮತ್ತು ಆ ಭಾಷೆಗಳಲ್ಲಿ ವ್ಯವಹರಿಸಬಲ್ಲ.

ಇಷ್ಟೊಂದು ಭಾಷಿಕರು ಇರುವಾಗ ಅಷ್ಟೆಲ್ಲ ಸಂಖ್ಯೆಯ ಸಂಸ್ಕೃತಿಯೂ ಇರಲೇಬೇಕು. ಕನ್ನಡ ಇಲ್ಲಿನ ರಾಜ್ಯ ಭಾಷೆ. ಇತರ ಭಾಷಿಕರನ್ನು ಹೊರಗಿನವರೆಂದು ಎಂದೂ ಯಾರೂ ಪರಿಗಣಿಸಿದ್ದಿಲ್ಲ.

ಮಡಿಕೇರಿ ತಾಲೂಕು ಮತ್ತು ಸೋಮವಾರಪೇಟೆ ತಾಲೂಕಿನ ಹೆಚ್ಚಿನ ಭಾಗದಲ್ಲಿ ಅರೆಭಾಷಿಕರಾದ ಗೌಡ ಜನಾಂಗ ಪ್ರಭಾವೀ ವರ್ಗ. ಪ್ರಾಚೀನ ಕಾಲದಿಂದಲೇ ಕೊಡಗಿನ ಗಾಳಿ, ಬೆಳಕು, ನೀರು, ಉಸಿರುಗಳಲ್ಲಿ ಬೆರೆತು ಹೋದವರು. ಕೊಡಗಿನ ಇತಿಹಾಸದಲ್ಲಿ ಇವರ ಪಾತ್ರ ಹಿರಿದು. ಕೊಡವ ಭಾಷೆ ಮತ್ತು ಸಂಸ್ಕೃತಿಗೆ ಇವರ ಕೊಡುಗೆ ಅಪಾರ. ಇಂದಿಗೂ ಕೊಡಗಿನ ದೇವಸ್ಥಾನಗಳಲ್ಲಿ ತಕ್ಕ ಮುಖ್ಯಸ್ಥರೇ ಈ ಜನಾಂಗದವರು. ಇವರ ಐನ್ ಮನೆಗಳಿಗೂ ಕೊಡವ ಐನ್ ಮನೆಗಳಿಗೂ ಭೇದವಿಲ್ಲ. 1945ರ ತನಕ ಕೊಡವ ಜಾನಪದ ಹಾಡುಗಳಲ್ಲಿ ಪಾಂಡಿತ್ಯ ಪಡೆದ ಜನಪದ ಸಾಹಿತಿಗಳಿದ್ದರು.

"ಈ ಸಣ್ಣ ಪ್ರದೇಶಗಳಲ್ಲಿ ಇಷ್ಟೊಂದು ಭಾಷೆ ಸಂಸ್ಕೃತಿಗಳಿದ್ದರೂ ಸಂಘರ್ಷಕ್ಕೆ ಎಡೆಯಾದ ಉದಾಹರಣೆಯಿಲ್ಲ. ಇದೇ ಇಲ್ಲಿನ ಹಿರಿಮೆ ಮತ್ತು ಆಕರ್ಷಣೆ"

ಕೊಡಗು **"ಬಹುಭಾಷಾ ಸಂಸ್ಕೃತಿಯ ಸಂಗಮ"** ಎಂಬ ಹೆಗ್ಗಳಿಕೆಗೆ ಪಾತ್ರವಾದ ಪ್ರದೇಶ.

ಮಕ್ಕಳು ಪರಿಮಳದ ಕುಸುಮಗಳು



✍ ಕಲ್ಲುಗುಂಡಿ ಭವ್ಯ ಚೇತನ್
ಮತ್ತಾರಿ ಮನೆ, ದೊಡ್ಡತ್ತೂರು ಗ್ರಾಮ,
ಹಾರಂಗಿ ಪ್ರಾಜೆಕ್ಟ್ ಅಂಚೆ

ಮಕ್ಕಳು ಮುಗ್ಧರು, ಅವರು ಕೇವಲ ಆಟದ ಮೂಲಕವೇ ಅನೇಕ ವಿಷಯಗಳನ್ನು ಕಲಿಯುತ್ತಾರೆ. ಮಗುವು ಆಟವಾಡುತ್ತಲೇ ಶಾರೀರಿಕವಾಗಿ, ಬೌದ್ಧಿಕವಾಗಿ ಹಾಗೂ ಸಾಮಾಜಿಕವಾಗಿ ವಿಕಾಸಗೊಳ್ಳುತ್ತದೆ. ತಂತಾನೇ ಹೊರಗಿನ ವಾತಾವರಣವನ್ನು ಗಮನಿಸುತ್ತಲೇ ಭಾಷೆಯಲ್ಲಿ ನಿಪುಣವಾಗಿ ಸ್ವತಂತ್ರ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುತ್ತದೆ. ಹೀಗೆ ನಿಧಾನವಾಗಿ ಮಕ್ಕಳ ತಿಳುವಳಿಕೆಯೂ ಹೆಚ್ಚುತ್ತದೆ. ಬೇರೆಯವರ ಮೇಲಿನ ಅವಲಂಬನೆಯೂ ಕಡಿಮೆಯಾಗುತ್ತದೆ. ಇದು ಒಂದು ನೈಸರ್ಗಿಕ ಪ್ರಕ್ರಿಯೆ.

ಯಾವುದೇ ರೀತಿಯ ನಿರ್ದೇಶನವಿಲ್ಲದೆ ಮಕ್ಕಳು ಇಷ್ಟೊಂದು ಪ್ರಗತಿ ಹೊಂದುವುದು ಸಾಧ್ಯವಾದರೆ, ಅವರಿಗೆ ತಂದೆ, ತಾಯಿ, ಗುರು, ಹಿರಿಯರ ಉತ್ತಮ ನಿರ್ದೇಶನ ದೊರೆತರೆ ಖಂಡಿತವಾಗಿಯೂ ಮಕ್ಕಳ ಬೆಳವಣಿಗೆಯ ಸಹಜ ಪ್ರಗತಿಗೆ ಒಂದು ದಿಸೆಯನ್ನು ಒದಗಿಸಬಹುದು.

"ಮಕ್ಕಳ ಮನಸ್ಸು ಹೂವಿನಷ್ಟೇ ಕೋಮಲವಾದುದು, ಮೃದುವಾದುದು. ನಾವು ಯಾವುದನ್ನು ಕನ್ನಡಿಯಲ್ಲಿ ಬಿಂಬಿಸುತ್ತೇವೆಯೋ ಅದೇ ನಮಗೆ ಪುನಃ ಪ್ರತಿಬಿಂಬಿತವಾಗುತ್ತದೆ. ಅಷ್ಟು ನಿಷ್ಕಪಟ, ನಿಷ್ಕಲ್ಮಶ ಮನಸ್ಸು ಮಕ್ಕಳದ್ದಾಗಿರುತ್ತದೆ."

ಮಕ್ಕಳು ಹೂವಿನ ಮೊಗ್ಗಿನಂತೆ. ಆ ಮೊಗ್ಗು ಅರಳಲು ಗುರುಹಿರಿಯರ ಪೋಷಕರ ನಿರ್ದೇಶನವೆಂಬ ನೀರು, ಸಾರ ದೊರಕಿದರೆ ಆ ಮೊಗ್ಗು ಅರಳಿ ಮುಂದೆ ಸುಂದರವಾದ ಪರಿಮಳ ಸೂಸುವ ಕುಸುಮವಾಗುತ್ತದೆ. ಇಲ್ಲವಾದಲ್ಲಿ ಮೊಗ್ಗಲ್ಲೇ ಕಮರಿ ಹೋಗುತ್ತದೆ.

"ಇಂದಿನ ಮಕ್ಕಳು ಮುಂದಿನ ಪ್ರಜೆಗಳು" "ಇಂದಿನ ಯುವಜನರೇ ನಾಳಿನ ನೇತಾರರು" ಎಂದೆಲ್ಲಾ ನಾವು ನಮ್ಮ ಮಕ್ಕಳಿಗೆ ಉದ್ದುದ್ದನೆ ಉಪದೇಶಗಳನ್ನು ನೀಡುತ್ತಿದ್ದೇವೆ. ಆದರೆ ಅವರು ಆ ರೀತಿ ಬೆಳೆದು ಜವಾಬ್ದಾರಿಯುತ ಸ್ಥಾನಗಳನ್ನು ತುಂಬಲು ಬೇಕಾದ ಶಿಕ್ಷಣವನ್ನಾಗಲಿ, ನೈತಿಕತೆಯನ್ನಾಗಲೀ ನಾವು ನೀಡುತ್ತಿಲ್ಲ. ತದ್ವಿಪರೀತವಾಗಿ ಅವರು ಸಾಕಷ್ಟು ಕೆಟ್ಟು ಇತರರನ್ನು ಕೆಡಿಸಲು ಅನುಕೂಲವಾದಂತಹ ವಾತಾವರಣವನ್ನು ನಮ್ಮ ಅವಿವೇಕದಿಂದ, ದುರಾಸೆಯಿಂದ ಇಂದ್ರಿಯ ಲೋಲುಪತೆಯಿಂದ ನಿರ್ಮಿಸುತ್ತಿದ್ದೇವೆ.

ಬಹಳಷ್ಟು ಕಾರಣಗಳಿಂದ ನಮ್ಮೆದುರಿನಲ್ಲಿ ಮಕ್ಕಳು ಪರಿಮಳ ಬೀರುವ ಕುಸುಮಗಳಾಗುವ ಬದಲು, ಕಳವಳಕಾರಿ ಪ್ರವೃತ್ತಿಗಳನ್ನು ಮೈಗೂಡಿಸಿಕೊಳ್ಳುತ್ತಿದ್ದಾರೆ. ಅವರನ್ನು ಅಪಾಯದಿಂದ ಪಾರು ಮಾಡುವ ಜವಾಬ್ದಾರಿ ನಮ್ಮೆಲ್ಲರದ್ದಾಗಿದೆ.

ಮಕ್ಕಳಿದ್ದ ಪರಿಸರವು ಆಹ್ಲಾದಮಯವಾಗಿರುತ್ತದೆ. ಯಾವುದೇ ಕಪಟಗಳಿಲ್ಲದ, ಮೋಸ ಅಸೂಯೆಯಿಲ್ಲದ ಅವರ ಜೀವನವು ಸುಂದರವಾಗಿರುತ್ತದೆ. ಮಕ್ಕಳಿದ್ದ ಪರಿಸರವು ಸುಂದರ ಪರಿಮಳದ ಕುಸುಮಗಳಿರುವ ಹೂ ತೋಟದಂತೆ ಕಂಗೊಳಿಸುತ್ತದೆ. ಮೈ ಮನಸ್ಸಿಗೆ ಹಿತವೆನಿಸುವಂತಿರುತ್ತದೆ. ಹಿಂದೆಂದಿಗಿಂತಲೂ ಇಂದಿನ ಮಕ್ಕಳಿಗೆ ಶಾಲಾ ಶಿಕ್ಷಣದ ಜೊತೆಯಲ್ಲಿ ನೈತಿಕ ಶಿಕ್ಷಣದ ಅಗತ್ಯ ಹೆಚ್ಚಾಗಿದೆ. ಈ ನಿಟ್ಟಿನಲ್ಲಿ ನಮ್ಮ ಇತಿಮಿತಿಯಲ್ಲಿ ಇಂದಿನ ಮಕ್ಕಳಿಗೆ ಒಳ್ಳೆಯ ಮಾರ್ಗದರ್ಶನ ಮಾಡಬೇಕು. ಆ ಮೂಲಕ ಅವರ ಬದುಕು ಸತ್ವಪೂರ್ಣವಾಗಲಿ, ಸಂತಸಪೂರ್ಣವಾಗಲಿ ಎಂದು ಆಶಿಸೋಣ.

ಮುಗುಳು ನಕ್ಕಾನೇ ಕೊಡಗಿನ ರೈತ ?



✍ ಸುನಿಲ್ ಕೋರನ

ಅಂಕಿ - ಅಂಶಗಳು ಹೇಳುವ ಪ್ರಕಾರ ಭಾರತದಲ್ಲಿ ಇಂದಿಗೂ ಶೇಕಡಾ 70ರಷ್ಟು ಜನಸಂಖ್ಯೆ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಜೀವನಾಧಾರವಾಗಿ ಕೃಷಿ ಕ್ಷೇತ್ರವನ್ನು ಅವಲಂಭಿಸಿದೆ.

ಇದರಲ್ಲೇನೂ ಆಶ್ಚರ್ಯವಿಲ್ಲ ಬಿಡಿ. ಇದೇ ಕಾರಣಕ್ಕಾಗಿಯೇ ರೈತನನ್ನು ಅನ್ನದಾತ ಅನ್ನುತ್ತಾರೆ. ಆತನನ್ನು ದೇಶದ ಬೆನ್ನೆಲುಬು ಎನ್ನುತ್ತಾರೆ. ಯಾರೇನೇ ಅನ್ನುವುದು ಬಿಡುವುದು ಇರಲಿ. ವಾಸ್ತವ ಏನೆಂದರೆ ಇಂದಿಗೂ ನಮ್ಮ ಅರ್ಥವ್ಯವಸ್ಥೆಯ, ಸಮಾಜದ ಅಸ್ತಿತ್ವ ಉಳಿದಿರುವುದೇ ರೈತನಲ್ಲಿ ಮತ್ತು ಕೃಷಿಯಲ್ಲಿ. ಕೈಗಾರೀಕರಣ, ತಂತ್ರಜ್ಞಾನ ಅಂತನ್ನುವ ಅದೇನೆ ಬಣ್ಣದ ಬಲೂನುಗಳು ನರ್ತಿಸಿದರೂ ನಮ್ಮ ಬುನಾದಿ ಇರುವುದು ಮಣ್ಣಿನ ವಾಸನೆಯಲ್ಲಿ. ಇದೇ ಕಾರಣಕ್ಕೆ ಅದೇನೇ ಆರ್ಥಿಕ ಹಿಂಜರಿತ ಜಗತ್ತನ್ನು ಅಲುಗಾಡಿಸಿದರೂ ಭಾರತ ಮಾತ್ರ ಷೇರುಪೇಟೆಯ ಕುಸಿತದ ಹೊರತಾಗಿಯೂ ಸದೃಢವಾಗಿಯೇ ಉಳಿದುಕೊಂಡದ್ದು.

ಸರಿ, ಎಷ್ಟೆಲ್ಲಾ ಆದರೂ ಪ್ರಶ್ನೆ ಉಳಿಯುತ್ತದೆ. ಮುಗುಳು ನಗಬಲ್ಲನೇ ರೈತ? ಅದರಲ್ಲೂ ಕೊಡಗಿನ ರೈತ...?

ಮುಗುಳುನಗುವುದೇನು, ಅದು ಅವನ ಜೀವನೋತ್ಸಾಹ. ಬೆನ್ನೆಲುಬು ಕುಸಿಯಬಾರದು ಎನ್ನುವ ಆತನ ಹಾರೈಕೆ. ಆದರೆ ಇಂತಹ ನಗುವಿನ ಹಿಂದೆ ಗಾಢವಾದ ವಿಷಾದವಿದೆ. ಅದನ್ನು ಇತರರು ಗುರುತಿಸುವುದಿಲ್ಲ. ಇತ್ತೀಚೆಗಂತೂ ರೈತ ಆಡಲಾರದೇ, ಅನುಭವಿಸಲಾರದೆ ಮೌನವಾಗಿ ಆತ್ಮಹತ್ಯೆಗೆಳಸುತ್ತಿದ್ದಾನೆ. ಅದೃಷ್ಟವೋ, ದುರದೃಷ್ಟವೋ ಅಂತೂ ಆತನ ಮಕ್ಕಳು ಸಮಾಜದ ನೀತಿಯಿಂದ ಜಾಗೃತರಾಗಿದ್ದಾರೆ. ಈವರೆಗಿನ ಸಾಂಪ್ರದಾಯಿಕತೆಯಿಂದ ಅವರು ಹೊರಬಂದಿದ್ದಾರೆ. ನಗರದತ್ತ, ಉದ್ಯೋಗದತ್ತ, ವ್ಯಾಪಾರದತ್ತ ಮುಖ ಮಾಡಿದ್ದಾರೆ. ಅವಶ್ಯವೆನಿಸಿದರೆ ಈ ಕೃಷಿಭೂಮಿಗಳನ್ನು ಮಾರಿ ಬಂಡವಾಳ ಗಳಿಸಲೂ ಅವರು ಹೇಸುತ್ತಿಲ್ಲ! ಈಗವರು ಮುಗುಳು ನಗುವ ಬದಲು ಗಹಗಹಿಸುತ್ತಿದ್ದಾರೆ.

ಪ್ರಶ್ನೆ ಈಗ ಇನ್ನೊಂದು ರೂಪದಲ್ಲಿ ಕಾಡುತ್ತದೆ. ಈ ಅಬ್ಬರದ ನಗು ಆರೋಗ್ಯಕರವೇ? ಇದು ಯಾವ ವಿಪ್ಲವದ ಮುನ್ಸೂಚನೆ? ಬೆನ್ನೆಲುಬಿಗೇ ತಾನು ಮುಖವಾಡವಾಗುವ ಅನಿವಾರ್ಯತೆ ಬಂದರೆ ಮತ್ತೆ ಅಸ್ತಿತ್ವ ಉಳಿಯುವುದು ಹೇಗೆ?

ಹೌದು, ರೈತ ಮುಗುಳ್ನಗಬೇಕು ಆದರೆ ಅಲ್ಲಿ ವಿಷಾದವೂ ಇರಬಾರದು.

ಉಳಿದೆಡೆಗಳ ವಿಚಾರವಿರಲಿ. ಕೊಡಗಿನ ಪರಿಸರದ ರೈತನ ಬಗ್ಗೆ ಹೇಳಬೇಕೀಗ. ಕೊಡಗು ಕೂಡ ತಲೆ ತಲಾಂತರದಿಂದ ಕೃಷಿಯನ್ನೇ ನೆಚ್ಚಿಕೊಂಡಂತಹ ನಾಡು. ಭತ್ತದ ಕೃಷಿ ಇತರೆಡೆಗಳಿಗಿಂತ ಅತೀವ ತ್ರಾಸದಾಯಕ ಮತ್ತು ಕಡಿಮೆ ಇಳುವರಿ ಸಿಗುವಂಥದ್ದಾದರೂ ಹಠತೊಟ್ಟು ಕರ್ಮಯೋಗದಲ್ಲಿ ನಿರತನಾಗಿದ್ದಾತ ಇಲ್ಲಿನ ರೈತ. ಬ್ರಿಟಿಷರು ಒಂದೂವರೆ ಶತಮಾನದ ಹಿಂದೆಯೇ ಇಲ್ಲಿ ಜಾಗತೀಕರಣದ ಬೀಜವನ್ನು ಕಾಫಿ ಎಂಬ ವಾಣಿಜ್ಯ ಬೆಳೆಯ ಮೂಲಕ ಬಿತ್ತಿದಾಗ, ತಾನೂ ಪೈಪೋಟಿಗಿಳಿದು ಅವರನ್ನೂ ಮೀರಿಸುವಂತೆ ಕಾಫಿ ಮತ್ತಿತರ ವಾಣಿಜ್ಯ ಬೆಳೆಗಳನ್ನು ಬೆಳೆದವನೀತ.

ಈಗ ಪರಿಸ್ಥಿತಿಯೇನೆಂದರೆ, ಈ ಕಾಫಿ ಮತ್ತಿತರ ವಾಣಿಜ್ಯ ಬೆಳೆಗಾರಿಕೆಯೂ ಆತನಲ್ಲಿ ನಿಯಮಿತವಾಗಿ ಮಂದಹಾಸ ಮೂಡಿಸುತ್ತಿಲ್ಲ. ಹವಾಮಾನ ವೈಪರೀತ್ಯ ಆತನನ್ನು ಒಮ್ಮೊಮ್ಮೆ ಕಂಗೆಡಿಸಿಬಿಡುತ್ತದೆ. ಅತಿವೃಷ್ಟಿ ಅಥವ ಅನಾವೃಷ್ಟಿ ಈಗೀಗ ಮಾಮೂಲಿ ಎನ್ನುವಂತಾಗಿದೆ. ಮಳೆ ಹದವಿದ್ದರೂ ಅತ್ಯಗತ್ಯ ಸನ್ನಿವೇಶಗಳಲ್ಲಿ ಅದು ಸುರಿಯುವುದೇ ಇಲ್ಲ. ರಸಗೊಬ್ಬರದ ಸಮಸ್ಯೆಯಂತೂ ಅರಣ್ಯ ರೋಧನವಾಗಿಬಿಟ್ಟಿದೆ. ಇವೆಲ್ಲದರ ನಡುವೆ ಕಂಡು ಕೇಳರಿಯದ ನವನವೀನ ಶೈಲಿಯ ಕೀಟಗಳು ಮತ್ತು ರೋಗಗಳ ಬಾಧೆ ಇವೆಲ್ಲವನ್ನು ಸರಿದೂಗಿಸಲು, ತಕ್ಕ ಆರೈಕೆ ಮಾಡಲು ಕಾರ್ಮಿಕರ ಕೊರತೆ. ಅದರಲ್ಲೂ ಸಕಾಲಕ್ಕಂತೂ ಕಾರ್ಮಿಕರ, ನುರಿತ ಕಾರ್ಮಿಕರ ಅಭಾವ ಕಟ್ಟಿಟ್ಟ ಬುತ್ತಿ. ಇಷ್ಟೆಲ್ಲಾ ಆದ ಮೇಲೆ ದಕ್ಕಿದ ಬೆಳೆಗೆ ಸರಿಯಾದ ಬೆಲೆ ಇರುವುದಿಲ್ಲ. ಲಂಡನ್ ಮತ್ತು ನ್ಯೂಯಾರ್ಕ್‌ನ ಪೇಟೆಗಳಲ್ಲಿ ಗುಡುಗು ಮೋಡ ಬಂದರೆ ಇಲ್ಲಿ ಕೊಡೆ ಹಿಡಿಯಬೇಕಾದಂತಹ ಜೂಜುಕೋರ ಮಾರುಕಟ್ಟೆ ಪರಿಸ್ಥಿತಿ ಸರ್ವೇಸಾಮಾನ್ಯವಾಗಿ ಕೈಯಲ್ಲಿ ಸರಕು ಇಲ್ಲದಿರುವಾಗಲಷ್ಟೇ ಪೇಟೆಯಲ್ಲಿ ಒಂದಷ್ಟು ಬೇಡಿಕೆ ಮತ್ತು ಬೆಲೆ ಇರುತ್ತದೆ. **ಹೀಗಿರುವಾಗ ನಗಬೇಕೆಂದರೂ, ಮನಪೂರ್ವಕವಾಗಿ ಮುಗುಳು ನಕ್ಕಾನು ರೈತ ಹೇಗೆ?**

ಇವೆಲ್ಲಾ ನೇರವಾಗಿ ಕೃಷಿಗೆ ಸಂಬಂಧಪಟ್ಟದ್ದಾದರೆ ಇನ್ನೊಂದೆಡೆ ಇದೇ ಅನ್ನದಾತನನ್ನು ಸುಲಿದು ತಿನ್ನಲು ಬಾಯ್ದೆರೆದು ಕುಳಿತಿರುತ್ತವೆ. ಕಂದಾಯ ಇಲಾಖೆ ಮತ್ತು ಅರಣ್ಯ ಇಲಾಖೆ.

ಕಂದಾಯ ಇಲಾಖೆ ಇಡಿಯ ಕರ್ನಾಟಕಕ್ಕೊಂದು ಕಾನೂನು ಮಾಡಿದರೇ, ಇಲ್ಲಿ ಕೊಡಗಿಗೇ ಒಂದು ಕಾನೂನು ಹೇರುತ್ತದೆ. ಈ ಹಿಂದಿನ ರಾಜರ ಆಳ್ವಿಕೆ ಮತ್ತು ಬ್ರಿಟೀಷ್ ಆಳ್ವಿಕೆಯ ಕಾಲದಲ್ಲಿ ಸಂಭವಿಸಿದ ಭೂ ಹಸ್ತಾಂತರವನ್ನು ಚರ್ವಿತ ಚರ್ವಣ ರೀತಿಯಲ್ಲಿ ಗ್ರಹಿಸಿಕೊಂಡು ಮನಸೋ ಇಚ್ಚೆ ಸುತ್ತೋಲೆಗಳನ್ನು ಇದು ಹೊರಡಿಸುತ್ತದೆ. ತಲೆ ತಲಾಂತರದಿಂದ ರೂಢಿಸಿಕೊಂಡು ಬಂದಿರುವ ಜಮೀನು ರೈತರಿಗೆ ಸೇರಿದ್ದು ಎಂದು 1992ರಲ್ಲಿ ಹೈಕೋರ್ಟ್ ಹೇಳುತ್ತದೆ. ಸಚಿವ ಸಂಪುಟದ ಸಮಿತಿ ಇಂತಹ ಬಾಣೆ ಜಾಗಗಳನ್ನು ಕಂದಾಯಕ್ಕೊಳಪಡಿಸಿ ರೈತರಿಗೆ ಪಕ್ಕ ಕೊಡಬೇಕೆನ್ನುತ್ತದೆ. ಇದೇ ರೀತಿ ಸುತ್ತೋಲೆಯೊಂದನ್ನು ಲೋಕರೆ ಎಂಬ ಇಲಾಖಾ ಕಾರ್ಯದರ್ಶಿ ಜಿಲ್ಲಾಧಿಕಾರಿಗೆ ಕಳುಹಿಸುತ್ತಾರೆ. ಸಮಸ್ಯೆ ಮುಗಿಯಿತು ಎಂದುಕೊಳ್ಳುವ ಹೊತ್ತಿಗೆ ಜಾಮ್‌ದಾರ್ ಎಂಬ ಅಧಿಕಾರಿ ಕಂದಾಯ ಇಲಾಖೆಯ ಕಾರ್ಯದರ್ಶಿಯಾಗಿ ಬರುತ್ತಾರೆ. ಮತ್ತು ಹಿಂದಿನ ಸುತ್ತೋಲೆಯನ್ನು ನಿಷ್ಕ್ರಿಯವಾಗುವ ಹಾಗೆ ವಿರೋಧಾಭಾಸದ ಆದೇಶ ನೀಡುತ್ತಾರೆ. ಅಲ್ಲಿ ಸಮಸ್ಯೆ ಹೊಸ ಮಜಲನ್ನು ತಲುಪುತ್ತದೆ. ಹೀಗೆ ಕೊಡಗಿನ ಭೂಮಿಯ ಒಡೆತನದ ಸಮಸ್ಯೆ ಒಂದಲ್ಲಾ ಒಂದು ರೀತಿಯಲ್ಲಿ ಗವಾಕ್ಷಿಯ ಬೇತಾಳವಾಗಿಯೇ ಇದೆ.

ಅರಣ್ಯ ಇಲಾಖೆಯದ್ದು ಇನ್ನೊಂದು ರಾದ್ಧಾಂತ. ಕೊಡಗಿನ ನೈಜ ಮೂಲ ನಿವಾಸಿಗಳಾದ ಹಲವು ಬುಡಕಟ್ಟು ಜನ ಶತಮಾನಗಳಿಂದಲೂ ಕಾಡಿನಂಚಿನಲ್ಲಿ ನೆಲೆಸಿ ಪ್ರಾಮಾಣಿಕವಾಗಿ ಸಾಗುವಳಿ ಮಾಡಿಕೊಂಡಿದ್ದರೂ ಇವರನ್ನು ಪ್ರಾಣಿಗಳಿಗಿಂತ ನಿಕೃಷ್ಟವಾಗಿ ಪರಿಗಣಿಸಿ, ಕನಿಷ್ಟ ಮೂಲಭೂತ ಸೌಕರ್ಯಗಳಿಂದ ವಂಚಿಸುತ್ತದೆ ಈ ಇಲಾಖೆ. ವಾಸ್ತವವಾಗಿ ಕೊಡಗಿನ ಅತ್ಯಂತ ನಿಪುಣ ವ್ಯವಸಾಯಗಾರರು, ರೈತರೆಂದರೆ ಇವರೇ ಆಗಿದ್ದಾರೆ. ಮುಗುಳು ನಗು ಮೂಡಬೇಕಾದ್ದೇ ಇವರ ಮುಖದಲ್ಲಿ. ಅಂದರೆ ಮಾತ್ರ ರೈತ ಮುಗುಳುನಕ್ಕ ಎಂದರೆ ಸಾರ್ಥಕತೆ ಮತ್ತು ಧನ್ಯತೆ.

ಕೊಡಗಿನಲ್ಲಿ ಅಗಾಧವಾಗಿರುವ ಅರಣ್ಯ ಸಂಪತ್ತನ್ನು ಈ ಇಲಾಖೆ ಅದೆಷ್ಟು ರಕ್ಷಿಸಿದೆಯೋ ಗೊತ್ತಿಲ್ಲ. ಆದರೆ, ರೈತರು ಪೋಷಿಸಿದ ಕೃಷಿಭೂಮಿಯಲ್ಲಿನ ಮರಗಳನ್ನು ಡೀಮ್ಡ್ ಫಾರೆಸ್ಟ್ ಎಂಬ ಹೆಸರಿನಲ್ಲಿ ಆಕ್ರಮಿಸಿಕೊಳ್ಳಲು ಈ ಇಲಾಖೆ ಮುಂದಾಗುತ್ತದೆ. ಇತ್ತೀಚೆಗಂತೂ ಗ್ರೇಟರ್ ತಲಕಾವೇರಿ, ಪಶ್ಚಿಮ ಘಟ್ಟ ಸಂರಕ್ಷಣೆ, ಸೂಕ್ಷ್ಮ ಪರಿಸರ ವಲಯ, ಹಾಗೆ... ಹೀಗೆ ... ಎನ್ನುವ ಅವಾಂತರಕಾರಿ ಹಿಂಬಾಗಿಲ

ನಿಯಮಗಳನ್ನು ಹೇರಲು ಹವಣಿಸುತ್ತಿದ್ದಾರೆ. ಇವರಿಗೆ ಪರಿಸರವಾದಿಗಳು ಎಂಬ ಸಮಯ ಸಾಧಕ ಸೋಗಲಾಡಿಗಳು ಒತ್ತಾಸೆ ಕೊಡುತ್ತಿದ್ದಾರೆ. ಈ ಮಂದಿ ನಿಯತ್ತಿನಿಂದ ತಂತಮ್ಮ ವ್ಯಾಪ್ತಿಯ ಅರಣ್ಯ ರಕ್ಷಣೆಯಲ್ಲಿ ತೊಡಗಿದ್ದರೆ, ಕಾಡಾನೆಗಳು ಊರಿಗೆ ಬರುವ ಪ್ರಮೇಯ ಈ ಪರಿ ಇರುತ್ತಿರಲಿಲ್ಲ. ಈಗೇನಾಗಿದೆ ಅಂದರೆ ಕೊಡಗಿನ ಬಹಳಷ್ಟು ಪ್ರದೇಶಗಳಲ್ಲಿ ಆನೆ ತಿನ್ನದಂತಹ ಬೆಳೆಗಳನ್ನು ಮಾತ್ರ ಬೆಳೆಯಬೇಕಿದೆ. ಭತ್ತ, ಜೋಳ, ತೆಂಗು, ಬಾಳೆ ಮುಂತಾದವನ್ನು ರೈತರೇ ಆನೆದಾಳಿಗೂ ಮುನ್ನ ತಮ್ಮ ಕೈಯ್ಯಾರೆ ನಾಶಪಡಿಸಬೇಕಿದೆ. ಇಲ್ಲವೇ ಆನೆ ಹಿಂಡು ನಡೆದ ದಾರಿಯ ಸರ್ವನಾಶಕ್ಕೆ ಸಿದ್ಧರಾಗಬೇಕಿದೆ. ತೀರಾ ಅಲ್ಪಸ್ವಲ್ಪ ಪರಿಹಾರಕ್ಕೆ ಸರಕಾರ ಮನಸ್ಸು ಮಾಡುತ್ತದಾದರೂ ಈ ದೂರ್ತ ಅರಣ್ಯ ಇಲಾಖೆಯ ಕೈಯಿಂದ ಈ ಪರಿಹಾರದ ತೃಣ ಮಾತ್ರವಾದರೂ ಸಿಗಬೇಕಾದರೆ ಜನ್ಮ ಜನ್ಮಾಂತರದ ಪ್ರಾಣಾಯಾಮ, ಪಡಿಪಾಟಲು. ರೈತ ತನ್ನದೊಂದು ಪುಟ್ಟ ಗೂಡು ಕಟ್ಟಿಕೊಳ್ಳಲು ತಲತಲಾಂತರದ ತನ್ನದೇ ಜಮೀನಿನಿಂದ ಮರವೊಂದನ್ನು ಉಪಯೋಗಿಸಿಕೊಳ್ಳಬೇಕಾದರೆ ಕಾನೂನುಗಳ ಚಕ್ರವ್ಯೂಹ ಎದುರಿಸಬೇಕಾಗುತ್ತದೆ. ಆದರೆ ಇದೇ ಅರಣ್ಯ ಇಲಾಖೆ ಮರವ್ಯಾಪಾರಿಗಳ ವಲಯದಲ್ಲಿ ಮಾತ್ರ ತುಂಬಾ ಜನಪ್ರಿಯವಾಗಿದೆ! ಇದನ್ನು ಕಂಡ ರೈತ ಬಿದ್ದು ಬಿದ್ದು ನಗುತ್ತಿದ್ದಾನೆ. ಕೇವಲ ಮುಗುಳು ನಕ್ಕು ಸುಮ್ಮನಾಗಲು ಸಾಧ್ಯವೇ ಇಲ್ಲ. ಅಲ್ಲವೇ?

ಕೊಡಗಿನ ರೈತ ಮಂದಹಾಸ ಬೀರಲು, ಹಾರ್ದಿಕವಾಗಿ ಮುಗುಳುನಗಲು ಮತ್ತು ತನ್ಮೂಲಕ ಇಡಿಯ ಕೊಡಗಿನ ಸಾಮಾಜಿಕ ವ್ಯವಸ್ಥೆ ಹಸನ್ಮುಖಿಯಾಗಲು ಕೆಲವು ಮಜಲುಗಳನ್ನು ಹಾದು ಹೋಗಬೇಕಿದೆ. ಆತನಿಗೆ ಕನಿಷ್ಟ ಬೆಂಬಲ ಬೆಲೆಯ ಅಭಯ ಬೇಕಾಗಿದೆ. ಈ ನಿಟ್ಟಿನಲ್ಲಿ ಆತನಿಗೆ ಮಧ್ಯವರ್ತಿಗಳ ಹಾವಳಿ ತಪ್ಪಬೇಕಾಗಿದೆ. ಇಲ್ಲಿನ ತಮಾಷೆಯೆಂದರೆ ಕೊಡಗಿನ ರೈತ ಹಲವಾರು ಸಮಸ್ಯೆಗಳಿಂದ ಬಳಲಿ ಬೆಂಡಾಗಿರಬಹುದು. ಆದರೆ ಆತನನ್ನು ಅವಲಂಭಿಸಿದ ಮಧ್ಯವರ್ತಿ ವ್ಯಾಪಾರಿಗಳು ಮಾತ್ರ ತಮ್ಮ ಪಾಲಿನ ಲಾಭಾಂಶದಿಂದ ವಂಚಿತರಾಗಿಲ್ಲ. ರೈತನ ಕೆಲಸ ಅವರಿವರನ್ನು ತೃಪ್ತಿಪಡಿಸಿ ಅವರಿವರ ಪಾಲು ಸಂದಾಯ ಮಾಡುವುದಷ್ಟೆ ಆಗದಿರಲು ಕನಿಷ್ಟ ಬೆಂಬಲ ಬೆಲೆ ಆಧಾರಿತ ಸುರಕ್ಷಿತ ಮಾರುಕಟ್ಟೆಯೊಂದು ಅತ್ಯಗತ್ಯ. ಈ ದಿಸೆಯಲ್ಲಿ ಸಹಕಾರಿ ಸಂಘಗಳಾದರೂ ಬೆಳೆದು ನಿಲ್ಲಬೇಕೆಂದುಕೊಂಡರೂ ಮತ್ತೆ ಅವುಗಳಿಗೂ ಈಗಿನ ವ್ಯವಸ್ಥೆಯಲ್ಲಿ ಸರಕಾರವೇ ಚೈತನ್ಯ ತುಂಬಬೇಕು.

ಸರಕಾರಗಳು ಎಲ್ಲವನ್ನೂ ನಿಯಂತ್ರಿಸಲು ಸಾಧ್ಯವಿಲ್ಲ ನಿಜ. ಇತ್ತೀಚಿನ ದಿನಗಳಲ್ಲಿ ಕೆಲವು ಸಹಾಯಧನ ಮತ್ತು ಬ್ಯಾಂಕಿಂಗ್ ಸವಲತ್ತುಗಳ ವಿಚಾರದಲ್ಲಿ ಸರಕಾರಗಳೂ ಸಾಕಷ್ಟು ಆಸಕ್ತಿ ತೋರಿವೆ. ಆದರೆ ಕೃಷಿ ಎನ್ನುವುದು ಸುರಕ್ಷಿತ ವಲಯವಾಗುವಂತೆ, ಉದ್ಯಮದ ವೃತ್ತಿಪರ ಸ್ವರೂಪಕ್ಕೆ ಬೆಳೆಯುವಂತೆ ನಿರ್ದಿಷ್ಟವಾದ ಯೋಜನೆಗಳನ್ನು ರೂಪಿಸಬೇಕಿದೆ. ರೈತನಿಗೆ ತನ್ನ ಕ್ಷೇತ್ರದಲ್ಲಿ ಆತ್ಮವಿಶ್ವಾಸ ಬರುವಂತಾದರೆ ಸಾಕು. ಉಳಿದದ್ದನ್ನು ಆತ ಬೆರಗುಗೊಳಿಸುವಂತೆ ಸಾಧಿಸಿ ತೋರುತ್ತಾನೆ. ಅದೇ ರೀತಿ ಆತನ ಏಕಾಗ್ರತೆಗೆ, ಸ್ವಾಭಿಮಾನಕ್ಕೆ ಭಂಗ ತರುವ ದುಷ್ಟ ಕೂಟಗಳಿಗೂ ಮೂಗುದಾರ ತೊಡಿಸಬೇಕಿದೆ. ಆತನ ಹಕ್ಕುಗಳನ್ನು ಆತನಿಗೆ ದೊರಕಿಸಿ ಕೊಡಲು ಸರಕಾರಗಳಿಗೆ ಹಿಂಜರಿಕೆ ಬೇಕಾಗಿಲ್ಲ.

ಇವುಗಳೊಂದಿಗೆ ಅನಗತ್ಯ ಬೃಹತ್ ಯೋಜನೆಗಳಿಗೆ ಈ ಪುಟ್ಟ ಜಿಲ್ಲೆಯಲ್ಲಿ ಭೂಸ್ವಾಧೀನಕ್ಕೆ ಕೈಹಾಕದೆ ಸರಳ ನೀರಾವರಿ ಯೋಜನೆಗಳು, ಸಮರ್ಪಕ ವಿದ್ಯುತ್, ಸುಗಮ ಸಾಗಾಣಿಕೆ ವ್ಯವಸ್ಥೆಗೆ ರಸ್ತೆ ಮತ್ತು ಸಾರಿಗೆ, ಮಾನವೀಯ ಮುಖವುಳ್ಳ ವೈಜ್ಞಾನಿಕ ಸಹಕಾರ, ರೈತರ ಜೀವನಮಟ್ಟದ ಅಭಿವೃದ್ಧಿ ಇವುಗಳನ್ನೆಲ್ಲಾ ಸರಕಾರಿ ವ್ಯವಸ್ಥೆ ಒದಗಿಸಬಹುದು.

ರೈತರಾದರೂ ಈ ದಿಕ್ಕಿನಲ್ಲಿ ಕೆಲವು ಪ್ರಜ್ಞಾವಂತ ನಡೆವಳಿ ತೋರಬೇಕಿದೆ. ಎಲ್ಲಕ್ಕಿಂತ ಮುಖ್ಯವಾಗಿ ಉಕ್ಕಿನಂತಹ ಒಗ್ಗಟ್ಟಿನ ಮನಸ್ಥಿತಿಯನ್ನು ಹೊಂದಬೇಕಿದೆ. ಕೃಷಿ ಕ್ಷೇತ್ರದ ಇಂದಿನ ಎಲ್ಲಾ ಶಾಪಗಳಿಗೆ ಮೂಲ

ಕಾರಣವೆಂದರೆ ಕೃಷಿಕರು ಅಸಂಘಟಿತರಾಗಿರುವುದೇ ಆಗಿದೆ. ಸ್ವಾರ್ಥ ಬುದ್ಧಿ ಎನ್ನುವುದು ತನ್ನವರಿಗೇ ದ್ರೋಹ ಬಗೆಯುವಂತೆ ಮಾಡುತ್ತದೆ. 1837ರ ಪ್ರಖ್ಯಾತ ಕೊಡಗು ಬಂಡಾಯ ಅಥವಾ ಸ್ವಾತಂತ್ರ್ಯ ಪ್ರಿಯ ರೈತರ ಬಂಡಾಯ ವಿಫಲವಾಗಲೂ ಕೂಡ ಇದೇ ರೀತಿ ಕೆಲವರ ಸ್ವಾರ್ಥಪರತೆ ಕಾರಣವಾಗಿತ್ತು.

ಇನ್ನು ಮಿಶ್ರ ಬೆಳೆಗಾರಿಕೆಯೊಂದಿಗೆ ಒಂದಷ್ಟು ಪ್ರಗತಿಪರತೆ, ಪ್ರಯೋಗಶೀಲತೆ ಮತ್ತು ಸುಧಾರಿತ ಪದ್ಧತಿಗಳನ್ನೂ ರೈತರು ಪ್ರಯತ್ನಿಸಬಹುದು. ಇಲ್ಲಿ ಒಂದು ವಿಚಾರ ನೆನಪಿಡಬೇಕು. ಕೊಡಗಿನ ವಾತಾವರಣದಲ್ಲಿ ದೊಡ್ಡ ಮಟ್ಟದ ಕೈಗಾರಿಕೆಗಳು ಅಥವಾ ಉದ್ಯಮ ಕಾರ್ಯ ಸಾಧುವಲ್ಲ. ಕೃಷಿ ಮತ್ತು ಮಣ್ಣಿನೊಂದಿಗಿನ ಅವಿನಾಭಾವತೆ ಅನಿವಾರ್ಯ. ನಮಗೆ ಕಾಡುಗಳೂ, ನದಿಗಳೂ, ಮರಗಳೂ, ಭೂಮಿಯೂ ಎಲ್ಲವೂ ಪೂಜನೀಯ. ಅದೇ ಹೆಮ್ಮೆಯ ಸಂಪ್ರದಾಯ ಕೂಡ. ಇತ್ತೀಚೆಗೆ ಇದೇ ಪ್ರವಾಸೋದ್ಯಮದ ಪ್ರಧಾನ ಆಕರ್ಷಣೆಯಾಗುತ್ತದೆ ಎನ್ನುವದು ಸ್ವಾರಸ್ಯಕರ ಸತ್ಯ. ಈ ನೆಪದಲ್ಲಿ ಅಪಾರ ಬಂಡವಾಳವಾಗಿ ಹೊರಗಿನವರ ಕಪ್ಪುಹಣವೂ ಹರಿಯುತ್ತದೆ. ಇದೂ ಕೂಡ ಬಯಸದೇ ಬಂದ ಭಾಗ್ಯವೋ, ದುರಂತವೋ ಗೊತ್ತಿಲ್ಲ. ಕಾಲವೇ ಅದಕ್ಕೆ ಉತ್ತರಿಸಲಿದೆ.

ಮಾತೆ ಕಾವೇರಮ್ಮನ ಕೃಪೆಯಿಂದ ಇಲ್ಲಿನ ರೈತರ ಮುಗುಳ್ನಗೆಯೊಂದು ಪೂರ್ಣಪೂರ್ವಕವಾಗಿ ಉಳಿದುಕೊಳ್ಳಲಿ. ರೈತರ, ಗ್ರಾಮೀಣರ ಸ್ವಂತಿಕೆ, ತನ್ನತನಗಳು ವಿಶ್ವಾಸಪೂರ್ಣವಾಗಲಿ. ಅಷ್ಟು ಸಾಕು.

ಸಂಭ್ರಮದ ತವರು



✍ ಬಾರಿಯಂಡ ದಿವ್ಯಾ ಜೋಯಪ್ಪ
ಮದೆ

ತೂಗಿದ ಹೂಬಳ್ಳಿ, ಘಂ ಎಂದ ತಂಗಾಳಿ
ಝೇಂಕಾರದ ಇಂಪು ದನಿಗೆ
ಚಿತ್ತ ಚಿತ್ತಾರದ ನವಿಲು ಕುಣಿತ
ಭಾವ ಭಾವನೆಯ ಥಕಧಿಮಿಥ...
ಹೃನ್ಮನದ ಸಂಭ್ರಮ ನರನರ ಮಿಡಿತ
ಸುಖ ದುಃಖದ ನೆಳಲು ಬೆಳಕಿನಾಟ
ಸೃಷ್ಟಿ ನಿಯಮ ನಿತ್ಯ ಸತ್ಯ.

ಯಾಕೋ ಏನೋ...
ಮನಮನದಿ ನಿಟ್ಟುಸಿರು
ತೊಟ್ಟಿಕ್ಕುವ ಕಣ್ಣೀರು
ಹೊಡೆದಾಟ, ಚೀರಾಟ
ನಿಲ್ಲುತ್ತಿಲ್ಲ ಸಾವಿನಾಟ!

ಎಲ್ಲೆಲ್ಲಿಯೂ ಕ್ರೌರ್ಯದ ವಿಜೃಂಭಣೆ
ಸಂಭ್ರಮದ ತವರಲ್ಲಿ ಸೂತಕದ ಛಾಯೆ!
ಮತ್ತೆ ತಂಗಾಳಿ ಬೀಸಿ ಬಂದು
ಹೂಬಳ್ಳಿ ತೂಗಲಿ
ಝೇಂಕಾರದ ಜೇನ ದನಿಗೆ
ಹೃನ್ಮನ ಕುಣಿದಾಡಲಿ
ಸಂಭ್ರಮದ ತವರಾಗಲಿ...

ಹೇಗಾಯಿತು ಮತ್ತು ಹೇಗಾಗಬೇಕು ಕೊಡಗಿನ ರಾಜಕೀಯ ?

✍ ಸುನಿಲ್ ಕೋರನ

ಕೊಡಗಿನ ರಾಜಕೀಯ ಕಥನ ವರ್ಣರಂಜಿತವಾಗಿ ಆರಂಭವಾದುದು 1663ರಲ್ಲಿ. ಅಳಿದುಳಿದ ವಿಜಯನಗರ ಸಾಮ್ರಾಜ್ಯದ ಕೆಳದಿ – ಇಕ್ಕೇರಿ ಪ್ರದೇಶದ ಆಡಳಿತಗಾರರ ಸಂಬಂಧ ಹೊಂದಿದ ವೀರರಾಜ ಎಂಬ ರಾಜಪುತ್ರ ಕೊಡಗಿನಲ್ಲಿ ಒಂದು ರಾಜವಂಶದ ಪ್ರಭುತ್ವ ಆರಂಭಿಸುತ್ತಾನೆ. ಈ ರಾಜವಂಶ ಮುಂದೆ 1934ರಲ್ಲಿ ಬ್ರಿಟಿಷ್ ಸರಕಾರ ಬರುವಲ್ಲಿವರೆಗೂ ಸುಮಾರು 170 ವರ್ಷಗಳ ಕಾಲ ರಾಜ್ಯಭಾರ ಮಾಡುತ್ತದೆ. ಹಾಲೇರಿಯಿಂದ ಇವರ ದೊರೆತನ ಆರಂಭಗೊಂಡುದ್ದರಿಂದಾಗಿ ಇವರನ್ನು ಹಾಲೇರಿ ವಂಶಸ್ಥರೆನ್ನಲಾಗುತ್ತದಾದರೂ ಇದೇ ವಂಶದ ಮುದ್ದು ರಾಜ ಎಂಬಾತ 1680ರ ದಶಕದಲ್ಲಿ ಮಡಿಕೇರಿಯನ್ನು ಸ್ಥಾಪಿಸಿ ಕೋಟೆ ಕಟ್ಟಲು ತೊಡಗಿ ಇಲ್ಲಿಂದಲೇ ರಾಜ್ಯಾಡಳಿತಕ್ಕೆ ತೊಡಗುತ್ತಾನೆ. ಮುಂದೆ ಕ್ರಿ.ಶ. 1815ರ ಸುಮಾರಿನಲ್ಲಿ ಲಿಂಗರಾಜೇಂದ್ರನು ಮಡಿಕೇರಿಯಲ್ಲಿ ಅರಮನೆ, ಓಂಕಾರೇಶ್ವರ ದೇವಾಲಯವನ್ನು ನಿರ್ಮಿಸುತ್ತಾನೆ.

ಈ ಮೊದಲಿನ ಕೊಡಗಿನ ರಾಜಕೀಯ ಚರಿತ್ರೆ ಅಸ್ಪಷ್ಟವಾಗಿದೆ. ದಕ್ಷಿಣದಲ್ಲಿ ಕೇರಳ, ಪೂರ್ವದಲ್ಲಿ ಕೆನರಾ, ಪಶ್ಚಿಮ ಮತ್ತು ಉತ್ತರಗಳಲ್ಲಿ ಬಯಲು ಸೀಮೆ ಮತ್ತು ಮಲೆನಾಡಿನ ಇತರ ಪ್ರದೇಶಗಳಿಂದ ಸುತ್ತುವರೆದಿರುವ ವಿಶಿಷ್ಟ ವಾತಾವರಣ ಹಾಗೂ ಸಂಸ್ಕೃತಿಯ ಕೊಡಗು ಪ್ರದೇಶ ಎರಡನೇ ಶತಮಾನದಿಂದ 16ನೇ ಶತಮಾನದವರೆಗೂ ಚೆಂಗಾಳ್ವರು, ಚೋಳರು, ಗಂಗರು ಮೊದಲಾದವರಿಂದ ವಿಜಯನಗರದ ತುಳುವ ಸಾಮ್ರಾಜ್ಯದ ಅಧಿಪತ್ಯದ ತನಕ ಅನೇಕ ಸಾಮ್ರಾಟರಿಂದ ಮತ್ತು ಸಾಮಂತರಿಂದ ಆಳ್ವಿಕೆಗೊಳಗಾಗಿದೆ. ಅಂದಿನ ಕರ್ನಾಟಕ ಸಾಮ್ರಾಜ್ಯ ಕಾವೇರಿಯಿಂದ ಗೋದಾವರಿಯವರೆಗೂ ವ್ಯಾಪಿಸಿದ್ದರೆ ಇತ್ತ ಕೊಡಗಿನ ಎಲ್ಲೆಗಳೂ ಪಿರಿಯಾಪಟ್ಟಣದಿಂದ ಪುತ್ತೂರಿನವರೆಗೆ ವ್ಯಾಪಿಸಿಕೊಂಡಿತ್ತು. ಈ ನಡುವೆ ಟಿಪ್ಪೂ ಸುಲ್ತಾನ ಮತ್ತು ಬ್ರಿಟಿಷರ ನಡುವೆ ಕೊಡಗಿನ ಸ್ವಾಮಿತ್ವಕ್ಕಾಗಿ ರೋಚಕ ಹೋರಾಟ ಕಂಡುಬರುತ್ತದೆ. ಮಲಬಾರ್ ಮತ್ತು ಮೈಸೂರುಗಳ ನಡುವಿನ ಆಯಕಟ್ಟಿನ ಪ್ರದೇಶವಾಗಿರುವ ಕೊಡಗು ಬ್ರಿಟಿಷ್‌ರ ಪಾಲಿಗೆ ಅವರ ತಾಯ್ನಾಡು ಇಂಗ್ಲೆಂಡ್‌ನ ಹವಾಮಾನವನ್ನು ನೆನಪಿಸುವಂತಹ ಪ್ರದೇಶವಾಗಿರುತ್ತದೆ. ಮುಂದೆ 1934ರಲ್ಲಿ ಬ್ರಿಟಿಷರು ತಮ್ಮ ಒಡೆದು ಆಳುವ ನೀತಿಗನುಗುಣವಾಗಿ ಕೊಡಗಿನ ಅವಿಭಾಜ್ಯ ಅಂಗವಾಗಿದ್ದ ಸುಳ್ಯ, ಬೆಳ್ಳಾರೆ ಮುಂತಾದ ಪ್ರದೇಶಗಳನ್ನು ಕೆಳ ಕೊಡಗು ಎಂದು ವಿಭಾಗಿಸಿ ಅದನ್ನು ಕ್ರಮೇಣ ಕೆನರಾ ಪ್ರದೇಶಕ್ಕೆ ಸೇರಿಸುತ್ತಾರೆ. ಇವಿಷ್ಟು ಸ್ಥೂಲವಾಗಿ ಕೊಡಗಿನ ರಾಜಕೀಯ ಇತಿಹಾಸವಾದರೆ ಮುಂದಿನ ಅಧ್ಯಾಯ 1947ರ ಭಾರತದ ಸ್ವಾತಂತ್ರ್ಯದೊಂದಿಗೆ ಆರಂಭವಾಗುತ್ತದೆ.

1952ರಲ್ಲಿ ಕೊಡಗು 'ಸಿ' ದರ್ಜೆಯ ರಾಜ್ಯವಾಗಿ ಅಸ್ತಿತ್ವಕ್ಕೆ ಬಂತು. ಇದಕ್ಕೂ ಮೊದಲು ಕೇವಲ ಜಿಲ್ಲಾ ಬೋರ್ಡ್ ಎಂಬ ಕೆಲವು ಪ್ರತಿನಿಧಿಗಳ ವ್ಯವಸ್ಥೆಯಿದ್ದು ಅದು ಕೇವಲ ನಾಮಕಾವಸ್ಥೆಗಷ್ಟೇ ಇತ್ತು. ನಿರ್ಣಾಯಕ ಅಧಿಕಾರ ಅಂದಿನ ಚೀಫ್ ಕಮೀಷನರ್‌ಗಿತ್ತು. ಈ ನಡುವೆ ಕರ್ನಾಟಕ ಏಕೀಕರಣದ ಚಳುವಳಿ 1940ರ ದಶಕದಿಂದ ತೀವ್ರಗೊಂಡಿದ್ದು ಅದರ ಪ್ರಭಾವ ಕೊಡಗಿನ ಮೇಲೂ ಆಗಿತ್ತು. 1938ರಲ್ಲಿ ಮೈಸೂರು ಸಂಸ್ಥಾನದಲ್ಲಿ ವಿಲೀನ ಕುರಿತಂತೆ ಒಂದು ಠರಾವು ಕೂಡ ಆಗಿತ್ತು.

1952ರ ಕೊಡಗು ರಾಜ್ಯದ ಶಾಸನ ಸಭೆಯ 24 ಸ್ಥಾನಗಳಿಗೆ ಚುನಾವಣೆ ನಡೆದು ಕಾಂಗ್ರೆಸ್ ಪಕ್ಷಕ್ಕೆ 15

ಸ್ಥಾನಗಳು ದೊರೆತವು. ಕೊಡಗಿನ ವಿಲೀನದ ವಿರೋಧಿಯಾಗಿದ್ದ ಪಂದ್ಯಂಡ ಬೆಳ್ಯಪ್ಪನವರ ಪಂಗಡಕ್ಕೆ 9 ಸ್ಥಾನಗಳ ಬಲವಿತ್ತು. ಆ ದಿನಗಳಲ್ಲಿ ಕೊಡಗಿಗೆಂದೇ ಒಂದು ಪ್ರತ್ಯೇಕ ಲೋಕಸಭಾ ಸ್ಥಾನದ ಪ್ರತಿನಿಧಿತ್ವ ಇತ್ತು. ನಿಡ್ಯಮಲೆ ಸೋಮಣ್ಣ ಕಾಂಗ್ರೆಸ್ ಪರ ಆಯ್ಕೆಗೊಂಡು ಇದುವರೆಗಿನ ಏಕಮಾತ್ರ ಕೊಡಗು ಲೋಕಸಭಾ ಸ್ಥಾನದ ಪ್ರತಿನಿಧಿಯಾದರು. ಮುಖ್ಯಮಂತ್ರಿಯಾಗಿ ಸಿ.ಎಂ. ಪೂಣಚ್ಚ ಮತ್ತು ಕ್ಯಾಬಿನೆಟ್ ಮಂತ್ರಿಯಾಗಿ ಕೆ. ಮಲ್ಲಪ್ಪ ನಿಯುಕ್ತರಾದರು. ಕೇವಲ ಇಬ್ಬರೇ ಇಬ್ಬರು ಮಂತ್ರಿಗಳ ಸರಕಾರ ಅದಾಗಿತ್ತು.

ಅದು ಸ್ವಾತಂತ್ರ್ಯ ಬಂದ ಹೊಸತಾದ್ದರಿಂದ ಎಲ್ಲಡೆಯಂತೆ ಕೊಡಗಿನಲ್ಲೂ ಕಾಂಗ್ರೆಸ್‌ಗೆ ಪ್ರಬಲ ಎದುರಾಳಿಗಳಿರಲಿಲ್ಲ. ಸಹಜವಾಗಿಯೇ ನಾಡಿನ ನೀತಿ ನಿರೂಪಣೆಯಲ್ಲಿ ಆ ಪಕ್ಷಕ್ಕೆ ಮತ್ತು ಸರಕಾರಕ್ಕೆ ಅಪಾರ ಪ್ರಭಾವವಿತ್ತು. ಇದೇ ಪ್ರಭಾವ ಜನಬೆಂಬಲವನ್ನು ಅನಾಮತ್ತಾಗಿ ದಕ್ಕಿಸಿಕೊಂಡು ಆ ನಂತರದ ದಿನಗಳಲ್ಲಿ ಕೊಡಗು ಕರ್ನಾಟಕದಲ್ಲಿ ವಿಲೀನವಾಗಲು ಜನಾಭಿಪ್ರಾಯ ವ್ಯಾಪಕವಾಗುವಂತೆ ಮಾಡಿತು. ಕೊನೆಗೆ 1956ರಲ್ಲಿ ಕೊಡಗು ವಿಧಾನಸಭೆಯಲ್ಲಿ 22-2 ಪರ ವಿರೋಧ ಮತಗಳ ಅಂತರದಿಂದ ಕೊಡಗು ಮೈಸೂರು ಸಂಸ್ಥಾನದಲ್ಲಿ ವಿಲೀನವಾಗುವಂತೆ ನಿರ್ಣಯವಾಯಿತು. **"ರಾಜ್ಯ ಪುನರ್ ವಿಂಗಡಣಾ ಆಯೋಗದ ಶಿಫಾರಸ್ಸಿನಂತೆ 1956 ನವೆಂಬರ್ 1ರಂದು ಕೊಡಗು ಮೈಸೂರು ಸಂಸ್ಥಾನದ 19ನೇ ಜಿಲ್ಲೆಯಾಗಿ ಕಂಗೊಳಿಸಿತು."** ಈ ವಿಲೀನದ ರೂವಾರಿಗಳಲ್ಲಿ ಪ್ರಮುಖರಾಗಿದ್ದ ಆಗಿನ ಮುಖ್ಯಮಂತ್ರಿ ಸಿ.ಎಂ.ಪೂಣಚ್ಚ ಮೈಸೂರು ರಾಜ್ಯದ ನಿಜಲಿಂಗಪ್ಪ ಸರಕಾರದಲ್ಲಿ ಕ್ಯಾಬಿನೆಟ್ ಮಂತ್ರಿಯಾಗುವ ಭಾಗ್ಯ ಪಡೆದರು.

ಹೊಸ ರಾಜ್ಯದಲ್ಲಿ ಕೊಡಗಿನ ಹಾಲಿ 24 ವಿಧಾನ ಸಭಾ ಸ್ಥಾನಗಳಿಗೆ ಬದಲಾಗಿ ಕೇವಲ ಎರಡೇ ಎರಡು ಶಾಸಕ ಸ್ಥಾನ ಲಭ್ಯವಾಯಿತು. ಪಾಲಿಗಿದ್ದ ಒಂದು ಲೋಕಸಭಾ ಸ್ಥಾನದ ಹೆಮ್ಮೆಯು ಇಲ್ಲವಾಗಿ ಮಂಗಳೂರು ಲೋಕಸಭಾ ವ್ಯಾಪ್ತಿಯ ಒಂದು ಪ್ರದೇಶವಷ್ಟೇ ಆಗಿ ತೃಪ್ತಿಪಡಬೇಕಾಯಿತು. ಸಹಜವಾಗಿಯೇ 1957ರ ವಿಧಾನ ಸಭಾ ಚುನಾವಣೆಯಲ್ಲಿ ಕೊಡಗಿನ ಮಡಿಕೇರಿ ಕ್ಷೇತ್ರದಿಂದ ಕೆ. ಮಲ್ಲಪ್ಪ ಮತ್ತು ವಿರಾಜಪೇಟೆ ಕ್ಷೇತ್ರದಿಂದ ಸಿ.ಎಂ. ಪೂಣಚ್ಚ ಕಾಂಗ್ರೆಸ್ ಅಭ್ಯರ್ಥಿಗಳಾಗಿ ಆಯ್ಕೆಯಾಗಿ ಶಾಸಕರಾದರು. ಮುಂದೆ 1962ರಲ್ಲಿ ಸಿ.ಎಂ.ಪೂಣಚ್ಚ ಕೊಡಗು ಮಂಗಳೂರು ಕ್ಷೇತ್ರದಿಂದ ಲೋಕಸಭೆಗೆ ಆಯ್ಕೆಯಾದರು. ವಿರಾಜಪೇಟೆ ಕ್ಷೇತ್ರದಿಂದ ಎ.ಪಿ.ಅಪ್ಪಣ್ಣ ಮತ್ತು ಮಡಿಕೇರಿಯಿಂದ ಕೆ. ಮಲ್ಲಪ್ಪ ವಿಧಾನ ಸಭೆಗೆ ಆರಿಸಿ ಹೋದರು.

ಆನಂತರ ಮುಂದಿನ 1967ರ ಸಾರ್ವತ್ರಿಕ ಚುನಾವಣೆ ವೇಳೆಗೆ ಸ್ವಾತಂತ್ರ್ಯ ಸಂಭ್ರಮದ ಕಾವು ಇಳಿಮುಖವಾಗುತ್ತಾ ರಾಷ್ಟ್ರದಲ್ಲಿ ಹೊಸ ರಾಜಕೀಯ ಗಾಳಿ ನಿಧಾನವಾಗಿ ಬೀಸತೊಡಗಿತು. ಅಲ್ಲದೆ, ಕೊಡಗಿಗೂ ಈ ಮೊದಲಿನ ಎರಡು ವಿಧಾನಸಭಾ ಸ್ಥಾನಗಳ ಬದಲು ಮೂರು ವಿಧಾನಸಭಾ ಸ್ಥಾನಗಳು ಹಂಚಿಕೆಯಾಗಿದ್ದವು. ಅಖಾಡದಲ್ಲಿ ಕಾಂಗ್ರೆಸ್‌ನೊಂದಿಗೆ ಭಾರತೀಯ ಜನಸಂಘ, ಕಮ್ಯುನಿಸ್ಟ್ ಪಕ್ಷ, ಪ್ರಜಾ ಸೋಷಲಿಸ್ಟ್ ಪಕ್ಷ ಮತ್ತು ಬಲವಂತದ ಹಿಂದಿ ಹೇರಿಕೆಯ ವಿರುದ್ಧ ರಾಜಾಜಿ ಸ್ಥಾಪಿಸಿದ್ದ ಸ್ವತಂತ್ರ ಪಕ್ಷಗಳೂ ಪೈಪೋಟಿಗೆ ನಿಂತಿದ್ದವು.

ಬದಲಾದ ಪರಿಸ್ಥಿತಿಯಲ್ಲಿ ವಿರಾಜಪೇಟೆಯ ಮೀಸಲು ಕ್ಷೇತ್ರದಿಂದ ಭಾರತೀಯ ಜನಸಂಘದ ಲೋಕಯ್ಯ ನಾಯ್ಕ ಚುನಾಯಿತರಾದರೆ ಇತ್ತ ಸೋಮವಾರಪೇಟೆ ಕ್ಷೇತ್ರದಿಂದ ಸ್ವತಂತ್ರ ಪಕ್ಷದ ಅಭ್ಯರ್ಥಿ ಗುಂಡುಗುಟ್ಟಿ ಮಂಜುನಾಥಯ್ಯ ಆಯ್ಕೆಯಾದರು. ಹೀಗೆ ಮೊಟ್ಟ ಮೊದಲ ಬಾರಿಗೆ ಕಾಂಗ್ರೆಸ್‌ನ ಭದ್ರಕೋಟೆ ಛಿದ್ರವಾಗಿ ಕೇವಲ ಮಡಿಕೇರಿ ಕ್ಷೇತ್ರದಲ್ಲಿ ಮಾತ್ರ ಕಾಂಗ್ರೆಸ್‌ನ ಎ.ಪಿ. ಅಪ್ಪಣ್ಣ ವಿಧಾನ ಸಭೆ ಪ್ರವೇಶಿಸಿದರು. ಕೊಡಗು - ಮಂಗಳೂರು ಪಾರ್ಲಿಮೆಂಟರಿ ಕ್ಷೇತ್ರದಿಂದ ಸಿ.ಎಂ. ಪೂಣಚ್ಚ ಕಾಂಗ್ರೆಸ್ ಪರವಾಗಿ ಆಯ್ಕೆಗೊಂಡರು. ಆದರೆ ಇಲ್ಲೂ ಕೂಡ ಇದೇ ಕಟ್ಟಕಡೆಯ ಬಾರಿಗೆ ಕೊಡಗು ಪ್ರದೇಶದ ಅಭ್ಯರ್ಥಿಯೊಬ್ಬರು ಲೋಕಸಭೆ ಪ್ರವೇಶಿಸಲಾಗಿ ಇನ್ನೆಂದೂ ಅಂತಹ ಪ್ರಸಂಗ ಬರಲಿಲ್ಲ.

1971ರಲ್ಲಿ ಮತ್ತೆ ಇಡಿಯ ರಾಷ್ಟ್ರ ಮತ್ತು ರಾಜ್ಯದಲ್ಲಿ ರಾಜಕೀಯ ಧೃವೀಕರಣ ಸಂಭವಿಸಿತು. ಈ ವೇಳೆಗೆ ಅಖಿಲ ಭಾರತ ಕಾಂಗ್ರೆಸ್ ಇಬ್ಭಾಗಗೊಂಡು ಇಂದಿರಾ ಕಾಂಗ್ರೆಸ್ ಮತ್ತು ಸಂಸ್ಥಾ ಕಾಂಗ್ರೆಸ್ ಎಂಬ ಬಣಗಳಾದವು. ರಾಜಕೀಯದಲ್ಲಿ ಧಾರಾಳವಾಗಿ ಹೊಸರಕ್ತ ಸಂಚಾರವಾಯಿತು. ಲೋಕಸಭೆಗೆ ಇಂದಿರಾ ಕಾಂಗ್ರೆಸ್ ಅಭ್ಯರ್ಥಿ ಕೆ.ಕೆ. ಶೆಟ್ಟಿ ಆಯ್ಕೆಗೊಂಡರು. ಇತ್ತ ಕೊಡಗಿನಲ್ಲಿ ಹಿರಿಯ ನಾಯಕರೆಲ್ಲಾ ಸಂಸ್ಥಾ ಕಾಂಗ್ರಸ್‌ನಲ್ಲಿ ಉಳಿದರೂ ಎಲ್ಲಾ ಮೂರೂ ವಿಧಾನಸಭಾ ಕ್ಷೇತ್ರಗಳಲ್ಲೂ ಇಂದಿರಾ ಕಾಂಗ್ರೆಸ್‌ನ ಗುಂಡೂರಾವ್ ಸೋಮವಾರಪೇಟೆಯಿಂದ, ಎ.ಎಂ. ಬೆಳ್ಳಿಯಪ್ಪ ಮಡಿಕೇರಿಯಿಂದ ಮತ್ತು ಜೆ.ಕೆ. ಸುಬ್ಬಯ್ಯ ವಿರಾಜಪೇಟೆಯಿಂದ ಆಯ್ಕೆಗೊಂಡರು. ಕರ್ನಾಟಕದಲ್ಲೂ ಇದೇ ಪರಿಸ್ಥಿತಿಯಾಗಲು ದೇವರಾಜ ಅರಸರ ಪ್ರಭಾವೀ ನಾಯಕತ್ವ ಕಾರಣವಾಯಿತು. ದೇವರಾಜ ಅರಸರ ಸರಕಾರದಲ್ಲಿ ಕೊಡಗಿನ ಗಂಡೂರಾವ್ ಯುವಜನ ಸೇವಾ ಸಚಿವರೂ ಆದರು.

ಮುಂದೆ ರಾಷ್ಟ್ರ ರಾಜಕೀಯದಲ್ಲಂತೂ ವಿಪ್ಲವಕಾರಿ ಬೆಳವಣಿಗೆಯುಂಟಾದವು. ಒಂದೆಡೆ ಅಲಹಾಬಾದ್ ಹೈಕೋರ್ಟ್ ಪ್ರಧಾನಿ ಅಭ್ಯರ್ಥಿಯ ಚುನಾವಣಾ ಫಲಿತಾಂಶವನ್ನು ಅಸಿಂಧು ಎಂದು ಘೋಷಿಸಿದರೆ ಮತ್ತೊಂದೆಡೆ ಸ್ವತಃ ಪ್ರಧಾನಿ ಇಂದಿರಾಗಾಂಧಿ ದೇಶದ ಮೇಲೆ ಕರಾಳ ತುರ್ತು ಪರಿಸ್ಥಿತಿಯನ್ನೇ ಹೇರಿಬಿಟ್ಟರು. ಈ ರಾಷ್ಟ್ರ ಕಂಡ ಮಹಾನ್ ಜನನಾಯಕ ಜಯಪ್ರಕಾಶ್ ನಾರಾಯಣ್ ಸಂಪೂರ್ಣ ಕ್ರಾಂತಿಗೆ ಕರೆಕೊಟ್ಟಿದ್ದರು. ಭಾರತೀಯ ಜನಸಂಘವೂ ಸೇರಿದಂತೆ ಹಲವು ಪಕ್ಷಗಳು ಒಂದುಗೂಡಿ ಜನತಾ ಪಾರ್ಟಿ ಅಸ್ತಿತ್ವಕ್ಕೆ ಬಂತು. ರಾಷ್ಟ್ರದ ರಾಜಕೀಯದ ರೋಚಕ ಘಟ್ಟ ಇದಾಗಿತ್ತು.

ಅದೇನೆ ಆದರೂ ಕೊಡಗು – ಮಂಗಳೂರು ಕ್ಷೇತ್ರದಲ್ಲಿ ಮಾತ್ರ ಕಾಂಗ್ರೆಸ್‌ನ ಜನಾರ್ಧನ ಪೂಜಾರಿ ಲೋಕಸಭೆಗೆ ಆಯ್ಕೆಯಾದರು. ಮತ್ತೊಮ್ಮೆ ಇಂದಿರಾ ಪರ ವಹಿಸಿದ್ದ ದೇವರಾಜ ಅರಸರ ನಾಯಕತ್ವಕ್ಕೆ ಕೊಡಗಿನ ಮೂರೂ ವಿಧಾನಸಭಾ ಕ್ಷೇತ್ರಗಳು ಇಂದಿರಾ ಕಾಂಗ್ರೆಸ್ ಪಾಲಾದವು. ಮಡಿಕೇರಿಯಿಂದ ಎಂ.ಸಿ.ನಾಣಯ್ಯ, ವಿರಾಜಪೇಟೆಯಿಂದ ಜೆ.ಕೆ. ಸುಬ್ಬಯ್ಯ. ಮತ್ತು ಸೋಮವಾರಪೇಟೆಯಿಂದ ಗುಂಡೂರಾವ್ ಆಯ್ಕೆಯಾದರು. ಗುಂಡೂರಾವ್ ದೇವರಾಜ ಅರಸರ ಮಂತ್ರಿ ಮಂಡಲದಲ್ಲಿ ಸಾರಿಗೆ ಸಚಿವರಾದರು.

ಮುಂದೆ ಅರಸು ಮತ್ತು ಇಂದಿರಾ ನಡುವೆ ಭಿನ್ನಾಭಿಪ್ರಾಯವುಂಟಾಗಿ ಮುಖ್ಯಮಂತ್ರಿ ಅರಸರನ್ನು ಇಂದಿರಾ ಪದಚ್ಯುತಿ ಮಾಡಿ ಅವರ ಸ್ಥಾನದಲ್ಲಿ ಇಂದಿರಾ ಪರ ಬಣಗಾರಿಕೆ ನಡೆಸಿದ್ದ ಗುಂಡೂರಾಯರನ್ನು ಮುಖ್ಯಮಂತ್ರಿ ಮಾಡಲಾಯಿತು. ಇದು ಕೊಡಗಿನ ರಾಜಕೀಯ ಇತಿಹಾಸದ ಪಾಲಿಗೆ ಅಮೋಘ ದಾಖಲೆ ಸರಿ. 1981ರಿಂದ 1983ರವರೆಗೆ ಗುಂಡೂರಾವ್ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾಗಿ ಅಧಿಕಾರದಲ್ಲಿದ್ದರು. ಈ ನಡುವೆ ಜನಾರ್ದನ ಪೂಜಾರಿ ಮತ್ತೊಮ್ಮೆ ಲೋಕಸಭಾ ಸದಸ್ಯರಾದರು. ಮಾಜಿ ಮುಖ್ಯಮಂತ್ರಿ ದೇವರಾಜ ಅರಸರು ಕ್ರಾಂತಿರಂಗವೆಂಬ ಪ್ರಾದೇಶಿಕ ಪಕ್ಷ ಸ್ಥಾಪಿಸಿದರು. ಕೆಲ ಕಾಲದ ಬಳಿಕ ವಿಧಿವಶರಾದರು.

1983ರ ವಿಧಾನ ಸಭಾ ಚುನಾವಣೆ ಕರ್ನಾಟಕದ ಪಾಲಿಗೆ ಒಂದು ಮೈಲಿಗಲ್ಲಾದಂತೆ ಕೊಡಗಿನ ಪಾಲಿಗೂ ಒಂದು 'ನಭೂತೋ ನಭವಿಷತಿ' ಎನ್ನಬಹುದಾದಂತಹ ಪ್ರತಿಷ್ಠಿತ ಚುನಾವಣೆ.ಅಂದಿನ ಕ್ರಾಂತಿರಂಗ ಬಂಗಾರಪ್ಪ ನೇತೃತ್ವದಲ್ಲಿ ಮತ್ತು ಜನತಾಪಾರ್ಟಿ ರಾಮಕೃಷ್ಣ ಹೆಗಡೆ, ದೇವೇಗೌಡರ ನೇತೃತ್ವದಲ್ಲಿ ಮೈತ್ರಿಕೂಟ ರಚಿಸಿಕೊಂಡು ಕಣಕ್ಕೆ ಧುಮುಕಿದ್ದವು. ಕೊಡಗಿನಲ್ಲಿ ಮೈತ್ರಿಕೂಟದ ಅಭ್ಯರ್ಥಿಯಾಗಿ ಜೀವಿಜಯ ಅಂದಿನ ವರ್ಣರಂಜಿತ ಮುಖ್ಯಮಂತ್ರಿ ಗುಂಡೂರಾಯರನ್ನು ಸೋಲಿಸಿಬಿಟ್ಟರು. ಮಡಿಕೇರಿಯಲ್ಲಿ ಇದೇ ಮೈತ್ರಿಕೂಟದ ಹುರಿಯಾಳು ಎಂ.ಸಿ.ನಾಣಯ್ಯ ಜಯಶಾಲಿಯಾದರು. ವಿರಾಜಪೇಟೆಯಲ್ಲಿ ಮಾತ್ರ ಇಂದಿರಾ ಕಾಂಗ್ರೆಸ್‌ನ ಜೆ.ಕೆ. ಸುಬ್ಬಯ್ಯ ಸತತ ಮೂರನೇ ಬಾರಿಗೆ ಆಯ್ಕೆಗೊಂಡರು. ಕರ್ನಾಟಕದಲ್ಲಿ ಮೊತ್ತಮೊದಲ ಬಾರಿಗೆ

ಕಾಂಗ್ರೆಸ್ಸೇತರ ಸರಕಾರ ಅಸ್ತಿತ್ವಕ್ಕೆ ಬಂತು. ಜೀವಿಜಯ ಹೆಗಡೆ ಮಂತ್ರಿಮಂಡಲದಲ್ಲಿ ಅರಣ್ಯ ಸಚಿವರಾದರು.

1985ರಲ್ಲಿ ಇಂದಿರಾ ಹತ್ಯೆಯ ಬೆನ್ನಲ್ಲೇ ರಾಷ್ಟ್ರಾದ್ಯಂತ ಕಾಂಗ್ರೆಸ್ ಪರ ಭಾರಿ ಅಲೆಯೊಂದು ಸೃಷ್ಟಿಯಾಗಿ ರಾಜೀವ್ ಗಾಂಧಿ ಪ್ರಧಾನಿಯಾದರು. ಇಲ್ಲಿ ಕರ್ನಾಟಕದಲ್ಲಿ ತನ್ನ ಅವಧಿ ಪೂರ್ಣಗೊಳ್ಳದೇ ಇದ್ದರೂ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಜನತೆಯ ಸ್ಪಷ್ಟ ಆದೇಶ ಬಯಸಿ ಚುನಾವಣೆಗೆ ಹೋದರು ಮತ್ತು ಅಷ್ಟೇ ಗೌರವಯುತವಾಗಿ ಸುಸ್ಪಷ್ಟ ಬಹುಮತ ಪಡೆದು ಮತ್ತೊಮ್ಮೆ ಮುಖ್ಯಮಂತ್ರಿಯಾದರು. ಈ ಬಾರಿ ಸೋಮವಾರಪೇಟೆಯಿಂದ ಮತ್ತೆ ಜೀವಿಜಯ ಜನತಾ ಪಾರ್ಟಿಯಿಂದ ಆಯ್ಕೆಯಾದರೆ, ಮಡಿಕೇರಿಯಿಂದ ಡಿ.ಎ. ಚಿಣ್ಣಪ್ಪ ಮತ್ತು ವಿರಾಜಪೇಟೆಯಿಂದ ಸುಮಾ ವಸಂತ್ ಕಾಂಗ್ರೆಸ್ ಪರ ಆಯ್ಕೆಯಾಗಿ ವಿಧಾನಸಭೆ ಪ್ರವೇಶಿಸಿದರು. 1985ರಲ್ಲೂ ಜಯಶಾಲಿಯಾಗಿ ಮೂರನೇ ಸಲ ಪಾರ್ಲಿಮೆಂಟ್ ಪ್ರವೇಶಿಸಿದ ಜನಾರ್ಧನ ಪೂಜಾರಿ ಕೇಂದ್ರ ಮಂತ್ರಿಮಂಡಲದಲ್ಲಿ ಹಣಕಾಸು ಸಚಿವಾಲಯದ ಒಬ್ಬ ಮಂತ್ರಿಯಾದರು. ಈ ಹಂತದಲ್ಲಿ ಮಾಜಿ ಮುಖ್ಯಮಂತ್ರಿ ಗುಂಡೂರಾಯರು ತನ್ನದೇ ಸ್ವಂತ ಪಕ್ಷ ಸ್ಥಾಪಿಸಿಕೊಂಡಿದ್ದು ಸೋಲೊಪ್ಪಿದ್ದರು.

1989ರಲ್ಲಿ ರಾಷ್ಟ್ರದಲ್ಲಿ ವಿ.ಪಿ.ಸಿಂಗ್ ನೇತೃತ್ವದ ಜನತಾದಳ ಭಾರತೀಯ ಜನತಾ ಪಾರ್ಟಿಯ ಸಹಾಯದಿಂದ ಅಧಿಕಾರಕ್ಕೆ ಬಂದರೂ ಇತ್ತ ರಾಜ್ಯದಲ್ಲಿ ಜನತಾದಳ ಹೋಳಾಯಿತು. ಕಾಂಗ್ರೆಸ್ ಅಧಿಕಾರಕ್ಕೆ ಬಂತು. ಲೋಕಸಭೆಗೆ ಬಿಜೆಪಿಯ ಧನಂಜಯಕುಮಾರ್ ಮೊದಲ ಬಾರಿಗೆ ಆಯ್ಕೆಯಾದರೆ ಸೋಮವಾರಪೇಟೆಯಿಂದ ಎ.ಎಂ. ಬೆಳ್ಳಿಯಪ್ಪ ಮಡಿಕೇರಿಯಿಂದ ಡಿ.ಎ.ಚಿಣ್ಣಪ್ಪ ಮತ್ತು ವಿರಾಜಪೇಟೆಯಿಂದ ಸುಮಾ ವಸಂತ್ ಕಾಂಗ್ರೆಸ್ ಶಾಸಕರಾಗಿ ಚುನಾಯಿತರಾದರು. ಈ ಮೂರೂ ಮಂದಿ ಕ್ರಮೇಣ ಮಂತ್ರಿಗಳೂ ಆದರು.

1994ರ ಚುನಾವಣೆ ವೇಳೆ ಜನತಾದಳ ಏಕೀಕೃತಗೊಂಡಿತ್ತು. ಬಿಜೆಪಿ ಗರಿಗಟ್ಟಿಕೊಂಡಿತ್ತು. ಕೊಡಗಿನ ಮೂರೂ ಕ್ಷೇತ್ರಗಳಲ್ಲಿ ಬಿಜೆಪಿಯ ಪರವಾಗಿ ಮಡಿಕೇರಿಯಿಂದ ಡಿ.ಎಸ್. ಮಾದಪ್ಪ, ವಿರಾಜಪೇಟೆಯಿಂದ ಬಸವರಾಜ್ ಮತ್ತು ಸೋಮವಾರಪೇಟೆಯಿಂದ ಅಪ್ಪಚ್ಚು ರಂಜನ್ ಆಯ್ಕೆಗೊಂಡರು. ರಾಜ್ಯದಲ್ಲಿ ಜನತಾದಳದ ದೇವೇಗೌಡ ಮುಖ್ಯಮಂತ್ರಿಯಾದರು. ಈ ನಡುವೆ ವಿಧಾನಪರಿಷತ್‌ನಲ್ಲಿ ತನ್ನ ಸ್ಥಾನ ಕಂಡುಕೊಂಡಿದ್ದ ಎಂ.ಸಿ. ನಾಣಯ್ಯ ದೇವೇಗೌಡ ಸಚಿವ ಸಂಪುಟದಲ್ಲಿ ಮಂತ್ರಿಯಾದರು.

1995 ಕರ್ನಾಟಕ ರಾಜ್ಯದ ಪಾಲಿಗೆ ಮತ್ತೊಂದು ಪರ್ವಕಾಲದ ಚುನಾವಣೆಯಾಗಿ ಮಾರ್ಪಟ್ಟಿತು. ಏಕೀಕೃತ ಜನತಾದಳದಿಂದ 16 ಮಂದಿ ಲೋಕಸಭೆಗೆ ಆಯ್ಕೆಯಾಗಿದ್ದಲ್ಲದೆ, ಮುಖ್ಯಮಂತ್ರಿಯಾಗಿದ್ದ ದೇವೇಗೌಡರು ರಾಷ್ಟ್ರದ ಪ್ರಧಾನಿಯಾಗುವ ಸೌಭಾಗ್ಯ ಪಡೆದು ನಾಡಿನ ಹೆಮ್ಮೆಗೆ ಕಾರಣರಾದರು. ಕೊಡಗು – ಮಂಗಳೂರು ಕ್ಷೇತ್ರದಿಂದ ಧನಂಜಯಕುಮಾರ್ ಇನ್ನೊಮ್ಮೆ ಆಯ್ಕೆಯಾದರು. 13 ದಿನಗಳ ಮಟ್ಟಿಗೆ ಅಧಿಕಾರದಲ್ಲಿದ್ದ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಮಂತ್ರಿಮಂಡಲದಲ್ಲಿ ಧನಂಜಯಕುಮಾರ್ ಮಂತ್ರಿಯಾದರು.

1999ರ ಚುನಾವಣೆಯಲ್ಲಿ ಮಡಿಕೇರಿಯಿಂದ ಮತ್ತು ವಿರಾಜಪೇಟೆಯಿಂದ ಕಾಂಗ್ರೆಸ್‌ನ ಎಂ.ಎಂ. ನಾಣಯ್ಯ ಮತ್ತು ಸುಮಾ ವಸಂತ್ ಆಯ್ಕೆಗೊಂಡರೆ ಸೋಮವಾರಪೇಟೆಯಿಂದ ಬಿಜೆಪಿಯ ಅಪ್ಪಚ್ಚುರಂಜನ್ ಆಯ್ಕೆಯಾದರು. ವಿಶೇಷವೆಂದರೆ ಇಬ್ಬರು ಕಾಂಗ್ರೆಸ್ ಶಾಸಕರ ಜೊತೆ ವಿಧಾನ ಪರಿಷತ್‌ಗೆ ಟಿ. ಜಾನ್ ಕೂಡ ಆಯ್ಕೆಯಾಗಿ, ಈ ಮೂರೂ ಮಂದಿ ಏಕಕಾಲಕ್ಕೆ ಎಸ್.ಎಂ. ಕೃಷ್ಣ ಮಂತ್ರಿಮಂಡಲದಲ್ಲಿ ಮಂತ್ರಿಗಳಾದರು. ಈ ಬಾರಿ ಪೂರ್ಣಾವಧಿಗೆ ಅಟಲ್ ಬಿಹಾರಿ ವಾಜಪೇಯಿ ಪ್ರಧಾನಿಯಾದರು. ಕೊಡಗು – ಮಂಗಳೂರಿನ ಸಂಸದರಾಗಿ ಕೊಡಗಿನ ಅಳಿಯ ಡಿ.ವಿ. ಸದಾನಂದ ಗೌಡರು ಬಿಜೆಪಿಯಿಂದ ಆಯ್ಕೆಯಾದರು.

2004ರಲ್ಲಿ ಮಡಿಕೇರಿಯಿಂದ ಬಿಜೆಪಿಯ ಕೆ.ಜಿ.ಬೋಪಯ್ಯ, ವಿರಾಜಪೇಟೆಯಿಂದ ಬಿಜೆಪಿಯ

ಬಸವರಾಜ್ ಮತ್ತು ಸೋಮವಾರಪೇಟೆಯಿಂದ ಕಾಂಗ್ರೆಸ್‌ನ ಜೀವಿಜಯ ವಿಧಾನಸಭೆಗೆ ಚುನಾಯಿತರಾದರು. ಲೋಕಸಭೆಗೆ ಮತ್ತೊಮ್ಮೆ ಡಿ.ವಿ.ಸದಾನಂದ ಗೌಡರು ಆಯ್ಕೆಯಾದರು.

2008ರ ಚುನಾವಣೆಯಲ್ಲಿ ಕಾಲಚಕ್ರ ಮತ್ತೊಮ್ಮೆ ತಿರುವು ತೆಗೆದುಕೊಂಡು ಕೊಡಗಿನ ಮೂರು ವಿಧಾನಸಭಾ ಸ್ಥಾನಗಳ ಬದಲು ಕೇವಲ ಎರಡೇ ಸ್ಥಾನಗಳಿಗೆ ಸೀಮಿತವಾಯಿತು. ಈ ಬಾರಿ ವಿರಾಜಪೇಟೆ ಕ್ಷೇತ್ರದಿಂದ ಕೆ.ಜಿ. ಬೋಪಯ್ಯ ಆಯ್ಕೆಯಾದರೆ ಮಡಿಕೇರಿ ಕ್ಷೇತ್ರದಿಂದ ಅಪ್ಪಚ್ಚು ರಂಜನ್ ಆಯ್ಕೆಯಾದರು. ಕೊಡಗಿನ ಲೋಕಸಭಾ ಸ್ಥಾನ ಮಂಗಳೂರಿನ ಬದಲು ಮೈಸೂರಿಗೆ ವರ್ಗವಾಯಿತು. ಕಾಂಗ್ರೆಸ್‌ನ ಹೆಚ್. ವಿಶ್ವನಾಥ್ ಲೋಕಸಭೆಗೆ ಆಯ್ಕೆಗೊಂಡರು. ರಾಜ್ಯದಲ್ಲಿ ಈ ಬಾರಿ ಬಿಜೆಪಿ ಬಹುಮತ ಪಡೆದು ಸರಕಾರ ರಚಿಸಿತು. ಕೊಡಗಿನ ಶಾಸಕ ಕೆ.ಜಿ. ಬೋಪಯ್ಯ ಮೊದಲು ಉಪಸಭಾಧ್ಯಕ್ಷರಾಗಿ ನಂತರ ವಿಧಾನಸಭೆಯ ಅಧ್ಯಕ್ಷರಾಗಿ ರಾಜ್ಯ ಶಾಸಕಾಂಗದ ಅತ್ಯುನ್ನತ ಸ್ಥಾನಕ್ಕೇರಿದರು. ಗುಂಡೂರಾಯರ ನಂತರ ರಾಜ್ಯ ವಿಧಾನಸಭೆಯಲ್ಲಿ ಕೊಡಗಿನವರೊಬ್ಬರು ಏರಿದ ಅತ್ಯುನ್ನತ ಸ್ಥಾನಮಾನವಿದು.

ಇವಿಷ್ಟು ಈವರೆಗೆ ಕೊಡಗು ಕಂಡ ಚುನಾವಣಾ ರಾಜಕೀಯ. ಹಾಗೆ ನೋಡಿದರೆ ಕೊಡಗಿನಲ್ಲಿ ಇಂತಹ ಮೈದಾನದ ರಾಜಕೀಯದ ತೀವ್ರತೆ ಬೇರೆಡೆಗೆ ಹೋಲಿಸಿದರೆ ತುಸು ಕಡಿಮೆ ಕಾವಿನದು ಎನ್ನಬಹುದು. ಕರ್ನಾಟಕ ರಾಜ್ಯದ ಇತರೆಡೆಗಳಲ್ಲಿ ಅಥವ ದೇಶದ ಹಲವು ರಾಜ್ಯಗಳಲ್ಲಿರುವಂತೆ ಐರಾಮಣ – ಮೈರಾವಣ ಎನಿಸುವಂತಹ ಕತ್ತು ಕುಯ್ಯುವ ಕಾಳಗ ಇಲ್ಲಿನ ಜನಸಾಮಾನ್ಯರಲ್ಲಂತೂ ಕಂಡುಬಾರದು. ಆದರೆ ಇತರೆಡೆಗಳನ್ನೂ ಮೀರಿಸುವಂತಹ ಜಾತಿ ಆಧಾರಿತ ರಾಜಕೀಯ ಮಾತ್ರ ಇಲ್ಲಿಗಂಟಿದ ಶಾಪವಾಗಿದೆ. ಇದರೊಂದಿಗೆ ಹಣ ಮತ್ತು ಹೆಂಡ ಹಂಚುವಿಕೆಯ ರಾಜಕಾರಣ ಮತ್ತು ಪಕ್ಷದ ನಿಷ್ಠಾವಂತ ಕಾರ್ಯಕರ್ತರನ್ನು ಹಿಮ್ಮೆಟ್ಟಿಸಿ ನಡೆಸಲಾಗುವ ಸ್ವಜನ ಪಕ್ಷಪಾತ ಮತ್ತು ಮನೆತನದ ರಾಜಕೀಯಕ್ಕೂ ಕೊಡಗು ಸಾಕ್ಷಿಯಾಗುತ್ತಿದೆ.

ಕೊಡಗಿನ ರಾಜಕೀಯ ಹೇಗಿರಬೇಕು ಎಂಬ ಆಶಯದಲ್ಲಿ ಮೊದಲನೇ ಅಂಶವೆಂದರೆ ಇದು ಜಾತಿ ರಾಜಕಾರಣದಿಂದ ಮುಕ್ತವಾಗಬೇಕು ಎನ್ನುವುದೇ ಆಗಿದೆ. ಇದು ಅತ್ಯಂತ ಪುಟ್ಟ ಜಿಲ್ಲೆಯೇ ಆಗಿದ್ದರೂ ಇಲ್ಲಿಂದ ಒಬ್ಬರು ಮುಖ್ಯಮಂತ್ರಿಯಾಗಿದ್ದಾರೆ, ಹಲವರು ಪ್ರಭಾವೀ ಮಂತ್ರಿಗಳಾಗಿದ್ದಾರೆ. ಆದರೂ ಖಂಡಿತವಾಗಿಯೂ ಕೊಡಗಿನ ಅಭಿವೃದ್ಧಿ ನಿರೀಕ್ಷೆಗಿಂತ ಬಹಳ ಕಡಿಮೆಯೇ ಇದೆ. ಒಂದೊಮ್ಮೆ ಮೂರು ಶಾಸಕರು ಏಕಕಾಲಕ್ಕೆ ಮಂತ್ರಿಗಳಾದರೂ ಅದರಿಂದೇನೂ ಹೇಳಿಕೊಳ್ಳುವಂತಹ ಪ್ರಯೋಜನವಾಗಲಿಲ್ಲ. ಇಲ್ಲಿ ತಪ್ಪು ಕೇವಲ ಆಡಳಿತಗಾರರದ್ದಷ್ಟೇ ಆಗಿರದೆ ರಾಜಕೀಯ ಕಾರ್ಯಕರ್ತರು ಮತ್ತು ಜನಸಾಮಾನ್ಯರದ್ದು ಇದೆ. ಪಕ್ಷ, ಜಾತಿ ಅಥವ ವ್ಯಕ್ತಿ ನಮಗೆ ಮುಖ್ಯವಾಗಿ ಅಹಂ ಸಂಘರ್ಷಕ್ಕೆಡೆ ಮಾಡಿದಾಗ ಪರಸ್ಪರ ಕಾಲೆಳೆಯುವಿಕೆ ಆರಂಭವಾಗಿಬಿಡುತ್ತದೆ. ಅದು ಹಾಗಾಗದೆ ಕೇವಲ ಸಾಮೂಹಿಕ ಸಮಸ್ಯೆಗಳಷ್ಟೇ ಪ್ರಾಧಾನ್ಯತೆ ಪಡೆದಾಗ ಅಭಿವೃದ್ಧಿಗೆ ಒತ್ತು ಸಿಗುತ್ತದೆ.

ಉದಾಹರಣೆಗೆ ನೋಡಿ ಪ್ರಸಕ್ತ ಸನ್ನಿವೇಶದಲ್ಲೇ ಆದರೂ, ಈಗ ಮುಖ್ಯಮಂತ್ರಿಯಾಗಿರುವವರು ಕೊಡಗಿನ ಅಳಿಯ ಮತ್ತು ಒಂದೊಮ್ಮೆ ಕೊಡಗಿನ ಭಾಗವೇ ಆಗಿದ್ದ ಸುಳ್ಯ ಪ್ರದೇಶದ ಪ್ರಜೆ ಸದಾನಂದ ಗೌಡರು. ಇವರು ಕೊಡಗು – ಮಂಗಳೂರು ಕ್ಷೇತ್ರದಲ್ಲಿ ಎರಡು ಬಾರಿ ಲೋಕಸಭಾ ಸದಸ್ಯರೂ ಆಗಿದ್ದಂತವರು. ಕೊಡಗಿನ ವಿಶಿಷ್ಟ ಭಾಷೆಗಳು ಇಲ್ಲಿನ ಸಮಸ್ಯೆಗಳು ಮತ್ತು ಇಲ್ಲಿನ ಆಗುಹೋಗುಗಳನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಬಲ್ಲವರು.

ಆದರೆ ಕೊಡಗಿನ ಜನತೆ ಈ ಸಂದರ್ಭವನ್ನು ಸೂಕ್ತವಾಗಿ ಉಪಯೋಗಿಸಿಕೊಳ್ಳದೆ ಕೇವಲ ವಿರೋಧಿಸುವದಕ್ಕೆಂದೇ ಕೆಲವು ಕಾರಣಗಳನ್ನು ಹುಡುಕುತ್ತಾ ನಡುವೆ ಸ್ವಯಂಕೃತ ಬಿರುಕನ್ನು ಅಸಹಜ

ಅಂತರವನ್ನು ಏರ್ಪಡಿಸಿಕೊಂಡರೆ ನಷ್ಟ ಯಾರಿಗೆ? ಒಬ್ಬ ಆಡಳಿತಗಾರನೂ ಕೆಲವೊಂದು ಇತಿಮಿತಿಯಲ್ಲಿ ಕಾರ್ಯನಿರ್ವಹಿಸಬೇಕಾಗುತ್ತದೆ. ಆತನಿಗೆ ಸಹಕಾರ, ಸಮನ್ವಯತೆ ಅತ್ಯಗತ್ಯವಾಗಿರುತ್ತದೆ. ಮುಖ್ಯವಾಗಿ ಇಲ್ಲಿ ಮನಸ್ಸುಗಳು ಜಾತಿ ಎಂಬ ಅಫೀಮಿನ ನಶೆಯಿಂದ, ಸಂಕುಚಿತತೆಯಿಂದ ಹೊರಬರಬೇಕಾಗುತ್ತದೆ. 1930ರ ದಶಕದಲ್ಲಿ ಬ್ರಿಟಿಷರು ತಮ್ಮ ಒಡೆದು ಆಳುವ ನೀತಿಗನುಗುಣವಾಗಿ ಕೊಡಗಿನಲ್ಲಿ ಸೃಷ್ಟಿಸಿದ ಜನಾಂಗೀಯ ಒಡಕು ಇನ್ನೂ ಈ ಪ್ರದೇಶವನ್ನು ಕಾಡುತ್ತಿರುವುದು ಖೇದಕರ. ಈ ಮೊದಲೊಮ್ಮೆ ಕೊಡಗಿನಲ್ಲಿ ವೈದ್ಯಕೀಯ, ಇಂಜಿನಿಯರಿಂಗ್ ಮೊದಲಾದ ಉನ್ನತ ಶಿಕ್ಷಣ ಸಂಸ್ಥೆ ಸ್ಥಾಪನೆಯ ಅವಕಾಶ ಕೂಡಿ ಬಂದಾಗಲೂ ಅದನ್ನು ಕಾರ್ಯ ಸಾಧ್ಯವಾಗದಂತೆ ಮಾಡಿದ್ದು ಇದೇ ಜಾತೀಯತೆಯ ವಿಷ ಬೀಜ ಮತ್ತು ಕುತ್ಸಿತ ರಾಜಕಾರಣ. ನಷ್ಟ ಮಾತ್ರ ಇಡಿಯ ಕೊಡಗಿಗೆ. ಬಯಲು ಸೀಮೆ ಅಥವ ಮಹಾನಗರಗಳಂತೆ ಪುಟ್ಟ ಕೊಡಗಿಗೆ ಹಿಂಡು ಹಿಂಡು ಶಾಸಕರ ದಂಡನ್ನು ಕಳುಹಿಸಿ ಲಾಬಿ ಮಾಡಲು ಸಾಧ್ಯವಿಲ್ಲ. ಸಾಧ್ಯವಿರುವುದು ಏನಿದ್ದರೂ ಒಗ್ಗಟ್ಟಿನ ಮಂತ್ರದಲ್ಲಿ ಮತ್ತು ಜಾಣ್ಮೆಯ ತಂತ್ರದಲ್ಲಿ ಮಾತ್ರ.

ಒಂದೊಮ್ಮೆ ಗುಂಡೂರಾಯರನ್ನು ಕೊಡಗಿನ ವರಪುತ್ರ ಎಂದದ್ದುಂಟು. ಅವರಿಂದ ನಿರೀಕ್ಷಿತ ಸಾಧನೆಯನ್ನು ನಾವು ಪಡೆದುಕೊಂಡವೇ ಎನ್ನುವುದು ಪ್ರಶ್ನಾರ್ಹ. ಈಗ ಅತ್ಯುನ್ನತ ಸ್ಥಾನಮಾನದಲ್ಲಿ ಕೆ.ಜಿ. ಬೋಪಯ್ಯ ಇದ್ದಾರೆ. ಆಡಳಿತಾತ್ಮಕವಾಗಿ ಅವರ ದಕ್ಷತೆ, ಕಾರ್ಯಕ್ಷಮತೆ ಅದೆಷ್ಟು ದಿಟ್ಟತನದ್ದು ಎಂಬುದನ್ನು ಇಡಿಯ ದೇಶವೇ ಕಂಡಿದೆ. ಇಂಥವರಿಗೆ ಜನತೆ ಪೂರ್ವಾಗ್ರಹಗಳಿಲ್ಲದೆ ಸಹಕಾರ ನೀಡಿದರೆ ಖಂಡಿತಕ್ಕೂ ಇವರು ಕೊಡಗಿನ ಭಾಗ್ಯ ಪುರುಷರಾಗಬಲ್ಲರು. ಇಂತಹ ಸಾಮರ್ಥ್ಯ ಎಲ್ಲರಲ್ಲೂ ಇರುವುದಿಲ್ಲ ಮತ್ತು ಎಲ್ಲರಿಗೂ ಇಂತಹ ಅವಕಾಶಗಳು ಒದಗಿಬರುವುದಿಲ್ಲ ಎಂಬುದನ್ನು ಜನತೆ ಅರ್ಥಮಾಡಿಕೊಳ್ಳಬೇಕು. ಮುಖ್ಯವಾಗಿ ದಾರಿ ತಪ್ಪಿಸುವ ಅಡ್ಡಕಸುಬಿಗಳಿಂದ ಕೊಡಗಿನ ಜನತೆ ದೂರವಿದ್ದು ಪ್ರಜ್ಞಾವಂತಿಕೆ ತೋರಬೇಕು.

ಈಗಲೂ ಕಾಲ ಮಿಂಚಿಲ್ಲ. ಮಾತೆ ಕಾವೇರಮ್ಮನ ಪುಣ್ಯ ಭೂಮಿಯ ಮಕ್ಕಳಿಗೆ ಅಂತಹ ಅಂತಃಶಕ್ತಿ ಇದ್ದೇ ಇದೆ. ಅದು ಪ್ರಕಟವಾಗಬೇಕು ಅಷ್ಟೆ.

ಗುರು – ಶಿಷ್ಯ – ಪೋಷಕ



✍ ಶ್ರೀಮತಿ ಪುದಿಯನೆರವನ ರೇವತಿ ರಮೇಶ್
ಶಿಕ್ಷಕರು
ಸ.ಹಿ.ಪ್ರಾ.ಶಾಲೆ, ಮಡಿಕೇರಿ

***"ಗುರು ಬ್ರಹ್ಮ ಗುರು ವಿಷ್ಣು
ಗುರುದೇವೋ ಮಹೇಶ್ವರಃ
ಗುರು ಸಾಕ್ಷಾತ್ ಪರಬ್ರಹ್ಮ
ತಸ್ಮೈ ಶ್ರೀ ಗುರವೇ ನಮಃ"***

ಗುರು – ಶಿಷ್ಯ – ಪೋಷಕ ಸಂಬಂಧ ಮಾನವರಲ್ಲಿ ಮಾತ್ರ ಕಾಣಲು ಸಾಧ್ಯ.

ಪುರಾತನ ಕಾಲದಲ್ಲಿ ಈಗಿನಂತೆ ಶಾಲಾ ಕಾಲೇಜುಗಳಲ್ಲಿ ಕಲಿಯುವ ಯಾವ ವ್ಯವಸ್ಥೆಯೂ ಇರಲಿಲ್ಲ. ಹೆಚ್ಚಾಗಿ ಮಕ್ಕಳಿಗೆ ತಾಯಿ – ತಂದೆಗಳು, ಹಿರಿಯರು, ಪರಿಸರ ಶಿಕ್ಷಕರಾಗಿದ್ದರು. ಹಿರಿಯರ ಜ್ಞಾನ, ಕಲೆ, ಸಂಸ್ಕೃತಿ ಪರಂಪರೆಯಾಗಿ ಬರುತ್ತಿತ್ತು. ಅಂದರೆ ಹಿಂದೆ ಕ್ಷೀರ ಸಾಗರದ ಪರಿಸರದಲ್ಲಿ ಅತೀ ಪ್ರಾಚೀನ ಕಾಲದಲ್ಲಿ ಶಂಕರನು ಮಾತೆ ಗೌರಿಗೆ ತಿಳಿಸಿದ ರಹಸ್ಯವು ಅಲೆಗಳ ಮೂಲಕ ಮೊಸಳೆಯ ಹೊಟ್ಟೆಗೆ ಹೋಗಿ ಅಲ್ಲಿ ರಹಸ್ಯವಾಗಿ ವಾಸವಾಗಿದ್ದ ಮತ್ಸೇಂದ್ರನಾಥನಿಗೆ, ಆತನಿಂದ ಶಿಷ್ಯ ಗೋರಖನಾಥನಿಗೆ, ಆತನಿಂದ ಆತನ ಶಿಷ್ಯ ಗೈನೀನಾಥನಿಗೆ, ಆತನಿಂದ ಆತನ ಶಿಷ್ಯ ನಿವೃತ್ತಿನಾಥನಿಗೆ, ಆತನಿಂದ ಜ್ಞಾನೇಶ್ವರನಿಗೆ ಲಭಿಸಿತು. ಹೀಗೆ ಒಬ್ಬರಿಂದ ಒಬ್ಬರಿಗೆ ಜ್ಞಾನಾರ್ಜನೆ ಪರಂಪರೆಯಾಗಿದೆ. ಅನಂತರ ಗುರು – ಶಿಷ್ಯರ ಪರಂಪರೆ. ಪುತ್ರ ಪೌತ್ರರ ವಂಶಾವಳಿಯಂತೆಯೇ ಶಿಷ್ಯ – ಪ್ರಶಿಷ್ಯರ ವಂಶಾವಳಿ ಇದೆ. ಶಿಕ್ಷಣವು ಮಕ್ಕಳಿಗೆ ಗರ್ಭದಿಂದ ಪ್ರಾರಂಭವಾಗುತ್ತದೆ. ಇದಕ್ಕೆ ಮಹಾಭಾರತದಲ್ಲಿ ಬರುವ ಅರ್ಜುನನ ಮಗ ಅಭಿಮನ್ಯು ತಾಯಿಯ ಗರ್ಭದಲ್ಲಿರುವಾಗಲೇ ಚಕ್ರವ್ಯೂಹ ಬೇಧಿಸುವುದನ್ನು ಪೂರ್ಣವಾಗಿ ತಿಳಿದುಕೊಳ್ಳದೆ, ಯುದ್ಧದಲ್ಲಿ ಚಕ್ರವ್ಯೂಹದಿಂದ ಹೊರಗೆ ಬರಲು ತಿಳಿಯದೆ ತನ್ನ ಪ್ರಾಣವನ್ನೆ ತ್ಯಾಗ ಮಾಡಿದ. ಶಿಕ್ಷಣ ರಂಗದಲ್ಲಿ ಗುರುಗಳು – ವಿದ್ಯಾರ್ಥಿಗಳು – ಮಾತಾ–ಪಿತರು ಇವರೆಲ್ಲರ ನಡುವೆ ಅನ್ಯೋನ್ಯವಾದ ಸೌಹಾರ್ದಪೂರ್ಣವಾದ ಸಂಬಂಧ ನಿರ್ಮಾಣವಾದರೆ ಶಿಕ್ಷಣರಂಗದಲ್ಲಿ ವಿದ್ಯಾರ್ಥಿಗಳು ಹೆಚ್ಚಿನ ಸಾಫಲ್ಯವನ್ನು ಗಳಿಸಲು ಸಾಧ್ಯವಾಗುತ್ತದೆ.

ಪೋಷಕರು ಮಕ್ಕಳನ್ನು ಜಿಜ್ಞಾಸುಗಳಾಗಿ ಹುರಿದುಂಬಿಸಿ ಶಿಕ್ಷಣ ಮಂದಿರಕ್ಕೆ ಕಳುಹಿಸಿದರೆ ಮಕ್ಕಳು ಜ್ಞಾನಿಗಳಾಗಲು ಸಾಧ್ಯವಾಗುತ್ತದೆ. **"ಯಾರು ಬದುಕಿನ ಬಗ್ಗೆ ಜೀವನದ ಆಗು – ಹೋಗುಗಳ ಬಗ್ಗೆ, ಮಾನವ ಜನ್ಮದ ಉದ್ದೇಶಗಳ ಬಗ್ಗೆ, ಈ ಜಗತ್ತಿನಲ್ಲಿ ನಡೆಸಬೇಕಾದ ಸಾಧನೆಗಳ ಬಗ್ಗೆ ಆಸಕ್ತಿಯನ್ನು ತಳೆಯುತ್ತಾರೋ, ಕುತೂಹಲದ ಕಂಗಳಿಂದ ತಮ್ಮ ಸುತ್ತಲಿನ ವಿಶ್ವವನ್ನು ವೀಕ್ಷಿಸುತ್ತಾರೋ ಅವರನ್ನೆ ನಾವು ಜಿಜ್ಞಾಸುಗಳೆನ್ನುತ್ತೇವೆ".** ಹೀಗೆ ಜಿಜ್ಞಾಸುಗಳಾಗಿ ಬಂದ ಮಕ್ಕಳಿಗೆ ಶಿಕ್ಷಕರು ಪೂರ್ಣ ಬೆಂಬಲವಾಗಿ ನಿಂತು, ಅವರ ಅಂತರಂಗದ ಪ್ರತಿಭೆಗಳಿಗೆ ಜ್ಞಾನದ ನೀರೆರೆದು, ಕಾಲಕಾಲಕ್ಕೆ ಜ್ಞಾನವೆಂಬ ಗೊಬ್ಬರ ಹಾಕಿ ಬೆಳೆಸಿದರೆ ಉತ್ತಮ ಫಲ ಪಡೆಯಲು ಸಾಧ್ಯವಾಗುತ್ತದೆ.

ಇಂದಿನ ಶಿಕ್ಷಣಾರ್ಥಿಗಳಿಗೆ ಇಂತಹ "ಜಿಜ್ಞಾಸಾ" ಪ್ರವೃತ್ತಿಯ ಅಗತ್ಯವಿದೆ. ಜೊತೆಗೆ ಆತ್ಮವಿಶ್ವಾಸವನ್ನು

ಬೆಳೆಸಬೇಕಾಗಿದೆ. ಇಂದು ಶಿಕ್ಷಣ ಸಂಸ್ಥೆಗಳಲ್ಲಿ ನೀಡಲಾಗುವ ವಿದ್ಯಾಭ್ಯಾಸವೆಂದರೆ ಬಹಳ ಪ್ರಾಥಮಿಕವಾದದ್ದು. ಅದೇ ಪೂರ್ಣ ವಿದ್ಯೆಯಲ್ಲ. ಅದನ್ನು ಪಡೆದ ಮಾತ್ರದಿಂದ ಪರಿಪೂರ್ಣತೆ ಪ್ರಾಪ್ತವಾಗುವುದಿಲ್ಲ. ಇಂದು ಶಿಕ್ಷಣ ಸಂಸ್ಥೆಗಳಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿ ವಿದ್ಯೆಯ ಪ್ರಾಥಮಿಕ ಸ್ತರದ ಜ್ಞಾನವನ್ನು ಮಾತ್ರ ಪಡೆಯುತ್ತಾನೆ. ಇಂದು ಒಬ್ಬ ವ್ಯಕ್ತಿ ಶಾಲೆಗೋ ಕಾಲೇಜಿಗೋ ಹೋಗಿ ವಿದ್ಯಾಧ್ಯಯನ ಮಾಡುತ್ತಾನೆಂದರೆ ಅಲ್ಲಿಯ ಪಾಠ ಪ್ರವಚನಗಳಲ್ಲಿ ಭಾಗಿಯಾಗುವಷ್ಟರಿಂದಲೇ ಪರಿಪೂರ್ಣವಾಗಲಾರ. ಜ್ಞಾನದ ಆಯಾಮಗಳ ವಿಸ್ತರಣೆಗಾಗಿ ಪೋಷಕರಿಂದ, ಸಮಾಜದಿಂದ ಜ್ಞಾನಾರ್ಜನೆಗಾಗಿ ಹಂಬಲಿಸಬೇಕು. ಆಗ ಶಿಕ್ಷಕ – ಪೋಷಕ – ಸಮಾಜದಿಂದ ಪಡೆದ ಆ ಶಿಕ್ಷಣ ಅತ್ಯುನ್ನತ ಮಟ್ಟದ ಶಿಕ್ಷಣವಾಗುತ್ತದೆ. ಮಾನವನಲ್ಲಿ ಮನೆ – ಶಾಲೆ– ಸಮಾಜ ಇವು ಮೂರರ ಸಮತೋಲನದಿಂದ ವ್ಯಕ್ತಿತ್ವವು ರೂಪುಗೊಳ್ಳುತ್ತದೆ. ದೈಹಿಕ, ಬೌದ್ಧಿಕ ಹಾಗೂ ಮಾನಸಿಕ ಕಾರ್ಯಕಲಾಪಗಳ ಮೇಲ್ಮೆಯಿಂದ ವ್ಯಕ್ತಿಯ ಮಟ್ಟವನ್ನು ಗುರುತಿಸಲಾಗುತ್ತದೆ. ಮನೆಯಿಂದ ಕಲಿಯುವ ಸಂಸ್ಕಾರ ಎಷ್ಟು ಮುಖ್ಯವೆಂಬುದಕ್ಕೆ ಒಂದು ಉದಾಹರಣೆ ಇದೆ. ಒಂದೇ ತಾಯಿಯ ಮಕ್ಕಳಾದ ಎರಡು ಗಿಳಿಗಳು ಬೇರೆ ಬೇರೆಯವರಿಗೆ ಸಿಗುತ್ತವೆ. ಕಟುಕನಿಗೆ ಸಿಕ್ಕಿದ ಗಿಳಿ ಕಟುಕನ ಮಾರ್ಗದರ್ಶನದಂತೆ ಹಿಡಿ ಕಡಿ ಕಡಿ ಎನ್ನುತ್ತದೆ. ಸನ್ಯಾಸಿಯ ಮನೆಯಲ್ಲಿ ಬೆಳೆದ ಗಿಳಿ ಬನ್ನಿ ಬನ್ನಿ ವಿಶ್ರಾಂತಿ ಪಡೆಯಿರಿ ಎನ್ನುತ್ತದೆ. ಇದು ಸಂಸ್ಕಾರ ಕೊಡುವ ರೀತಿಯನ್ನು ಅವಲಂಬಿಸಿರುತ್ತದೆ. ಮನೆಯಲ್ಲಿ ನಾವು ಮಕ್ಕಳಿಗೆ ಉತ್ತಮ ಸಂಸ್ಕಾರ ಕಲಿಸಿದರೆ ಅದು ಶಾಲೆಯಲ್ಲಿ ಬೆಳೆಸಿಕೊಳ್ಳುತ್ತದೆ. ಶಾಲೆಯಲ್ಲಿ ಸಂಸ್ಕಾರ ಬೆಳೆಸುವ ಗುರು ಇರಬೇಕು. 'ಇವನಾರವ ಇವನಾರವ ಎನ್ನದಿರಯ್ಯ, ಇವ ನಮ್ಮವ ಇವ ನಮ್ಮವ ಎನ್ನಿರಯ್ಯ, ಇದು ವಿದ್ಯಾಸಂಸ್ಥೆಗಳಲ್ಲಿ ಬೆಳೆಯಬೇಕು.

ಶಿಕ್ಷಣವೆಂದರೆ ಸರ್ವತೋಮುಖವಾದ ಮಗುವಿನ ಆಂತರಿಕ ಪ್ರತಿಭೆಯ ಬೆಳವಣಿಗೆ ಮತ್ತು ಆತನ ದೇಹ, ಮನ, ಆತ್ಮಗಳ ಸ್ಥಿರ ರಚನೆ ಈ ಎಲ್ಲಾ ಬೆಳವಣಿಗೆಗೆ ಗುರು – ಶಿಷ್ಯ – ಪೋಷಕವೆಂಬ ತ್ರಿವೇಣಿ ಸಂಗಮದ ಅವಶ್ಯಕತೆಯಿದೆ.

ಯಾವುದೇ ಶಿಕ್ಷಣ ವ್ಯವಸ್ಥೆಯಲ್ಲಿ ಶಿಕ್ಷಕರಷ್ಟೇ ಪಾತ್ರ ಪೋಷಕರದ್ದೂ ಇದೆ ಎನ್ನುವುದು ಗಮನಾರ್ಹ. ಇವರೀರ್ವರ ಗುರಿ ಒಂದೇ ಆಗಿದ್ದಲ್ಲಿ ನಿರೀಕ್ಷಿತ ಫಲ ದೊರೆಯುವುದರಲ್ಲಿ ಸಂದೇಹವೇ ಇಲ್ಲ. ಆದರೆ ಈ ಅಂಶವನ್ನು ತಿಳಿದವರು ಬಹಳ ಕಡಿಮೆ ಎಂಬುದು ದುರದೃಷ್ಟಕರ. ಸಾಮಾನ್ಯವಾಗಿ ತಂದೆ – ತಾಯಂದಿರೂ ಪದವಿ ತರಗತಿಗಳಿಗೆ ಮಕ್ಕಳನ್ನು ಸೇರಿಸಲು ಪ್ರಯತ್ನಿಸುವುದು ಬಿಟ್ಟರೆ ಉಳಿದ ಯಾವುದೇ ರೀತಿಯ ಆಸಕ್ತಿಯನ್ನೂ ವ್ಯಕ್ತಪಡಿಸುವುದಿಲ್ಲ. ಕೆಲವು ಪೋಷಕರು ತಮ್ಮ ಎಲ್ಲಾ ಜವಾಬ್ದಾರಿಗಳನ್ನು ಅಧ್ಯಾಪಕರ ಮೇಲೆ ಹೊರಿಸುವುದನ್ನು ನಿಲ್ಲಿಸಬೇಕು. ಮನೆಯು ಕೂಡ ಮತ್ತೊಂದು ವಿದ್ಯಾಸಂಸ್ಥೆ ಆಗಬೇಕು. ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಐದಾರು ಗಂಟೆಗಳು ಮಾತ್ರ ಕಳೆದು, ಉಳಿದ ಸಮಯದಲ್ಲಿ ಮನೆಯಲ್ಲಿಯೇ ಇರುತ್ತಾರೆ. ಆದ್ದರಿಂದ ಅಧ್ಯಾಪಕರಷ್ಟೇ ಪೋಷಕರ ಜವಾಬ್ದಾರಿಯೂ ಹೆಚ್ಚಿದೆ. ಪೋಷಕರು ಶಾಲಾ, ಕಾಲೇಜಿನಲ್ಲಿ ಸಂಬಂಧಪಟ್ಟವರನ್ನು ಆಗಾಗ್ಗೆ ನೋಡಿ ವಿದ್ಯಾರ್ಥಿಯ ಪ್ರಗತಿಯನ್ನು ಚರ್ಚಿಸಬೇಕು. ವಿದ್ಯಾರ್ಥಿಯ ನಡೆವಳಿಕೆಯ ಮೇಲೆ ಇದು ಒಳ್ಳೆಯ ಪರಿಣಾಮ ಬೀರುತ್ತದೆ. ವಿದ್ಯಾರ್ಥಿಗಳು ತಮ್ಮ ಅಧ್ಯಾಪಕರನ್ನಾಗಲಿ, ಶಿಕ್ಷಣಕ್ಕೆ ಸಂಬಂಧಿಸಿದ ಉನ್ನತ ವ್ಯಕ್ತಿಯನ್ನಾಗಲಿ ಸಾಮಾನ್ಯವಾಗಿ ಗೌರವಿಸುವುದಿಲ್ಲ ಎಂಬ ಮಾತು ಕೇಳಿಬರುತ್ತದೆ. ಪ್ರಮುಖ ವ್ಯಕ್ತಿಗಳನ್ನು ಕುರಿತು ಮನೆಯಲ್ಲಿನ ಹಿರಿಯರಲ್ಲಿ ಲಘುವಾಗಿ, ಹೀನಾಯವಾಗಿ ಮಾತನಾಡುವುದು ಇದಕ್ಕೆ ಒಂದು ಮುಖ್ಯ ಕಾರಣ. ತಮ್ಮ ವಿನಃ ಜಗತ್ತಿನಲ್ಲಿರುವ ಎಲ್ಲರಲ್ಲೂ ತಪ್ಪನ್ನು ಕಾಣುತ್ತಾರೆ. ಈ ರೀತಿಯ ಮಾತುಗಳು ಸರಳ ಮನಸ್ಸಿನ ವಿದ್ಯಾರ್ಥಿಗಳ ಮೇಲೆ ಅನಾರೋಗ್ಯಕರ ಪರಿಣಾಮ ಬೀರುತ್ತದೆ. ಹಿರಿಯರ ಬಗ್ಗೆ, ಸಾರ್ವಜನಿಕವಾಗಿ ವ್ಯಕ್ತಿಗಳ ಬಗ್ಗೆ ಮನೆಯಲ್ಲಿ ಪೋಷಕರು ಮಕ್ಕಳ ಎದುರಿನಲ್ಲಿ ದ್ವೇಷ ಕಾರುವ ಮಾತುಗಳನ್ನಾಡಬಾರದು. ಯಾವುದೇ ರೀತಿಯ ಶಿಕ್ಷಣದ ಯಶಸ್ಸಿಗೆ ವಿದ್ಯಾರ್ಥಿ

– ಅಧ್ಯಾಪಕ – ಪೋಷಕರ ನಿಕಟ ಸ್ನೇಹ ಸಂಬಂಧ ಅತ್ಯವಶ್ಯಕವಾದದ್ದು. ನಿಜವಾದ ಬೋಧನೆಯ ತತ್ವವೆಂದರೆ ಗುರುವೇ ಎಲ್ಲವನ್ನೂ ಕಲಿಸುವುದು ಸಾಧ್ಯವಿಲ್ಲವೆಂಬುದು. ಗುರು ಬೋಧಕನು ಅಲ್ಲ ದಂಡಿಸುವ ಮೇಸ್ತ್ರಿಯೂ ಅಲ್ಲ. ಆತನು ಸಹಾಯಕ ಮತ್ತು ಮಾರ್ಗದರ್ಶಕ ಅಷ್ಟೆ. ಆತನು ಸಲಹೆ ಮಾಡಬಹುದೇ ಹೊರತು ಆಜ್ಞೆ ಮಾಡುವ ಹಾಗಿಲ್ಲ. ಇಲ್ಲಿ ವಿದ್ಯಾರ್ಥಿಯ ಪಾತ್ರವೇ ಅತೀ ಮುಖ್ಯವಾದದ್ದು. ಹಾಗೆಯೇ ವಿದ್ಯಾರ್ಥಿಯ ಸಹಜ ಪ್ರವೃತ್ತಿ ಹೇಗಿದೆಯೆಂಬುದನ್ನು ಪರಿಶೀಲಿಸಿ ಅದಕ್ಕನುಸಾರವಾಗಿ ಅವನ ಮನಸ್ಸಿನ ಬೆಳವಣಿಗೆಯನ್ನು ಸಾಧಿಸುವುದು. ತಾಯಿ – ತಂದೆಗಳಾಗಲಿ, ಗುರುಗಳಾಗಲಿ ತಮ್ಮ ಇಷ್ಟಕ್ಕನುಗುಣವಾಗಿ ಮಕ್ಕಳ ಮನಸ್ಸನ್ನು ರೂಪಿಸುವುದಕ್ಕಾಗಲಿ, ಮಕ್ಕಳಲ್ಲಿ ನೆಲೆಸಿರುವ ಸಹಜ ಪ್ರವೃತ್ತಿಗಳು ಹೇಗಿವೆಯೆಂಬುದನ್ನೇ ಗಮನಿಸದೆ ವಿಷಯಗಳನ್ನು ತಲೆಗೆ ತುಂಬುವುದು ಅನಾಗರಿಕವಾದ ಅವಿವೇಕದ ಕೆಲಸ. ಮಕ್ಕಳಲ್ಲಿ ನೆಲೆಸಿರುವ ಸಹಜ ಪ್ರವೃತ್ತಿಗಳನ್ನು, ಶಕ್ತಿ ಸಾಮರ್ಥ್ಯಗಳನ್ನು ನೋಡಿಕೊಂಡು ಅದಕ್ಕನುಸಾರವಾಗಿ ಮನಸ್ಸನ್ನು ಅರಳಿಸುವುದು ಪೋಷಕರ ಕೆಲಸ. ಪೋಷಕರು ತಾವು ಬಯಸುವ ಕಸುಬನ್ನೆ ಮಕ್ಕಳು ನಡೆಸುವಂತೆ ಪ್ರಯತ್ನಿಸಿದರೆ ಪ್ರಕೃತಿಗೆ ವಿರುದ್ಧವಾಗಿ ವರ್ತಿಸಿ, ಪ್ರಕೃತಿ ಧರ್ಮವನ್ನೆ ತಲೆ ಕೆಳಗೆ ಮಾಡಿದಂತಾಗುತ್ತದೆ. ಮಕ್ಕಳಲ್ಲಿ ಪ್ರಕೃತಿಸಹಜವಾಗಿ ನೆಲೆಸಿರುವ ಪ್ರವೃತ್ತಿಗಳಿಗೆ, ಶಕ್ತಿ ಸಾಮರ್ಥ್ಯಗಳ ಬೆಳವಣಿಗೆಗೆ ಅಡ್ಡಿಯುಂಟುಮಾಡಬಾರದು. ಸ್ವಾರ್ಥ ಸಾಧನೆಗಾಗಿ ಒಂದು ಪರಿಶುದ್ಧವಾದ ಮನಸ್ಸಿಗೆ ಹಿಂಸೆ ಮಾಡಬಾರದು.

ಒಟ್ಟಿನಲ್ಲಿ ಪೋಷಕರು–ಗುರುಗಳು, ಮಕ್ಕಳಲ್ಲಿ ಪ್ರಕೃತಿಸಹಜವಾಗಿ ನೆಲೆಸಿರುವ ಶಕ್ತಿ ಸಾಮರ್ಥ್ಯಗಳನ್ನು ನೋಡಿಕೊಂಡು ಅದಕ್ಕನುಸಾರವಾಗಿ ಶಿಕ್ಷಣ ಕೊಟ್ಟರೆ, ಆ ಶಿಕ್ಷಣ ಮಕ್ಕಳ ಮನಸ್ಸಿಗೆ ಹಿತವಾಗಿರುವುದಲ್ಲದೆ, ಅವರು ಅತ್ಯುತ್ತಮ ರೀತಿಯಲ್ಲಿ ಶಿಕ್ಷಕರಾಗುತ್ತಾರೆ. ಅವರಿಂದ ಸಮಾಜಕ್ಕೆ ಹೆಚ್ಚಿನ ಸೇವೆ ಸಲ್ಲುವುದು. ಅವರ ಪುರೋಭಿವೃದ್ಧಿ ಸಾಧನೆಯ ಪ್ರವಾಹಕ್ಕೆ ಪ್ರೋತ್ಸಾಹ ಸಿಕ್ಕಿದಂತಾಗುತ್ತದೆ. ಆದ್ದರಿಂದ ಯಾವುದೇ ಪೋಷಕರಾಗಲಿ – ಗುರುಗಳಾಗಲಿ ಮಕ್ಕಳಿಗೆ ಸ್ವತಂತ್ರವಾಗಿ ತಿಳಿಯುವ, ತಿಳಿದುಕೊಳ್ಳುವ ಮನೋಭಾವನೆಗೆ ಒತ್ತು ಕೊಡಬೇಕು. ಉತ್ತಮ ಸಂಸ್ಕೃತಿ, ಸಂಸ್ಕಾರ ಬೆಳೆಸುವಲ್ಲಿ ಇವರ ಹೊಣೆಗಾರಿಕೆ ಇದೆ. ಜೊತೆಗೆ ವಿದ್ಯಾರ್ಥಿಗಳು ಅವುಗಳನ್ನು ಸ್ವೀಕರಿಸುವ ಹಂಬಲದಿಂದ ಕಾತುರರಾಗಿರಬೇಕು. **ದೇಹ, ಮನಸ್ಸು, ಬುದ್ಧಿ, ಭಾವ ಮತ್ತು ಆತ್ಮ ಇವು ಪರಿಪುಷ್ಟವಾಗಲು ನಿಷ್ಕಲ್ಮಷವಾಗಲು ಅರಳಲು ಮತ್ತು ಘಮಘಮಿಸಲು ಗುರು, ಶಿಷ್ಯ, ಪೋಷಕರೆಂಬ ಸಂಗಮದಿಂದ ಮಾತ್ರ ಸಾಧ್ಯ.**

ಸಭ್ಯ ಸಾಚಿಗಳಾಗಿ

ಇನ್ನೊಬ್ಬರ ಲೋಪ ದೋಷಗಳನ್ನು
ಎತ್ತಿ ಆಡುವುದನ್ನೆ ಕಾಯಕ ಮಾಡಿಕೊಳ್ಳದಿರಿ
ಇದರಿಂದ ಅವರ ಮನಸ್ಸಿಗೆ ನೋವಾಗುತ್ತದೆ.
ದೋಷ ಪ್ರೇಮಿಗಳಾಗದಿರಿ.

ಚಿಂತನೆ

ಕತ್ತಲು ಶಾಶ್ವತವಲ್ಲ



✍ ವೀಣಾ ಎಚ್.ಎಲ್.

ತಪ್ಪು ಮಾಡಿದಾಗ, ಆಕಸ್ಮಾತ್ ತಪ್ಪು ದಾರಿಯಲ್ಲಿ ನಡೆದಾಗ ಅಂಥಹವರನ್ನು ತಿರಸ್ಕಾರದಿಂದ ನೋಡಿ, ನಿಂದಿಸಿ ಅಪಹಾಸ್ಯಕ್ಕೊಂದು ವಸ್ತುವನ್ನಾಗಿಸುವ ಮಹಾಮಡಿವಂತರು ನಮ್ಮಲ್ಲಿ ನೂರಾರು ಮಂದಿ ಇದ್ದಾರೆ.

ಹೀಗಲ್ಲ ಹಾಗೆಂದು ಪ್ರೀತಿಯಿಂದ ತಿದ್ದಿ, ವ್ಯಕ್ತಿಯ ಆತ್ಮವಿಶ್ವಾಸ ಆತ್ಮಾಭಿಮಾನಕ್ಕೆ ಕುಂದಾಗದಂತೆ ನೋಡಿಕೊಂಡು ಅವರನ್ನು ಸರಿದಾರಿಗೆ ತರುವ ತಾಳ್ಮೆಯ ಕಲೆ ನಮ್ಮಲ್ಲಿ ಎಷ್ಟು ಮಂದಿಗೆ ತಿಳಿದಿದೆ?

ನಮಗೆ ವಿದ್ಯೆ ಹೇಳುವ ಅಧ್ಯಾಪಕರು, ಹೊತ್ತು ಹೆತ್ತು ಸಾಕಿ ಸಲಹಿದ ಮಾತಾಪಿತೃಗಳು, ಸ್ನೇಹಿತರು ಈ ವಿಚಾರದಲ್ಲಿ ಎಷ್ಟರಮಟ್ಟಿಗೆ ನೆರವಾಗಬಲ್ಲರು? ತಪ್ಪಿ ನಡೆದಾಗ ಸಹನೆ ಕಳೆದುಕೊಂಡಾಗ ಉಗ್ರರಾಗಿ ಬೈದು ದಂಡಿಸಿ ಹಾಗೆ ಮಾಡಬಾರದು ಎಂದು ಎಲ್ಲೋ ಒಮ್ಮೆ ಬೋಧನೆ ಮಾಡಿ ಅವರ ಪಾಡಿಗೆ ಅವರನ್ನು ಬಿಟ್ಟುಬಿಟ್ಟರೆ ಹಿರಿಯನ ಕರ್ತವ್ಯ ಮುಗಿಯಿತೆ? ಒಬ್ಬ ಸ್ವಲ್ಪ ಕಾಲು ಜಾರಿದರೆ ಆದಷ್ಟು ಬೇಗನೆ ಅವನನ್ನು ಬೀಳುವಂತೆ ಮಾಡುತ್ತಾರೆ. ಮೇಲೇಳದಂತೆ ನೋಡಿಕೊಳ್ಳುತ್ತಾರೆ. ವ್ಯಂಗ್ಯ ಟೀಕೆಗಳನ್ನು ನಿಷೇಧಾತ್ಮಕ ಭಾವನೆಗಳನ್ನು ಬಿತ್ತಿ ಆಮೇಲೆ "ಅಯ್ಯೋ ಪಾಪ!" ಎನ್ನುತ್ತಾರೆ. ತೋರಿಕೆಯ ಅನುಕಂಪದ ಮಾತಿನ ಮಳೆಗರೆಯುತ್ತಾರೆ.

ಕೆಲವರಂತೂ ನಾವು ಏಕೆ ಇದ್ದೇವೆ, ನಮ್ಮಿಂದ ಏನಾದೀತು ಎನ್ನುವ ನಿರಾಸೆಯ ಮಾತನ್ನಾಡುತ್ತಾರೆ. ಜೀವನದಲ್ಲಿ ಎಲ್ಲವೂ ಕಳೆದೇ ಹೋಯಿತು ಎಂಬಂತೆ ಅವರು ತಮ್ಮ ತಲೆಯ ಮೇಲೆ ಕೈ ಹೊತ್ತು ಕುಳಿತುಕೊಳ್ಳುತ್ತಾರೆ.

ಈ ನಿರಾಸೆ ಅವರಲ್ಲಿ ನಿರ್ವಿಣ್ಣತೆಯನ್ನು ತಂದಿರುತ್ತದೆ. ಆಗ ಅವರು ತಮ್ಮ ಶಕ್ತಿಯ ಬಗ್ಗೆ ಅವಿಶ್ವಾಸಪಟ್ಟುಕೊಳ್ಳುತ್ತಾರೆ. ಈ ಹೊತ್ತಿನ ಆಚೆಗೆ ನಾಳೆಯೇ ಇಲ್ಲವೆಂದು ಅವರ ಭಾವನೆ. ನಾಳೆಯೂ ಇಲ್ಲವೆಂದ ಮೇಲೆ ತಮಗೆ ಜೀವನವೇ ಇಲ್ಲವೆಂದು ಅವರ ಭಾವನೆ.


ಕಾರ್ಗತ್ತಲು ಕವಿದಿರುತ್ತದೆ. ಆದರೆ ಅದು ಶಾಶ್ವತವೇನೂ ಅಲ್ಲ. ಬೆಳಕಿನ ಎದುರು ಕತ್ತಲು ತಡೆದು ನಿಲ್ಲುವುದಿಲ್ಲ. ಬೆಳಕು ಹರಿದಂತೆ ಕತ್ತಲು ಕರಗಿ ಹೋಗುತ್ತದೆ.

ನಿಮಗೆ ಇಷ್ಟವಾಗದ ವಿಷಯಗಳನ್ನು

ಎಂದಿಗೂ ಅನ್ಯರನ್ನು

ಮೆಚ್ಚಿಸುವುದಕ್ಕಾಗಿಯೇ ಒಪ್ಪಿಕೊಳ್ಳಬೇಡಿ.

ನನ್ನ ನೆನಪುಗಳು ಮತ್ತು ಅರಿವಿಕೆ



✍ **ಗುಡ್ಡೆಮನೆ ಪೂವಯ್ಯ ಮೊಣ್ಣಯ್ಯ**
ಚೀಫ್ ಇಂಜಿನಿಯರ್ (ನಿವೃತ್ತ)
ಟಾಟಾ ಕಂಪೆನಿ.

ನಮ್ಮ ನಾಡಾದ ಕೊಡಗಿನ ಬಲಮುರಿ ಗ್ರಾಮದಲ್ಲಿ ನಮ್ಮ ಗುಡ್ಡೆಮನೆ ಇರುವುದು. ನಾವು ಚಿಕ್ಕವರಿರುವಾಗ ಬ್ರಿಟಿಷರ ವಿರುದ್ಧ ನಮ್ಮ ದೇಶಕ್ಕಾಗಿ ಹೋರಾಡಿ ಸ್ವಾತಂತ್ರ್ಯ ಗಳಿಸಿಕೊಟ್ಟ ಮಹಾತ್ಮಾ ಗಾಂಧೀಜಿ, ಸುಭಾಶ್ಚಂದ್ರಬೋಸ್, ಪಂಡಿತ ಜವಾಹರಲಾಲ್ ನೆಹರೂ, ವಲ್ಲಭಭಾಯಿ ಪಟೇಲ್ ಹೀಗೆ ಹಲವು ಗಣ್ಯವ್ಯಕ್ತಿಗಳ ಹೆಸರುಗಳನ್ನು ನಮ್ಮ ಶಾಲಾ ಪಠ್ಯಪುಸ್ತಕಗಳಲ್ಲಿ, ಪ್ರಕಟಣೆಗಳಲ್ಲಿ ಹಾಗೂ ಪತ್ರಿಕೆಗಳಲ್ಲಿ ಓದಿ ಹಾಗೂ ಕೇಳಿ ತಿಳಿದುಕೊಳ್ಳುತ್ತಿದ್ದೆವು. ಆದರೆ ನಮ್ಮದೇ ಪ್ರಾಂತ್ಯದಲ್ಲಿ ಅದರಲ್ಲೂ ನಮ್ಮ ಮನೆಯವರಾದ ಒಬ್ಬ ವ್ಯಕ್ತಿ ಬ್ರಿಟಿಷರ ವಿರುದ್ಧ ದಂಡುಕಟ್ಟಿ ಸ್ವಾತಂತ್ರ್ಯಕ್ಕಾಗಿ ಹೋರಾಡಿ ತಮ್ಮ ಪ್ರಾಣವನ್ನು ಬಲಿದಾನ ಕೊಟ್ಟಿರುವರೆಂಬ ವಿಷಯದ ಕುರಿತು ನಮಗೆ ಹೆಚ್ಚಿನ ಅರಿವಿರಲಿಲ್ಲ. ಅಂದು ಕೊಡಗಿನಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಡಿ ಮಡಿದವರ ಚರಿತ್ರೆ ಅಲ್ಲಿಗೇ ಕಣ್ಮರೆಯಾಗಿತ್ತು. ಯಾಕೆಂದರೆ 1834ರಿಂದ ಬ್ರಿಟಿಷರು ಕೊಡಗನ್ನು ಸಂಪೂರ್ಣ ತಮ್ಮ ವಶಕ್ಕೆ ತೆಗೆದುಕೊಂಡು ರಾಜ್ಯಭಾರ ಮಾಡಲು ಶುರು ಮಾಡಿದರು. ಆದರೆ ನಮ್ಮ ಮನೆಯಲ್ಲಿ ಅಪ್ಪಯ್ಯ ಅಜ್ಜರವರ ಹೆಸರು ನಮ್ಮ ಮನೆಯ ಹಿರಿಯರಿಂದ ಆಗಾಗ್ಗೆ ಕೇಳುತ್ತಿದ್ದೆವು. "ಅವರು ಬಲಶಾಲಿ ಹಾಗೂ ಧೈರ್ಯವಂತ, 4–5 ಕುದುರೆಗಳನ್ನು ಸವಾರಿ ಮಾಡಲು ಇಟ್ಟಿದ್ದರು, ಬ್ರಿಟಿಷರ ವಿರುದ್ಧ ಹೋರಾಡಿ ಗಲ್ಲಿಗೇರಿದರು" ಎಂದು. ನಮ್ಮ ಮನೆಯ ಅಟ್ಟದಲ್ಲಿ (ಮಹಡಿ ಅಥವಾ ಮೇಲ್ಛಾವಣಿ) ಬಂದೂಕುಗಳು, ಲೋಹದ ಬಾಳುಕತ್ತಿಗಳು, ಕವಚ ಇತ್ಯಾದಿ ಯುದ್ಧಕ್ಕೆ ಉಪಯೋಗಿಸುವ ಹತ್ಯಾರುಗಳಿದ್ದವು. ಕಲ್ಲಿನ ಒಂದು ಬಂದೂಕು ಸಹ ಇತ್ತು. ಅಂದರೆ ಬಂದೂಕಿನ ನಳಿಗೆ (Barrel) ಕಲ್ಲಿನದಾಗಿತ್ತು. ನಮ್ಮ ಹಿರಿಯರು ಇವೆಲ್ಲ ಅಪ್ಪಯ್ಯ ಅಜ್ಜರು ಯುದ್ಧಕ್ಕೆ ಬಳಸುತ್ತಿದ್ದ ಹತ್ಯಾರುಗಳು ಎನ್ನುತ್ತಿದ್ದರು. ನಮ್ಮ ಮನೆ ಕಕ್ಕಬೆ ಹೊಳೆ ಹಾಗೂ ಕಾವೇರಿ ಹೊಳೆಗೆ ಸಮೀಪದಲ್ಲಿದೆ. ಹಾಗಾಗಿ, ಮುಂಗಾರು ಮಳೆ ಶುರುವಾಗುವಾಗ ಈ ಹೊಳೆಗಳು ಉಕ್ಕುತ್ತವೆ. ಆಗ ದೊಡ್ಡ ದೊಡ್ಡ ಮೀನುಗಳು ನಮ್ಮ ಗದ್ದೆಗಳಿಗೆ ಹೊಳೆಯಿಂದ ಬರುತ್ತವೆ. ಆಗ ನಾವು ಈ ಬಾಳುಕತ್ತಿಗಳನ್ನು ತೆಗೆದುಕೊಂಡು ಗದ್ದೆಯಲ್ಲಿ ಮೀನುಗಳನ್ನು ಕಡಿಯಲು ಹೋಗುತ್ತಿದ್ದೆವು.

ಅವರ ಕೊನೆ ದಿನದಲ್ಲಿ ಅವರ ಪತ್ನಿ ಮತ್ತು ಒಬ್ಬಳೇ ಮಗಳಿದ್ದರು. ಅವರ ಸಹೋದರ ತಮ್ಮಯ್ಯಗೌಡ ಅವರ ಸೇನೆಯಲ್ಲಿ ಹೋರಾಡಿದವರು. ಅವರಿಗೆ ಬ್ರಿಟಿಷರು ಶಿಕ್ಷೆ ವಿಧಿಸಿ ಸಿಂಗಾಪುರಿಗೆ ಕಳುಹಿಸಿದರೆಂದು ಸುದ್ದಿ. ಬ್ರಿಟಿಷ್ ಕ್ಯಾಪ್ಟನ್ ಲೀಹಾರ್ಡಿ ಬಲಮುರಿ ಗುಡ್ಡೆಮನೆಗೆ ಒಬ್ಬ ರಾಜದೂತನನ್ನು ಕಳುಹಿಸಿ ಅಪ್ಪಯ್ಯಗೌಡರ ಪತ್ನಿಯನ್ನು ಕೊಡಗಿನ ಉಡುಪಾದ ದಟ್ಟಿಕುಪ್ಪಸವನ್ನು ತನ್ನ ಪತಿಗೆ, ಮತ್ತು ತಾನು ಧಾರೆ ಸೀರೆಯುಟ್ಟು ದಿನಾಂಕ : 31–10–1837ರಂದು ಬೆಳಿಗ್ಗೆ 10.00 ಗಂಟೆಗೆ ಮಡಿಕೇರಿ ಕೋಟೆಗೆ ಬರಬೇಕೆಂದು ಆಜ್ಞಾಪಿಸುವನು. ದಿನಾಂಕ : 31–10–1837ರಂದು ಬೆಳಿಗ್ಗೆ 10–00 ಗಂಟೆಗೆ ಗುಡ್ಡೆಮನೆ ಅಪ್ಪಯ್ಯಗೌಡರನ್ನು ತನ್ನ ಪತ್ನಿ, ಸಹೋದರ, ಅನೇಕ ಊರ ಪಟೇಲರು, ನಾಡ ಗೌಡರು ಮತ್ತು ಸಾವಿರಾರು ಜನರ ಕಣ್ಮುಂದೆ ಮಡಿಕೇರಿಯ ಕೋಟೆಯ ಮುಂಭಾಗದಲ್ಲಿ (ಈಗಿನ ಜಿಲ್ಲಾಧಿಕಾರಿಯವರ ಕಛೇರಿ) ಗಲ್ಲಿನ ಕಂಬಕ್ಕೆ ತೂಗು ಹಾಕುತ್ತಾರೆ. ನೆರೆದಿದ್ದ ಜನರಿಗೆ ಈ ದೃಶ್ಯ ಭಯಂಕರವಾಗಿತ್ತು ಹಾಗೂ ಬಹಳ ಕ್ರೂರತನವಾಗಿತ್ತು. ಆಗ ಅವರ ವಯಸ್ಸು 45 ಆಗಿತ್ತು.

ಸ್ವಾತಂತ್ರ್ಯ ಸಿಕ್ಕಿ ಹಲವು ವರ್ಷಗಳಾದರೂ ಗುಡ್ಡೆಮನೆ ಅಪ್ಪಯ್ಯನವರ ಚರಿತ್ರೆ ಪ್ರಕಟಿಸಲಾಗಲಿಲ್ಲ. ಆಮೇಲೆ ಕೆಲವು ಗಣ್ಯ ವ್ಯಕ್ತಿಗಳು ಕೊಡಗಿನ ಸ್ವಾತಂತ್ರ್ಯ ಹೋರಾಟದ ಮೇಲೆ ಅಧ್ಯಯನ ಮಾಡತೊಡಗಿದರು. ಇವರಲ್ಲಿ ದಿವಂಗತ ಶ್ರೀ ಡಿ.ಎನ್. ಕೃಷ್ಣಯ್ಯ ಒಬ್ಬರು. ಇವರು ಮಡಿಕೇರಿ ಸೆಂಟ್ರಲ್ ಹೈಸ್ಕೂಲ್‌ನಲ್ಲಿ ನಮ್ಮ ತಂದೆಯವರ ಸಹಪಾಠಿ ಹಾಗೂ ನಾಪೋಕ್ಲು ಹೈಸ್ಕೂಲಿನಲ್ಲಿ ನನಗೆ ಮುಖ್ಯೋಪಾಧ್ಯಾಯರಾಗಿದ್ದರು. ಅವರು ಆಗಾಗ್ಗೆ ಗುಡ್ಡೆಮನೆ ಅಪ್ಪಯ್ಯನವರ ಸಾಹಸ ಕಾರ್ಯಗಳನ್ನು ನಮ್ಮ ತಂದೆಯವರಿಗೆ ತಿಳಿಸುತ್ತಿದ್ದರು. 1970ರ ದಶಕದ 'ಶಕ್ತಿ' ದಿನಪತ್ರಿಕೆಯಲ್ಲಿ ಶ್ರೀ ಕೃಷ್ಣಯ್ಯನವರ "ಕೊಡಗಿನ ಇತಿಹಾಸ" ಎಂಬ ಲೇಖನಗಳು, 1975ರ "ಇತಿಹಾಸದ ಮೇಲೆ ಹೊಸಬೆಳಕು" ಲೇಖನಗಳು, ತಿ.ತಾ.ಶರ್ಮರವರ "ಕರ್ನಾಟಕದಲ್ಲಿ ಸ್ವಾತಂತ್ರ್ಯ ಸಂಗ್ರಾಮ" ಲೇಖನಗಳು, ಡಾ. ಸೂರ್ಯನಾಥ ಯು. ಕಾಮತ್‌ರವರ "ಕರ್ನಾಟಕದ ಸಂಕ್ಷಿಪ್ತ ಇತಿಹಾಸ", ಶ್ರೀ ನಿರಂಜನರವರ "ಕಲ್ಯಾಣಸ್ವಾಮಿ" ಕಾದಂಬರಿ, ಕಲ್ಯಾಣಪ್ಪನ "ಕಾಟಕಾಯಿ" ಎಂಬ ಯಕ್ಷಗಾನ, ಕರ್ನಾಟಕ ರಾಜ್ಯ ಗ್ಯಾಸೆಟಿರ್ "ಕೊಡಗು ಜಿಲ್ಲೆ" ರಾಜ್ಯ ಸರ್ಕಾರದ ಪ್ರಕಟಣೆ ಇವುಗಳು ಗುಡ್ಡೆಮನೆ ಅಪ್ಪಯ್ಯಗೌಡರ ಹೆಸರನ್ನು ಮುಂದೆ ತಂದವು ಹಾಗೂ ಜನರಿಗೆ ಅಪ್ಪಯ್ಯನವರ ಸ್ವಾತಂತ್ರ್ಯ ಹೋರಾಟದ ಮನವರಿಕೆಯಾಯಿತು.

31, ಅಕ್ಟೋಬರ್ 1979ರಂದು ಮಡಿಕೇರಿಯ ಪುರಸಭಾ ಭವನದಲ್ಲಿ ಬಹಿರಂಗ ಸಭೆ ನಡೆದು ಹುತಾತ್ಮ ಗುಡ್ಡೆಮನೆ ಅಪ್ಪಯ್ಯನವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಿದರು. ಅವರನ್ನು ಕೊಡಗಿನ ಮೊದಲ ಹುತಾತ್ಮನೆಂದು ಪರಿಗಣಿಸಿ ಅಕ್ಟೋಬರ್ 31ನ್ನು ಹುತಾತ್ಮರ ದಿನವೆಂದು ಪ್ರತಿವರ್ಷ ಆಚರಿಸಲು ತೀರ್ಮಾನಿಸಿದರು. ಶ್ರೀ ಬಿ.ಡಿ. ಗಣಪತಿಯವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಎಂ.ಸಿ.ನಾಣಯ್ಯನವರು (ಶಾಸಕ) ಮುಖ್ಯ ಅತಿಥಿಗಳಾಗಿದ್ದರು. ಸಭೆಯಲ್ಲಿ ಹುತಾತ್ಮ ಅಪ್ಪಯ್ಯನವರನ್ನು ಜ್ಞಾಪಿಸುವ ಸ್ಮಾರಕವನ್ನು ಕಟ್ಟಲು ನಿರ್ಧಾರವಾಯಿತು. (ಆಧಾರ : ಡೆಕ್ಕನ್ ಹೆರಾಲ್ಡ್ ದಿನಾಂಕ : 31-10-1979)

ಆದರೆ, ಮುಂದೆ ಯಾವ ಅಭಿವೃದ್ಧಿಯಾಗದ ಕಾರಣ ನಾನು ಬೆಂಗಳೂರಿನಲ್ಲಿ ವಾಸವಾಗಿರುವ ನಮ್ಮ ಮನೆಯವರೊಡನೆ ಮಾತನಾಡಿ 16 ಸದಸ್ಯರ ರುಜು ಹಾಕಿಸಿ ಒಂದು ಮನವಿ ಪತ್ರವನ್ನು ದಿನಾಂಕ : 15-12-1985ರಂದು ಮಡಿಕೇರಿ ನಗರ ಸಭಾಧ್ಯಕ್ಷರಿಗೆ, ಕರ್ನಾಟಕದ ಮಾನ್ಯ ಅರಣ್ಯ ಶಾಖೆಯ ಮಂತ್ರಿ ಶ್ರೀ ಬಿ.ಎ.ಜೀವಿಜಯರವರಿಗೆ, ಶ್ರೀ ಡಿ.ಎ. ಚಿಣ್ಣಪ್ಪ, (ಶಾಸಕ)ರವರಿಗೆ, ಶ್ರೀ ಟಿ.ಕೆ. ಚಂಗಪ್ಪರವರಿಗೆ (ಗುಡ್ಡೆಮನೆ ಅಪ್ಪಯ್ಯ ಸ್ಮಾರಕ ಸಮಿತಿ ಸಂಚಾಲಕರು) ಕಳುಹಿಸಿದೆನು. ಮಡಿಕೇರಿಯ ಒಂದು ಮುಖ್ಯ ರಸ್ತೆಗೆ ಗುಡ್ಡೆಮನೆ ಅಪ್ಪಯ್ಯನವರ ಹೆಸರಿಡಬೇಕೆಂದು ಆ ಪತ್ರದಲ್ಲಿ ಒಂದು ಕೋರಿಕೆಯಾಗಿತ್ತು. ಈ ಪತ್ರದ ಕೋರಿಕೆ ಮೇಲೆ ಸಂಬಂಧಪಟ್ಟ ಗಣ್ಯರು ಕೊಡಗು ಜಿಲ್ಲಾಧಿಕಾರಿ ಹಾಗೂ ಕರ್ನಾಟಕದ ಮುಖ್ಯಮಂತ್ರಿಗಳನ್ನು ಸಂಪರ್ಕಿಸಿ ಗೌಡ ಸಮಾಜಕ್ಕೆ ಹೋಗುವ ಒಂದು ರಸ್ತೆಗೆ ಗುಡ್ಡೆಮನೆ ಅಪ್ಪಯ್ಯಗೌಡರ ರಸ್ತೆ ಎಂದು ಹೆಸರಿಡಲಾಯಿತು.

ಗುಡ್ಡೆಮನೆ ಅಪ್ಪಯ್ಯನವರು ತಮ್ಮದೇ ಆದ ಸುಮಾರು 2000 ಜನರ ಸೈನ್ಯದ ಮುಂದಾಳು ಆಗಿ ಕೊಡಗು ಕೆನರಾ ಬಂಡಾಯ, ಅಮರ ಸುಳ್ಯ ಕಾಟಕಾಯಿ ಎಂದು ಕರೆಯಲ್ಪಟ್ಟಿರುವ ಬ್ರಿಟಿಷರ ವಿರುದ್ಧದ ಹೋರಾಟದಲ್ಲಿ ಭಾಗಿಯಾಗಿ, ಕೊನೆಗೆ ಅವರ ಖೈದಿಯಾಗಿ 1837ನೇ ಇಸವಿ ಅಕ್ಟೋಬರ್ 31ರಂದು ಬೆಳಿಗ್ಗೆ 10-00 ಗಂಟೆಗೆ ಮಡಿಕೇರಿ ಕೋಟೆಯ ಮುಂಭಾಗದಲ್ಲಿ ಬಹಿರಂಗವಾಗಿ ಬ್ರಿಟಿಷರಿಂದ ಗಲ್ಲಿಗೇರಿ ತಮ್ಮ ಪ್ರಾಣವನ್ನು ದೇಶಕ್ಕೆ ಬಲಿದಾನವಾಗಿ ಕೊಟ್ಟರು. ಇದರ ವಿಷಯ ಎಲ್ಲಾ ಜನರಿಗೆ ಮನವರಿಕೆಯಾದ ನಂತರ ಅಪ್ಪಯ್ಯನವರಿಗೆ ಪ್ರತಿವರ್ಷ ಶ್ರದ್ಧಾಂಜಲಿ, ಅವರ ಸ್ಮರಣಾರ್ಥ ಫುಟ್ಬಾಲ್ ಟ್ರೋಫಿ, ಅವರ ನಾಟಕ ಪ್ರದರ್ಶನಗಳನ್ನು ಮಡಿಕೇರಿಯಲ್ಲಿ ನೆರವೇರಿಸಲಾಯಿತು. ಇಂದು ಅವರ ಹೆಸರು ಕೊಡಗಿನಲ್ಲಿ ಪತ್ರಿಕೆಗಳಿಂದ ಮತ್ತು ಲೇಖನಗಳಿಂದ ಪ್ರತಿಯೊಬ್ಬರಿಗೂ ತಿಳಿದಿದೆ. ಇವರು ಬರೇ ಕೊಡಗಿನ ಜನರಿಗೆ ಸೇರಿದವರಲ್ಲ, ಇಡೀ ನಮ್ಮ ದೇಶಕ್ಕೆ ಸೇರಿದವರು. ಇವರ ವಿಷಯ ಮಾತಾಡಿದ ಕೆಲವು ಗಣ್ಯರ ವಿವರಗಳನ್ನು ಹಾಗೂ

ಅಭಿಪ್ರಾಯಗಳನ್ನು ಇಲ್ಲಿ ತಿಳಿಸಬಯಸುತ್ತೇನೆ.

ಸಮಾರಂಭ :

ಗುಡ್ಡೆಮನೆ ಅಪ್ಪಯ್ಯ ಗೌಡರ ಸ್ಮಾರಕ ಶಿಲಾನ್ಯಾಸ, ನೆಹರೂ ಉದ್ಯಾನವನ, ಸುದರ್ಶನ ವೃತ್ತ, ಮಡಿಕೇರಿ ದಿನಾಂಕ : 18-05-2005 (ಆಧಾರ : 'ಶಕ್ತಿ', 'ಮೈಸೂರು ಮಿತ್ರ', 'ಪ್ರಜಾವಾಣಿ', 'ವಿಜಯಕರ್ನಾಟಕ' 'ಕನ್ನಡಪ್ರಭ' ಪತ್ರಿಕೆಗಳು.)

1. **ಲೆಫ್ಟಿನೆಂಟ್ ಜನರಲ್ ಬಿದ್ದಂಡ ಸಿ. ನಂದಾ (ನಿವೃತ್ತ):** ಜನರಲ್ ಬಲಮುರಿ ಗ್ರಾಮದವರು ಎನ್ನಲು ನಮಗೆ ಹೆಮ್ಮೆ. ಜನರಲ್ ಹೀಗೆ ಹೇಳುತ್ತಾರೆ : "ಗುಡ್ಡೆಮನೆ ಅಪ್ಪಯ್ಯಗೌಡರು ಸ್ವಾತಂತ್ರ್ಯ ಸೇನಾನಿಗಳಲ್ಲೇ ವೀರಾಗ್ರಣಿ. ಇವರ ಹೆಸರನ್ನು ಜನರಲ್ ಕಾರ್ಯಪ್ಪ ಮತ್ತು ಜನರಲ್ ತಿಮ್ಮಯ್ಯರವರೊಡನೆ ಸೇರಿಸಬೇಕು. ಗುಡ್ಡೆಮನೆ ಮತ್ತು ಬಿದ್ದಂಡ ಕುಟುಂಬಗಳು ಹಿಂದಿನಿಂದಲೂ ಪರಸ್ಪರ ಬಾಂಧವ್ಯ ಹೊಂದಿದ್ದು, ಅಮರ ಸುಳ್ಯ ಕಾಟಕಾಯಿ ದಂಗೆಯಲ್ಲಿ ಬಿದ್ದಂಡ ಕುಟುಂಬದ ಮೂವರು ವೀರರು ಅಪ್ಪಯ್ಯ ಗೌಡರ ಸೇನೆಯಲ್ಲಿ ಯುದ್ಧ ಮಾಡಿ ಹುತಾತ್ಮರಾಗಿದ್ದಾರೆ".

2. **ಕೆ.ವಿ.ಜಿ.ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಕುರುಂಜಿ ವೆಂಕಟರಮಣ ಗೌಡರು :** ಶಿಲಾನ್ಯಾಸವನ್ನು ನೆರವೇರಿಸಿದರು ಹಾಗೂ ಸ್ಮಾರಕ ನಿರ್ಮಾಣಕ್ಕೆ ಒಂದು ಲಕ್ಷ ರೂಪಾಯಿ ನೆರವು ನೀಡುವ ಭರವಸೆ ಕೊಟ್ಟರು. ಅಲ್ಲದೆ ಕೆ.ವಿ.ಜಿ. ವಿದ್ಯಾಸಂಸ್ಥೆಗಳಲ್ಲಿ ಗುಡ್ಡೆಮನೆ ಅಪ್ಪಯ್ಯ ಗೌಡರ ಭಾವಚಿತ್ರವನ್ನು ಅಳವಡಿಸಿ ಸ್ಮರಿಸಲಾಗುವುದೆಂದರು.

3. **ಶಾಸಕ ಶ್ರೀ ಕೆ.ಜಿ. ಬೋಪಯ್ಯ (ಈಗಿನ ಸಭಾಧ್ಯಕ್ಷ) ಹೀಗೆ ಹೇಳುತ್ತಾರೆ :** "ಕೊಡಗಿನ ಜನರು ಅನ್ಯಾಯವನ್ನು ಸಹಿಸುವುದಿಲ್ಲ ಹಾಗೂ ಸ್ವಾಭಿಮಾನವನ್ನು ಬಲಿಕೊಡುವುದಿಲ್ಲ ಎಂಬುವುದನ್ನು ಮಹಾನ್ ವೀರ ಗುಡ್ಡೆಮನೆ ಅಪ್ಪಯ್ಯಗೌಡರು 167 ವರ್ಷಗಳ ಹಿಂದೆಯೇ ತೋರಿಸಿ ಕೊಟ್ಟಿದ್ದಾರೆ. ಇವರು ಇಡೀ ಜಿಲ್ಲೆಯ ಪ್ರತಿಷ್ಠೆ ಹಾಗೂ ಸ್ವಾಭಿಮಾನವನ್ನು ಎತ್ತಿ ಹಿಡಿದ ಹೆಮ್ಮೆಯ ಪುತ್ರ. ಇವರ ಸ್ಮಾರಕ ನಿರ್ಮಾಣ ಅತಿ ಅಗತ್ಯ"

4. **ಡಾ. ಎಂ.ಎಂ. ಚಂಗಪ್ಪ (ವೀರರಾಜಪೇಟೆಯ ಕಾವೇರಿ ವಿದ್ಯಾಸಂಸ್ಥೆಯ ಅಧ್ಯಕ್ಷ) ಹೀಗೆ ಹೇಳುತ್ತಾರೆ:** "ಕೊಡಗಿನ ಇತಿಹಾಸದ ಪುಟಗಳನ್ನು ತಿರುವಿದರೆ 1837ರಲ್ಲೇ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಗುಡ್ಡೆಮನೆ ಅಪ್ಪಯ್ಯ ಗೌಡರ ಹೆಸರು ದೊರಕುತ್ತದೆ. ಇವರ ಸ್ಮಾರಕ ನಿರ್ಮಿಸಲು ಚಾಲನೆ ದೊರಕಿದ್ದು, ಅಪ್ಪಯ್ಯನವರ ಆತ್ಮಕ್ಕೆ ಶಾಂತಿ ದೊರಕಲಿದೆ".

ಸಮಾರಂಭ :

ಗುಡ್ಡೆಮನೆ ಅಪ್ಪಯ್ಯ ಗೌಡರಿಗೆ ಶ್ರದ್ಧಾಂಜಲಿ ತಾರೀಖು : 31-10-1998ರಂದು ಮಡಿಕೇರಿ ಕೋಟೆಯ ಆವರಣದಲ್ಲಿ (ಆಧಾರ : ಕೊಡಗು ಸಂಗಾತಿ ಪತ್ರಿಕೆ)

1. **ಮಾಜಿ ಸಚಿವ ಶ್ರೀ ದಂಬೆಕೋಡಿ ಚಿಣ್ಣಪ್ಪ ಹೀಗೆ ಹೇಳುತ್ತಾರೆ :** "ಅಪ್ಪಯ್ಯ ಗೌಡ ಕೊಡಗಿನ ಇತಿಹಾಸದಲ್ಲೇ ಗಲ್ಲಿಗೇರಿದ ಪ್ರಥಮ ಏಕೈಕ ವ್ಯಕ್ತಿ. ಅವರು ಅಂದು ಸಂಘಟಿಸಿದ ಹತ್ತು ಸಾವಿರ ಸ್ವಾತಂತ್ರ್ಯ ಹೋರಾಟಗಾರರ ಸೇನೆಯನ್ನು ನೆನೆದರೆ ಇಂದು ನಮಗೆ ಐನೂರು ಜನ ಸೇರಿಸುವುದು ಕಷ್ಟವಾಗಿ ಪರಿಣಮಿಸುತ್ತದೆ. ಆಗ ಅವರ ಈ ಬಲಿದಾನ ದಿನವನ್ನು ರಾಷ್ಟ್ರಮಟ್ಟದಲ್ಲಿ ಮೊದಲ ಪಂಕ್ತಿಯ ನಾಯಕರ ಜೊತೆಯಲ್ಲಿ ಸ್ಮರಿಸಬೇಕು".

2. ಶ್ರೇಷ್ಠ ವಕೀಲ ಶ್ರೀ ಕೆ.ಪಿ. ಬಾಲಸುಬ್ರಮಣ್ಯರವರು ಹೀಗೆ ಹೇಳುತ್ತಾರೆ : "ಗಲ್ಲಿಗೇರಿದ ಜಾಗದಲ್ಲಿ ಒಂದು ಸ್ಮಾರಕವನ್ನು ಸ್ಥಾಪಿಸಲು ಸರ್ಕಾರವನ್ನು ಒತ್ತಾಯಿಸಬೇಕು. ಅಪ್ಪಯ್ಯನವರ ಜೀವನ ಚರಿತ್ರೆಯನ್ನು ಪಠ್ಯ ಪುಸ್ತಕವನ್ನಾಗಿ ಮಾಡಬೇಕು. ಇವರ ಜೀವನ ಚರಿತ್ರೆಯ ಅರಿವನ್ನು ಮೂಡಿಸಬೇಕು"

3. ಕೊಡಗು ಪ್ರಜಾ ವೇದಿಕೆಯ ಅಧ್ಯಕ್ಷರಾದ ಶ್ರೀ ದೇವಿಪ್ರಸಾದರವರು ಹೀಗೆ ಹೇಳುತ್ತಾರೆ : "ಅಪ್ಪಯ್ಯ ಗೌಡರನ್ನು ಗಲ್ಲಿಗೇರಿಸುವಾಗ ಕೊಡಗಿನ ಎಲ್ಲಾ ಪಟೇಲರನ್ನು ಕರೆಯಿಸಿ ಸಾವಿರಾರು ಜನರ ಸಮ್ಮುಖದಲ್ಲಿ ಗಲ್ಲಿಗೇರಿಸಿದ್ದಾರೆ. ಇದು ಸರ್ವತ ಖಂಡನೀಯ ಹಾಗೂ ಜನಾಂಗಕ್ಕೆ ಮಾಡಿದ ಘೋರ ಅನ್ಯಾಯ ಮತ್ತು ಅಪಮಾನ"

4. ಶಿಲ್ಪಿ ಮುತ್ತಣ್ಣನವರ ಅಭಿಪ್ರಾಯ ಹೀಗಿದೆ : (ಆಧಾರ : ಶಕ್ತಿ ಪತ್ರಿಕೆ ದಿನಾಂಕ : 1-3-2004) "ಅಪ್ಪಯ್ಯ ಗೌಡರು ಕೊಡಗಿನ ಭಗತ್ ಸಿಂಗ್. ಅವರ ಹೆಸರಿನಲ್ಲಿ ಗ್ರಂಥಾಲಯ, ಟಿ.ವಿ., ಧಾರಾವಾಹಿ, ಪುಸ್ತಕ ಪ್ರಕಟಣೆ ಬಗ್ಗೆ ಗಮನಹರಿಸಬೇಕು".

ಗುಡ್ಡೆಮನೆ ಅಪ್ಪಯ್ಯ ಗೌಡರ ಪ್ರತಿಮೆಯನ್ನು ಮಡಿಕೇರಿಯ ಸುದರ್ಶನ ವೃತ್ತದ ಸಮೀಪ ನೆಹರೂ ಉದ್ಯಾನವನದಲ್ಲಿ ಸ್ಥಾಪಿಸಲು ನಿಶ್ಚಯಿಸಿರುವುದನ್ನು ತಿಳಿದು ಕೊಡಗಿನ ಜನರಿಗೂ ಹಾಗೂ ಗುಡ್ಡೆಮನೆ ಸದಸ್ಯರಿಗೂ ತುಂಬ ಸಂತೋಷ ಉಂಟುಮಾಡಿದೆ. ಇದರಿಂದ ದೇಶಭಕ್ತ ಗುಡ್ಡೆಮನೆ ಅಪ್ಪಯ್ಯ ಗೌಡರಿಗೆ ದೊಡ್ಡ ಗೌರವ ಕೊಟ್ಟಂತಾಗುತ್ತದೆ. ಅಲ್ಲದೆ ಹೋರಾಡಿ ಪ್ರಾಣತೆತ್ತವರ ಆತ್ಮಕ್ಕೆ ಶಾಂತಿ ದೊರಕಿದಂತಾಗುತ್ತದೆ. ಅವರ ಪ್ರತಿಮೆ ಇಂದಿನ ಪೀಳಿಗೆಗೆ ಪ್ರೋತ್ಸಾಹ ಕೊಟ್ಟಂತಾಗುತ್ತದೆ. ಗುಡ್ಡೆಮನೆ ಅಪ್ಪಯ್ಯ ಗೌಡರ ಚರಿತ್ರೆಯನ್ನು ಅಧ್ಯಯನ ಮಾಡಿ ಮುಂದೆ ತಂದ ಗಣ್ಯ ವ್ಯಕ್ತಿಗಳಿಗೆ, ಅವರ ಹೆಸರನ್ನು ಪ್ರಚಾರ ಮಾಡಿದ ಲೇಖಕರಿಗೆ ಅವರ ಹೆಸರಿನಲ್ಲಿ ಒಂದು ರಸ್ತೆ ಹಾಗೂ ಜ್ಞಾಪಕ ಪ್ರತಿಮೆಯನ್ನು ಸ್ಥಾಪನೆ ಮಾಡಲು ಸೂಚಿಸಿದವರಿಗೆ ಹಾಗೂ ಅದನ್ನು ಕಾರ್ಯರೂಪಕ್ಕೆ ತರಲು ಸಹಾಯಕರಾದ ಗುಡ್ಡೆಮನೆ ಅಪ್ಪಯ್ಯ ಗೌಡ ಸ್ಮಾರಕ ಸಮಿತಿಗೆ, ನಮ್ಮ ಸರ್ಕಾರಕ್ಕೆ, ಸಂಬಂಧಪಟ್ಟ ಅಧಿಕಾರಿಗಳಿಗೆ, ಮಡಿಕೇರಿ ಪುರಸಭಾ ಕೌನ್ಸಿಲ್‌ರಿಗೆ, ಖ್ಯಾತ ಶಿಲ್ಪಿ ಶ್ರೀ ಅಶೋಕ್ ಗುಡಿಕರ್ ಅವರಿಗೆ, ಪ್ರೋತ್ಸಾಹ ಮತ್ತು ನೆರವು ನೀಡಿದ ಜನ ಬಂಧುಗಳಿಗೆ ನಾನು ಗುಡ್ಡೆಮನೆ ಸದಸ್ಯರ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇನೆ.

ಹಬ್ಬಗಳು ಬಾಂಧವ್ಯದ ಬೆಸುಗೆ



✍ ಪುದಿಯನೆರವನ ಪ್ರಮೀಳ ವೆಂಕಟೇಶ್
ಜಂಬೂರು ಚಿಕ್ಕಹಂದೆ ಗ್ರಾಮ
ಮಾದಾಪುರ ಅಂಚೆ.

ಹಬ್ಬ ಎಂದ ತಕ್ಷಣ ನಮ್ಮ ಮನಸ್ಸಿಗೆ ಬರುವುದು ತಳಿರು – ತೋರಣ, ಹೊಸಬಟ್ಟೆ, ತಿಂಡಿ ತಿನಿಸು, ಭೂರಿ – ಭೋಜನ, ಸಂತೋಷ, ಸಡಗರ, ಸಂಭ್ರಮ. 'ಸಾಲ ಮಾಡಿಯಾದರೂ ತುಪ್ಪ ತಿನ್ನು' ಎಂಬ ಮಾತಿದೆ. ಅಂತೆಯೇ ಸಾಲನೋ ಶೂಲನೋ ಹಬ್ಬವನ್ನು ಮಾತ್ರ ಅದ್ದೂರಿಯಾಗಿ ಆಚರಿಸಲಾಗುತ್ತದೆ. ಅಬ್ಬಬ್ಬಾ! ಹಬ್ಬಕ್ಕಿರುವ ಮನ್ನಣೆ!

ಹಿಂದೂ ಸಂಸ್ಕೃತಿಯಲ್ಲಿ ಹಬ್ಬಗಳಿಗೆ ತನ್ನದೇ ಆದ ವಿಶಿಷ್ಟತೆ ಇದೆ. ಧಾರ್ಮಿಕ ನೆಲೆಗಟ್ಟಿನ ಅಡಿಯಲ್ಲಿ ಆಚರಿಸುವ ಹಬ್ಬಗಳು ತನ್ನದೇ ಆದ ನೀತಿ – ನಿಯಮಗಳು, ಕಟ್ಟುಪಾಡುಗಳು, ಸಂಸ್ಕೃತಿ, ಸಾಹಿತ್ಯ, ಭಾವ – ವೇಷ ಎಲ್ಲವನ್ನೂ ಒಳಗೊಂಡಿರುತ್ತದೆ. **ಜನರು ಅವರವರ ಜಾತಿ – ಧರ್ಮ – ಮತಕ್ಕೆ ಅನುಗುಣವಾಗಿ ವಿಭಿನ್ನ ಶೈಲಿಯಲ್ಲಿ ಹಬ್ಬವನ್ನು ಆಚರಿಸುತ್ತಾರೆ. ಪ್ರತಿ ವರ್ಗದವರ ಆಚರಣೆಯಲ್ಲಿ ವಿಭಿನ್ನತೆ ಇದೆ. ಆದರೆ 'ದೇವನೊಬ್ಬ ನಾಮ ಹಲವು' ಅಲ್ಲವೆ?**

ಹಬ್ಬಗಳನ್ನು ದೇವರ ಹೆಸರಿನಲ್ಲಿ ಆಚರಿಸಿದರೂ ಮನುಷ್ಯನು ತನ್ನ ಎಲ್ಲಾ ಕೆಲಸ ಕಾರ್ಯಗಳ ಜಂಜಾಟದಿಂದ ಆರಾಮಗೊಳ್ಳಲು, ನೆಮ್ಮದಿಗಾಗಿ, ಸಂತೋಷಕ್ಕಾಗಿ, ತಮ್ಮ ಅಭಿವೃದ್ಧಿಗಾಗಿ, ತಮ್ಮ ಹಿತೈಷಿಗಳ, ಬಂಧು – ಬಾಂಧವರ ಒಳಿತಿಗಾಗಿ, ನಾಡ ರಕ್ಷಣೆಗಾಗಿ ಮನೆ – ಮನೆಯಿಂದ ಹಿಡಿದು ರಾಜ್ಯ – ರಾಷ್ಟ್ರಗಳ ಮಟ್ಟದಲ್ಲೂ ಹಬ್ಬವನ್ನು ಆಚರಿಸಲಾಗುತ್ತಿದೆ.

ಹಬ್ಬಗಳ ಆಚರಣೆಯಿಂದ ಜನರ ನಡುವೆ ಸೌಹಾರ್ದಯುತ ಸಂಬಂಧ, ಪ್ರೀತಿ – ಪ್ರೇಮ, ಶಾಂತಿ, ಸಹನೆ, ಸಹಕಾರ, ಮಾನವೀಯ ಗುಣಗಳು ದೇಶಭಕ್ತಿ, ದೇಶಪ್ರೇಮ ಬೆಳೆಯಲು ಸಹಕಾರಿಯಾಗಿದೆ. ಮನೆ – ಮನೆಯಲ್ಲಿ ಆಚರಿಸುವ ಯುಗಾದಿಯಿಂದ ಹಿಡಿದು ಹೋಳಿ ಹಬ್ಬದವರೆಗೆ ತನ್ನದೇ ಆದ ತಯಾರಿ, ಸಡಗರ, ಸಂಭ್ರಮ ಎಲ್ಲವೂ ಭಿನ್ನ ಭಿನ್ನವಾಗಿರುತ್ತದೆ.

ಹಬ್ಬಗಳನ್ನು ಆಚರಿಸುವ ಮುಖ್ಯ ಉದ್ದೇಶವೆಂದರೆ ಆಯಾ ವರ್ಗದವರ ದೇವರನ್ನು ನೆನೆಯುವುದೇ ಆಗಿದೆ. ಪ್ರಕೃತಿಯಲ್ಲಿ ಕಾಣಬರುವ ನೆಲ, ಮುಗಿಲು, ಮಳೆ, ಬೆಳೆ, ಕಲ್ಲು, ಮರ ಗಿಡ, ಸೂರ್ಯ, ಚಂದ್ರ ಎಲ್ಲವೂ ಜನರ ಪಾಲಿಗೆ ದೇವರೇ. ಮಳೆ ಬಂದರೆ ಒಂದು ಪೂಜೆ. ಮಳೆ ಬಾರದೇ ಇದ್ದರೆ ಇನ್ನೊಂದು ರೀತಿಯ ಪೂಜೆ. ಬೇಸಿಗೆಯಲ್ಲೊಂದು, ಚಳಿಗಾಲದಲ್ಲೊಂದು. ಹೀಗೆ ಆಯಾ ಕಾಲ ಋತುಮಾನಕ್ಕನುಗುಣವಾಗಿ ಒಂದೊಂದು ಪೂಜೆ – ಪುರಸ್ಕಾರವನ್ನು ಆಚರಿಸುತ್ತಾ ತಮ್ಮ ಸುಖ – ಸಂತೋಷವನ್ನು ವ್ಯಕ್ತಪಡಿಸುತ್ತಾ ಬಂದಿದ್ದಾರೆ. ಇಂದು ಇಂತಹ ಪರಂಪರೆ ಹಬ್ಬ ಹರಿದಿನಗಳಾಗಿ ಮೂರ್ತ ಸ್ವರೂಪವನ್ನು ಪಡೆದಿದೆ.

ಹಬ್ಬಗಳು ಆಯಾ ಜನಾಂಗದ ಸಂಸ್ಕೃತಿಯ ರೂಪ – ರೇಷೆಗಳನ್ನು ಪ್ರದರ್ಶಿಸುತ್ತವೆ. ಕೇವಲ ನಂಬಿಕೆಗಳನ್ನು ಕಾರ್ಯರೂಪಕ್ಕೆ ತರುವ ಪ್ರತಿರೂಪಗಳಾಗಿರದೆ, ಸಾಮೂಹಿಕವಾಗಿ, ನೆರೆಹೊರೆ, ಬಂಧು ಬಳಗವೆಲ್ಲಾ ಸೇರಿ ಆಚರಿಸುವುದರಿಂದ ಸಾಮಾಜಿಕ ಏಕತೆಯನ್ನು ಮತ್ತು ಬಾಂಧವ್ಯದ ಬೆಸುಗೆಯನ್ನು

ಭದ್ರಪಡಿಸುವ, ಸಾಮರಸ್ಯವನ್ನು ಬೆಳೆಸುವ ಸಾಧನಗಳಾಗಿವೆ.

ಪ್ರಾಚೀನ ಕಾಲದಲ್ಲೇ ಸಾಂಪ್ರದಾಯಕವಾಗಿ ದೇವರಲ್ಲಿ ಇಟ್ಟಿದ್ದ ಭಯ-ಭಕ್ತಿ, ನಂಬಿಕೆ, ಹೋಮ, ಜಪ-ತಪ, ಹರಕೆ, ಪಾಪ-ಪುಣ್ಯ, ಧರ್ಮ-ಕರ್ಮ, ಸ್ವರ್ಗ-ನರಕ ಮುಂತಾದ ಧಾರ್ಮಿಕ ಮೌಲ್ಯಗಳೇ ಜನಪದರ ಸಂಸ್ಕೃತಿಯನ್ನು ಪ್ರತಿನಿಧಿಸುವ ಮೈಲುಗಲ್ಲಾಗಿದೆ. ಇದು ಮಾನವ ಜೀವನದ ಪ್ರತಿ ಹಂತದಲ್ಲೂ ಮಹತ್ತರವಾದ ಪರಿಣಾಮವನ್ನುಂಟು ಮಾಡಿದೆ.

ಹಳ್ಳಿಯ ಜನರು ಕರ್ಮಜೀವಿಗಳು. ಹೊತ್ತು ಮೂಡಿ ಅದು ಮುಳುಗುವವರೆಗೂ ಹೊಲಗದ್ದೆಗಳಲ್ಲಿ ಬೆವರು ಸುರಿಸಿ ದುಡಿಯುವುದೇ ಅವರ ಕಾಯಕವಾಗಿದೆ. ಹಗಲಿರುಳೂ ದುಡಿದು ದಣಿದ ದೇಹಕ್ಕೆ ಮನರಂಜನೆ ಬೇಡವೆ? ಪಟ್ಟಣದಲ್ಲಿ ವಾಸಿಸುವ ನಾಗರಿಕರಿಗೆ ಈ ತರಹದ ಜಂಜಾಟವೇ ಇಲ್ಲ. ಮನಸ್ಸಿಗೆ ಬೇಸರವಾದಾಗ ಸಿನಿಮಾ ಮಂದಿರಗಳುಂಟು. ರುಚಿಯನ್ನು ಬಯಸಿದಾಗ ಸ್ಟಾರ್ ಹೋಟೆಲ್‌ಗಳುಂಟು. ಹಳ್ಳಿಗರಿಗೆ ಇದಾವುದು ಇಲ್ಲದಿರುವುದರಿಂದ ಅವರಿಗೆ ದುಡಿತ ಒಂದೇ ಗೊತ್ತು. ಹಾಗಾಗಿ ತಮ್ಮ ಮನಸ್ಸಿಗೆ ತೃಪ್ತಿ ತಂದುಕೊಳ್ಳಲು ಇಂತಹ ಹಬ್ಬ ಹರಿದಿನಗಳನ್ನು ಸೃಷ್ಟಿಸಿಕೊಂಡಿರಬೇಕು.

ಹಬ್ಬಗಳಲ್ಲಿ ತಮ್ಮ ಮನೆಯವರು, ಬಂಧು-ಬಳಗದವರಷ್ಟೆ ಸೇರಿ ಆಚರಿಸುವ ಹಬ್ಬಗಳು ಹಾಗೂ ಊರಿಗೆ ಊರೇ ಸೇರಿಕೊಂಡು ಸಾಮೂಹಿಕವಾಗಿ ಆಚರಿಸುವ ಹಬ್ಬಗಳು ಎಂದು ವಿಭಾಗಿಸಬಹುದು. ಮನೆಯಲ್ಲೇ ಆಚರಿಸುವ ಹಬ್ಬಗಳಲ್ಲಿ ಮನೆ ಮಂದಿ, ಬಂಧು ಬಳಗ ಸೇರಿಕೊಂಡು ಮನೆಯ ಅಲಂಕಾರ, ಹೊಸಬಟ್ಟೆಯ ಪೋಷಾಕು, ಬಗೆಬಗೆಯ ತಿಂಡಿ-ತಿನಿಸು, ವಾರದಿಂದಲೇ ತಯಾರಿ, ಮನೆ ಯಜಮಾನನ ತರಾತುರಿಯ ಓಡಾಟ, ಮಕ್ಕಳ ಸಂಭ್ರಮ, ಅಮ್ಮನ ಮಡಿ ಮಡಿ ಜೊತೆಗೆ ಪಾಕ-ನಳಪಾಕದ ಅಡುಗೆಯ ಘಂ ಪರಿಮಳ, ಪಟಾಕಿ, ಕೇಕೆ, ನಗು-ಹಾಸ್ಯ. ಒಟ್ಟಿನಲ್ಲಿ ರಸಸಮಯದ ಸಡಗರದ ದಿನ. ಇಂತಹ ಕಾಲ ಹಿಂದೆ ಇತ್ತು. ಈಗ?!!

ಅಪ್ಪ-ಅಮ್ಮ ದೂರದೂರದ ಊರುಗಳಲ್ಲಿ ಉದ್ಯೋಗಿಗಳು. ಇರುವ ಒಂದೋ, ಎರಡೋ ಮಕ್ಕಳು ಇನ್ನಾವುದೋ ಊರುಗಳಲ್ಲಿ ಉನ್ನತ ಉದ್ಯೋಕ್ಕಾಗಿಯೇ ಅಣಿಯಾಗಲು ಪ್ರೈಮರಿ ಸ್ಕೂಲ್‌ಗೆ ಸೇರ್ಪಡೆ! ಮನೆಯಲ್ಲಿರುವ ಹಿರಿ ಅಜ್ಜ – ಅಜ್ಜಿಯರ ಸಡಗರ ಸಮಭ್ರಮವಿಲ್ಲದ ನೀರಸ ವಾತಾವರಣದ ಹಬ್ಬದ ದಿನಗಳು. ಇನ್ನು ಬಂಧು ಬಳಗವನ್ನು ಕೇಳಬೇಡಿ. ಈ ಮನೆಯಲ್ಲಿರುವ ಪರಿಸ್ಥಿತಿಯೇ ಆ ಮನೆಯಲ್ಲೂ. ಕೆಲಸ ಕಾರ್ಯದ ಒತ್ತಡ, ರಜೆಯ ಅಭಾವ, ನೆಂಟರಿಷ್ಟರು ಮನೆಗೆ ಬಂದು ಹೋಗುವ ಸಂಭ್ರಮ ಇಂದು ಯಾವುದೋ ಸಭೆ ಸಮಾರಂಭಕ್ಕೆ ಬಂದು ಹೋಗುವ ಅತಿಥಿಗಳಂತೆ! ಒಂದು ಕಪ್ ಕಾಫಿ – ಬಿಸ್ಕೆಟ್‌ಗಳಲ್ಲಿಯೇ ಮುಗಿದು ಹೋಗುವ ಉಪಚಾರವಾಗಿದೆ. ಪರಸ್ಪರ ಉಭಯ ಕುಶಲೋಪರಿ ಪ್ರೀತಿಯ ಮಾತು – ಸಂಬಂಧ, ಆಚಾರ – ವಿಚಾರಗಳಿಗೆಲ್ಲಾ ಸಂಪೂರ್ಣ ಬ್ರೇಕ್ ಕೊಟ್ಟಂತಾಗಿದೆ.

ಆದರೆ ಸಾಮೂಹಿಕವಾಗಿ ಆಚರಿಸುವ ಹಬ್ಬಗಳು ಸ್ವಲ್ಪ ಮಟ್ಟಿಗೆ ಇಂದು ಅರ್ಥಪೂರ್ಣವಾಗಿದೆ. ಏಕೆಂದರೆ ಊರಿಗೆ ಊರೇ ಸೇರುವ ಸಂದರ್ಭದಲ್ಲಿ ನಾಲ್ಕು ಗೋಡೆಯ ಮಧ್ಯೆ ಕುಳಿತು ಕಂಪ್ಯೂಟರ್ ಮುಂದೆ ಕೈಯಾಡಿಸುವ ಜನರು ಒಂದಿಷ್ಟು ಮನಸ್ಸಿಗೆ ಮನೋರಂಜನೆಯನ್ನು ಪಡೆಯುವ ಸಲುವಾಗಿ ಊರ ಹಬ್ಬ – ಜಾತ್ರೆಗಳಲ್ಲಿ ಒಂದೆರಡು ದಿನ ಪಾಲ್ಗೊಳ್ಳುತ್ತಾರೆ. ಕೆಲವೊಮ್ಮೆ ಒಂದು ವಾರತನಕ ನಡೆಯುವ ಹಬ್ಬಕ್ಕೆ ಇವರುಗಳು ಅಷ್ಟು ದಿನ ಬರುವಂತಿಲ್ಲ! ಬರುವುದೂ ಇಲ್ಲ. ಕಾರಣ ರಾಶಿಗಟ್ಟಲೇ ಮಿಗುವ ಕೆಲಸದ ಹೊರೆ! ಏನೇ ಇರಲಿ. ಇಲ್ಲಿ ಜಾತಿಮತ ಕುಲಗೋತ್ರ ಒಂದೂ ನೋಡದೆ, ಬಡವರು, ಶ್ರೀಮಂತರು, ಮಕ್ಕಳು – ಮರಿಗಳು ಪುರುಷರು, ಮಹಿಳೆಯರು ಎಲ್ಲಾ ಸೇರಿ ಆಚರಿಸುವ ಸಾಮೂಹಿಕ ಹಬ್ಬ ಹೆಚ್ಚು ಅರ್ಥಪೂರ್ಣವಾಗಿದೆ.

ಕರ್ನಾಟಕದ ಒಂದು ಪ್ರಾದೇಶಿಕ ಪಬ್ಬವಾದ ಕೊಡಗಿನ ಪುತ್ತರಿ ಹಬ್ಬ. ಪುತ್ತರಿ ಇವರ ಸುಗ್ಗಿಯ ಹಬ್ಬ. ರೋಹಿಣಿ ನಕ್ಷತ್ರದ ಪುಣ್ಣಿಮೆಯ ದಿನದಂದು ಆಚರಿಸುವ ಪಬ್ಬ. ಸಾಂಪ್ರದಾಯಿಕ ಹಬ್ಬದ ಆಚರಣೆಯೊಂದಿಗೆ ಗಾಳಿಯಲ್ಲಿ ಗುಂಡು ಹಾರಿಸುವುದು, ಹಾಲು – ಜೇನಿನ ಸೇವನೆ, ತಂಬಿಟ್ಟಿನ ಸೇವನೆ, ಹೊಸ ಉಡುಪುಗಳ ಧಾರಣೆ, ಗೀತ ಗಾಯನ, ಸಾಂಪ್ರದಾಯಿಕ ನೃತ್ಯ ಇವೆಲ್ಲವೂ ಈ ಹಬ್ಬದ ವಿಶೇಷಗಳು.

ಅಂತೆಯೇ ಕೊಡಗಿನ ವಿಶೇಷ ಪವಿತ್ರ ದಿನ 'ಕಾವೇರಿ ನದಿ' ಭೂಮಿಯ ಮೇಲೆ ಅವತರಿಸಿದ ದಿನ. 'ತುಲಾ ಸಂಕ್ರಮಣ'. ತಲಕಾವೇರಿಯಲ್ಲಿ ಪವಿತ್ರ ಕುಂಡದಲ್ಲಿ ತೀರ್ಥೋದ್ಭವ. ಆ ದಿನ ಸಾವಿರಾರು ಜನ ಭಕ್ತರು ಪವಿತ್ರ ಜಲದಲ್ಲಿ ಮೀಯುತ್ತಾರೆ. ತಮ್ಮ ತಮ್ಮ ಮನೆಗೂ ಕೊಂಡೊಯ್ಯುತ್ತಾರೆ. ಇಲ್ಲಿ ಜಾತಿ–ಭೇದ, ಕುಲ–ಗೋತ್ರದ ಮಾತೇ ಇಲ್ಲ. ಎಲ್ಲರೂ ಭಾಗಿಯಾಗುತ್ತಾರೆ.

ಹಿಂದೂ ಧರ್ಮದಲ್ಲಿ ಇಂತಹ ಅದೆಷ್ಟೋ ಹಬ್ಬ ಹರಿದಿನಗಳು ಆಚರಿಸಲ್ಪಡುತ್ತವೆ. ಒಟ್ಟಿನಲ್ಲಿ ಇಂದು ಜನತೆ ಒಂದುಗೂಡುವುದು ಹಬ್ಬದ ನೆಪದಲ್ಲಿ! ತನ್ನ ಕುಟುಂಬ, ಮನೆ ಸದಸ್ಯರು, ಬಂಧು–ಬಳಗ ಸೇರುವುದು ಇಂತಹ ಹಬ್ಬ ಹರಿದಿನಗಳಲ್ಲಿ. ಜಾತಿ–ಮತ, ಕುಲ–ಗೋತ್ರವೆನ್ನುವ ಕರಿನೆರಳು ಮಾಯವಾಗುವುದು ಕೇವಲ ಸಾಮೂಹಿಕವಾಗಿ ಆಚರಿಸುವ ಹಬ್ಬಗಳಲ್ಲಿ. ಇಲ್ಲಾದರೂ ಒಂದುಗೂಡೋಣ ಬನ್ನಿ.

ತಿಳಿದವರಾಡಿದರು

- ಯಾವ ಹಣ್ಣೂ ಗಿಡದಿಂದ ದೂರ ಹೋಗಿ ಬೀಳುವುದಿಲ್ಲ.
- ಬೇರು ಕಹಿ ಫಲ ಮಾತ್ರ ಸಿಹಿ.
- ಹೆಚ್ಚು ಜನ ವಕೀಲರು ಚೆನ್ನಾಗಿ ಸಾಯುವುದಿಲ್ಲ. ಹೆಚ್ಚು ಜನ ಡಾಕ್ಟರರು ಚೆನ್ನಾಗಿ ಬದುಕುವುದಿಲ್ಲ
- ಕಾಣಿಕೆಗಳಿಂದ ಕಲ್ಲು ಕೂಡ ಕರಗುತ್ತದೆ.
- ಹಣ್ಣು ಕೊಡುವ ಮರದ ಕಡೆಗೇ ಜನರು ಯಾವಾಗಲೂ ಕಲ್ಲು ತೂರುತ್ತಾರೆ.
- ಹಾಲು ಕೊಡುವ ಹಸು ಒದೆಯುತ್ತಿದ್ದರೆ ಅದನ್ನು ಸಹಿಸಿಕೊಂಡಿರಬಹುದು.
- ಬೆಟ್ಟದ ತುದಿಗೆ ಹೋಗಿ ಮುಟ್ಟಬೇಕೆನ್ನುವವರು ಪ್ರತಿಯೊಂದು ಹೆಜ್ಜೆಯನ್ನು ತಳದಿಂದಲೇ ಏರಿಕೊಂಡು ಹೋಗಬೇಕೆಂಬುದನ್ನು ನೆನಪಿನಲ್ಲಿ ಇಟ್ಟುಕೊಳ್ಳಬೇಕು.
- ಜೀವನ ಒಳ್ಳೆಯದೋ ಕೆಟ್ಟದ್ದೋ ನಾವೆಲ್ಲರೂ ಬದುಕಲೇಬೇಕು.
- ತುಂಬಿದ ಮನೆ, ಬೆಳೆದ ಹೊಲ, ಸದಿಚ್ಛೆ ತುಂಬಿದ ಹೆಂಡತಿ.
- ನಾವು ಯಾವಾಗಲೂ ಬದುಕಬೇಕೆನ್ನುತ್ತೇವೆಯೇ ವಿನಃ ನಿಜವಾದ ಜೀವನವನ್ನು ಬದುಕುವುದೇ ಇಲ್ಲ.
- ಮನೆ ದೊಡ್ಡದಾದಷ್ಟೆ ಸಾರು ಹೆಚ್ಚು ನೀರಾಗಿರುತ್ತದೆ.
- ಸಮಯವೆಂಬ ಸಾಲವನ್ನು ಯಾರಿಂದಲೂ ತೀರಿಸಲಿಕ್ಕಾಗುವುದಿಲ್ಲ.
- ನಿರರ್ಥಕ ಜೀವನವನ್ನು ಬದುಕಿದವನು ಬದುಕಿರುವಾಗಲೇ ಸತ್ತಿರುತ್ತಾನೆ.
- ಜೀವನವೆಂದರೆ ನಮಗೆ ಗೊತ್ತಿಲ್ಲದ ಚಕ್ರವ್ಯೂಹದ ಕೋಟೆ.
- ಜೀವನದ ಉದ್ದೇಶ ಬದುಕುವುದಲ್ಲ ಚೆನ್ನಾಗಿ ಬದುಕುವುದು.
- ನಾಳೆ ಎಂಬುದನ್ನು ನೋಡಿದವರು ಯಾರಿದ್ದಾರೆ?
- ನಾವು ಎಷ್ಟು ದಿನ ಬದುಕಿರುತ್ತೇವೆ ಎನ್ನುವುದಲ್ಲ ಆದರೆ ಹೇಗೆ ಬದುಕಿರುತ್ತೇವೆ ಎನ್ನುವುದು ಮುಖ್ಯ.
- ಜೀವನವೆಂದರೆ ಒಳ್ಳೆಯ ಕಾರ್ಡುಗಳನ್ನು ಕೈಯಲ್ಲಿ ಹಿಡಿಯುವುದಲ್ಲ! ಆದರೆ ಕೈಯಲ್ಲಿರುವ ಕಾರ್ಡುಗಳಿಂದಲೇ ಚೆನ್ನಾಗಿ ಆಡುವುದು.

ಸಂಗ್ರಹ : **ವೀಣಾ ಎಚ್. ಎಲ್.**

ಆಧ್ಯಾತ್ಮ



✍ ಕಟ್ಟೆಮನೆ ಮಹಾಲಕ್ಷ್ಮಿರಾಜ್‌ಕುಮಾರ್
ಕಟ್ಟೆಮಾಡು

ಬಾಳಿನ ಯಶಸ್ಸು ಜೀವನದಿ ಗುರಿ ಏನು? ಅದನ್ನು ಸೇರುವ ದಾರಿ ಯಾವುದು? ಅದಕ್ಕಾಗಿ ದಾರಿಗ ಎಂತಿರಬೇಕು? ಎಂಬ ಸ್ಪಷ್ಟ ನಿಲುವಿನಲ್ಲಿ ಬಾಳಿನ ಯಶಸ್ಸು ಅಡಗಿದೆ. ಜೀವನದಲ್ಲಿ ಯಶಸ್ಸು ಗಳಿಸುವಲ್ಲಿ ಅನೇಕರು ಸೋಲಲೂ ಇವುಗಳ ಖಚಿತ ತಿಳಿವಿಲ್ಲದಿರುವುದೇ ಕಾರಣ. ಆ ದೇವರು ಯಾವಾಗಲೂ ವಿಶೇಷ ಕೃಪೆ ಹರಿಸುವುದು ನಮ್ಮಂತಿರುವವರಿಗೆ. ಕಂಪೆನಿಯ ಯಜಮಾನ ತನಗೆ ಬೇಕಾದಂತಹ ಕೆಲಸಗಾರರ ಆಯ್ಕೆಗಾಗಿ ಕೆಲಸಗಾರರಿಗೊಂದು ಪರೀಕ್ಷಾ ಅವಧಿಯನ್ನಿರಿಸಿ ಅವರ ವರ್ತನೆ ಸಾಮರ್ಥ್ಯಗಳನ್ನು ಪರಿಶೀಲಿಸಿದಂತೆ ಆ ದೇವರು ವಿಶೇಷ ಕೃಪೆಹರಿಸಲು ನಮ್ಮಂತಿರುವವರ ಆಯ್ಕೆಗಾಗಿ ಜೀವನದ ಸದಾವಕಾಶವನ್ನು ಕರುಣಿಸಿ ವ್ಯಕ್ತಿಯ ವರ್ತನೆಯನ್ನು ಅವಲೋಕಿಸುತ್ತಲೇ ಇರುತ್ತಾಲೆ. ಕನಸುಗಳ ಮೂಲಕವೂ, ಕಷ್ಟ ನಷ್ಟಗಳ ಮೂಲಕವೂ ಆ ಬಗ್ಗೆ ಜಾಗೃತಿ ಹುಟ್ಟಿಸುತ್ತಲೇ ಇರುತ್ತಾನೆ. ಆ ದೇವರು ಮೆಚ್ಚುವಂಥ ವರ್ತನೆ ನಮ್ಮದಾದಲ್ಲಿ ಮಾತ್ರ ಆ ದೇವರ ಕೃಪೆ, ಆನಂದ, ಶಾಂತಿ, ನೆಮ್ಮದಿಗಳ ರೂಪದಲ್ಲಿ ನಮಗೆ ದೊರೆಯುತ್ತದೆ. ಹೀಗೆ ದೇವರೊಲುಮೆ ಗಳಿಸಿ ಆ ದೇವರ ಸಾಕ್ಷಾತ್ಕಾರ ಪಡೆದು ತನ್ಮೂಲಕ ಅಕ್ಷಯ, ಆನಂದ, ಶಾಂತಿ ನೆಮ್ಮದಿಗಳ ಪ್ರಾಪ್ತಿಯೇ ಎಲ್ಲರ ಜೀವನದ ಗುರಿ. ದೇವರು ಮೆಚ್ಚುವಂತಹ "ಪ್ರೀತಿ, ತಾಳ್ಮೆ, ಕ್ಷಮೆ, ಕರ್ತವ್ಯಪರತೆ, ನಿಸ್ವಾರ್ಥತೆ, ತ್ಯಾಗ ಮತ್ತು ಸೇವೆ ಭಗವರ್ಪಣ ಭಾವಗಳನ್ನು ಮೈಗೂಢಿಸಿಕೊಳ್ಳುವುದೇ ಎಲ್ಲರ ಬಾಳಿನ ಗುರಿಯಾಗಬೇಕು".

ಎಲ್ಲರಲ್ಲೂ ದೇವರಿರುವುದರಿಂದ ಎಲ್ಲರೂ ಬೇಕು ಎಂಬ ಭಾವದಿಂದ ಪ್ರೀತಿ ಉಕ್ಕಬೇಕು. ದೇವರಿದ್ದು ಎಲ್ಲವನ್ನು ನೋಡುತ್ತಾ ಪರೀಕ್ಷಿಸುತ್ತಾನೆ. ಎಲ್ಲವೂ ಆತನಿಚ್ಛೆಯಂತೆ ಆಗುತ್ತದೆ ಎಂದು ಎಲ್ಲವನ್ನು ಸ್ವೀಕರಿಸುವ ತಾಳ್ಮೆ ಬೆಳೆಯಬೇಕು. ದೋಷ ದೌರ್ಬಲ್ಯಗಳೆನಿಸದೆ ಮುನ್ನುಗ್ಗುವ ಕ್ಷಮೆ ಮೈಗೂಡಬೇಕು. ಮಾಡುವ ಕೆಲಸವೇ ಪೂಜೆ ಎಂದು ನಿಷ್ಠೆಯಿಂದ ಚೆನ್ನಾಗಿ ಮಾಡುವ ಕರ್ತವ್ಯ ಪರತೆಯಿಂದ ಎಲ್ಲರ ಒಳಿತಿಗಾಗಿ ಹಿತಕ್ಕಾಗಿ ಎಂಬ ನಿಸ್ವಾರ್ಥತೆ ಇರಬೇಕು. ಇತರರಿಗೆ ಮಾಡುವ ಉಪಕಾರವು ಅವರೊಳಗಿನ ದೇವರಿಗೆ ಗೈಯ್ಯುವ ಸೇವೆಯಾಗಿರುತ್ತದೆ. ಹೀಗೆ ಮಾನವನು ದೇವಮಾನವನಾಗಿ ನರನು ಹರನಾಗಿ ಜೀವಶಿವ ಸೇವೆಗೈಯ್ಯುವುದೇ ಎಲ್ಲರ ಬಾಳಿನ ಗುರಿಯಾಗಬೇಕು. ಫಲ ಪುಷ್ಪ ಸಿಗಲು ಸಾರ ನೀರೆರೆದು ಗಿಡವನ್ನು ನಿತ್ಯವೂ ಪೋಷಿಷಬೇಕಾದಂತೆ ದಾರಿಗನಲ್ಲಿ ಈ ಎಲ್ಲಾ ಗುಣಗಳು ಕಂಗೊಳಿಸಲು ಆತ ನಿತ್ಯವೂ ಅನುಸರಿಸಬೇಕಾದ ಸಾಧನಾ ವಿಧಿ ವಿಧಾನಗಳಲ್ಲಿವೆ. ಇವೆಲ್ಲವೂ "ನಾನು" ಭಾವದ ಕಸವನ್ನು ದೂರ ಮಾಡಿ ದೈವೀಕತೆಯನ್ನು ವೃದ್ಧಿಸುವ ಮಾರ್ಗಗಳೆಂಬುದನ್ನು ಮರೆಯಬಾರದು. ಕತ್ತಲೆಯಲ್ಲಿ ದಾರಿ ತೋರಿ ಮುನ್ನಡೆಸುವ ಕರುಣಾಳು ಬೆಳಕಿನಂತೆ ಸದ್ವಿಚಾರಗಳು ವಿವೇಕವನ್ನು ಬೆಳಗಿಸಿ ಅಂತಃಶಕ್ತಿಯ ಬಾಳ ಯಾತ್ರೆಯಲ್ಲಿ ಮುನ್ನಡೆಸಬಲ್ಲದು. 'ಹನಿ ಹನಿ ಕೂಡಿ ಹಳ್ಳ, ತೆನೆ ತೆನೆ ಕೂಡಿ ಕಣಜ' ಆದಂತೆ ನಮ್ಮ ದಿನಚರಿ ಆ ದೇವರು ಮೆಚ್ಚುವಂಥಾದಲ್ಲಿ ನಮ್ಮ ಜೀವನವೇ ಪಾವನವಾಗಿ ದಿವ್ಯ ಕೃಪೆ ಭವ್ಯಯೋಗ ನಮ್ಮ ಪಾಲಿಗೆ ಒಲಿದು ಓಡೋಡಿ ಬರುವುದಂತೂ ಖಂಡಿತ.

ಹುತಾತ್ಮ ಅಪ್ಪಯ್ಯ ಗೌಡರ ಸ್ವಾತಂತ್ರ್ಯ ಸಂಗ್ರಾಮ



✍ ಪಾಲ್ತಾಡ್ ಗಣೇಶ್ ಚಿತ್ರಕುಮಾರ್
ಮಡಿಕೇರಿ

ಭಾರತೀಯರನ್ನು ದಾಸ್ಯದ ಸಂಕೋಲೆಯಲ್ಲಿ ಬಂಧಿಸಿದ್ದ ಆಂಗ್ಲರ ವಿರುದ್ಧ ಕ್ರಾಂತಿಯ ಕಿಡಿ ಸಿಡಿಸಿದ್ದ ಸುಬೇದಾರ ಗುಡ್ಡೆಮನೆ ಅಪ್ಪಯ್ಯ ಗೌಡರು ಹುತಾತ್ಮರಾಗಿ 174 ವರ್ಷಗಳು ಸಂದಿವೆ. ಕಾಲ ಗರ್ಭದಲ್ಲಿ ಮರೆಯಾಗಿದ್ದ ಅಪ್ಪಯ್ಯ ಗೌಡರು, ಅಶ್ವಾರೋಹಿ ಪುತ್ಥಳಿಯಾಗಿ ಕೊಡಗು ಜಿಲ್ಲೆಯ ಕೇಂದ್ರ ಸ್ಥಾನ ಮಡಿಕೇರಿಯಲ್ಲಿ ಅನಾವಾರಣಗೊಳ್ಳುತ್ತಿದ್ದಾರೆ. ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸದಲ್ಲಿ ದಾಖಲೆ ಬರೆದ ಮಹಾ ಪುರುಷ ಅಪ್ಪಯ್ಯ ಗೌಡರ ಕೀರ್ತಿ ಅಜರಾಮರವಾಗಿರಲಿ ಎಂಬುದು ಆಶಯ.

ಆಂಗ್ಲರ ಪ್ರಕಾರ 1857ರಲ್ಲಿ ಭಾರತೀಯರಿಂದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ನಡೆದಿತ್ತು. ವಾಸ್ತವತೆಯಲ್ಲಿ ಅದಕ್ಕಿಂತ ಮೊದಲೇ 64 ಸ್ವಾತಂತ್ರ್ಯ ದಂಗೆಗಳು ನಡೆದಿದ್ದವು ಎನ್ನುವುದು ಐತಿಹಾಸಿಕ ಸತ್ಯ. ಕೊಡಗಿನ ಅರಸರಾಗಿದ್ದ ಲಿಂಗರಾಜೇಂದ್ರ ಒಡೆಯರ ಆಳ್ವಿಕೆಯಲ್ಲಿ ಜಮೇದಾರರಾಗಿದ್ದ ಅಪ್ಪಯ್ಯ ಗೌಡರು, ಚಿಕ್ಕ ವೀರರಾಜೇಂದ್ರ ಒಡೆಯರ ಆಳ್ವಿಕೆಯಲ್ಲಿ ಸುಬೇದಾರರಾಗಿ ಬಡ್ತಿ ಹೊಂದುತ್ತಾರೆ. ಪ್ರಜೆಗಳ ವಿಶ್ವಾಸಕ್ಕೆ ಪಾತ್ರರಾಗಿದ್ದ ಚಿಕ್ಕ ವೀರರಾಜೇಂದ್ರರ ಅಂತರಂಗದ ಬಳಗದಲ್ಲಿ ಗುಡ್ಡೆಮನೆ ಅಪ್ಪಯ್ಯ ಗೌಡರು ಕೂಡ ಸ್ಥಾನ ಪಡೆದಿದ್ದರು.

ಹಾಲೇರಿ ವಂಶಸ್ಥರಾಗಿದ್ದು ಕೊಡಗು ರಾಜ್ಯವನ್ನು ಆಳಿದ್ದ ದೊಡ್ಡ ವೀರರಾಜೇಂದ್ರ ಒಡೆಯರು ಹಾಗೂ ಲಿಂಗರಾಜೇಂದ್ರ ಒಡೆಯರು ಇಬ್ಬರೂ ಇಂಗ್ಲೀಷರ ಜೊತೆಯಲ್ಲಿ ಸ್ನೇಹಾಚಾರದಿಂದಿದ್ದವರು. ವ್ಯಾಪಾರದ ಉದ್ದೇಶದಿಂದ ಭಾರತಕ್ಕೆ ನುಸುಳಿದ್ದ ಬ್ರಿಟೀಷರು ತಮ್ಮ ಕುತಂತ್ರ ಬುದ್ಧಿಯಿಂದ ದೇಶದಲ್ಲಿ ಪ್ರಾಬಲ್ಯ ಸಾಧಿಸಿದ್ದರು. ಇಂತಹವರೊಂದಿಗೆ ಸ್ನೇಹಹಸ್ತ ಚಾಚುವುದು ಅಪಾಯಕ್ಕೆ ಆಹ್ವಾನ ನೀಡಿದಂತೆ ಎಂಬ ಪರಿಜ್ಞಾನ ಈ ಅರಸರುಗಳಿಗೆ ಇರಲಿಲ್ಲವೇನೋ ಎಂಬ ಅನುಮಾನ ಮೂಡುತ್ತದೆ.

ಲಿಂಗರಾಜೇಂದ್ರ ಒಡೆಯರ ಪುತ್ರ, ಚಿಕ್ಕ ವೀರರಾಜೇಂದ್ರ ಒಡೆಯರು ಅರಸರಾದ ನಂತರ ಹಿರಿಯರ ಇಚ್ಛೆಯಂತೆ ಆಂಗ್ಲರ ಜೊತೆಯಲ್ಲಿ ಆತ್ಮೀಯತೆಯಿಂದಿದ್ದರೂ ಕೂಡ, ತಮ್ಮ ಆಡಳಿತದಲ್ಲಿ ಇಂಗ್ಲೀಷರ ಹಸ್ತಕ್ಷೇಪವನ್ನು ವಿರೋಧಿಸುತ್ತಿದ್ದರು. ಹೀಗಾಗಿ ಸ್ನೇಹದಲ್ಲಿ ಬಿರುಕು ಮೂಡಿತ್ತು. ಚಿಕ್ಕ ವೀರರಾಜೇಂದ್ರರ ತಂದೆ ಲಿಂಗರಾಜೇಂದ್ರ ಒಡೆಯರಿಗೆ ಇಬ್ಬರು ಹೆಣ್ಣು ಮಕ್ಕಳಿದ್ದರು. ಬೋಂಡದ ಐಪಣ್ಣ ಎಂಬ ಯುವಕನನ್ನು ಲಿಂಗಾಯಿತನನ್ನಾಗಿ ಮತಾಂತರಗೊಳಿಸಿ, ಲಿಂಗಧಾರಣೆ ಮಾಡಿಸಿ, ಚೆನ್ನಬಸಪ್ಪನೆಂದು ಹೆಸರಿಟ್ಟು ಹಿರಿಯ ಪುತ್ರಿ ಮುದ್ದಮ್ಮಾಜಿಯನ್ನು ವಿವಾಹ ಮಾಡಿಕೊಡುತ್ತಾರೆ. ಕೆಲವೇ ಸಮಯದಲ್ಲಿ ಮುದ್ದಮ್ಮಾಜಿ ವಿಧಿವಶಳಾಗುತ್ತಾಳೆ. ನಂತರ ಎರಡನೇ ಮಗಳು ದೇವಮ್ಮಾಜಿ ಚೆನ್ನಬಸಪ್ಪನ ಮಡದಿಯಾಗುತ್ತಾಳೆ.

ಚೆನ್ನಬಸಪ್ಪ ಮತ್ತು ದೇವಮ್ಮಾಜಿಗೆ ತಾವೇ ಕೊಡಗಿನ ಸಿಂಹಾಸನ ಏರಬೇಕೆಂಬ ದುರಾಲೋಚನೆ ಮೂಡುತ್ತದೆ. ಇವರಿಬ್ಬರೂ ಆಂಗ್ಲರ ಜೊತೆ ಸೇರಿ, ಚಿಕ್ಕ ವೀರರಾಜೇಂದ್ರ ಒಡೆಯರ ವಿರುದ್ಧ ಪಿತೂರಿ ನಡೆಸುತ್ತಾರೆ. ಒಡೆಯರ ಅವಕೃಪೆಗೆ ಒಳಗಾಗಿದ್ದ ಕೆಲವರು ಪಿತೂರಿಗೆ ಸಹಕರಿಸುತ್ತಾರೆ. ಹಾಗೆಯೇ ಬೋಪು ದಿವಾನ, ದಿವಾನ ಲಕ್ಷ್ಮೀನಾರಾಯಣ ಮುಂತಾದವರು ಕೂಡ ಒಡೆಯರನ್ನು ಪದಚ್ಯುತಗೊಳಿಸಲು ಬ್ರಿಟೀಷರ ಜೊತೆಗೂಡಿ ಸಂಚು ರೂಪಿಸುತ್ತಾರೆ. ಪರಿಣಾಮವಾಗಿ ಪಿತೂರಿಗಾರರ ಸಹಕಾರ ಪಡೆದ ಆಂಗ್ಲರು 1837ರಲ್ಲಿ ಕೊಡಗಿನ ಮೇಲೆ ಅನಿರೀಕ್ಷಿತ ದಾಳಿ ನಡೆಸುತ್ತಾರೆ. ಬ್ರಿಟೀಷ್ ಸೇನೆಯ ನಾಯಕತ್ವ ವಹಿಸಿದ್ದ ಕರ್ನಲ್ ಫ್ರೇಜರ್

ಎಂಬವನು ಬೋಪು ದಿವಾನನ ನೆರವು ಪಡೆದು ಮಡಿಕೇರಿ ಕೋಟೆಯನ್ನು ವಶಕ್ಕೆ ತೆಗೆದುಕೊಳ್ಳುತ್ತಾನೆ. ಕಕ್ಕಬೆ ಸಮೀಪದ ನಾಲ್ಕುನಾಡು ಅರಮನೆಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದ ಚಿಕ್ಕ ವೀರರಾಜೇಂದ್ರ ಒಡೆಯರನ್ನು ಅಲ್ಲಿಯೇ ಬಂಧಿಸಿ, ಮಡಿಕೇರಿ ಅರಮನೆಯಲ್ಲಿ ಗೃಹ ಬಂಧನದಲ್ಲಿರಿಸುತ್ತಾರೆ. ನಂತರ ಕರ್ನಲ್ ಫ್ರೇಜರನು ಕೊಡಗಿನ ಆಡಳಿತ ಜವಾಬ್ದಾರಿಯನ್ನು ಕ್ಯಾಪ್ಟನ್ ಲೀಹಾರ್ಡಿಗೆ ವಹಿಸಿ ಮೈಸೂರಿಗೆ ಹಿಂತಿರುತ್ತಾನೆ.

ಲೀಹಾರ್ಡಿಗೆ ಕೊಡಗಿನ ಪ್ರಜೆಗಳು ದಂಗೆಯೇಳಬಹುದೆಂಬ ಭಯ ಕಾಡುತ್ತದೆ. ಬೋಪು ದಿವಾನನ ಸಲಹೆ ಮೇರೆಗೆ ಚಿಕ್ಕವೀರರಾಜೇಂದ್ರ ಒಡೆಯರು ಹಾಗೂ ರಾಣಿವಾಸ ಪರಿವಾರವನ್ನು ಯಾತ್ರೆಯ ನೆಪದಲ್ಲಿ ಕಾಶಿಗೆ ಸಾಗಿಸುತ್ತಾರೆ. ವಿಷಯ ತಿಳಿದ ಸುಬೇದಾರ ಅಪ್ಪಯ್ಯ ಗೌಡರು ಕ್ಷುದ್ಧರಾಗುತ್ತಾರೆ. ಅರಸರಿಗೆ ಆಪ್ತರಾಗಿದ್ದ ಪುಟ್ಟ ಬಸವರಾಜು, ಹುಲಿಕೊಂದ ನಂಜಯ್ಯ, ಚೆಟ್ಟಿಕುಡಿಯ, ಕುರ್ತು ಕುಡಿಯ, ಸೋಮಯ್ಯ, ಮಾಚಯ್ಯ, ಕೆದಂಬಾಡಿ ರಾಮಗೌಡ, ಅಣ್ಣಿ ಗೌಡ, ನಾಲ್ಕು ನಾಡಿನ ಉತ್ತು, ಶಾಂತಳ್ಳಿ ಮಲ್ಲಯ್ಯ ಮುಂತಾದವರ ಜೊತೆ ಸೇರಿ ಚರ್ಚೆ ನಡೆಸುತ್ತಾರೆ. ಹೇಗಾದರೂ ಮಾಡಿ ಒಡೆಯರನ್ನು ಬಂಧಮುಕ್ತರನ್ನಾಗಿಸಿ, ಕೊಡಗಿನ ಸಿಂಹಾಸನದಲ್ಲಿ ಕುಳ್ಳಿರಿಸಬೇಕೆಂಬ ನಿರ್ಧಾರಕ್ಕೆ ಬರುತ್ತಾರೆ. 1837ರ ಮಾರ್ಚ್ 5ನೇ ತಾರೀಕು ಶಿವರಾತ್ರಿಯ ದಿನ ಮಡಿಕೇರಿ ಕೋಟೆಗೆ ಮುತ್ತಿಗೆ ಹಾಕುವುದೆಂದು ಚರ್ಚಿಸುತ್ತಾರೆ.

ಇದೇ ಸಮಯದಲ್ಲಿ ಆಂಗ್ಲರ ಕಂದಾಯ ನೀತಿಯಿಂದ ಬೇಸತ್ತಿದ್ದ ದ.ಕ. ಜಿಲ್ಲೆಯ ರೈತರು ಆಂಗ್ಲರ ವಿರುದ್ಧ ದಂಗೆ ಏಳಲು ಸಮಯ ಕಾಯುತ್ತಿರುತ್ತಾರೆ. ಇದರಿಂದ ಉತ್ತೇಜಿತರಾದ ಅಪ್ಪಯ್ಯ ಗೌಡರ ನೇತೃತ್ವದ ಕ್ರಾಂತಿಕಾರಿಗಳು ಮಾರ್ಚ್ 5ನೇ ತಾರೀಕಿನ ಬದಲು ಏಪ್ರಿಲ್ 6ನೇ ತಾರೀಕು ಯುಗಾದಿಯ ದಿನ, ಏಕಕಾಲದಲ್ಲಿ ಅವಿಭಾಜಿತ ಕೊಡಗಿನ ಅಮರ ಸುಳ್ಯದಿಂದ ಯುದ್ಧ ಪ್ರಾರಂಭಿಸುವುದೆಂಬ ಬಗ್ಗೆ ಚರ್ಚಿಸುತ್ತಾರೆ. ನಂತರ ಈ ದಿನಾಂಕಕ್ಕಿಂತಲೂ 8 ದಿನ ಮೊದಲೇ ಯುದ್ಧ ಪ್ರಾರಂಭಿಸುವ ನಿರ್ಧಾರವಾಗುತ್ತದೆ. ಕ್ರಾಂತಿಕಾರಿಗಳು ಯುದ್ಧಕ್ಕಾಗಿ ಗುಟ್ಟಾಗಿ ಜನರನ್ನು ಸಂಘಟಿಸುವ ಕಾರ್ಯಕ್ಕೆ ಮುಂದಾಗುತ್ತಾರೆ. ಸ್ವಾತಂತ್ರ್ಯ ಸಂಗ್ರಾಮಕ್ಕೆ ಧುಮುಕುವಂತೆ ಪ್ರಚೋದಿಸುತ್ತಾರೆ. ಯುದ್ಧ ಸಿದ್ಧತೆಗಳಾಗುತ್ತದೆ. ಕೊಡಗಿನಲ್ಲಿರುವ ಕ್ರಾಂತಿಕಾರಿ ಸೈನ್ಯದ ದಂಡ ನಾಯಕರಾಗಿ ಗುಡ್ಡೆಮನೆ ಅಪ್ಪಯ್ಯ ಗೌಡರು ಆಯ್ಕೆಯಾಗುತ್ತಾರೆ.

ಏಕಕಾಲದಲ್ಲಿ ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇಂಗ್ಲೀಷರ ವಿರುದ್ಧ ದಂಗೆಯೇಳಲು ಸಕಲ ಸಿದ್ಧತೆಗಳಾಗುತ್ತದೆ. ಕಲ್ಯಾಣ ಸ್ವಾಮಿಯ ನೇತೃತ್ವದ ಕ್ರಾಂತಿಕಾರಿಗಳು ಮಂಗಳೂರಿನಲ್ಲಿ ಇಂಗ್ಲೀಷರ ಮೇಲೆ ಯುದ್ಧ ಹೂಡಿ ಸದೆಬಡಿಯುತ್ತಾರೆ. ವಿಜಯಶಾಲಿ ಕ್ರಾಂತಿಕಾರಿಗಳು ಸುಳ್ಯದ ಕಡೆ ಆಗಮಿಸುವಾಗ ಬ್ರಿಟೀಷರ ಸೇನೆಯ ಸುಬೇದಾರ ಮಾದಯ್ಯ ಎಂಬವನು ಸೇನೆಯೊಡನೆ ಕಲ್ಯಾಣ ಸ್ವಾಮಿ ನೇತೃತ್ವದ ಕ್ರಾಂತಿಕಾರಿಗಳ ಮೇಲೆ ಎರಗುತ್ತಾನೆ. ವಿಷಯ ತಿಳಿದ ಅಪ್ಪಯ್ಯ ಗೌಡರು ಉಗ್ರರಾಗಿ ಅಲ್ಲಿಗೆ ಧಾವಿಸುತ್ತಾರೆ. ಮಾದಯ್ಯನನ್ನು ಸಮರ್ಥವಾಗಿ ಎದುರಿಸಿ, ಬಂಧಿಸಿ ಸೆರೆಯಲ್ಲಿಡುತ್ತಾರೆ. ಮುಂದುವರಿದ ಅಪ್ಪಯ್ಯ ಗೌಡರ ನೇತೃತ್ವದ ಕ್ರಾಂತಿಕಾರಿಗಳು ಇಂಗ್ಲೀಷರ ಖಜಾನೆಗಳನ್ನು ಕೊಳ್ಳೆ ಹೊಡೆಯುತ್ತಾರೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕುವಂತೆ ಪ್ರಜೆಗಳನ್ನು ಹುರಿದುಂಬಿಸಲಾಗುತ್ತದೆ.

ಬ್ರಿಟೀಷ್ ಗುಲಾಮಗಿರಿಯನ್ನು ಒಪ್ಪಿಕೊಂಡ ಬೋಪು, ಪೊನ್ನಪ್ಪ ಹಾಗೂ ಲಕ್ಷ್ಮೀನಾರಾಯಣ ಇವರುಗಳು, ಬ್ರಿಟೀಷ್ ಸೇನೆಯಲ್ಲಿ ದಿವಾನರುಗಳಾಗಿ ಮುಂದುವರೆದು, ಕ್ರಾಂತಿಕಾರಿಗಳ ಸ್ವಾತಂತ್ರ್ಯ ಸಂಗ್ರಾಮವನ್ನು ಹತ್ತಿಕ್ಕಲು ಮುಂದಾಗುತ್ತಾರೆ. ಸುಬೇದಾರ ಅಪ್ಪಯ್ಯ ಗೌಡರು ಮತ್ತು ಬ್ರಿಟೀಷ್ ಕ್ಯಾಪ್ಟನ್ ಲೀಹಾರ್ಡಿ ಕಡೆಯ ಸುಬೇದಾರ ಅಪ್ಪಚ್ಚನ ಕಡೆಯ ಸೇನೆಗಳಿಗೆ ಬಿಸಿಲೆ ಘಾಟ್‌ನಲ್ಲಿ ಭೀಕರ ಯುದ್ಧ ನಡೆಯುತ್ತದೆ. ಯುದ್ಧದಲ್ಲಿ ವಿಜಯಶಾಲಿಯಾದ ಅಪ್ಪಯ್ಯ ಗೌಡ ಹಾಗೂ ಕ್ರಾಂತಿಕಾರಿಗಳು ವಿಜಯೋತ್ಸಾಹದಿಂದ ಗಡಿ ದಾಟಿ ಕೊಡಗನ್ನು ಪ್ರವೇಶಿಸುತ್ತಾರೆ.

ದಂಗೆಯ ಸೂಕ್ಷ್ಮ ಅರಿತಿದ್ದ ಕ್ಯಾಪ್ಟನ್ ಲೀಹಾರ್ಡಿಯ ಸೇನೆ ಅಪ್ಪಯ್ಯ ಗೌಡರ ಕ್ರಾಂತಿಕಾರಿ ಸೇನೆಯನ್ನು

ಎದುರಿಸುತ್ತದೆ. ಕ್ರಾಂತಿಕಾರಿಗಳು ಜೀವದ ಹಂಗು ತೊರೆದು ಹೋರಾಡುತ್ತಾರೆ. ನವ ನವೀನ ಮಾದರಿಯ ಶಸ್ತ್ರಾಸ್ತ್ರಗಳನ್ನು ಹೊಂದಿದ್ದ ಪರಂಗಿಗಳ ಸೈನ್ಯದೆದುರು, ಕತ್ತಿ, ದೊಣ್ಣೆ, ಕೋವಿಗಳೊಂದಿಗೆ ಹೋರಾಡುತ್ತಿದ್ದ ಕ್ರಾಂತಿಕಾರಿಗಳ ಆಟ ಹೆಚ್ಚು ಹೊತ್ತು ನಡೆಯುವುದಿಲ್ಲ. ರಕ್ತದ ಕೋಡಿ ಹರಿಯುತ್ತದೆ. ಸಾವು ನೋವುಗಳು ಮಿತಿ ಮೀರುತ್ತವೆ. ಅಳಿದುಳಿದ ಕ್ರಾಂತಿಕಾರಿಗಳು ಪಲಾಯನ ಮಾಡುತ್ತಾರೆ. ವೀರ ಸೇನಾನಿ ಅಪ್ಪಯ್ಯ ಗೌಡರು ತಪ್ಪಿಸಿಕೊಂಡು ಸುಬ್ರಹ್ಮಣ್ಯದತ್ತ ಪಲಾಯನ ಮಾಡುತ್ತಾರೆ. ಛಲ ಬಿಡದ ಅಪ್ಪಯ್ಯ ಗೌಡರು ಮತ್ತೆ ಹೋರಾಟಕ್ಕೆ ಕ್ರಾಂತಿಕಾರಿ ಯೋಧರನ್ನು ಸಂಘಟಿಸುವ ಕಾರ್ಯಕ್ಕೆ ಮುಂದಾಗುತ್ತಾರೆ. ಆದರೆ ಧಾರವಾಢ ಹಾಗೂ ಬೊಂಬಾಯಿ ಕಡೆಯಿಂದ ಬ್ರಿಟೀಷ್ ಸೇನೆ ಸಾಗರದಂತೆ ನುಗ್ಗಿ ಬರುತ್ತಿರುತ್ತದೆ. ಗುಲಾಮಗಿರಿ ಒಪ್ಪಿಕೊಂಡ ಬಹಳ ಮಂದಿ ನಮ್ಮವರು ಕೂಡ ಬ್ರಿಟೀಷ್ ಸೇನೆಗೆ ಸಹಕಾರ ನೀಡುತ್ತಾರೆ.

ಬ್ರಿಟೀಷರ ಯಾವುದೇ ಆರ್ಭಟ ಲೆಕ್ಕಿಸದೆ ಅಪ್ಪಯ್ಯ ಗೌಡ, ಚೆಟ್ಟಿಕುಡಿಯ, ಕುರ್ತುಕುಡಿಯ, ಶಾಂತಳ್ಳಿ ಮಲ್ಲಯ್ಯ ಮುಂತಾದವರು ಇಂಗ್ಲೀಷರನ್ನು ಸದೆ ಬಡಿಯಲು ಸಮಯ ಕಾಯುತ್ತಿರುತ್ತಾರೆ.

ಅಪ್ಪಯ್ಯ ಗೌಡರನ್ನು ಹೀಗೇ ಬಿಟ್ಟರೆ ತಮಗೆ ಕೇಡು ತಪ್ಪಿದ್ದಲ್ಲ ಎಂದು ಭಾವಿಸಿದ ಕ್ಯಾಪ್ಟನ್ ಲೀಹಾರ್ಡಿ, ಅಪ್ಪಯ್ಯ ಗೌಡರನ್ನು ಹಿಡಿದುಕೊಟ್ಟವರಿಗೆ ರೂ. ಹತ್ತು ಸಾವಿರ ಬಹುಮಾನ ಘೋಷಣೆ ಮಾಡುತ್ತಾನೆ. (174 ವರ್ಷಗಳ ಹಿಂದೆ ರೂ. ಹತ್ತು ಸಾವಿರದ ಬೆಲೆ ಇಂದಿಗೆ ಹೋಲಿಕೆ ಮಾಡಿದರೆ ಎಷ್ಟಾಗಬಹುದು?)

ಅಪ್ಪಯ್ಯ ಗೌಡರು ಕ್ರಾಂತಿಕಾರಿಗಳೊಂದಿಗೆ ಚರ್ಚಿಸುತ್ತಾರೆ. ಸುಮ್ಮನೆ ಸುತ್ತಾಡಿದರೆ ಅಪಾಯವನ್ನು ಆಹ್ವಾನಿಸಿದಂತೆಯೇ ಎಂದು ಭಾವಿಸಿದ ಕ್ರಾಂತಿಕಾರಿಗಳು ಅಳಿದುಳಿದ ಸೈನ್ಯದೊಂದಿಗೆ, ಆಂಗ್ಲರ ಮೇಲೆ ಅನಿರೀಕ್ಷಿತ ದಾಳಿ ಮಾಡುತ್ತಾರೆ. ಘನ ಘೋರ ಯುದ್ಧ ನಡೆಯುತ್ತದೆ. "ತಾಯಿ ನಾಡು ಸ್ವತಂತ್ರವಾಗಬೇಕು, ಹಂಗಿನ ಬದುಕು ಬೇಕಾಗಿಲ್ಲ, ಮಾಡು ಅಥವಾ ಮಡಿ" ಎಂಬ ನಿರ್ಧಾರದಿಂದ ಜೀವದ ಹಂಗು ತೊರೆದು ಯುದ್ಧ ಮಾಡುತ್ತಾರೆ. ಆದರೆ ಆಧುನಿಕ ಶಸ್ತ್ರಾಸ್ತ್ರಗಳನ್ನು ಹೊಂದಿದ್ದ ಆಂಗ್ಲರ ಮುಂದೆ ಕ್ರಾಂತಿಕಾರಿಗಳು ನಿತ್ರಾಣರಾಗುತ್ತಾರೆ. ನಮ್ಮ ಸೇನಾನಿಗಳು ಸೆರೆಯಾಗುತ್ತಾರೆ.

ಸೆರೆ ಸಿಕ್ಕಿದ ಚೆಟ್ಟಿ ಕುಡಿಯ, ಕುರ್ತು ಕುಡಿಯ, ಶಾಂತಳ್ಳಿ ಮಲ್ಲಯ್ಯ, ಪೆರಾಜೆಯ ಪಾರುಪತ್ತೆದಾರ ಕೃಷ್ಣಯ್ಯ, ನಾಲ್ಕು ನಾಡಿನ ಉತ್ತು ಇವರುಗಳಿಗೆ ಜೀವಾವಧಿ ಶಿಕ್ಷೆ ವಿಧಿಸಿ ಸಿಂಗಾಪುರ ಮತ್ತು ಕಲ್ಲಿಕೋಟೆಗೆ ಕಳುಹಿಸಲಾಗುತ್ತದೆ. ಆದರೆ ಕೊಡಗಿನ ವೀರಾಗ್ರಣಿ ಗುಡ್ಡೆಮನೆ ಅಪ್ಪಯ್ಯ ಗೌಡರನ್ನು ಕಬ್ಬಿಣದ ಸಂಕೋಲೆಗಳಿಂದ ಬಂಧಿಸಿ, ಸೆರೆಮನೆಗೆ ನೂಕುತ್ತಾರೆ. 1837ರ ಅಕ್ಟೋಬರ್ 31, ಕೊಡಗಿನ ಪಾಲಿಗೆ ದುರ್ದಿನ. ಸಾವಿರಾರು ಮಂದಿ ಕೊಡಗಿನ ಪ್ರಜೆಗಳನ್ನು ಹಾಗೂ ಅಧಿಕಾರಿಗಳನ್ನು ಮಡಿಕೇರಿ ಕೋಟೆ (ಕೊಡಗಿನ ಅರಸರ ಅರಮನೆ) ಮುಂಭಾಗದ ರಸ್ತೆಯ ಇಕ್ಕೆಲಗಳಲ್ಲಿ ಸಾಕ್ಷಿಯಾಗಿ ಸಾಲಾಗಿ ನಿಲ್ಲಿಸಿ ಕಾವೇರಿ ನೆಲದ ವೀರಾಗ್ರಣಿ ಅಪ್ಪಯ್ಯ ಗೌಡರನ್ನು ಸಂಕೋಲೆ ಸಮೇತ ಕಾಲ್ನಡಿಗೆಯಲ್ಲಿ ಕರೆದುಕೊಂಡು ಹೋಗಿ, ಕೋಟೆ ಮುಂಭಾಗದ ಎತ್ತರದ ಸ್ಥಳದಲ್ಲಿ ಬೆಳಿಗ್ಗೆ 10-00 ಗಂಟೆ ಸಮಯದಲ್ಲಿ ಅಮಾನುಷವಾಗಿ ಗಲ್ಲಿಗೇರಿಸುತ್ತಾರೆ. ನೆರೆದಿದ್ದ ಜನಸ್ತೋಮ ಅನಾಥವಾಗಿ ಕಣ್ಣೀರ್ಗರೆಯುತ್ತದೆ. ಕೊಡಗಿನ ಸ್ವಾತಂತ್ರ್ಯ ಸಂಗ್ರಾಮ ಅಂತ್ಯವಾಗುತ್ತದೆ.

"ಸ್ವಾತಂತ್ರ್ಯ ವ್ಯಾಮೋಹದಿಂದ ಕ್ರಾಂತಿಕಾರಿ ಹೋರಾಟ ನಡೆಸಿ, ಗಲ್ಲುಗಂಬವನ್ನೇರಿದ ದೇಶದ ಕೊಡಗಿನ ಪ್ರಥಮ ವೀರಾಗ್ರಣಿ ಗುಡ್ಡೆಮನೆ ಅಪ್ಪಯ್ಯ ಗೌಡರು ಎಂಬುದು ದಾಖಲೆ. ಅತ್ಯುನ್ನತ ಸರಕಾರಿ ಹುದ್ದೆಯನ್ನು ಧಿಕ್ಕರಿಸಿ ಸ್ವಾತಂತ್ರ್ಯ ಸಂಗ್ರಾಮಕ್ಕೆ ಧುಮುಕಿದ ಸಮರ ಕೇಸರಿ ಅಪ್ಪಯ್ಯ ಗೌಡರಿಗೆ ಅಪ್ಪಯ್ಯ ಗೌಡರೇ ಸಾಟಿ."

ಗುಡ್ಡೆಮನೆ ಅಪ್ಪಯ್ಯಗೌಡರ ಲಾವಣಿ ಪದ

ತಿರ್ಪತಿ ವೆಂಕಟರಮಣಂಗೆ ನಮಿಸಿ
ಲಾವಣಿ ಪದನ ನಾವ್ ಹಾಡ್‌ವೆ
ಶಾಂತಿ ಸೌಖ್ಯನ ಜನಕೆ ಕೊಡಲಿತ
ಸ್ವಾಮಿನ ನಾವು ಕೇಳಿಕಂಡವೆ
ದೇಶ ಪ್ರೇಮನ ಧೈರ್ಯಸಾಹ್ಸನ
ಮೆರ್ದ ನೇತಾರನ ಕಥೆ ಕೇಳಿ
ಕಾವೇರಿ ತಾಯಿನ ಸುರೂನ ಮಕ್ಕ
ಗೌಡ ಜನಾಂಗ ಬಾಂಧವರ್
ತಾಯಿನ ಮಮತೆನ ಪಡ್‌ಕಂಡ್ ಗೌಡ್‌ಗ
ದೇಶನ ಉಳ್ಸಿಕೆ ಹೋರಾಡ್ರೊ
ಬಲಮುರಿನಾಡ್‌ನ ಗುಡ್ಡೆಮನೆ ವೀರ
ಗೌಡರ ಹಿರಿಮೆನ ಎತ್ತಿಹಿಡ್ರೊ
ಸ್ವಾತಂತ್ರ್ಯ ಸಂಗ್ರಾಮಲಿ ಪೌರುಷ ತೋರ್ಸಿದ
ಗೌಡರ ಶೂರ ಅಪ್ಪಯ್ಯ
ಹತ್ತು ಕುಟುಂಬ ಹದ್ನೆಂಟ್ ಗೋತ್ರ
ಗುಡ್ಡೆಮನೆ ವಂಶಲಿ ಹುಟ್ಟಿದ್ರೊ
ಆಂಗ್ಲರ ಕೈಂದ ಕೊಡಗ್‌ನ ಬುಡಿಸಿಕೆ
ಮುಂದಾಳಾಗಿ ದುಡ್ದ ಧೀರ ಮಂಜ
ಕೊಡಗ್‌ನ-ಆಳ್‌ತಿದ್ದ ಚಿಕ್ಕವೀರರಾಜೇಂದ್ರ
ಮೋಸಲಿ ಆಂಗ್ಲರ್ಗ್ಗೆ ಸಿಕ್ಕಿಬೀತ್
ಬೋಪು ದಿವಾನ ಕುತಂತ್ರ ನಡ್ಸಿ ಅವು
ಕೊಡಗ್ ರಾಜ್ಯನ ಕಿತ್ತ್‌ಕೊಂಡೊ
ರಾಜನ ಹಿಡ್ದ್ ಕಾಶಿಗೆ ಸಾಗ್ಸಿದ್‌ಕೆ
ಗೌಡರ ಪಡೆಯೆಲ್ಲಾ ಒಂದಾದೋ
ಅಪ್ಪಯ್ಯ ಗೌಡರ್ ಕುರ್ತು ಚೆಟ್ಟಿ ಒಟ್ಟಿಗೆ
ಪುಟ್ಟ ಬಸವ, ನಂಜಯ್ಯನವು ಒಂದಾದೊ
ಕರಿಯಪ್ಪ ರಾಮ, ಸೋಮಯ್ಯ ಅಣ್ಣಿಗೌಡ
ಮಾದಯ್ಯ ಮಲ್ಲಯ್ಯ ಉತ್ತುಮನಿ ಸೇರ್ದ್ರೊ
ಭಾರತಾಂಬೆಗೆ ತಲೆಬಾಗಿನೆ ಬುಟ್ಟಿರ್
ಆಂಗ್ಲರ ದಾಸ್ಯಕೆ ಒಳಗಾಲೆ
ಎಂದ್ ಘರ್ಜಿಸಿ ಅಪ್ಪಯ್ಯಗೌಡರ್

ದೇಶ ರಕ್ಷಣೆಗೆ ಮುಂದಾದೊ
ಆಂಗ್ಲರ್ ವಿಧಿಸಿದ ಕಂದಾಯ ನೀತಿನ
ಅಪ್ಪಯ್ಯ ಗೌಡರ್ ನಿಷೇಧಿಸಿದೊ
ಅಮರ ಸುಳ್ಯಕೆ ಸ್ವಾತಂತ್ರ್ಯ ಕೊಡ್ಸಿ
ದೇಶ ಉಳ್ಸಿಕೆ ಗ್ಯಾನ ಮಾಡ್ರೊ
ಸಾವಿರ್ದ ಎಂಟ್‌ನೂರ ಮೂವತ್ತೇಳರ ಮಾರ್ಚ್ 6ರಂದ್
ಸುರ್ ಆತ್ ಅಮರ ಸುಳ್ಯ ದಂಗೆ ಸುರು ಆತ್
ಕೆದಂಬಾಡಿ ರಾಮೇಗೌಡರ್
ಅಡ್ಕಾರ್ ಅಣ್ಣಿಗೌಡರ್
ಹುಲಿಕೊಂದ ನಂಜಯ್ಯ ಕೈಜೋಡ್ಸಿದೊ
ನಾಕ್‌ಸಾವಿರ ಸೈನ್ಯನ ಕೂಡ್ಸಿ
ಮಡಿಕೇರಿ ಕೋಟೆಗೆ ಮುಖ ಮಾಡ್ರೊ
ತಲೇನ ಎತ್ತಿ ಅಪ್ಪಯ್ಯಗೌಡರ್
ವೀರತನಲಿ ಹೋರಾಡ್ರೊ...
ಬೋಪು ದಿವಾನನ ಕುತಂತ್ರಕೆ ಬಲಿಯಾತ್
ಗೌಡರ ಒಂದ್ ಧೀರ ಕುಡಿ
ಹನ್ನೊಂದ್ ದಿನಗ ಜೈಲ್ ಶಿಕ್ಷೆನ
ಅನುಭವಿಸಿದ್ರೊ ಅಪ್ಪಯ್ಯ
ಮಡಿಕೇರಿ ಕೋಟೆಲಿ ಸಂಸಾರನ ಕರ್‌ಸಿ
ಫಾಸಿ ಶಿಕ್ಷೆಗೆ ಗುರಿಮಾಡ್‌ದೊ
ಸಿಂಹದ ಮರಿನ ಕಳ್‌ಕಂಡ್
ಗೌಡ್‌ಗ ಭಾರೀ ಬ್ಯಾನೆಗೆ ಒಳಗಾದೋ....
ಸ್ವಾತಂತ್ರ್ಯ ಕೇಸರಿ ಅಪ್ಪಯ್ಯಗೌಡರ್
ಅಮರರಾದೋ ಚರಿತೇಲಿ...
ಅಮರರಾದೋ ಚರಿತೇಲಿ...
ಅಮರರಾದೋ ಚರಿತೇಲಿ...

ರಚನೆ : ಕರ್ಣಯ್ಯನ ಕೃಷಿಕ ಮುಂದಣ್ಣ
ಪ್ರಥಮ ಪಿ.ಯು.ಸಿ. (ಪಿ.ಸಿ.ಎಂ.ಬಿ)
ಸಂತ ಜೋಸೆಫರ ಪದವಿ ಪೂರ್ವ ಕಾಲೇಜು
ಮಡಿಕೇರಿ

ನಾನು ಶಿಕ್ಷಿತನಾದ ಕಥೆ

ನಾನು ಕಣ್ಣು ಬಿಟ್ಟ ಗಳಿಗೆಯಿಂದ
ಸೂರ್ಯೋದಯ ನೋಡಿದೆ
ಬಿಟ್ಟ ಕಣ್ಣ ಬಿಟ್ಟುಕೊಂಡು
ಮಲೆಕಾಡನು ಹೀರಿದೆ

ಸುಳಿವ ಗಾಳಿ ಹರಿವ ನೀರು
ಸುತ್ತ ದಳ ಬಿರಿದ ಹೂವುಗಳು
ಉಲಿವ ಹಕ್ಕಿ ನಲಿವ ನವಿಲ
ಪ್ರಾಣಲೋಕ ಬೆರಗುಗಳು

ಆಟವಾಡಿ ಮಾತು ಕಲಿತೆ
ತುಂಟತನವ ಮಾಡಿದೆ

"ಬರಿಯ ಆಟ 'ಪಾಠವಿಲ್ಲ'
ಇರುವನೆ ಹಾಳಾಗದೆ"
ಎಂದು ಗದರಿ ನನ್ನ ಅಟ್ಟಿದರು ಶಾಲೆಗೆ

ಅ ಆ ಮೊದಲುಗೊಂಡು
ಅಕ್ಷರಗಳ ಕಲಿಸಿದರು.
ಸಮಸ್ತ ವಾಕ್ಯ ಸಂಧಿ ರಚನೆ
ವ್ಯಾಕರಣಗಳ ಅರೆದರು.

ಕಲಿತೆನೆಲ್ಲ ನಿಷ್ಠೆಯಿಂದ
ಬುಕ್ಕನೆಲ್ಲ ಓದಲು
ಬಿ.ಎ. ಓದಿ ಎಂ.ಎ. ಮುಗಿಸಿ
ಬೃಹತ್ ಗ್ರಂಥ ಅರೆದು ಕುಡಿದೆ
ಅಂತಃ ಚಕ್ಷು ತೆರೆಯಲು!

'ವಿದ್ವಾಂಸ'ನೆಂದು ಈಗ ಹೆಸರು
ಕಳೆದುಕೊಂಡೆನೇನು ಎಂದು
ಯಾರೊಬ್ಬರೂ ತಿಳಿಯರು
ಭಾಗ್ಯವಂತ 'ನಾನೇ' ಎಂದು
ಕರುಬಿ ಬೀಗಿ ನುಡಿವರು

ಬಾಲ್ಯದಲ್ಲಿ ಬರಿಗಣ್ಣಿನಲ್ಲೆ
ಅದ್ಭುತಗಳ ನೋಡಿದೆ
ಕನಸುಗಳು ಕಟ್ಟಿಕೊಂಡು
ಸ್ವಚ್ಛಂದ ಹಾರಿಸಿದೆ.

ನೋಡಲಾರೆ ಬರಿಗಣ್ಣಲಿ
ಈಗ ಲೋಕ ಜಾಲವ
ಲೋಕ ಲೋಕ ದಾಟಲಾರೆ
ಕನಸಿನಿಂದ ಕನಸಿಗೆ


ಕಣ್ಣ ದೃಷ್ಟಿ ಕಳೆದುಕೊಂಡು
ತಡಕಿ ತಡಕಿ ನಡೆವೆನು
ಅದಕೆಂದೆ 'ಉಪನಯನ'
ಬೇಕೆಂದರು ವೈದ್ಯರು

ಸ್ವರ್ಣಕಟ್ಟು ಹಾಕಿಕೊಂಡು
ಕನ್ನಡಕವನು ಧರಿಸಿದೆ
ಮೂಲ ದೃಷ್ಟಿ ಹೋದರೇನು
ನನ್ನ ಈ ಕಣ್ಣಿಗೆ
ಕನ್ನಡಕವು ತೋರಿದಷ್ಟೆ
ನೋಡಿದರೆ ಸಾಲದೆ?!

ಶಿಕ್ಷಣದ ಫಲವನೆಲ್ಲ
ಎಡೆಬಿಡದೆ ಹೀಗೆ ಪಡೆದೆ
ಸೇರಿರುವೆನು ಈಗ ನಾನು
ಸುಶಿಕ್ಷಿತರ ಪಟ್ಟಿಗೆ

✍ ಯು. ಎಸ್. ಶ್ರೀಧರ ಆರಾಧ್ಯ
ಪ್ರಾಂಶುಪಾಲರು
ಶ್ರೀಮತಿ ಡಿ. ಚೆನ್ನಮ್ಮ ಪದವಿಪೂರ್ವ ಕಾಲೇಜು
ಮಾದಾಪುರ. ಕೊಡಗು ಜಿಲ್ಲೆ

ಗುಡ್ಡೆಮನೆ ಅಪ್ಪಯ್ಯ ಸಂಸ್ಮರಣೆ ಗೀತೆ



✍ ಬಿ. ಆರ್. ಉಮೇಶ ಬಿಳಿಮಲೆ
ಕಲ್ಮಕಾರು

ಭಾರತ ಮಾತೆ ... ಸಂಜಾತೆ
ಕಾವೇರಿ ನೀ ... ನಮ್ಮ ಮಾತೆ ॥ಪ॥

ಎನಿತು ಕುವರಿ ಕುವರರು ನಿಮ್ಮ
ಒಡಲೊಳು ಜನಿಸಿದ ಅರಿಯೆವು ಅಮ್ಮಾ
ಅಪ್ಪಯ್ಯಾ... ನೀ ಅವರಲ್ಲೊಬ್ಬ
ಅಪ್ಪಯ್ಯಾ ... ನೀ ಅವರಲ್ಲೊಬ್ಬ
ಭಾಗ್ಯದ ಪಡೆದೇ ಈ ದಿನದಿ ॥ಪ॥

ಕೊಡಗಿನ ವೀರಾಗ್ರಣಿಯೆನಿಸಿದ
ತಿಮ್ಮಯ್ಯ ಕಾರ್ಯಪ್ಪ ಸೋದರ ಸ್ಥಾನದಿ
ಸರಿ ... ಸಾಲಲಿ ನಿಲ್ವ ಅರ್ಹತೆ ಪಡೆದೇ

ಪಡೆದೆವಯ್ಯಾ ನಿಮ್ಮಯ ಸ್ಫೂರ್ತಿ
ದಿನ ಮುಂಜಾವ ನೆನಪೇ ನಮ್ಮಾ
ಬಾಳಿನ ಬೆಳಕೇ ಆದಿರಿ ಎಮ್ಮಾ ॥ಪ॥

ಕೊಡಗಿನ ಐಸಿರಿ ಅಂದದ ಗಾಳಿಗೆ
ನಿಮ್ಮುಸಿರು ಸೇರೆ ಓ ... ಶ್ರೀಗಂಧ
ತನುವೂ ಮನವೂ ನಾಡಿನ ಒಳಿತಿಗೇ
ಅನುಕ್ಷಣ ತಾಳೆನು ... ಪರರ ಅತಿಕ್ರಮ

ಅಸ್ತ್ರಗಳಿಲ್ಲ ... ವಸ್ತ್ರಗಳಿಲ್ಲ
ಇರುವುದು ಮಾತ್ರ ತಾಯ್ನೆಲದ ಋಣ
ತಾಯ್ನೆಲದ ಗುಣ ...
ಹನಿ ಹನಿ ರಕುತದಿ ತುಂಬಿದೆ ಹರಿದಿದೆ
ಸ್ವಾತಂತ್ರ್ಯಾ ... ಮಣ್ಣಾ ಅಭಿಮಾನ ॥ಪ॥

ಮಾತೃಭೂಮಿಯ ವೀರ ಮಗನಾದೆ ನೀನು
ಸ್ವಾರ್ಥ ಚಿಂತನೆಗೆ ಅವಕಾಶವೆಲ್ಲಿ?


ವೀರ ನೀ ಸತಿ ಸುತಗೇ ಕರ್ತವ್ಯ ಬೋಧಿಸಿ
ನಾಡಿನಾ ಕರೆಗೇ ತನುವಾ ಅರ್ಪಿಸಿ
ಹೋರಾಟದೀ ನೀ ಛಲದ ಬಿಂಕನೆನಿಃ
ಪಡೆದೆ ಅಯ್ಯಾ ... ನೀ ಕಾಲ ಪುರುಷನೇ ಸೈ!

ಆದಿಯೋ ನೀ ನಮಗೆ
ಸ್ವಾತಂತ್ರ್ಯ ಅಪ್ಪಯ್ಯ
ಬೆಳಗಿಸೋ ಹಾದಿಯನು
ನಿ ನಮಗೆ ಅಪ್ಪಯ್ಯ

ದೇಶದಾ ಸ್ವಾತಂತ್ರ್ಯ ಶತಮಾನ ಪೂರ್ವದಿ
ಕಿಡಿಯನ್ನು ಹೊತ್ತಿಸೆ ... ತಾ ದಳ್ಳುರಿಯಾಗಿ
ಸಂದೇಶ ತಾನೇ ಮೇಘದಾ ತೆರದಿ
ಹನಿಯಿತೋ ಹರಿಯಿತೋ ಕಾವೇರಿ ಧಾರೆ...
ಉದಿಸಿತೋ ... ಉದಿಸಿತೋ ಸ್ವಾತಂತ್ರ್ಯ ಕಿರಣ
ಉದಿಸಿತೋ ... ಉದಿಸಿತೋ ಸ್ವಾತಂತ್ರ್ಯ ಕಿರಣ ॥ಪ॥



"ಹಿರಿಮೆ"



✍ ಕಡ್ಲೇರ ಆಶಾ ಧರ್ಮಪಾಲ್‌ಪ್ರಭು
ಮಡಿಕೇರಿ


ಬೆಟ್ಟದ ತಪ್ಪಲಿನ ಗುಡ್ಡಗಾಡಿನ
ಹಸಿರು ವನರಾಶಿಗಳ ಮಧ್ಯೆದಲ್ಲಿ
ಪ್ರಕೃತಿ ಸೌಂದರ್ಯದ ನಡುವೆ
ಸೂರ್ಯ ತೇಜಸ್ಸಿನಂತೆ ಆಯಿತು
"ನಿಮ್ಮಯ ಜನುಮ"!

ಹಳ್ಳಿಯ ಕೊಂಪೆಲಿ ಜನರ ಅಂಧಕಾರವ ಕಳೆದು
"ಅಪ್ಪಯ್ಯ ಗೌಡ" ಎಂಬ ನಾಮಾಂಕಿತದೊಡನೆ
ಬೆಳೆದಿರಿ ನೀವು
ಹುಟ್ಟಿದ ಮನೆಯಲ್ಲಿ ಅಳಲನ್ನು ಕಂಡರೂ
ಇರಲಿಲ್ಲ ನಿಮಗೆ ದಿಗಿಲು!

ಹೆಸರಿಗೆ ಹಳ್ಳಿಯ ಹೈದ ಆದರೂ
ಬ್ರಿಟಿಷರಿಗಿಂತಲೂ ಗಟ್ಟಿಗ ನೀವು
ಏಳು-ಬೀಳುಗಳಲ್ಲಿ ಧೈರ್ಯಗೆಡದೆ
ಹೊರಹೊಮ್ಮಿದ ಉತ್ಸಾಹದಲ್ಲಿ
ಕೆಚ್ಚೆದೆಯ ವೀರನಾಗಿ ಮೆರೆದಿರಿ ನೀವು!

ದೀಪದ ಬೆಳಕಂತೆ ಪ್ರಜ್ವಲಿಸಿ
ಶ್ರದ್ಧೆಯ ಸಾಧನೆ ಮಾಡಿ
ವೀರ ಪತಾಕೆಯ ಹಿಡಿದು
ಮುಂದಿನ ಪೀಳಿಗೆಯ
ದಾರಿದೀಪ ಆಗಿರುವಿರಿ!

ಗುಡ್ಡೆಮನೆ ಕುಟುಂಬದಲ್ಲಿ ಹೆಸರು ಮಾಡಿ
ಗೌಡ ಜನಾಂಗದ ಹೆಮ್ಮೆಯ ಮಗನಾಗಿ
ಕನ್ನಡ ಕುಲಕೋಟಿಗೆ ಹೆಸರುವಾಸಿಯಾಗಿ
ಕೊಡಗಿನ ಜನರಿಗೆ ಸಿಕ್ಕಿದೆ ಇಂದು
ನಿಮ್ಮನ್ನು ನೋಡೋ ಭಾಗ್ಯ
"ಕಂಚಿನ ಪುತ್ಥಳಿಯಲ್ಲಿ"


ಪ್ರಗತಿ ಸಾಧನೆಯಲ್ಲಿ
ದೇಶದಲ್ಲೇ
ಕರ್ನಾಟಕಕ್ಕೆ ಹಲವು
ಪ್ರಥಮಗಳ ಗರಿ
ಜನಪರ ಕಾಳಜಿಯ ಕರ್ನಾಟಕ ಸರ್ಕಾರವು ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗಾಗಿ ರೂಪಿಸಿದ ಯೋಜನೆಗಳ ಯಶಸ್ವೀ ಅನುಷ್ಠಾನದಿಂದಾಗಿ ರಾಜ್ಯವು ಇಂದು ದೇಶದಲ್ಲೇ ಪ್ರಗತಿಯ ಮುಂಚೂಣಿಯಲ್ಲಿದೆ.
ಶ್ರೀ ಡಿ.ವಿ. ಸದಾನಂದ ಗೌಡ
ಸನ್ಮಾನ್ಯ ಮುಖ್ಯಮಂತ್ರಿಗಳು
ಗಣರಾಜ್ಯೋತ್ಸವ 2011ರ ಪೆರೇಡ್‌ನಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿದ ವಾರ್ತಾ ಇಲಾಖೆಯ
ಸ್ತಬ್ಧ ಚಿತ್ರಕ್ಕೆ ರಾಷ್ಟ್ರೀಯ ಪುರಸ್ಕಾರ
ಕರ್ನಾಟಕ ವಾರ್ತೆ

ಸ್ವಾತಂತ್ರ್ಯ ಹೋರಾಟದಲ್ಲಿ "ದುರಾತ್ಮ ಆಂಗ್ಲರ ಗುಲಾಮಗಿರಿಗಿಂತ ವೀರ ಮರಣವೇ ಶೋಭಾಯಮಾನ" ಎಂದು ಘರ್ಜಿಸಿ, ಗಲ್ಲುಗಂಬವನ್ನೇರಿ ಅಮರರಾದ ಹುತಾತ್ಮ ಗುಡ್ಡೆಮನೆ ಅಪ್ಪಯ್ಯ ಗೌಡರ ಸವಿ ನೆನಪಿನಲ್ಲಿ ಬಿಡುಗಡೆಗೊಳ್ಳುತ್ತಿರುವ "ನಮನ" ವಿಶೇಷ ಸಂಚಿಕೆಗೆ ಶುಭಕಾಮನೆಗಳು



ಪೊನ್ನೆಟ್ಟಿ ಪೊನ್ನಪ್ಪ

ವಕೀಲರು

ಉಚ್ಛ ನ್ಯಾಯಾಲಯ, ಬೆಂಗಳೂರು

ಹಾಗೂ

ಶ್ರೀಮತಿ ಶಾಂತಿ ಪೊನ್ನಪ್ಪ

ಸಮಾಜ ಸೇವಕರು

ಮಕ್ಕಳಾದ :

ಸೌಮ್ಯ, ಶೃತಿ, ಸ್ಮಿತಾ

"ನಮನ" ಸ್ಮರಣ ಸಂಚಿಕೆಗೆ ಶುಭಾಶಯಗಳು



ಚೆಟ್ಟಿಮಾಡ ದಿ|| ಬಿದ್ದಪ್ಪ ಪೊನ್ನಮ್ಮ ದಂಪತಿಗಳ ಸವಿನೆನಪಿನಲ್ಲಿ







ಶ್ರೀಮತಿ ಕುಂಬುಗೌಡನ ಮುತ್ತಮ್ಮ ದೇವಯ್ಯ , ಉಳುವಾರನ ಶ್ರೀಮತಿ ಅಮೃತಾ ಸುರೇಶ್

ಕುಂಬುಗೌಡನ ವಿನೋದ್ ದೇವಯ್ಯ

ಮೊಮ್ಮಕ್ಕಳು : ಉಳುವಾರನ ಆಕಾಂಕ್ಷ, ಕುಂಬುಗೌಡನ ಪರೀಕ್ಷಿತ್, ದೀಕ್ಷಿತ್ ಮತ್ತು ವಿಶ್ವಜಿತ್



"ನಮನ" ವಿಶೇಷ ಸಂಚಿಕೆಗೆ ಶುಭಾಶಯಗಳು

ಶ್ರೀ ಅಮೆ ಪಾಲಾಕ್ಷ
ಶ್ರೀಮತಿ ಚಂದ್ರಮ್ಮ ಪಾಲಾಕ್ಷ
ಶ್ರೀ ಅಮೆ ದೀಪಕ್ ಪಾಲಾಕ್ಷ
ಶ್ರೀಮತಿ ಸುಮನಾ ದೀಪಕ್


ಸ್ವಾತಂತ್ರ್ಯ ಹೋರಾಟಗಾರ ಹುತಾತ್ಮ ಸುಬೇದಾರ್ ಗುಡ್ಡೆಮನೆ ಅಪ್ಪಯ್ಯ ಗೌಡರ ಸ್ಮಾರಕ ಅನಾವರಣ ಮತ್ತು ಸ್ಮರಣ ಸಂಚಿಕೆ "ನಮನ" ಬಿಡುಗಡೆಯ ಸುಸಂದರ್ಭದಲ್ಲಿ ಶುಭಾಶಯಗಳನ್ನು ಕೋರುವ,



ಪ್ರೊ. ಕೂಡಕಂಡಿ ದಯಾನಂದ ಮತ್ತು ಶ್ರೀಮತಿ ಧನ್ಯ ದಯಾನಂದ

ತಾವೂರು ಗ್ರಾಮ, ಭಾಗಮಂಡಲ

ಸ್ವಾತಂತ್ರ್ಯ ಹೋರಾಟಗಾರ ಹುತಾತ್ಮ ಸುಬೇದಾರ್
ಗುಡ್ಡೆಮನೆ ಅಪ್ಪಯ್ಯ ಗೌಡರ ಸ್ಮಾರಕ ಅನಾವರಣ ಮತ್ತು ಸ್ಮರಣ ಸಂಚಿಕೆ
"ನಮನ" ಬಿಡುಗಡೆಯ ಸುಸಂದರ್ಭದಲ್ಲಿ ಶುಭಾಶಯಗಳನ್ನು ಕೋರುವ,




ಪೊನ್ನಚ್ಚನ ಮುದ್ದಪ್ಪ, ಪೊನ್ನಚ್ಚನ ಸುಶೀಲ ಮುದ್ದಪ್ಪ
ಪೊನ್ನಚ್ಚನ ಮೋಹನ್, ಪೊನ್ನಚ್ಚನ ಕವಿತಾ ಮೋಹನ್
ಪೊನ್ನಚ್ಚನ ತುಷಾರ್

ಕೆ. ಎಂ. ಪಿ. ಇಂಟರ್ ನ್ಯಾಷನಲ್ ಪಬ್ಲಿಕ್ ಸ್ಕೂಲ್
ತುಷಾರ್ ಆಪ್ಟಿಕಲ್ಸ್
ಎನ್. ಎನ್. ಎಸೋಸಿಯೇಟ್ಸ್ (ಇಂಜಿನಿಯರ್ಸ್ & ಬಿಲ್ಡರ್ಸ್)
ಪೊನ್ನಚ್ಚನ ಕನ್‌ಸ್ಟ್ರಕ್ಷನ್ ಟೀಮ್

ಕುಶಾಲನಗರ, ಸೋಮವಾರಪೇಟೆ ತಾಲೂಕು, ಕೊಡಗು

"ನಮನ" ಸ್ಮರಣ ಸಂಚಿಕೆಗೆ ಶುಭಾಶಯಗಳು



ಶ್ರೀ ಗುಡ್ಡೆಮನೆ ಪೂವಯ್ಯ ಮೊಣ್ಣಯ್ಯ
ಶ್ರೀಮತಿ ಶೋಭಾ ಮೊಣ್ಣಯ್ಯ

'ಶಿವಸದನ',19/4–1, ಮೊದಲನೇ ಮುಖ್ಯ ರಸ್ತೆ, 3ನೇ ತಿರುವು,
ಜಯಮಹಲ್ ಬಡಾವಣೆ, ಬೆಂಗಳೂರು, 560 046

"ನಮನ" ಸ್ಮರಣ ಸಂಚಿಕೆಗೆ ಶುಭಾಶಯಗಳು

ಗೌಡ ಸಮಾಜ, ವೀರಾಜಪೇಟೆ

ಆಡಳಿತ ಮಂಡಳಿ



ಕುಳಿತವರು – ಎಡದಿಂದ ಬಲಕ್ಕೆ ಕುಕ್ಕುನೂರು ಡಿ. ನಾಣಯ್ಯ, ಮುಕ್ಕಾಟಿರ ಎಸ್. ಗಣಪತಿ (ಖಜಾಂಜಿ), ಕೊರಿಯಾರು ಎಸ್. ಆನಂದ (ಉಪಾಧ್ಯಕ್ಷರು), ಮೂಡಗದ್ದೆ ಪಿ. ರಾಮಕೃಷ್ಣ (ಅಧ್ಯಕ್ಷರು), ಪೊಕ್ಕುಳೊಂಡ್ರ ಪಾರ್ವತಿ ಗಣಪತಿ, ಮುಕ್ಕಾಟಿರ ಯು. ಈರಪ್ಪ.

ನಿಂತವರು – ಎಡದಿಂದ ಬಲಕ್ಕೆ ಬಿಳಿಯನ ಕೃಷ್ಣಪ್ಪ, ಚಂಡೀರ ಎಂ. ದೇವರಾಜು, ಚೆಟ್ಟಿನೆರವನ ಪಿ. ಚಂದ್ರಶೇಖರ (ಕಾರ್ಯದರ್ಶಿ), ಗೌಡುದಾರೆ ಚೋಟು ಬಿದ್ದಪ್ಪ, ಚಂಡೀರ ಎ. ಸುಂದರ, ಬಾರಿಕೆ ಎಸ್. ಮನು (ಕಾರ್ಯದರ್ಶಿ), ಪೆರುಬಾಯಿ ಪುಟ್ಟುಸ್ವಾಮಿ, ತೆಕ್ಕಡೆ ಎಂ. ಗಣಪತಿ

ಸ್ವಾತಂತ್ರ್ಯ ಹೋರಾಟಗಾರ ಹುತಾತ್ಮ ಸುಬೇದಾರ್ ಗುಡ್ಡೆಮನೆ ಅಪ್ಪಯ್ಯ ಗೌಡರ ಸ್ಮಾರಕ ಅನಾವರಣ ಮತ್ತು ಸ್ಮರಣ ಸಂಚಿಕೆ "ನಮನ" ಬಿಡುಗಡೆಯ ಸುಸಂದರ್ಭದಲ್ಲಿ ಶುಭಾಶಯಗಳನ್ನು ಕೋರುವ.

ನಂ. 483ನೇ ಕೊಡಗು ಪ್ರಗತಿಪರ ಜೇನು ಕೃಷಿಕರ ಸಹಕಾರ ಸಂಘ ನಿಯಮಿತ, ಭಾಗಮಂಡಲ

BHAGAMANDALA

ಕೊಡಗು ಜಿಲ್ಲೆ –571247

[ಖಾದಿ ಗ್ರಾಮೋದ್ಯೋಗ ಮಂಡಳಿ ಹಾಗೂ ಆಯೋಗದ ಮಾನ್ಯತೆ ಹಾಗೂ ನೆರವು ಪಡೆದಿದೆ]



ಸಂಘದ ಆಡಳಿತ ಮಂಡಳಿ ಸದಸ್ಯರು

–: ಕುಳಿತವರು ಎಡದಿಂದ ಬಲಕ್ಕೆ :–

ಶ್ರೀ ಕೆ.ಯು. ಮೋಟಯ್ಯ, ಶ್ರೀ ಕೆ.ಯು.ಮೋಹನ್, ಶ್ರೀ ಹೆಚ್.ಜೆ. ಸತೀಶ್‌ಕುಮಾರ್, ಶ್ರೀ ಎನ್.ಎನ್. ಅಶೋಕ್ (ಕಾರ್ಯದರ್ಶಿ), ಶ್ರೀ ಕೆ.ಕೆ. ಗೋಪಾಲ, ಶ್ರೀ ಕೆ.ಆರ್.ದಾಸಪ್ಪ (ಉಪಾಧ್ಯಕ್ಷರು), ಶ್ರೀ ಪಿ.ಎ. ಲೋಕನಾಥ (ಅಧ್ಯಕ್ಷರು), ಶ್ರೀ ಎಂ.ಟಿ. ಹರಿಶ್ಚಂದ್ರ (ಜಿಲ್ಲಾ ಖಾ.ಗ್ರಾ.ಅಧಿಕಾರಿ) ಶ್ರೀ ಹೆಚ್.ಪಿ. ದಿನೇಶ್, ಶ್ರೀ ಎಂ.ಪಿ. ದೇವಪ್ಪ ನಾಯ್ಕ, ಶ್ರೀಮತಿ ಕೆ.ಈ.ಸೌಮ್ಯ. ನಿಂತವರು : ಸಂಘದ ಸಿಬ್ಬಂದಿ ವರ್ಗ

ಸಿ.ಬಿ.ಕೆ. ಬ್ರಾಂಡಿನ ಆಗ್‌ಮಾರ್ಕ್ ಜೇನನ್ನು ಸಗಟು ಹಾಗೂ ರಿಟೈಲ್ ದರದಲ್ಲಿ ಪಡೆಯಲು ಸಂಪರ್ಕಿಸಿ ಉತ್ತಮ ಗುಣಮಟ್ಟದ ಜೇನನ್ನು ಖರೀದಿಸಲು ಮತ್ತು ಜೇನುಕೃಷಿ ಕೈಗೊಳ್ಳಲು ಹಾಗೂ ಜೇನು ಕೃಷಿ ಉಪಕರಣಗಳಿಗೆ ಮುಖ್ಯ ಕಛೇರಿ ಹಾಗೂ ಶಾಖೆಗಳನ್ನು ಸಂಪರ್ಕಿಸಿ.

ಶಾಖೆಗಳು :– ಮುಖ್ಯ ಕಚೇರಿ : 08272–243224, 243442 ; ಬೆಂಗಳೂರು : 080–28385521, ಮೊ:9480084711 ; ಮಡಿಕೇರಿ : 08272–228761 ; ಸೋಮವಾರಪೇಟೆ : 08276–282724; ಸುವರ್ಣಭಂಡಾರ : 08272–243412

- ಪರಕೀಯ ಪರಾಗಸ್ಪರ್ಶದಿಂದ ಅಧಿಕ ಕೃಷಿ ಇಳುವರಿ ಪಡೆಯಲು, ಅಲ್ಪ ಅವಧಿಯಲ್ಲಿ ಕಡಿಮೆ ಬಂಡವಾಳದಲ್ಲಿ ಅಧಿಕ ಲಾಭ ಗಳಿಸಲು ಜೇನು ಕೃಷಿ ಉದ್ದಿಮೆಯನ್ನು ಇಂದೇ ಕೈಗೊಳ್ಳಿರಿ.
- ಜೇನು ಪೌಷ್ಟಿಕ ಹಾಗೂ ಪರಿಪೂರ್ಣ ಆಹಾರ, ಔಷಧೀಯ ಗುಣವಿರುವ ಜೇನನ್ನು ದಿನನಿತ್ಯ ಸೇವಿಸಿ ಆರೋಗ್ಯವನ್ನು ವೃದ್ಧಿಸಿಕೊಳ್ಳಿ.

ಶ್ರೀ ಕೆ.ಆರ್. ದಾಸಪ್ಪ	**ಶ್ರೀ ಎನ್.ಎನ್. ಅಶೋಕ**	**ಶ್ರೀ ಪಿ.ಎ. ಲೋಕನಾಥ**
ಉಪಾಧ್ಯಕ್ಷರು	ಕಾರ್ಯದರ್ಶಿ	ಅಧ್ಯಕ್ಷರು

ಹುತಾತ್ಮ ಸುಬೇದಾರ ಗುಡ್ಡೆಮನೆ ಅಪ್ಪಯ್ಯ ಗೌಡರ ಸವಿ ನೆನಪಿನಲ್ಲಿ

ಹೊರಬರುತ್ತಿರುವ "ನಮನ" ವಿಶೇಷಾಂಕಕ್ಕೆ ಶುಭ ಹಾರೈಸುವ







ಮೂಟೆಮನೆ ಭೀಮಯ್ಯ (ಡಾಲು)

ಶ್ರೀಮತಿ ನಿರ್ಮಲ ಭೀಮಯ್ಯ


ಕು. ಪ್ರಜ್ಞಾ ಭೀಮಯ್ಯ, B.Com., M.B.A.

ಶ್ರೀ ರಾಘವೇಂದ್ರ ಗ್ಲಾಸ್ ಅಂಡ್ ಪ್ಲೈವುಡ್ ಎಂಪೋರಿಯಂ

ಫಾತಿಮಾ ಪ್ರೌಢ ಶಾಲೆ ಸಮೀಪ, ಬಿ.ಎಂ. ರಸ್ತೆ, ಕುಶಾಲನಗರ

ಕೊಡಗಿನ ಗೌಡ ಜನಾಂಗದ ಹಿರಿಮೆಗೊಂದು ಗರಿ....

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬಲಿದಾನಗೈದ ಹುತಾತ್ಮ ಗುಡ್ಡೆಮನೆ ಅಪ್ಪಯ್ಯ ಗೌಡರ ಸ್ಮಾರಕದ ಪುತ್ಥಳಿ ಅನಾವರಣದ ಬಗ್ಗೆ "ನಮನ" ಎಂಬ ವಿಶೇಷ ಸಂಚಿಕೆಯೊಂದನ್ನು ಹೊರತರುತ್ತಿರುವುದು ಅರ್ಥಪೂರ್ಣ ಹಾಗೂ ನಾಡಿನ ಗೌಡ ಜನಾಂಗದ ಮನದಲ್ಲಿ ಚಿರಾಯುವಾಗಿರಲಿ ಎಂದು ಹಾರೈಸುವ,



ಎಡದಿಂದ ಬಲಕ್ಕೆ :-

ಎಸ್.ಕೆ. ಜಗದೀಶ್ M.B.A., H.R., **ಶ್ರೀಮತಿ ಚಿಣ್ಣಮ್ಮ ಕುಶಾಲಪ್ಪ ಗೌಡ, ಶೈಲಜಾ,** M.A., M.Ed., **ಎ.ಎಂ. ಮಯೂರ್ (ಚಿನ್ನು), ಸಬ್ಬಂಡ್ರ ಕುಶಾಲಪ್ಪ ಗೌಡ,** ನಿವೃತ್ತ ಸರ್ಕಲ್ ಇನ್ಸ್‌ಪೆಕ್ಟರ್ ಆಫ್ ಎಕ್ಸೈಜ್, **ಎಸ್.ಕೆ. ಚಿತ್ರಾ** M.F., A.M.,

ಮಕ್ಕಂದೂರು ಗ್ರಾಮ ಮತ್ತು ಅಂಚೆ

ಸಬ್ಬಂಡ್ರ ಹೌಸ್, ಮ್ಯಾನ್ಸ್ ಕಾಂಪೌಂಡ್ ಬಳಿ, ಮಡಿಕೇರಿ

ಮೊಬೈಲ್ : 9480731649 ದೂರವಾಣಿ : 08272 - 224803

With Best Compliments From



Dr. Guddemane Pooviah Chinnaiya

&

Smt. Subhadra Chinnaiya

485, 14th Main, 3rd Block
Koramangala, BANGALORE - 560034
Tel : 080-25532496

With Best Wishes to **"NAMANA"**



S. MURUGESH

Building Contractor
Near Gowda Samaja
Guddemane Appaiah Gowda Road
MADIKERI - 571 201

Mob : 9448504949



ಸ್ವಾತಂತ್ರ್ಯ ಹೋರಾಟದಲ್ಲಿ ದುರಾತ್ಮ ಆಂಗ್ಲರಿಂದ
ಗಲ್ಲುಗಂಬವನ್ನೇರಿದ ಕಾವೇರಿ ನಾಡಿನ

ಹೆಮ್ಮೆಯ ಸುಪುತ್ರ

"ಹುತಾತ್ಮ ಸುಬೇದಾರ ಅಪ್ಪಯ್ಯಗೌಡ"

ಇವರ ದಿವ್ಯ ಸ್ಮರಣೆಯಲ್ಲಿ "ನಮನ" ವಿಶೇಷ
ಸಂಚಿಕೆ ಪ್ರಕಟಗೊಳ್ಳುತ್ತಿರುವುದು
ಸಮಯೋಚಿತವಾಗಿದೆ. ಹುತಾತ್ಮ ಅಪ್ಪಯ್ಯಗೌಡರಿಗೆ
ತಲೆಬಾಗಿ ನಮಿಸುವುದರೊಂದಿಗೆ
"ನಮನ"
ವಿಶೇಷಾಂಕಕ್ಕೆ ಶುಭ ಹಾರೈಸುತ್ತಿದ್ದೇವೆ.

ತೇನನ ರಾಜೇಶ್
ಮತ್ತು
ಶ್ರೀಮತಿ ಅಶ್ವಿನಿ ರಾಜೇಶ್
ಬೆಂಗಳೂರು

"ನಮನ " ಸ್ಮರಣ ಸಂಚಿಕೆ ಶುಭಾಶಯಗಳು

TIN : 29520093622

Ph : 232221 (Off)
232806 (Sales Sec)

ಅಧ್ಯಕ್ಷರು ಹಾಗೂ ಆಡಳಿತ ಮಂಡಳಿ
ಕಾರ್ಯದರ್ಶಿ ಹಾಗೂ ಸಿಬ್ಬಂದಿ ವರ್ಗ

ಮಡಿಕೇರಿ ತಾಲ್ಲೂಕು ವ್ಯವಸಾಯೋತ್ಪನ್ನ ಸಹಕಾರ ಮಾರಾಟ ಮತ್ತು ಪರಿವರ್ತನಾ ಸಂಘ ನಿಯಮಿತ

ಮೂರ್ನಾಡು, ಮಡಿಕೇರಿ ತಾಲ್ಲೂಕು

MADIKERI TALUK AGRICULTURAL PRODUCE CO-OPERATIVE MARKETING & PROCESSING SOCIETY LTD.

MURNAD - 571 252, KODAGU

ಹುತಾತ್ಮ ಗುಡ್ಡೆಮನೆ ಅಪ್ಪಯ್ಯ ಗೌಡರ ಸವಿ ನೆನಪಿನಲ್ಲಿ
ಪ್ರಕಟಗೊಳ್ಳುತ್ತಿರುವ ವಿಶೇಷಾಂಕ "ನಮನ"ಕ್ಕೆ ಶುಭ ಹಾರೈಸುವ




ಗುಡ್ಡೆಮನೆ ಎಸ್. ಪ್ರಶಾಂತ್, ಶ್ರೀಮತಿ ಶೀತಲ್ ಪ್ರಶಾಂತ್
ಮಾ. ಗುಡ್ಡೆಮನೆ ಪಿ. ತನುಷ್

ಹುತಾತ್ಮ ಸುಬೇದಾರ ಗುಡ್ಡೆಮನೆ ಅಪ್ಪಯ್ಯ ಗೌಡರ ನೆನಪಿನಲ್ಲಿ ಹೊರ ಬರುತ್ತಿರುವ ಸ್ಮರಣ ಸಂಚಿಕೆ "ನಮನ" ಕ್ಕೆ ಶುಭಾಶಯಗಳನ್ನು ಕೋರುತ್ತೇವೆ.

ಗೌಡ ಸಮಾಜ, ಮೂರ್ನಾಡು (ರಿ.ನಂ. 25)

1.	ಚೆಟ್ಟಿಮಾಡ ಟಿ. ಕಾರ್ಯಪ್ಪ (ವಸಂತ)	-	ಅಧ್ಯಕ್ಷರು
2.	ತೆಕ್ಕಡೆ ಕೆ. ರಮೇಶ್	-	ಉಪಾಧ್ಯಕ್ಷರು
3.	ದಂಬೆಕೋಡಿ ಕೆ. ಸುಬ್ರಮಣಿ	-	ಖಜಾಂಚಿ
4.	ಬೈಲೋಳಿರ ಎಸ್. ವಿಶ್ವನಾಥ	-	ಕಾರ್ಯದರ್ಶಿ
5.	ಕೋರನ ಯು. ಪ್ರಕಾಶ್	-	ಡೈರೆಕ್ಟರ್
6.	ಚೆಟ್ಟಿಮಾಡ ಎಲ್. ಪ್ರಶಾಂತ್	-	,,
7.	ತೆಕ್ಕಡೆ ಎಸ್. ಪ್ರಸನ್ನ	-	,,
8.	ತೆಕ್ಕಡ ಎಸ್. ತಿಮ್ಮಯ್ಯ	-	,,
9.	ಬಿಳಿಯಾರ ಬಿ. ವಸಂತಕುಮಾರ್	-	,,
10.	ಚೀಯಂಡಿರ ಪಿ. ಪ್ರದೀಪ್	-	,,
11.	ಕುಯ್ಯಂತೋಡಿ ಡಿ. ಮಾದಪ್ಪ	-	,,
12.	ಉಳುವಾರನ ಎಸ್. ರಮೇಶ್	-	,,


ಹುತಾತ್ಮ ಸುಬೇದಾರ ಗುಡ್ಡೆಮನೆ ಅಪ್ಪಯ್ಯ ಗೌಡರ
ನೆನಪಿನಲ್ಲಿ ಹೊರ ಬರುತ್ತಿರುವ ಸ್ಮರಣ ಸಂಚಿಕೆ "ನಮನ" ಕ್ಕೆ
ಶುಭಾಶಯಗಳನ್ನು ಕೋರುತ್ತೇವೆ.



ಗುಡ್ಡೆಮನೆ ಚಂಗಪ್ಪ, ಎಂ.ಎ
ನಿವೃತ್ತ ಹಿರಿಯ ಬ್ಯಾಂಕ್ ವ್ಯವಸ್ಥಾಪಕರು
ಮತ್ತು
ಶ್ರೀಮತಿ ಲೀಲಾವತಿ ಚಂಗಪ್ಪ

"ಕಾಂಚನ ಗಂಗ" ಎಸ್ಟೇಟ್
ಮೂಡಿಗೆರೆ, ಚಿಕ್ಕಮಗಳೂರು
ದೂರವಾಣಿ : 08263-240260


"ನಮನ" ಸ್ಮರಣ ಸಂಚಿಕೆಗೆ ಶುಭಾಶಯಗಳು




ಗೌಡ ಸಮಾಜ (ರಿ), ಮರಗೋಡು

ಅಪ್ಪೆಯಂಡ್ರ ಮುತ್ತಪ್ಪ (ಖಜಾಂಚಿ), ಮಗೇರನ ಬೆಳ್ಯಪ್ಪ (ಕಾರ್ಯದರ್ಶಿ), ಬಿದ್ರುಪಣೆ ಎಸ್. ವಿಶ್ವನಾಥ,
ದೇವಜನ ನಾಣಯ್ಯ (ಅಧ್ಯಕ್ಷರು), ಕಟ್ಟೆಮನೆ ಕೆ. ಜನಾರ್ಧನ (ಉಪಾಧ್ಯಕ್ಷರು), ಮಣ್ಣಾಂಡ್ರ ಮುದ್ದಯ್ಯ, ಕರ್ಣಯ್ಯನ ಮೋಟಯ್ಯ
ನಿಂತವರು - ಉಳುವಾರನ ಹೀರಲಾಲ್, ಕಾನಡ್ಕ ಉಲ್ಲಾಸ, ಅಪ್ಪೆಯಂಡ್ರ ಸೋಮಣ್ಣ, ಇಟ್ಟಣಿಕೆ ನಾಗೇಶ,
ಶ್ರೀಮತಿ ಕಟ್ಟೆಮನೆ ಮಹಾಲಕ್ಷ್ಮಿ, ಶ್ರೀಮತಿ ಪೂಳಕಂಡ್ರ ಸರೋಜ, ಮಳ್ಳಂದಿರ ಶ್ರೀಮತಿ ಭವಾನಿ, ಪಾಣತ್ತಲೆ
ಆರ್. ಬಾಲಕೃಷ್ಣ, ತಳೂರು ಕುಶಾಲಪ್ಪ, ಇಟ್ಟಣಿಕೆ ಉಲ್ಲಾಸ, ಮಾಳಿಗೆಮನೆ ವೆಂಕಟೇಶ್, ಪಣೆಕ್ಕಂಡ್ರ ವಿಠಲ

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹುತಾತ್ಮರಾದ ಗುಡ್ಡೆಮನೆ ಅಪ್ಪಯ್ಯ ಗೌಡರ ಸವಿ ನೆನಪಿನಲ್ಲಿ ಹೊರಬರುತ್ತಿರುವ "ನಮನ" ವಿಶೇಷ ಸಂಚಿಕೆಗೆ ಶುಭ ಹಾರೈಸುವ









ಗುಡ್ಡೆಮನೆ ಎನ್. ಅಪ್ಪಯ್ಯ, ಶ್ರೀಮತಿ ಇಂದಿರಾ ಅಪ್ಪಯ್ಯ,
ಜಿ.ಎ. ಪ್ರದೀಪ್, ಜಿ.ಪಿ. ಹರ್ಷಿತಾ, ಡಾ. ಸೋನಿರಾಣಿ ಪ್ರದೀಪ್

ಕೊಡಗಿನ ಗೌಡ ಜನಾಂಗದ ಹಿರಿಮೆಗೊಂದು ಗರಿ....

*ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬಲಿದಾನಗೈದ ಹುತಾತ್ಮ ಗುಡ್ಡೆಮನೆ ಅಪ್ಪಯ್ಯ ಗೌಡರ ಸ್ಮಾರಕದ ಪುತ್ಥಳಿ ಅನಾವರಣದ ಬಗ್ಗೆ "**ನಮನ**" ಎಂಬ ವಿಶೇಷ ಸಂಚಿಕೆಯೊಂದನ್ನು ಹೊರತರುತ್ತಿರುವುದು ಅರ್ಥಪೂರ್ಣ ಹಾಗೂ ನಾಡಿನ ಗೌಡ ಜನಾಂಗದ ಮನದಲ್ಲಿ ಚಿರಾಯುವಾಗಿರಲಿ ಎಂದು ಹಾರೈಸುವ,*



ಹುತಾತ್ಮ ಗುಡ್ಡೆಮನೆ ಅಪ್ಪಯ್ಯ ಗೌಡರ ಸವಿ ನೆನಪಿನಲ್ಲಿ
ಹೊರಬರುತ್ತಿರುವ "ನಮನ" ವಿಶೇಷ ಸಂಚಿಕೆಗೆ ಶುಭಾಶಯಗಳು




ಗುಡ್ಡೆಮನೆ ಪ್ರಸನ್ನ ಜಯರಾಮ್, B.sc, ಶ್ರೀಮತಿ ಸುಶೀಲ ಜಯರಾಮ್

ಗುಡ್ಡೆಮನೆ ಬಿ. ಜಯರಾಮ್, B.sc

ವಿಶ್ವ ನಿಡಂ ಅಂಚೆ. ಬೆಂಗಳೂರು -560091

ದೂರವಾಣಿ - 080-23586746 ಮೊ : 9663215685



ಹುತಾತ್ಮ ಸುಬೇದಾರ ಗುಡ್ಡೆಮನೆ ಅಪ್ಪಯ್ಯ
ಗೌಡರ ಸವಿ ನೆನಪಿನಲ್ಲಿ ಹೊರಬರುತ್ತಿರುವ
"ನಮನ" ವಿಶೇಷ ಸಂಚಿಕೆಗೆ
ಶುಭ ಹಾರೈಸುವ

ಮುಕ್ಕಾಟಿ ಜಯಚಂದ್ರ, ವಕೀಲರು

ಶ್ರೀಮತಿ ಭವಾನಿ ಜಯಚಂದ್ರ

ಮಾ. ಪೃಥ್ವಿ ಜಯಚಂದ್ರ

ಕು. ಮೌನ ಜಯಚಂದ್ರ

ಮಡಿಕೇರಿ



"ಸ್ವಾತಂತ್ರ್ಯ ನಮ್ಮ ಜನ್ಮ ಸಿದ್ಧ ಹಕ್ಕು"
ಎಂಬುದಾಗಿ ದುರಾತ್ಮ ಆಂಗ್ಲರ ವಿರುದ್ಧ ಘನ ಘೋರ
ಯುದ್ಧ ಸಾರಿ, ಸ್ವರ್ಗಸ್ಥರಾದ ಹುತಾತ್ಮ ಸುಬೇದಾರ
ಗುಡ್ಡೆಮನೆ ಅಪ್ಪಯ್ಯ ಗೌಡರ ನೆನಪಿನಲ್ಲಿ
ಬಿಡುಗಡೆಗೊಳ್ಳುತ್ತಿರುವ "ನಮನ" ವಿಶೇಷ ಸಂಚಿಕೆ
ಯಶಸ್ವಿಯಾಗಲೆಂದು ಹಾರೈಸುವ

ಕೇಚಪ್ಪನ ಮೋಹನ್

ಅಧ್ಯಕ್ಷರು ಗೌಡ ಸಮಾಜ, ಕುಶಾಲನಗರ

ಶ್ರೀಮತಿ ಪ್ರಮೀಳಾ ಮೋಹನ್

ಮಾ. ಕುನಲ್ ಚಂಗಪ್ಪ,

ಮಾ. ಕುಜಲ್ ಚಂಗಪ್ಪ,

ಕುಶಾಲನಗರ

"ನಮನ" ಸ್ಮರಣ ಸಂಚಿಕೆಗೆ ಶುಭಾಶಯಗಳು

ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘ ನಿಯಮಿತ

ಮಾಲ್ದಾರೆ

“ನಮನ” ಸ್ಮರಣ ಸಂಚಿಕೆಗೆ ಶುಭಾಶಯಗಳು

ಅಧ್ಯಕ್ಷರು ಮತ್ತು ಸದಸ್ಯರು


ಆಯುಕ್ತರು ಹಾಗೂ ಸಿಬ್ಬಂದಿ ವರ್ಗ

ನಗರಸಭೆ

ಮಡಿಕೇರಿ

ದೂ. : 08272 - 228323

ಸ್ವಾತಂತ್ರ್ಯ ಹೋರಾಟಗಾರ ಹುತಾತ್ಮ ಸುಬೇದಾರ್ ಗುಡ್ಡೆಮನೆ ಅಪ್ಪಯ್ಯ ಗೌಡರ ಸ್ಮಾರಕ ಅನಾವರಣ ಮತ್ತು ಸ್ಮರಣ ಸಂಚಿಕೆ “ನಮನ” ಬಿಡುಗಡೆಯ ಸುಸಂದರ್ಭದಲ್ಲಿ ಶುಭಾಶಯಗಳನ್ನು ಕೋರುವ,



ಪೇರಿಯನ ಶ್ರೀ ಜಯಾನಂದ

ಶ್ರೀಮತಿ ಸುಮಿ ಜಯಾನಂದ

ಸಂಪಿಗೆಕಾಡು ಎಸ್ಟೇಟ್, ಚೆಟ್ಟಳ್ಳಿ

ಹುತಾತ್ಮ ಸುಬೇದಾರ ಗುಡ್ಡೆಮನೆ ಅಪ್ಪಯ್ಯ ಗೌಡರ ಸವಿ ನೆನಪಿನಲ್ಲಿ ಹೊರಬರುತ್ತಿರುವ “ನಮನ” ವಿಶೇಷಾಂಕಕ್ಕೆ ಶುಭ ಹಾರೈಸುವ



ಮೊಟ್ಟನ ಶ್ರೀ ಜ್ಯೋತಿಶಂಕರ್ (ಡಾಲು)

ವಕೀಲರು, ಮಡಿಕೇರಿ

ಶ್ರೀಮತಿ ವಿನುತಾ ಶಂಕರ್

ಮೊಟ್ಟನ ಅಮಿತ್ ಶಂಕರ್

ಮೊಟ್ಟನ ತುಷಾರ್ ಶಂಕರ್

ಹೆರವನಾಡು ಗ್ರಾಮ

ಸ್ವಾತಂತ್ರ್ಯ ಹೋರಾಟಗಾರ ಹುತಾತ್ಮ ಸುಬೇದಾರ್ ಗುಡ್ಡೆಮನೆ ಅಪ್ಪಯ್ಯ ಗೌಡರ
ಸ್ಮಾರಕ ಅನಾವರಣ ಮತ್ತು ಸ್ಮರಣ ಸಂಚಿಕೆ "ನಮನ" ಬಿಡುಗಡೆಯ
ಸುಸಂದರ್ಭದಲ್ಲಿ ಶುಭಾಶಯಗಳನ್ನು ಕೋರುವ,



ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ

ಗುಹ್ಯ, ಸಿದ್ದಾಪುರ, ವೀರಾಜಪೇಟೆ ತಾಲ್ಲೂಕು

ದೂ. : 08274 – 258346

ಅಧ್ಯಕ್ಷರು, ನಿರ್ದೇಶಕರು, ವ್ಯವಸ್ಥಾಪಕರು
ಹಾಗೂ ಸಿಬ್ಬಂದಿ ವರ್ಗ

ಡೀಸಲ್ ಪಂಪ್ – 08274 – 258653

TIN : 2936011900 **CST No. : 326504334**

TIN : 29600093578 (ಸ್ಥಾಪನೆ : 1909) (ನೋಂದಣಿ ಸಂಖ್ಯೆ : 2771)

ಮುಖ್ಯ ಕಛೇರಿ ದೂರವಾಣಿ : 08272 – 241527
ಶಾಖೆ ಅರೆಕಾಡು : 08272–230170
ವ್ಯಾಪಾರ ಶಾಖೆ ಮರಗೋಡು : 08272 – 241103

ಮರಗೋಡು ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘ ನಿಯಮಿತ

ಮರಗೋಡು, ಕೊಡಗು – 571252


Maragodu Primary Agriculture Credit Co-op. Society Ltd.,

ದಿನಾಂಕ 31/03/2011ಕ್ಕೆ ಇದ್ದ ಆರ್ಥಿಕ ಸ್ಥಿತಿಯ ಪಕ್ಷಿ ನೋಟ

ವಿವರ		ರೂ. ಲಕ್ಷಗಳಲ್ಲಿ
ಪಾವತಿಯಾದ ಪಾಲು ಬಂಡವಾಳ	:	76.33
ಕ್ಷೇಮನಿಧಿ ಮತ್ತು ಇತರ ನಿಧಿಗಳು	:	116.52
ದುಡಿಯುವ ಬಂಡವಾಳ	:	1114.18
ಸದಸ್ಯರಿಗೆ ವಿತರಿಸಿದ ಸಾಲ	:	1022.79
ಠೇವಣಿಗಳು	:	587.61
2013–14ಕ್ಕೆ ನಿವ್ವಳ ಲಾಭ	:	9.21
ಆಡಿಟ್ ವರ್ಗೀಕರಣ	:	'ಎ'



ಶ್ರೀ ಐಯ್ಯಂಡ್ರ ರಾಮರಾಜ್
ಮುಖ್ಯ ಕಾರ್ಯನಿರ್ವಹಣಾಧಿಕಾರಿ



ಶ್ರೀ ಬೊಳ್ಳೂರು ಶ್ರೀನಿವಾಸ್
ಅಧ್ಯಕ್ಷರು

ಉತ್ತಪ್ಪ ಟಿ.ಎಂ. ನಿರ್ದೇಶಕರು, ಯೋಗೇಂದ್ರ ಬಿ.ಎಸ್. ನಿರ್ದೇಶಕರು, ದೇವಿಪ್ರಸಾದ್ ಪಿ.ಎನ್. ನಿರ್ದೇಶಕರು, ಸತೀಶ್ ಕೆ.ಎನ್. ನಿರ್ದೇಶಕರು, ಪ್ರದೀಪ್ ಟಿ.ಈ. ನಿರ್ದೇಶಕರು, ತಾರಾದೇವಿ ಸಿ.ಜೆ. ನಿರ್ದೇಶಕಿ, ಸುಂದರ ಎಚ್. ನಿರ್ದೇಶಕರು.


ಅಗಾಧ ನಂಬಿಕೆಯ ಬಂಗಾರದ ಸಂಗಾತಿ
ಮುಳಿಯ
ಮುಳಿಯ ಕೇಶವ ಭಟ್ಟ & ಸನ್ಸ್
ಚಿನ್ನ • ಬೆಳ್ಳಿ • ವಜ್ರ
ಶುದ್ಧತೆಯನ್ನು ಮೀರಿದ ಪರಿಪೂರ್ಣತೆಯೆಡೆಗೆ
916
B.I.S
ISO 9001:2008 COMPANY
muliyajewel.com
muliyajewels
ಮಹದೇವಪೇಟೆ, ಮಡಿಕೇರಿ । : +91 8272 223916
ಸಾಂಪ್ರದಾಯಿಕ ಆಭರಣಗಳು । ಕೊಡಗು, ಮಂಗಳೂರು ಶೈಲಿಯ ಆಭರಣಗಳು । ಮದುವೆ ಆಭರಣಗಳು । ಆ್ಯಂಟಿಕ್ ಮತ್ತು ಡಿಸೈನರ್ ಆಭರಣಗಳು
ಮಡಿಕೇರಿ • ಗೋಣಿಕೊಪ್ಪಲ್ • ಪುತ್ತೂರು • ಬೆಂಗಳೂರು

ಹುತಾತ್ಮ ಸುಬೇದಾರ ಗುಡ್ಡೆಮನೆ ಅಪ್ಪಯ್ಯ ಗೌಡರ ಸವಿ ನೆನಪಿನಲ್ಲಿ ಹೊರ ಬರುತ್ತಿರುವ ಸ್ಮರಣ ಸಂಚಿಕೆ "ನಮನ" ಕ್ಕೆ ಶುಭಾಶಯಗಳನ್ನು ಕೋರುವವರು :-

ಹುತಾತ್ಮ ಸುಬೇದಾರ ಗುಡ್ಡೆಮನೆ ಅಪ್ಪಯ್ಯ ಗೌಡರ ಸವಿ ನೆನಪಿನಲ್ಲಿ ಹೊರ ಬರುತ್ತಿರುವ
ಸ್ಮರಣ ಸಂಚಿಕೆ "ನಮನ" ಕ್ಕೆ ಶುಭಾಶಯಗಳನ್ನು ಕೋರುವವರು :-

ಸುಬೇದಾರ್ ಗುಡ್ಡೆಮನೆ ಅಪ್ಪಯ್ಯಗೌಡರ ದಿವ್ಯ ಸ್ಮರಣೆಯ "ನಮನ"ಕ್ಕೆ ಶುಭಾಶಯಗಳು



ಚೆರಿಯಮನೆ ಕುಟುಂಬದ ಹೆಗ್ಗಳಿಕೆ

ನವರತ್ನ ಇಂಜಿನಿಯರಿಂಗ್

ಕಳೆದ ಮೂವತ್ತೈದು ವರ್ಷಗಳಿಂದ ನಿರಂತರ ಸೇವೆ.

ನಮ್ಮಲ್ಲಿ ಯಂತ್ರಗಳ ಬಿಡಿ ಭಾಗಗಳ ತಯಾರಿಕೆ, 0.25 ಟನ್‌ನಿಂದ 100 ಟನ್ ಸಾಮರ್ಥ್ಯವಿರುವ ಎಲ್ಲಾ ಮಾದರಿಯ ಕ್ರೈನ್‌ಗಳ ತಯಾರಿಕೆ, ಎಲ್ಲಾ ಮಾದರಿಯ ಕನ್ವೆಯರ್, ಅತಿ ಸಾಮರ್ಥ್ಯದ ಫ್ಯಾಬ್ರಿಕೇಟಿಂಗ್, ಎಸ್.ಎಸ್. ಕಾಪರ್ಸ್, ಬ್ರಾಸ್ ಹಾಗೂ ಇನ್ನಿತರ ಕೆಲಸಗಳಿಗೆ ಹೆಸರುವಾಸಿಯಾಗಿರುವ "ನವರತ್ನ ಇಂಜಿನಿಯರಿಂಗ್"ಗೆ ಭೇಟಿ ಕೊಡಿ.

ಶುಭ ಕೋರುವವರು

ಶ್ರೀ ಚೆರಿಯಮನೆ ಜಿ. ರತ್ನಕುಮಾರ್, ಮಾಲೀಕರು

ಶ್ರೀಮತಿ ಸಿ. ಆರ್. ಯಮುನ, ನಿರ್ದೇಶಕರು, ಚೇತನ್ ಎಂಟರ್‌ಪ್ರೈಸಸ್

ಮಗ : ಮಾ॥ ಸಿ. ಆರ್. ಚೇತನ್ (ಕಾರ್ಖಾನೆ ಕಟ್ಟಡಗಳನ್ನು ನಿರ್ಮಿಸಿಕೊಡಬಲ್ಲವರು)

ಮಗಳು : ಕು॥ ಸಿ. ಆರ್. ಮಿಥುನ

ನೆನಪು : ದಿ. ಶ್ರೀ ಕುಶಾಲಪ್ಪ (ಚಾಂಪ), ದಿ. ಸಿ. ಕೆ. ಗೋಪಾಲ (ಅಪ್ಪ)

ನವರತ್ನ ಇಂಜಿನಿಯರಿಂಗ್, 205/605, ವಿದ್ಯಾನಗರ, 1ನೇ ತಿರುವು, ಎಸ್.ಕೆ.ಎಫ್ ಎದುರು
ಬೊಮ್ಮಸಂದ್ರ, ಇಂಡಸ್ಟ್ರಿಯಲ್ ಏರಿಯಾ, ಬೆಂಗಳೂರು - 560 009

Email : navarathnaengg@yahoo.com
Mob : 9449627379, 9379427379, 9008540276